೨೧
ವರ್ಷ ೪

ಸಂಕಲನ

ಮೇ + ಜೂನ್ ೨೦೦೫

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಸಂಕಲನದ ಲೇಖಕರಿಗೆ + ಓದುಗರಿಗೆ ಕೆಲವು ಸೂಚನೆಗಳು

೧. ಲೇಖನಗಳ ಕೈಬರೆಹದ / ಟೈಪ್ ಮಾಡಿದ / ಡಿಟಿಪಿ ಮಾಡಿದ ಮೂಲ ಪ್ರತಿಗಳನ್ನೇ ಕಳಿಸಬೇಕು. ಝೆರಾಕ್ಸ್ ಪ್ರತಿ ಪರಿಶೀಲಿಸಲಾಗುವುದಿಲ್ಲ.

೨. ಲೇಖನಗಳು ಪ್ರಕಟಣೆಗೆ ಸ್ವೀಕೃತವಾದರೆ ಅವು ತಲುಪಿದ ೨ ತಿಂಗಳೊಳಗೆ ತಿಳಿಸಲಾಗುವುದು.

೩. ಸಂಕಲನದ ೧ ಸಂಚಿಕೆ ಪ್ರಕಟವಾಗುವಾಗ ಅದರ ಮುಂದಿನ ೩ ಸಂಚಿಕೆಗಳಿಗಾಗಿ ಆಯ್ದ ಲೇಖನಗಳು ಡಿಟಿಪಿ ಆಗಿ ಸಿದ್ಧವಾಗಿರುವುದರಿಂದ ಯಾವುದೇ ಹೊಸ ಲೇಖನ ಕನಿಷ್ಠ ನಾಲ್ಕಾರು ತಿಂಗಳ ನಂತರ ಪ್ರಕಟವಾಗುತ್ತದೆ. ಆದ್ದರಿಂದ ಲೇಖಕರು ಅನಗತ್ಯ ಕುತೂಹಲ ಅಥವಾ ಅವಸರ ತಳೆಯದಿರಲು ಕೋರಿಕೆ.

೪. ಉತ್ತರವನ್ನು ನಿರೀಕ್ಷಿಸಿ ಯಾರೂ ಸ್ವವಿಳಾಸದ ಲಕೋಟೆ ಅಥವಾ ಅಂಚೆಚೀಟಿ ಕಳಿಸುವುದು ಬೇಡ. ಕವಿತೆಗಳನ್ನು ಹೊರತುಪಡಿಸಿ ಅಸ್ವೀಕೃತ ಲೇಖನಗಳನ್ನು ಸಂಕಲನದ ವೆಚ್ಚದಲ್ಲಿಯೇ ಆಯಾ ಲೇಖಕರಿಗೆ ಮರಳಿಸಲಾಗುವುದು.

೫. **ಪರಿಶೀಲನೆಗೆ ಪುಸ್ತಕದ ೨ ಪ್ರತಿ ಕಳಿಸಿದರೆ ಮಾತ್ರ ಪರಿಗಣಿಸಲಾಗುವುದು.** ಎರಡು ಪ್ರತಿ ಸ್ವೀಕರಿಸಿದ ಮಾತ್ರಕ್ಕೆ ಅದರ ಪರಿಶೀಲನೆ ಮಾಡಿಸಲೇಬೇಕೆಂಬುದು ಸಂಕಲನಕ್ಕೆ ಬಂಧನಕಾರಿಯಲ್ಲ. ಒಮ್ಮೊಮ್ಮೆ ಪರಿಶೀಲಿತ ವಿಮರ್ಶಾಲೇಖನ ಪ್ರಕಟಣೆಗೆ ಸಿಗುವುದು ಅತಿ ವಿಳಂಬದ್ದೂ ಕಷ್ಟದ್ದೂ ಆಗಬಹುದಾಗಿದೆ.

೬. ಜನೆವರಿ, ಮಾರ್ಚ್, ಮೇ, ಜುಲಾಯಿ, ಸಪ್ಟಂಬರ್, ನವಂಬರ್ ೧೪ ರ ದಿನಾಂಕ ಹೊತ್ತು ಪ್ರಕಟವಾಗುವ ಸಂಚಿಕೆಗಳು ಸಕಾಲದಲ್ಲಿ ಚಂದಾಹಣ ಕೊಟ್ಟ ಎಲ್ಲರಿಗೂ ಸಾಮಾನ್ಯವಾಗಿ ಆಯಾ ತಿಂಗಳ ೧೦-೧೨ ನೇ ದಿನಾಂಕದೊಳಗಾಗಿ ತಲುಪುತ್ತವೆ.

೭. ಲೇಖಕರು ತಮ್ಮ ಒಳ್ಳೆಯ ಬರೆಹಗಳನ್ನು ಕಳಿಸುವುದರೊಂದಿಗೆ ತಮ್ಮ ಗಮನಕ್ಕೆ ಬರುವ ಹೊಸ ಲೇಖಕರ ಒಳ್ಳೆಯ ಲೇಖನಗಳನ್ನೂ ಸಂಕಲನಕ್ಕೆ ಕಳಿಸಲು ಪ್ರೇರೇಪಿಸಿರಿ.

೮. ಪ್ರಕಟವಾಗುವ ಪ್ರತಿಯೊಂದು ಲೇಖನಕ್ಕೆ ಸಾಂಕೇತಿಕ ಗೌರವಧನ ರೂ. ೧೦೦/- ಲೇಖನ ಪ್ರಕಟವಾದ ಎರಡು ವಾರದೊಳಗಾಗಿ ಕಳಿಸಲಾಗುವುದು.

ಸಂಕಲನ

ಮೇ + ಜೂನ್ ೨೦೦೫

ಸಂಪಾದಕರು
ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ
ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC
SANKALANA :
A Kannada Literary Magazine
Volume 4, Issue 3 : May + June 2005
Edited by Dr. Siddhaling Pattanshetti
Hoomane, Shridevinagar, Vidyagiri, Dharwad - 580 004
Printed by Saraswati Offset Printers, Shivaji Road, Dharwad - 580 001

•
•
•

ಸಂಕಲನ - ೨೧
ಸಂಪುಟ ೪, ಸಂಚಿಕೆ ೩ : ಮೇ + ಜೂನ್ ೨೦೦೫
ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪
✆ : ೦೮೩೬-೨೪೬ ೨೭೧೮

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

೨೦೦೫ ರಿಂದ ಒಟ್ಟು ೩ ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-)
ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಕ್ರಾಸ್, ಜೋಶಿ ಫಾರ್ಮ್, ಧಾರವಾಡ - ೫೮೦ ೦೦೮

ಸಂಪಾದಕರ ಮಾತು

ನಾನಿಕಾಕಾ ಎಂದೇ ಹೆಸರಾಗಿದ್ದ ಎನ್ಕೆ ಕುಲಕರ್ಣಿ ಅವರು ತಮ್ಮ ೯೨ ನೆಯ ವಯಸ್ಸಿನಲ್ಲಿ ೨೩-೪-೨೦೦೫ ರ ರಾತ್ರಿ ವಿಧಿವಶರಾದರು. ಧಾರವಾಡ ಹಾಗೂ ಉತ್ತರ ಕರ್ನಾಟಕ ಕಂಡ ಅಪರೂಪದ ಸಾಹಿತಿ ಎನ್ಕೆ ಅದ್ಭುತ ಸ್ಮರಣಶಕ್ತಿ, ಪ್ರತ್ಯುತ್ಪನ್ನಮತಿ ಹೊಂದಿದ್ದರು. ನಾಟಕಕಾರರಾಗಿ ಎನ್ಕೆ ರಚಿಸಿದ ಅಸಂಖ್ಯ ಏಕಾಂಕಗಳು, ರೇಡಿಯೋ ರೂಪಕಗಳು, ಪೂರ್ಣಾವಧಿ ನಾಟಕಗಳು ನಮ್ಮ ನಾಟ್ಯಲೋಕವನ್ನು ಸಮೃದ್ಧಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಒಳ್ಳೆಯ ಹಾಸ್ಯಸಾಹಿತಿ ಎಂದೂ ಪ್ರಸಿದ್ಧರಾಗಿದ್ದ ಎನ್ಕೆಯವರ ಹರಟೆಗಳು ತುಂಬ ಲವಲವಿಕೆಯಿಂದ ಕೂಡಿವೆ. ವಿಶೇಷವಾಗಿ ಉತ್ತರ ಕರ್ನಾಟಕದ ಆಡುಭಾಷೆ ಹಾಗೂ ಸಾಂಸ್ಕೃತಿಕ ವಿವರಗಳ ದೃಷ್ಟಿಯಿಂದ ಮಹತ್ವದ್ದಾಗಿವೆ.

ಎನ್ಕೆಯವರ ಏಳು ಕಾದಂಬರಿಗಳು ಅವರ ಬದುಕಿನ ಏಳು ಮಹತ್ವದ ದಶಮಾನಗಳ ಏಳುಬೀಳುಗಳ ಇತಿಹಾಸದಂತಿವೆ. ಕುಮಾರವ್ಯಾಸನನ್ನು ಕುರಿತು ಮೊಟ್ಟಮೊದಲು ಸುದೀರ್ಘ ಅಧ್ಯಯನ ಮಾಡಿ ಕೃತಿರಚನೆ ಮಾಡಿದ ಎನ್ಕೆ ಕೃತಿಗಳು ಯಾವುಯಾವುದೋ ಕಾರಣಕ್ಕೆ ಅಲಕ್ಷಿತವಾಗಿಯೇ ಉಳಿದುವು. ಹಾಗೆಯೇ ಅವರ ಅನೇಕ ಅಪೇಕ್ಷೆಗಳು ಸಹ ಕೊನೆಯ ವರೆಗೂ ಹತಾಶೆಗಳ ಅಲಗಿನ ಮೇಲೆಯೇ ಉಳಿದು ಕೊನೆಗೊಂಡುವು.

ಸಂಗೀತ, ಸಾಹಿತ್ಯ, ಬಾನುಲಿಯನ್ನು ಕುರಿತ ಅವರ ಜ್ಞಾನಭಾಂಡಾರವು ಹಲವಾರು ಕೃತಿಗಳಲ್ಲಿ ಮೂಡಿ ಬಂದಿದೆ. ಶ್ರೀರಂಗ, ವಿನಾಯಕ, ಬೇಂದ್ರೆ ಕುರಿತ ಗ್ರಂಥಗಳು ಆಯಾ ಕ್ಷೇತ್ರದ ಹೊಸ ಹೊಳಹುಗಳಿಗೆ ಮಾದರಿಯಾಗಿವೆ.

ಸಂಕಲನದ ಮೊದಲ ವರ್ಷದ ೫ ಮತ್ತು ೬ ನೇ ಸಂಚಿಕೆಗಳಲ್ಲಿ ಎನ್ಕೆ ನಾಟಕಗಳನ್ನು ಕುರಿತು ಡಾ. ಮಂದಾಕಿನಿ ಪುರೋಹಿತರು ಬರೆದ ಲೇಖನಗಳನ್ನು ನಾವು ಪ್ರಕಟಿಸಿದ್ದೆವು. ಬಹುಕಾಲದಿಂದ ಪುಸ್ತಕವಾಗಿ ಪ್ರಕಟವಾಗಿರದ ಎನ್ಕೆ ಅವರ 'ವಾಮನರಾವ್ ಮಾಸ್ತರ್' ಕೃತಿಯನ್ನು ೨೦೦೨ ರ ಅಕ್ಟೋಬರ್‌ದಲ್ಲಿ ಸಂಕಲನ ಪ್ರಕಾಶನದಿಂದ ಪ್ರಕಟಿಸಿ, ನಮ್ಮ ಚಂದಾದಾರರಿಗೆ ಉಚಿತವಾಗಿ ವಿತರಿಸಿದ್ದೆವು.

ಈಚೆಗಷ್ಟೇ ಎನ್ಕೆ ತಮ್ಮ 'ಅಪ್ಪ ಅಪ್ಪ ' ಕುರಿತ ಲೇಖನ ಸಂಕಲನಕ್ಕೆ ನೀಡಿದ್ದರು. ಅದರ ಮೊದಲ ಕರಡನ್ನು ಇದೇ ಮಾರ್ಚ್ ೨೮ ರಂದು ತಾವೇ ನೋಡಿ ಕೊಟ್ಟಿದ್ದರು. ಈ ಸಂಚಿಕೆಯಲ್ಲಿ ಆ ಲೇಖನ ಪ್ರಕಟವಾಗಿದೆ.

ಎನ್ಕೆ ಅವರಿಗೆ ಸಂಕಲನದ ಶ್ರದ್ಧಾಂಜಲಿ.

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

೧ ಮೇ ೨೦೦೫
ಹೊಮನೆ, ಧಾರವಾಡ-೪

ಪರಿವಿಡಿ

೧. ನನ್ನ ಅಪ್ಪ - ಅವ್ವ : *ಎನ್ಕೆ ಕುಲಕರ್ಣಿ* ೫ - ೧೨

೨. ಮೂರು ಕವಿತೆಗಳು : *ಜಿ. ಮಲ್ಲಿಕಾ ಬಸವರಾಜು* ೧೨ - ೧೩

೩. ನನ್ನ ಗುರುಗಳು : *ಶ್ಯಾಮಲಾ ಮಾಧವ* ೧೪ - ೨೨

೪. ಕೈಫೀ ಆಜ್‌ಮಿಯವರ ನಾಲ್ಕು ಕವಿತೆಗಳು : *ವಿಭಾ* ೨೩ - ೨೫

೫. ಬನ್ನಿ ಕನಸುಗಳೆ ಬನ್ನಿ : *ಮಾಧವಿ ಭಂಡಾರಿ* ೨೫

೬. ದ್ರಾವಿಡ ಸಂಬಂಧ -೨ : *ಷ. ಶೆಟ್ಟರ್* ೨೬ - ೪೦

೭. ಎರಡು ಕವಿತೆಗಳು : *ವೈ. ಬಿ. ಹಾಲಬಾವಿ* ೪೧ - ೪೨

೮. ದೇವತೆಗಳ ಪುಟ್ಟ ಗಂಟೊಳಗೆ : *ಆರ್. ಪವಿತ್ರ ಪ್ರಿಯಭಾಷಿಣಿ* ೪೨ - ೪೩

೯. ಕೀರ್ತಿನಾಥ ಕುರ್ತಕೋಟಿ : ಅಭಿಜಾತ ಪ್ರತಿಭೆ ಮತ್ತು
ಸ್ವಂತಿಕೆಯ ಚಡಪಡಿಕೆ : *ಸಿ. ಎನ್. ರಾಮಚಂದ್ರನ್* ೪೪ - ೫೪

೧೦. ಚಿತ್ರಬ್ರಹ್ಮ ಎಚ್.ಎಲ್.ಎನ್.ಸಿಂಹ : *ಹೆಚ್. ಎ. ಪಾರ್ಶ್ವನಾಥ್* ೫೫ - ೬೩

೧೧. ೨೦ನೆ ಶತಮಾನದ ಕನ್ನಡ ಸಾಹಿತ್ಯ... : *ಟಿ. ಸಿ. ಪೂರ್ಣಿಮಾ* ೬೩ - ೬೮

೧೨. ಪುಸ್ತಕ ಪರಿಶೀಲನೆ : ೬೯ - ೭೮

೧. ಉತ್ತರದ ಸಂತ ಪರಂಪರೆ : ಮ. ಸು. ಕೃಷ್ಣಮೂರ್ತಿ — ಪ್ರಸನ್ನ

೨. ಜಡ ಮತ್ತು ಚೇತನ : ಸುಮತೀಂದ್ರ ನಾಡಿಗ — ಬಸವರಾಜ ವಕ್ಕುಂದ

೩. ಮುಗಿಲಿಲ್ಲದ ಜಗದಲ್ಲಿ : ದ್ವಾರಕಾನಾಥ ಹೆಚ್.ಕಬಾಡಿ — ಸುಮಿತ್ರಾ ಹಲವಾಯಿ

೪. ಅನ್ವಯ : ಅರವಿಂದ ಚೊಕ್ಕಾಡಿ — ಪಿ. ಕೆ. ರಾಠೋಡ

೫. ಆಯ್ದ ಕೀರ್ತನೆಗಳು : ಸಂ. ಬಸವರಾಜ ಸಬರದ, ಸಿ. ನಾಗಭೂಷಣ;

೬. ಆಯ್ದ ವಚನಗಳು : ಸಂ. ಸಂಗಮೇಶ ಸವದತ್ತಿಮಠ, ಎಸ್. ಎಂ. ಹಿರೇಮಠ;

೭. ಆಯ್ದ ಸ್ವರವಚನಗಳು : ಸಂ. ವ್ಹಿ. ಜಿ. ಪೂಜಾರ, ಈಶ್ವರಯ್ಯ ಮಠ;

೮. ಆಯ್ದ ಸಣ್ಣ ಕತೆಗಳು :ಸಂ. ನಾಗಾಬಾಯಿ ಬುಳ್ಳಾ, ಗೀತಾ ನಾಗಭೂಷಣ;

೯. ಆಯ್ದ ವೈಚಾರಿಕ ಪ್ರಬಂಧಗಳು : ಸಂ. ಎಂ. ಎಸ್. ಪಾಟೀಲ, ಸ್ವಾಮಿರಾವ್ ಕುಲಕರ್ಣಿ — ಶಶಿಧರ ತೋಡಕರ

೧೦. ಪೂರ್ಣಿಮಾ : ಸಂ. ಪೂರ್ಣಿಮಾಭಿವಂದನ ಸಮಿತಿ;

೧೧. ನನ್ನ ಮಗುವಿಗೆ ನಾ ಕಲಿಸಿದ್ದು ಹೀಗೆ : ಎಸ್. ಪಿ. ಪದ್ಮಪ್ರಸಾದ್ — ಮೋತಿಲಾಲ ಹಲವಾಯಿ

೧೨. ಸಂವಹನ ಕಲೆ :ಎಚ್. ಜಿ. ಸೋಮಶೇಖರ ರಾವ್ — ಶಿವಶಂಕರ ಹಿರೇಮಠ

೧೩. ಸಂಕಲನ : ಅನಿಸಿಕೆ : ೭೯

೧೪.ಕಡೇಪುಟ : *ಸಿದ್ಧಲಿಂಗ ಪಟ್ಟಣಶೆಟ್ಟಿ* ೮೦

ನನ್ನ ಅಪ್ಪ - ಅವ್ವ

ಎನ್ಕೆ ಕುಲಕರ್ಣಿ

ನಾನು ಹತ್ತು-ಹನ್ನೊಂದು ವರ್ಷದವನಿದ್ದಿರಬೇಕು, ನನ್ನ ತಂದೆ ತೀರಿಕೊಂಡಾಗ! ಈಗ ನನ್ನ ತಂದೆಯ ಚೆಲುವಾದ ಮುಖವನ್ನು ನೋಡಲು – ಅದು ಹೇಗೊ ಒಂದು ಗ್ರುಪ್ ಫೋಟೋದಿಂದ ಮಿತ್ರ ಸಾಲಿ ಅವರು ತಮ್ಮ ಸ್ಟುಡಿಯೋದಲ್ಲಿ ನಮ್ಮ ತಂದೆಯ ಎರಡು ಪ್ರತಿಗಳನ್ನು ಮಾಡಿಕೊಟ್ಟರು. ಅವರ ಫೋಟೋ ನೋಡಿ ಹಿಂದಿನದನ್ನೆಲ್ಲಾ ಕಲ್ಪಿಸಿಕೊಳ್ಳುತ್ತೇನೆ. ಅವರು ರುಮಾಲು ಸುತ್ತುತ್ತಿದ್ದರು. ಕೋಟಿನ ಮೇಲೆ ಧೋತರ ಹೊದ್ದುಕೊಳ್ಳುತ್ತಿದ್ದರು.

ಅವರು ಪಿ.ಡಬ್ಲ್ಯೂ.ಡಿ. ಖಾತೆಯಲ್ಲಿ ಮೊದಲು ಮಸ್ಟಿಂಗ್ ಕ್ಲಾರ್ಕ್, ಆಮೇಲೆ ಸಬ್ ಓವರ್‌ಸಿಯರ್ ಎಂದು ಕೆಲಸ ಮಾಡುತ್ತಿದ್ದರು. ಓವರ್‌ಸಿಯರ್ ಆಗುವಷ್ಟು ಕಾಲ ಅವರುಳಿಯಲಿಲ್ಲ. ರಸ್ತೆ ಖಡೀ ಹಾಕುವ ಕೂಲಿಗಳ ಹಾಜರಿ ತಗೊಳ್ಳುವುದು, ಮತ್ತು ಅವರ ಮೇಲೆ 'ನಜರ್' ಇಟ್ಟು ಕೆಲಸಕ್ಕೆ ಪ್ರಾಮಾಣಿಕತೆಯಿಂದ ತೊಡಗುವಂತೆ ನೋಡಿಕೊಳ್ಳುವುದು. ಹೀಗೆ ದಿನಾಲು ಎಂಟು ಹತ್ತು ಮೈಲು ಸೈಕಲ್ ಮೇಲೆ ಪ್ರವಾಸ. ಅಲ್ಲದೆ ಕುಟುಂಬದವರಾದ ನಮ್ಮನ್ನೆಲ್ಲಾ ಗದುಗಿನ ಕಿಲ್ಲೇದ ಮನೆಯಲ್ಲೇ ಇಟ್ಟು, ತಾವು ಕೈಯಿಂದ ಅಡಿಗೆ ಮಾಡಿಕೊಂಡು ಊಟ ಮಾಡುವುದು. ಇದರಿಂದಾಗಿ ತುಂಬ ಸೋತು ಬಳಲಿ ಹೋಗಿದ್ದರು. ನಮಗೆಲ್ಲಾ ಮನೆಯ ಖರ್ಚಿಗೆಂದು ತಮಗೆ ಬರುತ್ತಿದ್ದ ಅಲ್ಪ ಸಂಬಳದಲ್ಲೇ ಮನೆಗೆ ಕಳಿಸಿಕೊಡುವರು.

ಒಮ್ಮೆ ಭಟ್ಕಳದಿಂದ ಅದೇನು ಅಡಚಣಿ ಆಯಿತೊ ಏನೊ, ತೀರ ಸ್ವಲ್ಪ ಹಣ ಕಳಿಸಿ ಮರುಗುತ್ತ– "ಈ ಸಲ ಇಷ್ಟರಲ್ಲೇ ಹೇಗಾದರೂ ಸಾಗಿಸಿಕೊಳ್ಳಿರಿ. ತಿಂಗಳ ಮಟ್ಟಿಗೆ ಮನೆಯಲ್ಲಿಯ ಒಂದು ಉಂಗುರ ಮಾರಿ ಸಾಗಿಸಿಕೊಳ್ಳಿರಿ. ನನ್ನಂಥ ಬಡವನ ಹೊಟ್ಟೆಯಲ್ಲಿ ಹುಟ್ಟಿ ನೀವೆಲ್ಲಾ ಬಳಲಬೇಕಾಯಿತು" ಎಂದು ಬರೆದದ್ದನ್ನು ನಮ್ಮಣ್ಣ (ಹಿರಿಯವ ನರಸಿಂಹ) ತಾಯಿಯ ಮುಂದೆ ಓದಿ ಹೇಳಿದಾಗ ನಮ್ಮ ತಾಯಿಗೆ ಅಳೋಣ ತಡೆಯುವದಾಗಲಿಲ್ಲ. "ಏನs ಆಗ್ಲಿ, ನಾವು, ಅವರು ಎಲ್ಲಿದ್ದಾರ ಅಲ್ಲಿಗೇ ಹೋಗೋಣ. ಅವರು ಕೈಬಾಯಿ ಸುಟ್ಟುಕೊಂಡು ಅನ್ನ ಸಾರು ಮಾಡಿಕೊಳ್ಳುವಾಗ ನಮ್ಮದಾರ ಏನು ಅಳತದ" ಎಂದು ಹೇಳಿ ಪತ್ರ ಬರೆಯಿಸಿದಳು. "ನಾವೂ ಅಲ್ಲಿಗೇ ಬರತೇವಿ. ನಿಮಗ ವನವಾಸ ಆದರ ನಮಗೂ ಅದೇ ವನವಾಸನೇ ಸುಖಾ ಕೊಡತದ. ಶ್ರೀರಾಮಚಂದ್ರ ವನವಾಸ ಮಾಡಲಿಲ್ಲೇನು? ಅವನನ್ನೆ ಉಳಿದವರೂ ಹಿಂಬಾಲಿಸಿದರು" ಎಂದು ಹಟ ಹಿಡಿದು ಪತ್ರ ಬರೆಯಿಸಿದಳು. ಅಂತೂ ಒಂದು ವಾರದ ನಂತರ ತಂದೆಯ ಪತ್ರ. "ಆಗಲಿ, ನೀವೂ ನನ್ನ ಜೋಡಿ ಕಷ್ಟಪಡಲಿಕ್ಕೆ ತಯಾರಾಗಿ ಬರ್ರಿ. ನಾನು ಹಾವೇರಿ ಸ್ಟೇಶನ್‌ಗೆ ಒಬ್ಬ ಚಕ್ಕಡಿಯವನನ್ನು ಕಳಿಸಿಕೊಡತೇನೆ. ಹಾವೇರಿಯಿಂದ ಕುಮಟಾದ ವರೆಗೆ ಚಕ್ಕಡಿ ಪ್ರವಾಸ ಹತ್ತು ದಿನಗಳಷ್ಟು ಹಿಡಿಯಬಹುದು. ಜೋಕೆಯಿಂದ ದೇವರ ಮೇಲೆ ಭಾರ ಹಾಕಿ ಹೊರಡಿರಿ" ಎಂದು ಅಮುಕ ತಿಂಗಳ, ತಾರೀಖು ಕೊಟ್ಟರು. ಆ ಮೇರೆಗೆ ನಾವು ನಮ್ಮ ಗದುಗಿನ ಮನೆಗೆ ಕೀಲಿ ಹಾಕಿ ನಮ್ಮ ನಂಬಿಗಸ್ತ ಶ್ರೀಪತಿಗೆ (ಒಳ ಒಕ್ಕಲಿನವ) ಹೇಳಿದೆವು.

ನಮ್ಮ ತಂದೆಯ ವರ್ಗಾವಣೆಗಳು– ಗದಗ, ರೋಣ, ನವಿಲುಗುಂದ, ನರಗುಂದ ಹೀಗೆ ಬಯಲು ಸೀಮೆಯಿಂದ ಮುಂದೆ ಕಾರವಾರ, ಅಂಕೋಲಾ, ಭಟಕಳ ದಾಟಿ ಕುಮಠಾಕ್ಕೆ ಬಂದಿದ್ದರು. ಭಟಕಳದಿಂದಲೆ ಮೇಲಿನ ಪತ್ರ ಬಂದು ನಮ್ಮನ್ನ ಅಲ್ಲಿಂದ ಕಿತ್ತಿಸಿತು.

ಈಗ ಹೇಳಿದಂತೆ, ನಮ್ಮ ತುಂಬ ನಂಬಿಗಸ್ತನಾದ ನಮ್ಮ ತಂದೆ ಕಚೇರಿ ಆಳುಮನುಷ್ಯ ಶ್ರೀಪತಿಗೆ ಇಡಿಯ ಮನೆ ಒಪ್ಪಿಸಿ, ಗದಗ ಸ್ಟೇಶನ್‌ನಿಂದ ಬೇಕಾಗುವಷ್ಟು ಧಾನ್ಯದ ಹಿಟ್ಟು, ಅಕ್ಕಿ, ಬೇಳೆ - ಮಸಾಲೆ ಸಾಮಾನು ಮೊದಲಾಗಿ ಸರಂಜಾಮ ಭರ್ತಿ ಮಾಡಿಕೊಂಡು ರೈಲ್ವೆ ಹತ್ತಿದೆವು. ನಾವು ಮೂವರು ಅಣ್ಣ ತಮ್ಮಂದಿರು, ನಮ್ಮ ತಾಯಿ, ನಮ್ಮ ಕುರುಡು ಸೋದರಮಾವ (ತಾಯಿಯ ಅಣ್ಣ) 'ಮಾಮಾ'ನನ್ನೂ ಜೊತೆಗೆ ಕರೆದುಕೊಂಡು ಹೊರಟೆವು. ನಮ್ಮ ತಾಯಿಯೂ ಧೈರ್ಯವಾನಳೆ. ಎಲ್ಲಾ ಜವಾಬುದಾರಿ ತಾನೊಬ್ಬಳೆ ಹೊತ್ತುಕೊಳ್ಳ ಬೇಕಾಯ್ತು. ನಮ್ಮ ಹಿರಿಯಣ್ಣ ಕೂಡ ಅಲ್ಪವಯಿ – ಹದಿನಾರು ವರುಷ, ನಮ್ಮ ನಡುವಿನ ಅಣ್ಣ ಗುಂಡಣ್ಣಗೆ ಹದಿಮೂರು, ನನಗೊ ಹತ್ತು ವರುಷಗಳು ಇದ್ದಿರಬೇಕು.

ಸರಿ, ಹಾವೇರಿ ಸ್ಟೇಶನ್‌ಗೆ ಸರಿಯಾಗಿ ನಮ್ಮ ತಂದೆ ಕುಮುಟೆಯಿಂದ ಕಳಿಸಿದ್ದ ಚಕ್ಕಡಿ ಬಂದು ನಿಂತಿತ್ತು. ನಮ್ಮ ತಂದೆಯ ಪತ್ರದ ಪ್ರಕಾರ 'ಸಾಲೂ' ಎಂದು ಕೂಗಿದೆವು. ಆತ ತನ್ನದೇ ಆದ ಗ್ರಾಮ್ಯ ದೇಸಿಯಲ್ಲೂ, "ಅವ್ವನವರೇ ನಾನೇ ಸಾಲೂ, ಗಾಡಿ, ಗೂಡಾರದ ಸವಾರಿ, ಒಳಗೆ ಮೆತ್ತನೆ ಗಾದಿ, ಮೆತ್ತೆಗಳು– ಆರಾಮಾಗ್ಯೆತೆ. ಕೂತುಕೊಳ್ರಿ. ಇಲ್ಲೆ ಸ್ವಲ್ಪ ದೂರದಲ್ಲಿ ಬಾಳಂಬೀಡ ಅಂತ ಊರು. ಸಾಹೇಬರು ಅಲ್ಲಿಯ ಟಿ. ಬಿ. (ಪ್ರವಾಸಿ ಮಂದಿರ) ತಮಗಾಗಿ ಹೇಳಿಟ್ಟಾರೆ. ಅಲ್ಲಿ ಊಟಾ ಮುಗಿಸರಿ. ರಾತ್ರಿ ಕೊಳ್ಳು ಕಟ್ಟ್ಯೋಣ. ಹ್ಯಾಗೂ ತಿಂಗಳ ಬೆಳಕು. ಸ್ವಾರಿಗೆ ಎತ್ತಿನ ಬಂಡಿಗಳೆಲ್ಲಾ ಜೊತೆಗಿರುತ್ತೆ. ಅದು ವರೆಗೂ ತಾವು ಸ್ವಲ್ಪ ನಿದ್ರೆ ಮಾಡಿ ಏಳ್ರಿ," ಎಂದು ಹಿತವಾಗಿ ಹೇಳಿದ.

ಈ ಸಾಹೇಬರ ಮಕ್ಕಳಿಗೆ ಖುಶಿಯೋ ಖುಶಿ. ಒಬ್ಬೊಬ್ಬರೂ ಒಂದು ಕೋಣೆ ಹಿಡಿದುಕೊಂಡೆವು. ರಾತ್ರಿ ವರೆಗೂ ಮಜವಾಗಿ ಕಳೆದೆವು. ನಮ್ಮ ಕುರುಡು ಮಾಮಾ ದೂರ ಬಯಲಲ್ಲೆ ಬಯಲುಕಡೆ ಮುಗಿಸಿದರು.

ನಮ್ಮ ತಾಯಿ ತಂದಿದ್ದ ಜೋಳದ ಹಿಟ್ಟಿನ ಬಕ್ಕರಿ, ಒಳ್ಳೇ ಗಟ್ಟಿಯಾದ ಹುಳಿ ಅನ್ನ ತಯಾರಿಸಿದ್ದಳು. ಕೆಟ್ಟ ಹಸಿವೆ. ಹೊಟ್ಟೆ ತುಂಬ ಉಂಡು ತೇಗಿದೆವು.

ರಾತ್ರಿ ತಿಂಗಳ ಬೆಳಕಿನಲ್ಲಿ ಸಾಲೂ ಸವಾರಿ ಕಟ್ಟಿದ. ಒಳ್ಳೆಯ ಸುಂದರ, ಸಮರ್ಥ ಎತ್ತುಗಳು. ತನ್ನದೇ ಧಾಟಿ, ತನ್ನದೇ ದೇಸಿಯ ಪದ ಹೇಳುತ್ತ ಸಾಗಿದ. ನಮ್ಮ ಚಕ್ಕಡಿ (ಎತ್ತಿನ ಬಂಡಿ) ಪ್ರವಾಸ, ಪಯಣದ ಮೇಲೆ ಪಯಣ ಮಾಡುತ್ತ ಒಂದೆರಡು ದಿನಗಳಲ್ಲಿ ಶಿರ್ಶಿ ತಲುಪಿತು. ಆ ಹೊತ್ತಿಗಾಗಲೆ ಜೋಳದ ಹಿಟ್ಟು ಮಸಾಲೆ ಸಂಭಾರ ಎಲ್ಲಾ ತೀರಿಹೋಗಿತ್ತು. ಶಿರ್ಶಿಯಲ್ಲಿ ಯಾವುದೋ ಒಂದು ಹಳೆಯ ಮನೆ, ಕೀಲಿ ಹಾಕಿತ್ತು. ಯಾರೂ ಊರಲ್ಲಿದ್ದಿರಲಿಕ್ಕಿಲ್ಲ. ಆ ಮನೆಯ ಜಗುಲಿಯ ಮೇಲೆ ನಮ್ಮವ್ವ ಹೊರಗಿನ ಕಟ್ಟಿಗೆ ತಂದು, ಮೂರು ಕಲ್ಲುಗಳ ಮೇಲೆ ಒಲೆ ಹೂಡಿದಳು. ಹಿರಿಯಣ್ಣನ ಕೈಯಲ್ಲಿ ಒಂದು ರೂಪಾಯಿ ಕೊಟ್ಟು - ಖಾರಪುಡಿ, ಹಳೇ ಹುಣಸಿಹಣ್ಣು ತರಹೇಳಿದಳು. ಎಷ್ಟೊತ್ತಾದರೂ ಆತ ಬರಲಿಲ್ಲ. ನಮ್ಮಿಬ್ಬರು ಸಣ್ಣವರಿಗೆ ಕಂಗಾಲು ಹಸಿವೆ. ನಮ್ಮ ನಡುವಿನ ಅಣ್ಣ ಇನ್ನೊಂದು ರೂಪಾಯಿ

ತೆಗೆದುಕೊಂಡು ಮೇಲಿನ ಸಾಮಾನುಗಳನ್ನು ತಂದ. ಅಂದು ನಮ್ಮವ್ವ ಮಾಡಿದ ಸಾರೆಂದರೆ ಏನು ರುಚಿ, ಏನು ಸ್ವಾದ, ಎಷ್ಟು ರೋಚಕ! ಇಂದಿಗೂ ಆ ೮೦ ವರ್ಷಗಳ ರುಚಿ, ಇನ್ನೂ ನಾಲಗೆಯ ಮೇಲೆ ಕೂತಿದೆ.

ನಮ್ಮ ಹಿರಿಯಣ್ಣ ಎಷ್ಟೋ ಹೊತ್ತಿನ ಮೇಲೆ ಶಿರ್ಶಿಯ ಕೆರೆಯೊಂದರಲ್ಲಿ ಈಜಲು ಹೋಗಿ ಬಟ್ಟೆಯನ್ನೆಲ್ಲಾ ತೋಯಿಸಿಕೊಂಡು ಬಂದ. ಆತನ ಸ್ವರೂಪ ನೋಡಿ ಅವ್ವ ಸ್ವಲ್ಪ ರೋಸಿಕೊಂಡು ಒಂದು ಥಪ್ಪರಿಕೆ ಕೊಟ್ಟು, 'ಆ ರೂಪಾಯಿ ಏನು ಮಾಡಿ ಹೇಳು' ಎಂದು ಸೋಟೆ ಹಿಂಡಲು– 'ನಾ ಏನು ಹಾಳು ಮಾಡಿಲ್ಲವ್ವ. ಒಂದು ಕೊಳಲು ತಂದೀನಿ' ಎಂದು ಅದನ್ನು ಅವ್ವನ ಮುಂದೆ ವೇಣುವಿಶಾರದನಂತೆ 'ತಿರುಕನೋರ್ವನೂರ ಮುಂದೆ ಮುರುಕು ಧರ್ಮಶಾಲೆಯಲ್ಲಿ' ಎಂದು ಅರ್ಧ ಬಾಯಲ್ಲೇ ಆ ಪದ್ಯ ಹೇಳುತ್ತ ತಾಯಿಯ ಮುಂದೆ ತನ್ನ ಕಲಾನೈಪುಣ್ಯ ತೋರ್ಪಡಿಸಿದ. ಈ ಮಗನ ಸಡಗರ ನೋಡಿ ನಮ್ಮವ್ವ ಬ್ರಹ್ಮಾಂಡ ಸಿಟ್ಟಿಗೆದ್ದವಳು ನಗಹತ್ತಿದಳು. ನಮ್ಮ ಕುರುಡು ಮಾಮಾನೂ 'ಹುಡುಗ ರಂಡೇದ್ದು ಭಲೋ ಕೊಳಲು ಬಾರಸ್ತದ' ಎಂದು ನಕ್ಕುಬಿಟ್ಟ. 'ಇರ್ಲಿ, ಹೊಟ್ಟೆಗಷ್ಟು ಅಶನಾ ತಿನ್ನು' ಎಂದು ಮತ್ತೊಮ್ಮೆ ಸೋಟೆ ತಿವಿದು ಊಟಕ್ಕೆ ಹಾಕಿದಳು, ಒಂದು ಎಲೆಯ ಮೇಲೆ. (ನಾವೆಲ್ಲಾ ಊಟ ಮಾಡುವುದು ದಾರಿಯಲ್ಲಿ ಎಲೆಯ ಮೇಲೆ.)

ವಾಡಿಕೆಯಂತೆ ನಮ್ಮೂಟವಾದ ಮೇಲೆ ಸಾಲೂನ ಊಟ. ದೊಡ್ಡದೊಂದು ಅನ್ನದ ಕಟ್ಟೆ ಕಟ್ಟಿ ಬರಿ ಸಾರೂ ಅನ್ನ ಉಂಡು ತಂಬಿಗೆ ನೀರು ಕುಡಿದು ಅಽಬ್ ಎಂದು ತೇಗಿ ಎರಡೂ ಕಡೆ ಮೀಸೆ ಒರೆಸಿಕೊಂಡು, ಹಸಿ ಅಡಕೆ ಎಲೆ ಜಿಗಿಯುವ. ತಂಬಾಕ ಹಾಕುತ್ತಿದ್ದನೆಂದು ತೋರುತ್ತದೆ. ಅವ್ವನವರ ಮುಂದೆ ತೋರಗೊಡುತ್ತಿದ್ದಿಲ್ಲ.

ಹೀಗೆ ಶಿರ್ಶಿಯಿಂದ ಪಯಣದ ಮೇಲೆ ಪಯಣ. ಹಗಲು ಒಮ್ಮೊಮ್ಮೆ ಚಕ್ಕಡಿಯ ಕೆಳಗೇ ಅಡಿಗೆ-ಊಟ ತೀರಿಸಿ, ಚಕ್ಕಡಿಯಲ್ಲೇ ಮಲಗಿ ವಿಶ್ರಾಂತಿ ಪಡೆಯುತ್ತಿದ್ದೆವು. ಈ ಪ್ರಕಾರ ಹತ್ತು ದಿನಗಳ ಪ್ರಯಾಣ ಮಾಡಿ ಕುಮಟೆ ಸಮೀಪಿಸಿದೆವು. ಬರಬರುತ್ತ ಹೆಚ್ಚಿನ ಜನವಸತಿಯ ಊರುಗಳು, ಕಷಾಯ ಅಂಗಡಿಗಳು, ಕೊಬ್ಬರಿ ಎಣ್ಣೆಯಲ್ಲಿ ಕರಿದ ಸಾಮಾನುಗಳು–ಸೂಸಲು ಅವಲಕ್ಕಿ ಒಂದು ತರಹ ರುಚಿಕಟ್ಟಾಗಿರುತ್ತಿದ್ದವು. ದಾರಿಗುಂಟ ಗಾಡಿಗಳಲ್ಲಿ ಕಲ್ಲುಗಳನ್ನು ಹೇರಿಕೊಂಡು ಕೂಲಿಯ ಜನ– 'ಯೇ ಬಾರಾ ಲೇಸೊ, ಬಾರಣ್ಣ ಹಯ್ಯೋಸ್ಸಾ' ಎನ್ನುತ್ತ ಕಲ್ಲಿನ ಗಾಡಿ ಎಳೆಯುತ್ತ ಹೋಗುವರು.

ನಾವು ಕುಮಟೆ ಹತ್ತನೆಯ ದಿನ ತಲುಪಬೇಕಾಗಿತ್ತು. ಸ್ವಲ್ಪ ತಡವಾಗಿತ್ತು– ಒಂದು ದಿನದ ಮಟ್ಟಿಗೆ. ಒಮ್ಮೆ ಪಯಣದಲ್ಲಿ ಚಕ್ಕಡಿಗಳು ಸಾಲಾಗಿ ಸಾಗುತ್ತಿರುವಾಗ ಎಲ್ಲ ಮುಂದಿನ ಬಂಡಿಯವ ಹಿಂದಿನವನಿಗೆ ಮೆಲ್ಲಗೆ ಹೇಳಿದ– ಹುಲಿ ಊರೊಳಗೆ ಬಂದೈತೆ. ದನ ಗಿನಾ ಜೋಕೆ, ಜಾಗ್ರತೆ ಸಾಗಿರಿ– ಎಂದು ಬಂಡಿಯಿಂದ ಬಂಡಿಗೆ ಸುದ್ದಿ ಮುಟ್ಟಿಸಿದರು. ದಾರಿಯುದ್ದಕ್ಕೂ ಬಂಡಿಗಳು ಸ್ತಬ್ಧವಾಗಿ ನಿಂತುಬಿಟ್ಟವು.

ಮುಂದೆ ಸುಧಾರಿಸಿಕೊಂಡು ದಾರಿ ಸಾಗಬೇಕಾದರೆ ಸ್ವಲ್ಪ ಸಮಯ ಬೇಕಾಯಿತು. ನಮ್ಮಣ್ಣ ಅಂಚೆಯಿದ್ದ ಊರಿಂದ ಕುಮಟೆಗೆ ಸಾಧ್ಯವಾದಾಗಲೆಲ್ಲಾ ಪತ್ರ ಬರೆಯುತ್ತಲೆ ಇದ್ದ.

ಆದರೆ ನಾವು ತಲುಪಬೇಕಾದ ದಿನ ತಲುಪದೆ ಇದ್ದಾಗ, ನಮ್ಮ ತಂದೆ ಮೊದಲೆ ಭಾವನಾತ್ಮಕ ಹೆಂಗರುಳು... (ನಮ್ಮ ಅಕ್ಕ ಮಾತ್ರ ನಮ್ಮ ಜೊತೆ ಬಂದಂತೆ ನೆನಪಿಲ್ಲ, ಇಷ್ಟರಲ್ಲೆ ಆಕೆಯ ಮದುವೆ ಆಗಿತ್ತೆಂದು ತೋರುತ್ತದೆ. ಹೌದು. ಆಕೆ ಮದುವೆಯಾಗಿ ಗದುಗಿನಲ್ಲಿ ಗಂಡನೊಡನೆ ಇದ್ದಳು.) ಒಂದು ದಿನ ನಾವು ಬರುವುದಕ್ಕೆ ತಡವಾಯಿತೆಂದು, ಕುಮಟೆಯಲ್ಲಿ ತಮ್ಮ ಧಾರವಾಡದ ಪೋಸ್ಟ್ ಮಾಸ್ತರ ಅಣ್ಣಿಗೇರಿ ಅವರನ್ನು ಕರೆದುಕೊಂಡು ಹೋಗಿ, ರಾತ್ರೋ ರಾತ್ರಿ ಅಂದಿನ ಟಪಾಲು ಬಿಚ್ಚಿ ನೋಡಿದಾಗ ನಮ್ಮಣ್ಣನ ಪತ್ರ ಕೈಗೆಟುಕಿದಾಗ ಕಲ್ಪವೃಕ್ಷವೆ ಕೈಗೆಟುಕಿದಷ್ಟು ಸಂಭ್ರಮ. ಒಂದು ದಿನ ತಡವಾದರೂ ಅಡ್ಡಿಯಿಲ್ಲ, ನಡುರಾತ್ರಿ ಟಪಾಲ್ ಬಿಚ್ಚಿದ ಅಪಚಾರಕ್ಕೆ ಈ ಪರಿಹಾರ ದೊರಕಿತಲ್ಲ ಸಾಕು ಎನಿಸಿತು.

ಅಂದು ನಾವು ಕುಮಟಾ ಮುಟ್ಟುವ ದಿನ, ತಂದೆಯವರು ನಮಗೆಲ್ಲಾ ಮನೆಯಲ್ಲಿ, ತಮ್ಮ ಕೈಯಿಂದಲೆ ಅನ್ನ, ಸಾರು ಮಾಡಿಟ್ಟು ಬಂದಿದ್ದರು!

ಸೈಕಲ್ ತುಳಿಯುತ್ತ ಐದಾರು ಮೈಲು ಬಂದಿರಬೇಕು– 'ಸುರಕ್ಷಿತ ಬಂದ್ರ್ಯಾ ಅಂತೂ' ಎಂದು ನಮ್ಮಪ್ಪನ ಕಡೆ ನೋಡಿ ನಮ್ಮೆಲ್ಲರನ್ನೂ ಉದ್ದೇಶಿಸಿ ಕೇಳಿದಾಗ, 'ಆರಾಮ ಬಂದ್ವಿ ಕಾಕಾ!' ಎಂದು ನಾವೆಲ್ಲ ಕೂಗಿ ಹೇಳಿದೆವು.

ಮನೆ ಚಪ್ಪರದ ತರಹ ತೆಂಗಿನ ಗರಿಗಳಿಂದ ಮಾಡಿದ್ದಿತು. ತಂದೆ ತಾಯಿಗಳ ಸುಖ ಒಂದು ವರ್ಷ ಭೋಗಭಾಗ್ಯವಾಗಿ ದೊರೆತುದು ಇದೇ ಒಂದಾವರ್ತಿ ಎಂದು ಕಾಣುತ್ತದೆ. (ಮುಂದೆ ಹಳಿಯಾಳದಲ್ಲಿ ನಾನೊಬ್ಬನೆ ತಂದೆ-ತಾಯಿಗಳ ಸುಖ ಸಂಪೂರ್ಣ ಉಂಡೆ. ನಮ್ಮ ಇಬ್ಬರು ಅಣ್ಣಂದಿರು ಹಳಿಯಾಳದಲ್ಲಿ ಇಂಗ್ಲಿಷ್ ಶಾಲೆಗಳಿರದ್ದರಿಂದ ಗದುಗಿನಲ್ಲೇ ಇದ್ದರು. ಬೇಸಗೆ ಸೂಟಿಯಲ್ಲಿ ಇಬ್ಬರೂ ಅಣ್ಣಂದಿರು ಬಂದಿದ್ದರು. ತಂದೆಯವರು ಕೊಂಡಿದ್ದ ಹೊಸ BSA ಸೈಕಲ್‌ನ್ನು ನಮ್ಮಣ್ಣ ಹತ್ತಿ ತಿರುಗಾಡಿದ್ದೆ ತಿರುಗಾಡಿದ್ದು, ನನ್ನನ್ನು ಕೂರಿಸಿಕೊಂಡು. ಅಳ್ನಾವರ ರಸ್ತೆಯ ಕೆಂಪ ಮಣ್ಣಲ್ಲಿ ಸಾಲು ಮಾವಿನಮರಗಳ ರಸ್ತೆಗುಂಟ ದಾರಿಗುಂಟ ಮಾವಿನ ಕಾಯಿಗಳು ಸೂರೆಯಾಗಿ ಮರದಿಂದ ಬಿದ್ದಿದ್ದವು. ನಮ್ಮ ಸೈಕಲನ್ನು ಜೋರಾಗಿ ತುಳಿಯುತ್ತ ಏದುತ್ತ, 'ನೋಡು ನಾನಿ, ರೇಲ್ವೆ ಗಾಡ್ಯಾಗ ಹೋಗುವಾಗ ನೆಲ ದುಂಡಗ ತಿರಗಿಧಾಂಗ ಆಗತದಲ್ಲ, ಈಗೂ ಹಾಂಗ ಅನಿಸ್ತದ' ಎಂದು ಬೆವೆತು ಉಸಿರುಗಟ್ಟಿ ಹೇಳುವ.

ಕುಮಟೆಯಲ್ಲಿ ನಾನು ಕನ್ನಡ ಶಾಲೆಗೆ ಹೋಗುತ್ತಿದ್ದೆ. ಅಲ್ಲಿ ಕ್ಲಾಸ್ ಮಾಸ್ತರರು 'ಹ್ಯಾ ಪಳೇ' ಎಂದು ಹೆಚ್ಚಾಗಿ ಕೊಂಕಣಿಯಲ್ಲೇ ಕಲಿಸುವರು. ನನ್ನ ಅಣ್ಣನವರು ದೂರ ಎತ್ತರದಲ್ಲಿರುವ ಗಿಬ್ ಹೈಸ್ಕೂಲ್‌ಗೆ ಹೋಗುವರು. ಅವರ ವಾರ್ಷಿಕೋತ್ಸವದಲ್ಲಿ ಒಂದು ಮರಾಠಿ ನಾಟಕ ಪ್ರಯೋಗಿಸಿದ್ದರು. ಅಣ್ಣಿಗೇರಿ ಪೋಸ್ಟ ಮಾಸ್ತರರ ಮಕ್ಕಳಿಬ್ಬರು ನಾಂದಿಗೀತ ಹೇಳುತ್ತಿದ್ದರು– 'ಹೇ ಪುರಾಣಪುರುಷಾ ಪಂಢರೀಶಾ ಧಾವ ಪಾವ ಸಖಯಾ' ಎಂದು ಆರಂಭವಾಗುತ್ತಿತ್ತು. ಪೂರ್ತಿ ಹಾಡು ನೆನಪಿಲ್ಲ. ನಡುವೆ ಒಂದು ಪಾತ್ರ– 'ಜಗೀಮಿ ಫೌಜದಾರ' ಎಂದು ಹಾಡುತ್ತ ಪ್ರವೇಶ ಮಾಡಿತ್ತು.

ನಮ್ಮ ತಂದೆಯವರು ಹೊರಗಿನ ಕೆಲಸ ಮುಗಿಸಿ ಹಸಿದು ಕೆಂಪಾಗಿ ಮನೆಗೆ ಬಂದಾಗ, ಯಾರೊಡನೆಯೂ ಮಾತಿಲ್ಲ. ಆ ಹೊತ್ತಿನಲ್ಲಿ ತಂದೆಯನ್ನು ಮಾತನಾಡಿಸಲು ನಾವು

ಅಂಜುತ್ತಿದ್ದೆವು. ನಮಗೇನಾದರೂ ಪುಸ್ತಕ ವಗೈರೆ ಬೇಕಾಗಿದ್ದರೆ ನಮ್ಮ ತಾಯಿಯ ಮುಂದೆ ಹೇಳುತ್ತಿದ್ದೆವಲ್ಲದೆ ನಾನಾಗಿಯೆ ಹೇಳಲಂಜಿಕೆ.

ತಾಯಿಯ ವಾತ್ಸಲ್ಯವನ್ನು ನಾನು ಅತಿಯಾಗಿ ಉಂಡದ್ದು ನಮ್ಮ ಹಳ್ಳಿಯಾಳ ವಾಸ್ತವ್ಯದಲ್ಲಿ. ನಮ್ಮ ತಂದೆಗೆ ಲೈನ ಮೇಲೆ ಹೋಗುವ ಕೆಲಸ ತಪ್ಪಿ ಆಫೀಸನಲ್ಲೆ ಹೆಚ್ಚಾಗಿ ಕೆಲಸ ಮಾಡುತ್ತಿದ್ದರು. ಹಳ್ಳಿಯಾಳದಲ್ಲಿ ಮನೆಯ ಎದುರು ಚುರಮುರಿಯ ಭಟ್ಟಿಯೊಂದಿತ್ತು, ಆಗ ನನಗೆ ಒಂಭತ್ತು ವರ್ಷಗಳಾಗಿರಬೇಕು. ೨೧-೨೨ ರ ಸ್ವಾತಂತ್ರ್ಯ ಚಳುವಳಿಯ ದಿನಗಳು. ಅಲ್ಲಿ ಮರಾಠಿ ಪ್ರಾಬಲ್ಯವಿದ್ದುದರಿಂದ ನಾನೊಂದು ಮರಾಠಿ ಸ್ವಾತಂತ್ರ್ಯಗೀತ ಕಲಿತಿದ್ದೆ. ಆ ಚುರಮುರಿ ಭಟ್ಟಿಯವರು ನನ್ನನ್ನು ಕರೆದು ಆ ಹಾಡು ಹೇಳಿಸುವರು :

"ಘ್ಯಾ ಹೊ ಸ್ವದೇಶೀ ಮಾಲ ಘ್ಯಾ ಹೋ..." ಎಂದು ಆರಂಭವಾಗಿ "ಶುದ್ಧಿವರೀ ಕಧಿಯಾಲ ತುಮಿ ಹೋ" ಎಂದು ಮುಕ್ತಾಯವಾಗುವುದು. ಹಾಡು ಕೇಳಿದ ಆ ಭಟ್ಟಿಯವರು ಒಂದು ದೊಡ್ಡ ಕಾಗದ ಪೊಟ್ಟಣದಲ್ಲಿ ತಾಜಾ ಹುರಿದ ಬಿಸಿ ಚುರಮುರಿ ಕೊಟ್ಟು ಕಳಿಸುವರು. ನಮ್ಮವ್ವ ತುಂಬ ಖುಶಿಯಾಗಿ, ನನ್ನ ಬೆನ್ನ ಮೇಲೆ ಪ್ರೀತಿಯಿಂದ ಕೈಯಾಡಿಸಿ 'ಭಲೆ ಹುಡುಗಾ, ಇವೊತ್ತು ಸಂಜೆಗೆ ಇವರು ಬಂದ ಕೂಡಲೆ ಹೇಳು' ಎಂದು ಬೆನ್ನು ಚಪ್ಪರಿಸುವಳು.

ನಮ್ಮ ಮನೆಯ ಹಿತ್ತಲ ಕಡೆ ಬರಿ ಕಂಟಿಯ ಮರೆ ಮರಗಳ ಝಾಡು. ನಮ್ಮವ್ವ ಬಯಲುಕಡೆ ಹೋಗಬೇಕಾದರೆ ನನ್ನನ್ನು ಜೊತೆಗೆ ಕರೆದೊಯ್ಯುವಳು. (ನಾನು ತಾಯಿಯ ಬೆನ್ನ ಹಿಂಭಾಗ ನೋಡುತ್ತಿದ್ದೆ. ಆಕೆಯ ಒಂದು ಸ್ವಭಾವ– ಬಯಲು ಕಡೆ ಮುಗಿಯಿತೆಂದರೆ ಕಣ್ಣೊಳಗೆ ನೀರು ಬರುತ್ತಿದ್ದವು. ಈ ಕಂಬನಿ ಹಿಂದೆ ಏನೂ ಅರ್ಥವಿಲ್ಲದೆ ಯಾಂತ್ರಿಕವಾಗಿರುತ್ತಿದ್ದವು.)

ಒಂದೊಂದು ದಿನ ಬೆಳಗಿನ ಹೊತ್ತು ಶಾಲೆಯ ಸೂಟಿಯಲ್ಲಿ ನಮ್ಮವ್ವ ನೀರೊಲೆಯ ಮೇಲೆ ನೀರು ಕಾಯುವ ಕಟ್ಟಿಗೆಯ ಮಗ್ಗುಲಲ್ಲಿ ಒಂದು ಸಣ್ಣ ಪಾತೇಲಿಯಲ್ಲಿ ಕಾಫಿ ಮಾಡಿ, ತಾನೂ ಕುಡಿದು ನನಗೂ ಅಷ್ಟು ಕೊಡುತ್ತ, 'ಇಲ್ಲೆ ಮಗ್ಗಲದಾಗ ರೋಟು ಸಿಗತಾವ, ಒಂದು ದುಡ್ಡಿನ ಒಂದು ರೋಟು ತಗೊಂಡು ಬಾ' ಎಂದು ಒಂದು ರೋಟು ತರಿಸಿ ತಾನೂ ಅರ್ಧ ವಾಟಗ ಕಾಫಿ ರೋಟು, ನಾನೂ ಅರ್ಧ ವಾಟಗ ಕಾಫಿ, ಅರ್ಧ ರೋಟು ತಿನ್ನುವಾಗ ಮಾತೃವಾತ್ಸಲ್ಯವನ್ನೆ ಕುಡಿದು ಮಾತೃಪ್ರೇಮವನ್ನೆ ತಿಂದಂತಾಗುತ್ತಿತ್ತು.

ನಮ್ಮ ಪಠ್ಯದಲ್ಲಿ– 'ಶ್ರೀ ಮೇರಿ ಚಿರಂಜಯವಾಗಲಿ ನಿನಗೆ' ಎಂಬ ಭಕ್ತಿಗೀತವೊಂದಿತ್ತು.

ಕುಮಟೆಯಲ್ಲಿ ನಮ್ಮ ತಂದೆಯ ಹಾಸ್ಯೋಲ್ಲಾಸವುಂಡದ್ದು ಇನ್ನೊಂದು ತರಹ. ಕುಮಟಾದವರ ಹಾಗೇ, 'ನಾನಪ್ಪ, ಈ 'ಕೇಸರಿ' ಪೇಪರು ಅಣ್ಣಗೇರಿ ಮಾಸ್ತರಿಗೆ ಕೊಟ್ಟು ಬಾ– ಹ್ಞಾ!' ಎಂದು ದನಿ ಎಳೆಯುವರು.

ಸಾಯಂಕಾಲದ ಹೊತ್ತಿನಲ್ಲಿ ನಮ್ಮ ಮನೆ ಬಾಗಿಲು ಸಂದಿನಿಂದ ಹೊರಗೆ ರಸ್ತೆಯ ಮೇಲೆ ಜನ ಓಡಾಡುವುದು– ಅವರು ತಲೆ ಕೆಳಗಾಗಿ ಓಡಾಡಿದಂತೆ ಕಾಣುವುದು. ಇದರಲ್ಲಿ ಒಬ್ಬ ಕುರುಡ ಇಡಿಯ ಕುಮಟಾದ ಓಣಿ ಓಣಿಗಳಲ್ಲಿ ಓಡಾಡುತ್ತಿದ್ದ. ಆತನ ನೆರಳೂ ತಲೆಕೆಳಗಾಗಿ ನಡೆಯುತ್ತಿತ್ತು– ನಮ್ಮ ಸಿನಿಮಾದಲ್ಲಿ. 'ನಿಮಗೊಮ್ಮೆ ಫಾಕ್ಸೀನ ಸಿನೇಮಾ

ತೋರಿಸಿಗೊಂಡು ಬರತೀನಿ ಗದಿಗ್ಗೆ ವರ್ಗ ಆದ ಮ್ಯಾಲೆ' ಎನ್ನುತ್ತಿದ್ದ ಅಪ್ಪ. 'ಕೇಸರೀ' ಮರಾಠೀ ಪತ್ರಿಕೆಯಲ್ಲಿ ಫಾಳ್ಕೆ 'ಹರಿಶ್ಚಂದ್ರ' ಸಿನೇಮ ತಯಾರಿಸಿದ್ದು ಬಂದಿತ್ತು.

ಆಗಾಗ ಸಂಜೆ ನನ್ನ ಅವ್ವ ನನ್ನ ಪುಟ್ಟ ತಂಗಿ ಚಂಪಾನನ್ನು ಎತ್ತಿಕೊಂಡು, ಮನೆಯ ಮುಂದಿನ ಗೇಟ್‌ಗಿರುವ ಒಂದು ಕಬ್ಬಿಣದ ಬಾರ್‌ಗೆ, ಚೆಂದನ್ನ ಬಟ್ಟೆ ಹಾಕಿ ನಿಲ್ಲಿಸಿಕೊಂಡು ನಾನು ಶಾಲೆ ಬಿಟ್ಟು ಬರುವುದನ್ನೆ ನೋಡುತ್ತ ನಿಂತಿರುತ್ತಿದ್ದಳು. ಅದೇ ಹೊತ್ತಿಗೆ ಸಮುದ್ರತೀರದಿಂದ ತಾಜಾ ಮೀನುಗಳನ್ನು ದೊಡ್ಡ ಬುಟ್ಟಿಯೊಳಗೆ ತುಂಬಿಕೊಂಡು ಮೀನು ಮಾರುವವರು–ಝುಲ್ ಝುಲ್ ಎಂದು ಬುಟ್ಟಿ ಭಾರಕ್ಕೆ ಮೈ ನಡುಗಿಸುತ್ತ ಅದರ ಜೊತೆಗೆ ಸ್ತನಗಳನ್ನು ಕುಣಿಸುತ್ತ ಹೋಗುತ್ತಿದ್ದರು.

ನಮ್ಮ ತಂದೆ-ತಾಯಿಗಳ ಜೊತೆ ನವಿಲುಗುಂದ, ನರಗುಂದಗಳನ್ನು ಸುತ್ತಾಡುವಾಗಲೆಲ್ಲಾ ತಂದೆ ತಾಯಿಗಳಿಬ್ಬರ ಸೌಖ್ಯವನ್ನೂ ಉಂಡ ಜೀವ ಇದು. ನವಿಲುಗುಂದದಲ್ಲಂತೂ ಪ್ಲೇಗು ಬಂದು– ಊರ ಹೊರಗೆ ಜೋಪಡಿ ಹಾಕಿಸಿಕೊಂಡು ಇರುತ್ತಿದ್ದೆವು. ಒಮ್ಮೆ ನಮ್ಮಜ್ಜಿ 'ಮುದಿಕೆವ್ವ' (ತಾಯಿಯ ತಾಯಿ) "ನಿನಗ ದ್ವಾಸಿ ಮಾಡಿ ಹಾಕ್ತೀನಿ ಸ್ವಲ್ಪ ಮೂಲ್ಯಾಗಿನ ಕಬ್ಬಣಂಚು ತರತೀಯಾ?" ಎಂದಾಗ ಮೂರು ವರುಷದ ಈ ಬಾಲಕ ಕಬ್ಬಣಂಚು ಎತ್ತಿ ಕಾಲ ಮೇಲೆ ಹಾಕಿಕೊಂಡು ಎಡಗಾಲಿನ ಹೆಬ್ಬೆರಳು ಕತ್ತರಿಸಿ ಹೋಗಿ ಇನ್ನೂ ಆ ಜಾಗದಲ್ಲಿ ದಪ್ಪನಾಗಿ ಬೆಳೆದು ಇನ್ನೂ ನನ್ನೊಂದಿಗೇ ಬೆಳೆದು ಬಂದಿದೆ– ಮೂರು ವರುಷದ ಬೆರಳು ಈ ೯೩ ಸಮೀಪಿಸಿರುವ ಈ ನಾನಿಯೊಂದಿಗೆ. (ಹಾಗೇ ನನ್ನ ಎಡಗೈ ಹೆಬ್ಬೆರಳಿಗೆ ಉಗುರುಸುತ್ತಾಗಿತ್ತು– ನಾನು ಹನ್ನೊಂದು ವರುಷದವನಿದ್ದಾಗ.) ನಮ್ಮ ಜೋಪಡಿಯಿಂದ ತಗಡೊಂದು ಬಿರುಗಾಳಿಗೆ ಹಾರಿ ನಮ್ಮ ನಡುವಿನಣ್ಣನನ್ನು ಬೆನ್ನಟ್ಟಿದಾಗ ಆತ ಮುಂದೆ ಮುಂದೆ ಓಡುತ್ತಿದ್ದ ನೆನಪು.

ನರಗುಂದದಲ್ಲಿ ನಮ್ಮ ತಂದೆ-ತಾಯಿಗಳು (ಒಮ್ಮೆ ಮಡಿಸೀರೆ ಬೇಕೆಂದು ತಾಯಿ ಕೇಳಿದಾಗ) ಜಗಳಾಡಿದ ನೆನಪು. ನಾನಂತೂ ಗಾಬರಿಗೊಂಡು ಹುಚ್ಚನಂತೆ ನನ್ನಷ್ಟಕ್ಕೇ ಬೆದರಿಬಿದ್ದ ನೆನಪು.

ಇವರೊಂದಿಗೆ ಇನ್ನೊಂದು ನೆನಪು– ಬ್ರಿಟಿಶರು ಮೊದಲನೆಯ ಮಹಾಯುದ್ಧವನ್ನು ಗೆದ್ದಾಗ– ಸ್ವಾಮಿನಿಷ್ಠೆಯ ಪ್ರಜೆಗಳಾದ ನಮ್ಮನ್ನು ನರಗುಂದದ ಬಾಬಾಸಾಹೇಬನ ವಾಡೇದ ಬಯಲಲ್ಲಿ ನಡೆದ ಸಭೆಯಲ್ಲಿ ವಿದ್ಯಾರ್ಥಿಗಳಾದ ನಮಗೆಲ್ಲಾ ಬೆಂಡು ಬತ್ತಾಸ, ಬಹಾದ್ದೂರ ಬಿಲ್ಲೆ ಹಂಚಿದ್ದರು.

ಇಷ್ಟೆಲ್ಲಾ ಉತ್ತರ ಕನ್ನಡ ಜಿಲ್ಹೆಗಳ ಸುತ್ತಾಟದಲ್ಲಿ (ಕುಮಟಾ, ಭಟಕಳ, ಅಂಕೋಲಾ, ಹಳ್ಳಿಯಾಳ), ಅಲ್ಲದೆ ಸುಮಾರು ಸಾವಿರ ಮೈಲಿನಷ್ಟಾದರೂ ಸರ್ವೀಸಿನುದ್ದಕ್ಕೂ ಅಲೆದಾಟ— ಅಪ್ಪ ಕ್ಷಯ ರೋಗವನ್ನು ತಂದುಕೊಂಡರು. ಗದುಗಿನಲ್ಲಿ ನಮ್ಮ ಅಕ್ಕನ ಗಂಡನ ಮನೆಯಲ್ಲಿ (ಅವರೊಬ್ಬ ಕೋರ್ಟಿನ ಕಾರಕೂನರು, ಒಳ್ಳೇ ಬೆಳ್ಳಗಿನ ಚೆಲುವಾದ ಮುಖ) ಅಕ್ಕನ ಒತ್ತಾಯದ ಮೇಲೆ ಗದುಗಿನ ಕಿಲ್ಲೇದಲ್ಲಿ ನಮ್ಮ ಮನೆಯಿದ್ದರೂ ಡಾಕ್ಟರ ಚಿಕಿತ್ಸೆಗಾಗಿ ಸ್ಟೇಶನ್ ರಸ್ತೆಯ ವಕೀಲ ಚಾಳಿನಲ್ಲಿ ಹುಯಿಲಗೋಳ ಸುಬ್ಬರಾಯರ ಮನೆಯಲ್ಲೇ ಹಾಸಿಗೆ ಹಿಡಿದುಬಿಟ್ಟರು. ಪುನಃ ಏಳಲಿಲ್ಲ. ೧೯೨೪ ನೆಯ ಇಸ್ವಿ ಸು. ಜೂನ ತಿಂಗಳು (ಜೇಷ್ಠ

ಪುಷ್ಪ ಹಚ್ಚಿ) ಇನ್ನೂ ನಿವೃತ್ತಿ ಹೊಂದಿರದ ಸಬ್ ಓವರ್ ಸಿಯರ ಕೃಷ್ಣರಾಯರು ಇಹಯಾತ್ರೆ ಮುಗಿಸಿದರು. ನಾನು ಇನ್ನೂ ಚಿಕ್ಕವ– ಉಪನಯನವಾಗಿರಲಿಲ್ಲ– ಅಂತಿಮ ಯಾತ್ರೆಗ ಹೋಗಲಾಗಲಿಲ್ಲ. ನಮ್ಮ ಹಿರಿಯಣ್ಣ, ನಡುವಿನಣ್ಣ ಹೋಗಿದ್ದರು.

ನಾನಂತೂ ಹುಚ್ಚನಂತಾದೆ. ಏನೂ ತಿಳಿಯುತ್ತಿರಲಿಲ್ಲ. ಸೂತಕವೆಂದರೇನು ತಿಳಿಯುತ್ತಿರಲಿಲ್ಲ. ನೆರೆಹೊರೆಯವರು, ಪಾಪ ಪರದೇಶಿ ಮಕ್ಕಳು– ಎಂದು ನೋಡಿ ಮರುಗಿದರೆ ಒಂದು ತರಹ ಅನಿಸುವುದು. ನಮ್ಮ ತಂದೆ ಧೋತರದ ಬದಲು ದಪ್ಪ ಬಟ್ಟೆಯ ಲಂಡ ಚಣ್ಣ– ಹಾಕಿಕೊಳ್ಳುತ್ತಿದ್ದರು, ಹಾಸುಗೆ ಹಿಡಿದಾಗ. ನನಗೆ ಆ ಲಂಡ ಚಣ್ಣಗಳನ್ನೆ– ನಮ್ಮ ಋಣಾನುಬಂಧಿ ಗಂಗಕ್ಕ, (ಆಕೆ ನಮಗೊಬ್ಬ ದೇವಪ್ರೇಷಿತ ಸಹಾಯಕಳು) ಪರೋಪರಿಯಿಂದ ಮಾಡುವಂತಹಳು– ಹಾಕಿಕೊಳ್ಳಲು ಹೇಳಿದಳು. ಆಕೆ, ಚಿಕ್ಕಂದಿನಲ್ಲೇ ವಿಧವೆಯಾದವಳು, ನಮ್ಮ ಮನೆಯಲ್ಲಿ ಬಹುತೇಕ ನನ್ನ ಮಗ(ರವಿ)ನ ವರೆಗೂ ಬಾಣಂತನ ಮಾಡಿದವಳು. ನಮ್ಮ ತಂದೆ ತೀರಿದ ಮೇಲೆ ನಮ್ಮ ತಾಯಿಗೆ ನೆರವಾಗಿ ನಿಂತು, ನನ್ನ ಅಣ್ಣಂದಿರ ಮಕ್ಕಳ, ನನ್ನ ಮಕ್ಕಳ ಬಾಣಂತಿತನ ಮಾಡಿದವಳು. ಈ ಸೂತಕದ ಮನೆಯಲ್ಲಿ ಆಕೆಯೊಬ್ಬಳೆ ಖಡೇ ನಿಂತು ಎಲ್ಲಾ ಮನೆಗೆಲಸ ನೋಡಿಕೊಂಡಳು.

ಹತ್ತು ದಿನಗಳ ಸೂತಕ ಮುಗಿಯಿತೆನ್ನುವಾಗ ದೊಡ್ಡ ಘಟಸರ್ಪದಂತಹ ಘಟನೆ! ನಮ್ಮ ತಾಯಿ ಶುದ್ಧವಾಗಬೇಕಂತೆ. ನಮ್ಮ ತಾಯಿಯಂತೂ ಹತ್ತು ದಿನ ಹತ್ತುಗಡೆಯವರ ಮುಂದೆ ಕಣ್ಣೀರು ಹಾಕಿ ಹಾಕಿ ಸೋತು ಸುಣ್ಣವಾಗಿದ್ದಳು! ಅಂತಹವರಲ್ಲಿ ಗಂಗಕ್ಕನ ಒತ್ತಾಯ– "ಸೋನಕ್ಕ ಶುದ್ಧ ಆಗಬೇಕ್ರವಾ. ಇಲ್ಲದಿದ್ದರ ಸ್ವಾಮಿಗೋಳು ಬಹಿಷ್ಕಾರ ಹಾಕತಾರ. ಆಮ್ಯಾಲೆ ಬ್ರಾಹ್ಮಣರ ಮುಂದ ತಲೆ ಎತ್ತಧಾಂಗ ಆಗತದ" ಎಂದು ಮತ್ತೆ ಮತ್ತೆ ಒತ್ತಾಯ. "ಇದನ್ನ ಮಾತ್ರ ನಾವೊಲ್ಲೆ ಗಂಗಕ್ಕs ನಾವೊಲ್ಲೆ. ನಾ ಭಾವಿ ಬಿದ್ದು ಸಾಯ್ತೀನಿ ಬಿಟ್ಟು ಬಿಡು ನನ್ನ" ಎಂದು ಕೈಕೊಸರಿಕೊಳ್ಳುವಷ್ಟರಲ್ಲೇ, ಒಬ್ಬ ಕಪ್ಪುಮುಖದ ಕ್ಷೌರದವ ಬಂದೇ ನಿಂತಿದ್ದ ಆಚೆಗೆ. "ನಾ ಸಕೇಸಿಯಾಗಿ ಇದ್ದೇನು, ಆದರ ರೂಪಾ ಅಳಿಸಿಕೊಂಡು ಇರಲಾರೆ" ಎಂದು ಗೋಳಿಟ್ಟಳು, ಗೋಗರೆದಳು. ಆದರೆ ಗಂಗಕ್ಕ ಕಠೋರವಾಗಿ ನಮ್ಮವ್ವನನ್ನು ಹೊರಗಿನ ಕೋಣೆಗೆ ದಬ್ಬಿಕೊಂಡೇ ನಡೆದಳೆನ್ನಬೇಕು. ಆ ಯಮಧರ್ಮನಂತಹ ಕಪ್ಪು ಮುಖದ ಕ್ಷೌರದವ ತನ್ನ ಸಣ್ಣ ಮಣೆಯ ಮೇಲೆ ಕುಳಿತ. ಎದುರಿಗೆ ನನ್ನ ತಾಯಿ, ನಮ್ಮ ಮಾತೃದೇವತೆ, ಗಂಗಕ್ಕ ಹಾಕಿದ್ದ ಮಣೆ ಮೇಲೆ ಗಂಗಕ್ಕನಿಂದ ಬಲವಂತದಿಂದ ಕುಳ್ಳಿರಿಸಲ್ಪಟ್ಟಳು. ಕೋಣೆಯ ಬಾಗಿಲು ಬಂದ್ ಮಾಡಿರದಿದ್ದರೂ ಸ್ವಲ್ಪ ಕಿಂಡಿಯಷ್ಟು ಜಾಗ ಬಿಟ್ಟಿತ್ತು. ನಾನು ಏನೊ ಕೆಟ್ಟ ಕನಸಿಗನಂತೆ ನೋಡುತ್ತ ನಿಂತೆ ಆ ಯಮಕೃತ್ಯವನ್ನು!

ಆ ಕಪ್ಪು ಮುಖದ ಕ್ಷೌರಿಕ– ಥೇಟ ಯಮನ ಅವತಾರಿಯೇ ಆತ– ತನ್ನ ಮೊಳಕಾಲುಗಳ ಸಂದಿನಲ್ಲಿ ನನ್ನ ತಾಯಿಯ ಶಿರಚ್ಛೇದ ಮಾಡುವವನಂತೆ (ಹಾಗೆ ಮಾಡಿದ್ದರೆ ಎಷ್ಟೋ ಮೇಲಾಗುತ್ತಿತ್ತು, ನನ್ನ ತಾಯಿಯೂ ಹೋದಳೆಂದು ಇನ್ನೊಂದು ಸೂತಕ ಆಚರಿಸುತ್ತಿದ್ದೆವು.) ಸರಿ, ಆ ಯಮರಾಯ ನನ್ನ ತಾಯಿಯ, ನನ್ನ ಹಡೆದವ್ವನ ತಲೆಯ ಮೇಲೆ ತಪತಪನೆ ತಣ್ಣೀರೆರಚಿದ! (ಹಳ್ಳಿಯಾಳದಲ್ಲಿ ನನಗೆ ಮಾತೃವಾತ್ಸಲ್ಯವುಣಿಸಿದ ನನ್ನ ಹೆತ್ತಾಯಿ, ಅಯ್ಯೋ

ಏನಾಯ್ತು, ಆಕೆಯ ಅವಸ್ಥೆ! ಸ್ಪಷ್ಟವಾಗಿ ಕಣ್ಣು ಮುಚ್ಚಿಕೊಂಡು ಹೋದ ನನ್ನ ತಂದೆಗಿಂತಲೂ ದಾರುಣವಾದ ಈ ಅಶಾಂತಿ, ಅಪಸವ್ಯದ ಚಿತ್ರ!)

ನನ್ನ ತಾಯಿಯ ತಲೆಯ ಮೇಲೆ ತಪತಪ ತಂಬಿಗೆಗಟ್ಟಲೆ ನೀರೆರಚಿ, ಒಂದು ಕತ್ತಿ, ಹತ್ಯಾರ ಅದು, ಹಿರಿದು ನನ್ನ ತಾಯಿಯ ಘಟಸರ್ಪದಂತಹ ಕೂದಲುಗಳನ್ನು ಎಡಗಡೆ ನಾಲ್ಕೈದು ಸಲ, ಬಲಗಡೆ ನಾಲ್ಕೈದು ಸಲ ಕೆರೆದು ಕೆರೆದು ಬೋಳು ಮಾಡಿದ. ಆಮೇಲೆ ಆ ದಪ್ಪನಾದ ಘಟಸರ್ಪದಂತೆ ಉದ್ದವಾದ ಕೂದಲುಗಳನ್ನು ಒಂದು ಪಿಂಡಿಯಾಗಿ ಮಾಡಿಕೊಂಡು ಘಟಸರ್ಪವನ್ನ ಬಗಲೊಳಗಿಟ್ಟುಕೊಂಡ. ಆ ಸೂ...ಮಗನಿಗೆ ಎಲೆ ಅಡಕೆ- ಹತ್ತು ರೂಪಾಯಿ ದಕ್ಷಿಣೆ ಬೇರೆ! ಅವನ್ನು ಎತ್ತಿಕೊಂಡು ಬಗಲೊಳಗೆ ಘಟಸರ್ಪವನ್ನು ಮಡಸಿ ಹಿಡಿದುಕೊಂಡು ಬೀಡಿ ಹಚ್ಚಿಕೊಂಡು ಹೊರಬಿದ್ದ! ಆತನನ್ನು ಏನು ಮಾಡಲಿ? –ಎಂದು ರೋಷದಿಂದ ಹಲ್ಲು ಕಚ್ಚಿದೆ.

ಆದರೆ ಆತನೇನು ಮಾಡಿಯಾನು? ತನ್ನ ಕೆಲಸ, ತನ್ನ ಹೊಟ್ಟೆಪಾಡಿನ ಕೆಲಸ ಮಾಡಿದ್ದ!

ಆಯಿತಲ್ಲ? ಇನ್ನೇನು ಮಾಡುವುದು. ನಮ್ಮ ತಂದೆಯ ಶವದ ಜೊತೆಗೇ ನನ್ನ 'ಮಾತೃಶ್ರೀ'ಯ ಮಂಗಲಸೂತ್ರ– ತಾಳಿ ತೆಗೆದಿಟ್ಟಿದ್ದರು– ಹರಿದು ಹೋಗಿತ್ತು, ಕೈಯ ಬಳೆಗಳೂ ಒಡೆದು ಹೋಗಿದ್ದವು.

ಗಂಗಕ್ಕನೇ ನನ್ನ ಪೂಜ್ಯ ತಾಯಿಗೆ ನೀರು ಹಾಕಿದ್ದಳು. ಒಂದು ಕೆಂಪು ಚೀಟಿನ ಕೋರಾ ಸೀರೆಯನ್ನುಟ್ಟುಕೊಂಡು ನಮ್ಮವ್ವ ಕೂತಿದ್ದಳು. ನಾನು ದುಃಖದಿಂದ ಕಣ್ಣೀರು ತುಂಬಿ ಬಂದು ಬಿಕ್ಕುತ್ತ "ಅವ್ವಾss" ಎಂದು ಆಕೆಯ ಬಳಿ ಹೋದೆ. ಆಕಳು ತನ್ನ ಕರುವನ್ನು ಅಪ್ಪಿಕೊಳ್ಳುವಂತೆ ನನ್ನ ತಾಯಿ ಮೌನದಿಂದ, ತುಂಬಿಕೊಂಡ ಕಂಬನಿಗಳಿಂದ ನನ್ನನ್ನಪ್ಪಿಕೊಂಡಳು! ಆಕೆಯ ಆ ಕೆಂಪು ಸೀರೆಯ ಚೀಟಿನ ವಾಸನೆ ಇನ್ನೂ ನನ್ನ ಮೂಗಿನಲ್ಲಿ ತುಂಬಿಕೊಂಡಿದೆ!

ಇಂತಹ ವಾಸನೆ ಇನ್ನೊಬ್ಬ ಬಾಲಕನಿಗೆ ಬರದಿರಲಿ ಎಂದು ಈ ವಯಸ್ಸಿನಲ್ಲಿ ನಾನು ಅಂದಿನ ೮೦ ವರ್ಷಗಳ ಹಿಂದಿನ ಆ ಚಿತ್ರ ನೆನೆದುಕೊಳ್ಳುತ್ತೇನೆ!

ಮೂರು ಕವಿತೆಗಳು

ಜಿ. ಮಲ್ಲಿಕಾ ಬಸವರಾಜು

---

೧. ಹೊಳೆಯಾಗಿ ಹರಿದಳು ಹುಡುಗಿ

ತವರೂರ ಹಸಿಮಣ್ಣು
ಬಿಟ್ಟು ಬಂದಾ ಹುಡುಗಿ
ಮುಗ್ಗರಿಸಿ ಬಿದ್ದದ್ದು ಬಿರುಕು ನೆಲದಲ್ಲಿ.
  ಸುಡುವ ಬಿಸಿಲಿಗೆ ರೋಸಿ
  ನೆರಳ ಬಯಸಿದರೆ
  ಇರಲಿಲ್ಲ ಅಲ್ಲಿ ಮರ ಗಿಡ ಬಳ್ಳಿ.
ಬೇರಿಳಿಸಿ ಬಿರುಕಿಗೆ ಪಾತಾಳ ಸೋಕಿದರೂ
ಸಿಗಲಿಲ್ಲ ಹನಿ ನೀರು
ಬಂದದ್ದು ಬರೀ ಬೆವರು.

೩. ರೂಪಾಂತರ

ಸಿಟ್ಟು, ಸೆಡವುಗಳ
ಸಾಕಾರವಾಗಿದ್ದ ನಾನು
ಸಹನಾಮೂರ್ತಿಯಾಗಿ
ರೂಪುಗೊಂಡದ್ದು
  ಪುಟ್ಟ ಕಂದನ
  ಗುಲಾಬಿ ಮೃದು ಪಾದಗಳ
  ಒಂದೊಂದು ಒದೆತದಿಂದ
  ಹಾಗೂ ನನ್ನವನ
  ಪ್ರೀತಿ ಸಿಂಚನದಿಂದ.

ಎದೆಗುಂದಲಿಲ್ಲ ಬಾಲೆ, ಧೀರೆ!
ಬತ್ತಿದರು ಕಡಲು, ಬತ್ತಲುಂಟೇ
ಅವಳೆದೆ, ಒಡಲು?

ಜೀವರಸ ಹರಿಸಿ, ಮಣ್ಣ ಕಣಕಣಕೂ
ಹೊಳೆಯಾಗಿ ಹರಿದಳು ಹುಡುಗಿ
ಕಡಲಗಲ, ಕಡಲಾಳ ತಾನೇ ತಾನಾಗಿ...

ಅವಳ ಒಳದನಿ ಕೇಳಿ ಮೊಳೆತಂಥ ಪೈರುಗಳು
ಬೆಳೆಯುತಿವೆ ಹೀರಿ
ಅವಳ ನೆತ್ತರು ಬೆವರು.

ಕಾಜಾಣ, ಕಾಮಳ್ಳಿ
ಬಂದೆರಗಿ ಘಟ್ಟೆಂದು ಮೀನ್ಹಿಡಿವ ಮಿಂಚುಳ್ಳಿ
ದನಿ ಎತ್ತಿ ಹಾಡುತಿವೆ ಅವಳ ಹೆಸರು.

ಇರಿದವಳ ತನುವಲ್ಲಿ
ಬೇರಿಳಿದ ಮರಗಳಿವೆ
ದಡದಗಲ, ದಡದುದ್ದ ಜೀವಜಾತ್ರೆ.

೨. ಸಂವಾದ

ಬುದ್ಧನೆಂದರೆ ಏನು?
ಬುದ್ಧನೆಂದರೆ ಯಾರು?
ಕೇಳಿದರು ಗುರುಗಳು.

ಶಿಷ್ಯರಿಂದ ಬಂತು ಉತ್ತರ
ಸುರಿದಂತೆ ನೀರ ಧಾರಾ.

ಬುದ್ಧನೆಂದರೆ ಮಮತೆ
ಬುದ್ಧನೆಂದರೆ ಸಹನೆ, ಶಾಂತಿ, ಪ್ರೀತಿ.
ಬುದ್ಧನೆಂದರೆ ಮೌನ
ಬುದ್ಧನೆಂದರೆ ಧ್ಯಾನ, ಕರುಣೆ, ಮೈತ್ರಿ.

ಬುದ್ಧನೆಂದರೆ ಅರಿವು
ಬುದ್ಧನೆಂದರೆ ಗುರುವು
ನೆಮ್ಮದಿಯ ಜಗದೆಡೆಗೆ ಅವನ ಒಲವು.
ಬುದ್ಧನೆಂದರೆ ಕಡಲು
ಬುದ್ಧನೆಂದರೆ ಬಯಲು
ಸಕಲ ಜೀವಿಗಳ ಪೊರೆವ ಮಡಿಲು.

ಥಟ್ಟನೆ ತಟ್ಟಿ ಚಪ್ಪಾಳೆ
ಗುಡುಗಿದರು ಗುರುಗಳು—
ಸಾಕು ನಿಲ್ಲಿಸಿ ನಿಮ್ಮ ಆಲಾಪ.

ಚಪ್ಪಾಳೆ ಸದ್ದು.
ಹೇಳಿ ಹೇಗಿತ್ತು?

ಒಬ್ಬನೆಂದ ಛಟ್ ಅಂತು.
ಮತ್ತೊಬ್ಬನೆಂದ ಫಟ್ ಅಂತು.
ಮಗುದೊಬ್ಬನೆಂದ ಫಟೀರ್ ಅಂತು.
ಗುಡುಗು ಸಿಡಿಲಿನಂತಿತ್ತು.
ಮಿಂಚು ಮಿಂಚಿದಂತಿತ್ತು.
ದೂರದಲ್ಲೆಲ್ಲೋ ನಿಂತಿದ್ದವ ಗೊಣಗಿದ
ನನಗೆ ಕಾಣಿಸಲಿಲ್ಲ ಕೇಳಿಸಲೂ ಇಲ್ಲ.

ನಕ್ಕು ನುಡಿದರು ಗುರು—
ಚಪ್ಪಾಳೆ ಸದ್ದಿನ ಹಾಗೆ
ಬುದ್ಧನೂ ಕೂಡಾ...

ನಮ್ಮ ಅರಿವಿಗೆ ದಕ್ಕಿದಷ್ಟೂ...
ನಮ್ಮ ತಿಳಿವಿಗೆ ಸಿಕ್ಕಿದಷ್ಟೂ...
ನಮ್ಮ ಗ್ರಹಿಕೆಗೆ ಎಟುಕಿದಷ್ಟೂ...

ಬುದ್ಧನೆಂದರೆ ಎಲ್ಲಾ...
ಬುದ್ಧನೆಂದರೆ ಏನೂ
ಇಲ್ಲಾ...

■ ಜಿ. ಮಲ್ಲಿಕಾ ಬಸವರಾಜು : W/o. ಡಾ. ಬಸವರಾಜು
'ಬಸವ ಸದನ', ಸೇಂಟ್ ಮೇರೀಸ್ ಕಾನ್ವೆಂಟ್ ರಸ್ತೆ, ಗಾಂಧೀನಗರ, ತುಮಕೂರು-೫೭೨ ೧೦೧ ■

ನನ್ನ ಗುರುಗಳು

ಶ್ಯಾಮಲಾ ಮಾಧವ

ಗುರುರ್ದೇವೋ ಭವ ಎಂಬ ವಿಶ್ವಾಸಭಾವವು, ವಿದ್ಯಾರ್ಜನೆಯ ಆ ಬಾಲ್ಯಕಾಲದಲ್ಲಿ ನಮಗಾಗಿದ್ದರೆ, ಅದಕ್ಕೆ ಕಾರಣ, ನಮ್ಮ ಪ್ರೀತಿಯ ಬೆಸೆಂಟ್ ಬಾಲಿಕಾ ಪಾಠಶಾಲೆ ಹಾಗೂ ಅಲ್ಲಿನ ಶಿಕ್ಷಕವೃಂದ. ದೇಶಭಕ್ತಿ ತುಂಬಿದ ಸ್ವಾತಂತ್ರ್ಯೋತ್ತರ ದಿನಗಳವು. ಸ್ವಾತಂತ್ರ್ಯ ದಿನಾಚರಣೆಯಿಂದ ತೊಡಗಿ ಎಲ್ಲ ರಾಷ್ಟ್ರೀಯ ಹಬ್ಬಗಳೂ ಸಂಭ್ರಮದಿಂದ ಆಚರಿಸಲ್ಪಡುತ್ತಿದ್ದ ನಮ್ಮ ಆ ಪ್ರೀತಿಯ ಪಾಠಶಾಲೆಯಲ್ಲಿ ಪಾಠದೊಡನೆ ನೀತಿಯನ್ನೂ, ಶಿಸ್ತನ್ನೂ, ಕಲೆಯನ್ನೂ ಮೇಳೈಸಿ ವಾತ್ಸಲ್ಯದಿಂದ ನಮ್ಮನ್ನು ಸನ್ಮಾರ್ಗದಲ್ಲಿ ನಡೆಸಿದ ಆ ಸತ್ಪರಂಪರೆಗೆ ನನ್ನ ನಮನ.

ಶಾಲಾ ಆವರಣದೊಳಗಿನ ಮನೆಯಲ್ಲೇ ಬಾಲ್ಯ ಕಳೆದು, ಪ್ರಾಥಮಿಕ, ಮಾಧ್ಯಮಿಕ ವಿದ್ಯಾಭ್ಯಾಸ ನಡೆಸಿದ ಆ ದಿನಗಳಲ್ಲಿ ಎಲ್ಲ ಶಿಕ್ಷಕರೂ, ಎಲ್ಲ ವಿದ್ಯೆಯೂ ನನ್ನದೆಂಬ ಸುವರ್ಣಾವಕಾಶ ನನ್ನ ಪಾಲಿಗಿತ್ತು. ನಾಲ್ಕು ವರ್ಷ ಪ್ರಾಯದಲ್ಲಿ ಹಾಜರಿ ಪುಸ್ತಕದಲ್ಲಿ ಹೆಸರಿಲ್ಲದೆಯೇ ಒಂದನೆ ತರಗತಿ ದಾಟಿ ಎರಡನೆ ತರಗತಿಗೆ ಬಂದಾಗ ಅಲ್ಲಿ ನನ್ನ ಕ್ಲಾಸ್ ಟೀಚರಾಗಿದ್ದ ಶೀಲ ಟೀಚರನ್ನು ಮರೆಪಂತಿಲ್ಲ. ಪ್ರೋಗ್ರೆಸ್ ಕಾರ್ಡ್‌ನಲ್ಲಿ 1st Rank ಎಂದಿದ್ದಂತೇ ಜೊತೆಯಲ್ಲೇ ರಿಮಾರ್ಕ್– 'ಮಾತಿನ ಮಲ್ಲಿ'– ಎಂದು ಬರೆದು, ಬೆಂಚ್‌ನ ಮೇಲೆ ನಿಲ್ಲುವ ಶಿಕ್ಷೆಯನ್ನೂ ವಿಧಿಸಿದವರು. ಅತ್ತಣಿಂದ ಹಾದು ಹೋಗುತ್ತಿದ್ದ, ಪ್ರೈಮರಿಯ ಹೆಡ್‌ಮಿಸ್ಟ್ರೆಸ್– ವಾವೆಯಲ್ಲಿ ನನ್ನ ಸೋದರತ್ತೆಯಾದ– ಸುಂದರಿ ಟೀಚರ್, ತಡೆದು ನಿಂತು ಏನೆಂದು ಕೇಳಿ, ನಸುನಕ್ಕು, "ಪಾಠ ಮಾಡುವಾಗ ಮಾತಾಡಬಾರದಲ್ವಾ," ಎಂದು ತಮ್ಮ ಶಾಂತ ಸ್ವರದಿಂದ ನುಡಿದು ಹೊರಟುಹೋಗಿದ್ದರು.

ನನ್ನ ತಿಳಿವಿಗೆ ಪ್ರಥಮವಾಗಿ ಬಂದ ಕ್ಯಾನ್ಸರ್ ಕೇಸ್‌ಗೆ ಬಲಿಯಾದವರು, ನನ್ನ ಈ ಅತ್ತೆ– ಸುಂದರಿ ಟೀಚರ್. ಹೈಸ್ಕೂಲಿನ ಆವರಣದೊಳಗಿನ ನಮ್ಮ ಮನೆಗೆ ಮಧ್ಯಾಹ್ನದ ಬಿಡುವಿನಲ್ಲಿ ಬಂದು, "ವಸಂತಾ, ಸೆಖೆ ತಡೆಯಲಾಗುವುದಿಲ್ಲ, ಹತ್ತು ನಿಮಿಷ ಮಲಗಿರ್ತೇನೆ," ಎಂದು ನೆಲದಲ್ಲೇ ಮಲಗಿ ಸೆರಗಿನಿಂದ ಗಾಳಿ ಬೀಸಿಕೊಳ್ಳುತ್ತಿದ್ದ ಅವರ ಈ ಸ್ಥಿತಿಯನ್ನೂ, ಉಬ್ಬುತ್ತಾ ಬಂದಿದ್ದ ಹೊಟ್ಟೆಯನ್ನೂ ಕಂಡು, ಅಮ್ಮನೇ ಅವರನ್ನು ಡಾಕ್ಟರ ಬಳಿಗೊಯ್ದಿದ್ದರು. ರಕ್ತದ ಕ್ಯಾನ್ಸರ್ ಬಹು ಬೇಗನೇ ಅವರನ್ನು ನಿರ್ಗಮಿಸುವಂತೆ ಮಾಡಿತ್ತು.

ಶೀಲ ಟೀಚರ ಅಕ್ಕ ರಾಧಾ ಎಲ್. ರಾವ್ ಅವರೇ ನಮ್ಮ ಬೆಸೆಂಟ್ ಹೈಸ್ಕೂಲ್‌ನ ಮುಖ್ಯಾಧ್ಯಾಪಿಕೆ. ಮಂಗಳೂರಿಗರಿಗೆ ರಾಧಾ ಶೆಟ್ಟಿ ಎಂದೇ ಪರಿಚಿತರಾಗಿದ್ದ ಕೊಡಿಯಾಲ ಗುತ್ತಿನವರಾದ ಈ ಪ್ರತಿಭಾನ್ವಿತ, ಚಾಣಾಕ್ಷಮತಿ, ನನ್ನಮ್ಮನ ಗೆಳತಿಯೂ ಆಗಿದ್ದು, ಶಾಲಾ ಅವಧಿಯ ಹೊರಗೆ ನನ್ನ ಪಾಲಿಗೆ ಪ್ರೀತಿಯ ರಾಧಾಂಟಿ ಆಗಿದ್ದರು. ಬೆಸೆಂಟ್ ಶಾಲೆ ಆಗ, ಎತ್ತರವಾದ ಬುರುಜು, ಮಧ್ಯಾಂಗಣ, ಬಯಲು ವೇದಿಕೆ, ವಿಶಾಲ ಹಾಲ್‌ಗಳಿದ್ದ ಸಣ್ಣ ಶಾಲೆ (ಪ್ರೈಮರಿ); ಹಾಗೂ, ಕೆಳಗಣ ರಸ್ತೆಯ ಇತ್ತ ಬದಿಯ ವಿಶಾಲ ಅಂಗಣ, ಮಹಡಿ ಕಟ್ಟಡವಿದ್ದ ದೊಡ್ಡ ಶಾಲೆ (ಹೈಸ್ಕೂಲ್) ಎಂದು ಎರಡು ಕಟ್ಟಡ ಸಮುಚ್ಚಯದ ಸುವಿಶಾಲ

ಶಾಲೆ. ಪಠ್ಯ ವಿಷಯಗಳಂತೆಯೇ ನೃತ್ಯ, ನಾಟಕ, ಸಂಗೀತ, ಚಿತ್ರಕಲೆಗಳ ರಸಪಾನವನ್ನೂ ಉಣಿಸುತ್ತಿದ್ದ ಗುರುವರ್ಯರುಗಳಿದ್ದ ಶಾಲೆ. ಸಣ್ಣ ಶಾಲೆಯ ಕಟ್ಟಡಕ್ಕೆ ತಾಗಿಕೊಂಡೇ ಹಾಸ್ಟೆಲ್ 'ಪದ್ಮ ವಿಹಾರ'. ಸಾಮಾನ್ಯವಾಗಿ ಎಲ್ಲ ಶಿಕ್ಷಕಿಯರೂ ಅಲ್ಲಿ ಉಂಡು ಬಳಿಕ ನಮ್ಮ ಮನೆಗೆ ಬಂದು ಜಲಬಾಧೆ ತೀರಿಸಿಕೊಂಡು ಶಾಲೆಗೆ ಮರಳುವವರು.

ಸುಮಿತ್ರಾ ಬ್ಯಾ ಟೀಚರ್ ನಮಗೆ ಆರು, ಏಳನೇ ಕ್ಲಾಸ್‌ನಲ್ಲಿ ಇಂಗ್ಲಿಷ್ ಶಿಕ್ಷಕಿಯಾದವರು. ನಾನು ಎರಡನೇ ಕ್ಲಾಸ್‌ನಲ್ಲೂ, ಅಣ್ಣ ಮೋಹನ ಮೂರನೇ ಕ್ಲಾಸ್‌ನಲ್ಲೂ ಇದ್ದ ಐದು-ಆರು ವರ್ಷದ ಮಕ್ಕಳು, ನಾವು. ಅಮ್ಮ ಇದೇ ಶಾಲೆಯಲ್ಲಿ ಆಟ ಹಾಗೂ ಗೈಡಿಂಗ್ ಟೀಚರಾಗಿದ್ದರಿಂದ ಹೆಚ್ಚಿನ ಮಧ್ಯಾಹ್ನಗಳಲ್ಲಿ ಊಟಕ್ಕೆ ನಮಗೆ ತೊಗರಿ ಬೇಳೆ ಸಾರೊಂದೇ ಇರುತ್ತಿತ್ತು. ಒಂದು ಮಧ್ಯಾಹ್ನ ಏನೋ ನಿಮಿತ್ತ ಅಮ್ಮ ಮನೆ ಮುಟ್ಟಲಿಲ್ಲ. ಅಣ್ಣ ಮೋಹನ್, "ಶ್ಯಾಮಲಾ, ಪಪ್ಪಡ ಕಾಯಿಸುವನಾ?'' ಎಂದ. ಆಯ್ತೆಂದೆ. ಅಣ್ಣ ಸ್ಟೌ ಹೊತ್ತಿಸಿದ. ಕಾವಲಿಯಿಟ್ಟು ನಾನು ಎಣ್ಣೆ ಹೊಯ್ದೆ. ಅಣ್ಣ ಪಪ್ಪಡ ಹಿಡಿದು ಸಜ್ಜಾಗಿ ನಿಂತ. ಅಷ್ಟರಲ್ಲಿ ಅಲ್ಲಿಗೆ ಬಂದ ಸುಮಿತ್ರಾ ಬ್ಯಾ ಟೀಚರ್, ಚಿಮಿಣಿ ಎಣ್ಣೆಯ ವಾಸನೆಗೆ ಒಳಗಿಣುಕಿ ನೋಡಿ, ಒಮ್ಮೆಲೇ ಧಾವಿಸಿ ಬಂದು ಸ್ಟೌ ನಂದಿಸಿ ನಮ್ಮನ್ನು ದೂರ ಸರಿಸಿ ಎಣ್ಣೆಯನ್ನು ಇಳಿಸಿದರು. ಐದಾರರ ವಯಸ್ಸಿಗೆ ಚಿಮಿಣಿ ಎಣ್ಣೆಯೋ ತೆಂಗಿನೆಣ್ಣೆಯೋ ತಿಳಿವದೆಂತು? ಸುದ್ದಿ ಎಲ್ಲ ಶಿಕ್ಷಕಿಯರಿಗೂ ತಲುಪಿತು. ರಾಧಾಂಟಿ, ಒಂದಿಷ್ಟು ತಡವಾದರೂ ಚಿಂತೆಯಿಲ್ಲ; ಮಕ್ಕಳಿಗೆ ಏನಾದರೂ ಮಾಡಿಟ್ಟೇ ಬರಬೇಕೆಂದು ಅಮ್ಮನಿಗೆ ತಾಕೀತು ಮಾಡಿದರು!

ಒಂದು ರಾತ್ರಿ ರಾಧಾಂಟಿ ನನ್ನನ್ನು ಜೊತೆಗೆ ತಮ್ಮಲ್ಲಿಗೆ ಕರೆದೊಯ್ದಿದ್ದರು. ಬೆಳಿಗ್ಗೆ ಅಕ್ಕನ ಆಣತಿಯಂತೆ ಶೀಲಾಂಟಿ (ಶೀಲ ಟೀಚರ್) ಹೂಗಳನ್ನೆಲ್ಲ ಆರಿಸಿ ತಂದು, ಪೋಣಿಸಿ ಕೊಟ್ಟಾಗ, ನನ್ನ ಹೊರೆಕೂದಲನ್ನು ರಾಧಾಂಟಿ ಹೇಗೋ ಬಿಗಿದು ಕಟ್ಟಿ, ಹೂಮಾಲೆ ಹೇರಿ ಸಿಂಗರಿಸಿ ಬೆಳಿಗ್ಗೆ ಶಾಲೆಗೆ ಕರೆತಂದಾಗ, "It was a real sight !'' ಎಂದು ಎಷ್ಟೋ ದಿನಗಳ ವರೆಗೆ ಉಳಿದ ಟೀಚರ್ಸ್, ಅಮ್ಮ, ಮನಸೋ ನಕ್ಕದ್ದು ಇನ್ನೂ ನೆನಪಿದೆ. ರಾಧಾಂಟಿ, ನನಗೆ, 'ನಾನು' ಎಂಬುದರ ಮಹತ್ವವನ್ನು ತಿಳಿಸಿದವರು. ಸ್ಕ್ವಾಡ್ ಲೀಡರ್ಸ್ ಯಾರ್‍ಯಾರು ಎಂದು ಹೇಳುವಾಗ 'ನಾನು' ಕೊನೆಯಲ್ಲಿರಬೇಕೆಂದೂ, ಕ್ರಿಕೆಟ್ ಆಡಿ ಶಾಲಾ ಕಿಟಕಿಯ ಗಾಜು ಮುರಿದವರಾರೆಂದು ಹೇಳುವಾಗ 'ನಾನು' ಮೊದಲಲ್ಲಿ ಇರಬೇಕೆಂದೂ ನನ್ನನ್ನು ತಿದ್ದಿದವರು! ನಾವು ಕಿಟ್ಟಂಕಲ್ ಎಂದು ಕರೆಯುತ್ತಿದ್ದ ಅವರ ಅಣ್ಣ ಕೃಷ್ಣ ಶೆಟ್ಟಿಯವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರೆಂದು, ಕಳೆದ ವರ್ಷ, ನಿವೃತ್ತ ಪೊಲೀಸ್ ಅಧಿಕಾರಿ ರಾಮಯ್ಯ ರೈ ಅವರ ವೃತ್ತಿಜೀವನದ ಆತ್ಮಕಥೆಯ ಅನುವಾದದಲ್ಲಿ ತೊಡಗಿದಾಗಲಷ್ಟೇ ನನಗೆ ತಿಳಿಯಿತು.

ಮುಖ್ಯೋಪಾಧ್ಯಾಯಿನಿಯ ಶಿಸ್ತು, ವರ್ಚಸ್ಸು, ಸುವಿಚಾರದ ಮಾರ್ಗದರ್ಶನಕ್ಕೆ ಜೊತೆಯಾಗಿ ದುಡಿದು ಶಾಲೆಯ ಕೀರ್ತಿಯನ್ನೆತ್ತಿ ಹಿಡಿದ ಶಿಕ್ಷಕ ವೃಂದವನ್ನು ಅಲ್ಲಿನ ವಿದ್ಯಾರ್ಥಿನಿಯರು ಎಂದೂ ಮರೆವಂತಿಲ್ಲ. ನೃತ್ಯ ಶಿಕ್ಷಕ ರಾಜನ್ ಅಯ್ಯರ್, ಸಂಗೀತದ ಶ್ರೀನಿವಾಸ ಉಡುಪರು ಹಾಗೂ ಕನ್ನಡ ಪಂಡಿತ ಪಿ. ಕೆ. ನಾರಾಯಣರಂತಹ ಚೈತನ್ಯಶೀಲರನ್ನು ಗುರುಗಳಾಗಿ ಪಡೆದ ಭಾಗ್ಯ ನಮ್ಮದು. ಶಾಲಾ ದಿನವಾಗಿ ಆಚರಿಸಲ್ಪಡುತ್ತಿದ್ದ

ಅಕ್ಟೋಬರ್ ೧ ರ ಬೆಸೆಂಟ್ ದಿನಾಚರಣೆ ಹಾಗೂ ವರ್ಷಾಂತ್ಯದ ವಸಂತೋತ್ಸವಗಳು ಸಂಗೀತ, ನೃತ್ಯ, ನೃತ್ಯನಾಟಕಗಳ ಹಬ್ಬ! ಈ ನೃತ್ಯ ನಾಟಕಗಳಿಗೆ ಸಂಗೀತವನ್ನೊದಗಿಸುತ್ತಿದ್ದ ಉಡುಪರು, ಸಾಹಿತ್ಯ, ಗೀತೆಗಳನ್ನು ಒದಗಿಸುತ್ತಿದ್ದ ಪಂಡಿತರು ರಾಜಸ್ ಅಯ್ಯರ್‌ರ ಜೊತೆ ಸೇರಿ ಕಲಾರಸದೌತಣವನ್ನೇ ಹರಿಸುತ್ತಿದ್ದರು. ಸಂಗೀತ ಒಲಿಯದಿದ್ದರೂ ನೃತ್ಯವೆಂದರೆ ಜೀವವಾಗಿದ್ದ ನಾನು, 'ರಾಮಾಯಣ'ದ ಸ್ವರ್ಣಮೃಗವಾಗಿ ಮಿಂಚಿದರೂ, 'ಮಂಜುಘೋಷೆ'ಯ ಕುಬ್ಜರಲ್ಲೊಬ್ಬಳಾಗಿ ಪದಲಾಸ್ಯ ತಪ್ಪಿ, ಗುರುಗಳು ಕೆಂಗಣ್ಣು ಬಿಟ್ಟು, ಅಪಡುಗಚ್ಚಿ, ಪರದೆಯಿಳಿಸುವಂತೆ ಸನ್ನೆ ಮಾಡಿದ್ದು ಮರೆತಿಲ್ಲ. 'ವಸಂತೋತ್ಸವ'ದ ತಯಾರಿಯಲ್ಲಿ ಪಾತ್ರಗಳಿಗೆ ಬೇಕಾಗುವ ಕಿರೀಟ, ಖಡ್ಗ, ತೋಳಬಂದಿ, ಒಡ್ಯಾಣಗಳ ತಯಾರಿಯಲ್ಲಿ ಮಗ್ನರಾಗಿರುತ್ತಿದ್ದ ಶಿಕ್ಷಕ ವೃಂದದ ಜೊತೆಜೊತೆಗೆ ನುಸುಳಿ, ನೋಡಿ, ಸಂತೋಷಿಸುವ ಅವಕಾಶ ನಮ್ಮದಿತ್ತು. 'ವಸಂತರಾಣಿ'ಯ ಮೆರವಣಿಗೆಯಂತೂ....! ಶ್ವೇತವಸನ ಉಟ್ಟು, ಶ್ವೇತಸುಮಗಳನ್ನೇ ಆಭರಣಗಳಾಗಿ ತೊಟ್ಟು ಶೃಂಗಾರವಾಗುವ ವಸಂತರಾಣಿಯ ಜೊತೆಗೆ ಹೈಸ್ಕೂಲ್‌ನ ನಾಲ್ವರು, ಪ್ರೈಮರಿಯ ನಾಲ್ವರು ಸ್ಕ್ವಾಡ್ ಲೀಡರ್ಸ್ ಹಿಂದೆ, ಮುಂದೆ ಹೆಜ್ಜೆ ಹಾಕುವಂತೆಯೇ ಜೊತೆಗೆ ಶಾಲಾ ವಿದ್ಯಾರ್ಥಿನಿಯರೆಲ್ಲರೂ ಶ್ವೇತಾಂಬರರಾಗಿ ಸಾಗುವ ಪಥಚಲನ ದೊಡ್ಡ ಶಾಲೆಯಿಂದ ಸಣ್ಣ ಶಾಲೆಗೆ ಸಾಗುವ ಆ ಶಿಸ್ತಿನ ರೂವಾರಿ– ಆಟ ಟೀಚರಾಗಿದ್ದ ನಮ್ಮಮ್ಮ.

ಟೀಚರಾಗಿದ್ದ ನಮ್ಮಮ್ಮನ ಶಿಸ್ತಿಗೆ ಎರಡು ನಿದರ್ಶನಗಳನ್ನು ಕೊಡಬಲ್ಲೆ. ಏಳನೇ ತರಗತಿಯಲ್ಲಿ ಇಂಗ್ಲಿಷ್‌ನಲ್ಲಿ ಕಡಿಮೆ ಮಾರ್ಕ್ ಬಂತೆಂಬ ಬೇಸರದಿಂದ ಉತ್ತರ ಪತ್ರಿಕೆಯನ್ನು ನಾನು ಮುದುರಿ ಕಸದ ಡಬ್ಬಿಗೆ ತಳ್ಳಿದ ಬಗ್ಗೆ ಟೀಚರ್ ನನ್ನಮ್ಮನಿಗೆ ವರದಿಯಿತ್ತಾಗ, ಮುಂದಿನ ಪೀರಿಯೆಡ್‌ಗೆ ಬೇರೊಂದು ತರಗತಿಗೆ ಕಲಿಸುತ್ತಿದ್ದ ಆ ಟೀಚರ ಕಾಲಿಗೆರಗಿ ಕ್ಷಮೆ ಯಾಚಿಸುವಂತೆ ಅಮ್ಮ ನನ್ನನ್ನು ಶಿಕ್ಷಿಸಿದ್ದರು! ಆ ಟೀಚರೋ, ದ್ರವಿಸಿದ ಹೃದಯದಿಂದ ನನ್ನನ್ನೆತ್ತಿ ಸಮಾಧಾನಿಸಿದ್ದರು!

ಕೆಲ ದಿನಗಳಲ್ಲೇ ಶಾಲಾ ಸ್ಪೋರ್ಟ್ಸ್‌ನಲ್ಲಿ ಓಟದಲ್ಲಿದ್ದ ನಾನು, ಕುಸಿದು ಬಿದ್ದು, ಮೂರು ಬಾರಿ ಏಳಲೆತ್ನಿಸಿ ಮೂರು ಬಾರಿಯೂ ಕುಸಿದು ಬಿದ್ದಾಗ, ಅಮ್ಮ, ಎದ್ದು ಓಡೆಂದು ಪುನಃ ಪುನಃ ಗದರಿದ್ದರು. ನೋಡುತ್ತಿದ್ದ ಇತರ ಶಿಕ್ಷಕಿಯರು, ಹುಡುಗಿಯ ಕಾಲಿಗೇನೋ ತೊಂದರೆಯಾಗಿದೆಯೆಂದು ಮನಗಂಡು ಅಮ್ಮ ನನ್ನನ್ನು ಡಾಕ್ಟರ ಬಳಿಗೊಯ್ಯುವಂತೆ ಮಾಡಿದ್ದರು. ಪೋಲಿಯೋ ಸಂಬಂಧಿ ಫುಟ್‌ಡ್ರಾಪ್ ಎಂಬ ಅಂಗವೈಕಲ್ಯವೆಂದು, ಆಸ್ಪತ್ರೆ, ಮನೆ ಎಂದು ಎರಡು ತಿಂಗಳು ಶಾಲೆಯಿಂದ ದೂರಾಗಿ ಮನೆಯಲ್ಲುಳಿಯಬೇಕಾದುದಲ್ಲದೆ, ನನ್ನ ಪ್ರೀತಿಯ ನೃತ್ಯ, ಆಟೋಟಗಳಿಗೂ ತಿಲಾಂಜಲಿಯೀಯಬೇಕಾಯ್ತು. ಆದರೆ ಎಳವೆಯಲ್ಲೇ ಹತ್ತಿಕೊಂಡ ಪುಸ್ತಕದ ನಂಟು ತೀವ್ರವಾಯ್ತು.

ಕನ್ನಡ ಪಂಡಿತ ಪಿ. ಕೆ. ನಾರಾಯಣರ ಮಗಳು ವರದಾ ನನ್ನ ಸಹಪಾಠಿಯಾಗಿದ್ದಳು. ಆಗ ನಾನು ಬರೆದಿದ್ದ 'ಕಡಲಿನ ಕರೆ' ಎಂಬ ನನ್ನ ಪ್ರಥಮ ಕವನವನ್ನು ನನ್ನಿಂದ ಸೆಳೆದು ತಂದೆಯ ಕೈಯಲ್ಲಿಟ್ಟಿದ್ದಳು ವರದಾ. ಪಂಡಿತರು ಆಗ ತಾವು ದುಡಿಯುತ್ತಿದ್ದ 'ರಾಷ್ಟ್ರಬಂಧು' ಪತ್ರಿಕೆಯಲ್ಲಿ ನನ್ನೀ ಕವನವನ್ನು ಪ್ರಕಟಿಸಿದ್ದರು. ಪಂಡಿತರೊಡನೆ 'ನವಭಾರತ' ಪತ್ರಿಕಾ ಕಛೇರಿಗೂ ನಾನೊಮ್ಮೆ ಹೋಗಿದ್ದೆ. ಪಂಡಿತರನ್ನು ಬೆಸೆಂಟ್ ಶಾಲೆಯಲ್ಲಿ ಶಿಕ್ಷಕ ವೃತ್ತಿಗೆ

ಸೂಚಿಸಿದವರು ಶಿವರಾಮ ಕಾರಂತರೆಂದು ಮೊನ್ನೆ ಮೊನ್ನೆ ಅವರ ಬಗ್ಗೆ ಉಪನ್ಯಾಸದ ಸಿದ್ಧತೆಯಲ್ಲಿ ತೊಡಗಿದಾಗಲಷ್ಟೇ ನನಗೆ ತಿಳಿಯಿತು. "ಜಯ ಭಾರತ, ಜಯ ಭಾರತ, ಜಯ ಭಾರತವೆನ್ನಿ..." ಮತ್ತು "ಜೈ ಜೈ ಜೈ ಜೈ ಜಯವಾಗಲಿ ಭಾರತಕೆಂದೆಂದು" ಎಂಬ ಕ್ರಾಂತಿಗೀತೆಗಳನ್ನು ರಚಿಸಿದ ಪಂಡಿತರು ರಾಜಕೀಯ, ಸಾಮಾಜಿಕ, ಸಾಹಿತ್ಯಕ ಆಂದೋಲನಗಳಲ್ಲಿ ಸಕ್ರಿಯರಾಗಿ ದುಡಿದವರು. ಅಧ್ಯಾಪನದೊಡನೆ ಪತ್ರಿಕೋದ್ಯಮವನ್ನೂ ತೂಗಿಸಿಕೊಂಡು ಶ್ರಮಶೀಲರಾಗಿ ಗಾಂಧೀತತ್ವನಿಷ್ಠರಾಗಿ ಬಾಳಿದವರು. ಬೆಸೆಂಟ್ ಶಾಲೆಯಲ್ಲಿ ಕಲಿತ ಮಕ್ಕಳಲ್ಲಿ ದೇಶಭಕ್ತಿ ಹುಟ್ಟದಿರುವುದು ಸಾಧ್ಯವೇ ಇಲ್ಲ, ಎಂಬಂತಿತ್ತು ಅಲ್ಲಿನ ವಾತಾವರಣ. ಬುನಾದಿ ಶಿಕ್ಷಣ ಶಾಲೆಯಾಗಿದ್ದ ಪ್ರೈಮರಿಯಲ್ಲಿ ತಕಲಿಯಿಂದ ನೂಲುವಿಕೆ ಕಡ್ಡಾಯವಿತ್ತು. ತಾನೇ ನೂತ ಬಟ್ಟೆಯ ಖದ್ದರ್ ಉಡುಪು ಧರಿಸುತ್ತಿದ್ದರು, ಪಂಡಿತರು. "ನಾಡು, ನುಡಿಗಳ ಕುರಿತು ಅಭಿಮಾನ ತುಂಬಿದ ಅವರ ಪಾಠಪ್ರವಚನಗಳ ಉತ್ತಮ ಲಾಭವನ್ನು ಪಡೆದು ಇಂದು ದೇಶಾದ್ಯಂತ ನೆಲಸಿರುವ ಅವರ ಅಸಂಖ್ಯ ಹಳೆಯ ವಿದ್ಯಾರ್ಥಿನಿಯರು ನಡೆಸುತ್ತಿರುವ ಸಫಲ ಜೀವನವೇ ಅವರಿಗೆ ಎಲ್ಲ ಪ್ರಶಸ್ತಿಗಳಿಗಿಂತಲೂ ಮಿಗಿಲು," ಎಂದು ಸಾಹಿತಿ ಕಯ್ಯಾರ ಕಿಞ್ಞಣ್ಣ ರೈ ಅವರು ಹೇಳಿದ್ದಾರೆ. ಸಂಸ್ಕೃತದ ವಿದ್ಯಾರ್ಥಿನಿಯಾಗಿದ್ದ ನನಗೆ ಪಂಡಿತರು ಕನ್ನಡ ಕಲಿಸದಿದ್ದರೂ, ಅವರಿಂದ ನಾನು ಕಲಿತುಕೊಂಡುದು ಬಹಳ. ನೀತಿಬೋಧೆ ಕಲಿಸಲು ಬರುತ್ತಿದ್ದ ಅವರ ಪಾಠಾರಂಭವು ಎರಡು ನಿಮಿಷದ ಮೌನಧ್ಯಾನದಿಂದಾರಂಭವಾಗುತ್ತಿತ್ತು. ನಿವೃತ್ತಿಯ ಬಳಿಕ ಗಾಂಧೀ ಪ್ರತಿಷ್ಠಾನದ ಸಕ್ರಿಯ ಕಾರ್ಯಕರ್ತರಾಗಿ, ಅಂತೆಯೇ ಜಿಲ್ಲಾ ಸಾಹಿತ್ಯ ಪರಿಷತ್ತು, ಮಂಗಳೂರು ಕನ್ನಡ ಸಂಘ, ಸ್ನಾತಕೋತ್ತರ ಕೇಂದ್ರದ ಕನ್ನಡ ಸಂಘ, ಭಾರತೀಯ ವಿದ್ಯಾಭವನದ ಕಾರ್ಯಕಲಾಪಗಳಲ್ಲಿ ಮುತುವರ್ಜಿಯಿಂದ ದುಡಿದ ಅವರು ಕರ್ಮಭೂಮಿ ಮಂಗಳೂರನ್ನು ಬಿಟ್ಟಗಲಬೇಕಾಗಿ ಬಂದಾಗ ಆ ಕೊರಗು ಅವರನ್ನು ಕಾಡಿತೆಂದರಿತೆ. ೧೯೮೩ ರ ಮೇ ೧೯ ರಂದು ಆ ಕರ್ಮಜೀವಿ ಪುಣ್ಯಪುರುಷ ಇಹವನ್ನು ತೊರೆದರು. ಸತ್ಯನಿಷ್ಠೆ, ದೇಶಭಕ್ತಿ, ಗಾಂಧೀತತ್ವ, ಸಜ್ಜನಿಕೆಯ ಪಾಠವನ್ನು ಕಲಿಸಿದ ದಿವ್ಯಾತ್ಮರು, ಅವರು.

ದೇಶದ ಸಾಂಸ್ಕೃತಿಕ ರಾಯಭಾರಿಯಾಗಿ ರಷ್ಯಾಕ್ಕೆ ಹೋಗಿ ಬಂದಿದ್ದ ಗುರು ರಾಜನ್ ಅಯ್ಯರ್ ಅವರೂ ಎಂದೋ ನಮ್ಮನ್ನಗಲಿದ್ದಾರೆ. ಸಂಗೀತದ ಉಡುಪರು ಇತ್ತೀಚೆಗೆ ಕಾಲವಾಗಿದ್ದಾರೆ. ಸಂಸ್ಕೃತ ಕಲಿಸಿದ ಪ್ರಿಯ ಗುರುಗಳಾದ ಲೋಕಯ್ಯ ಶೆಟ್ಟರು ಕಳೆದ ತಿಂಗಳಷ್ಟೇ ತಮ್ಮ ಇಹಯಾತ್ರೆ ಮುಗಿಸಿದರು. ನಮಗೆ ಗಣಿತ, ವಿಜ್ಞಾನಗಳನ್ನು ಕಲಿಸುತ್ತಿದ್ದ ಎ. ಸುಂದರಿ ಟೀಚರ್, ರೇಬಿಸ್ ಬಗ್ಗೆ ನಮಗೆ ಪಾಠ ಮಾಡಿ ಬಹಳ ದಿನಗಳಾಗಿರಲಿಲ್ಲ; ಮನೆಯ ಪುಟ್ಟ ನಾಯಿಮರಿಯ ಕಡಿತದಿಂದ ರೇಬಿಸ್‌ಗೊಳಗಾಗಿ ಅವರು ಇಲ್ಲವಾದುದು ಆಘಾತವೆನಿಸಿತ್ತು.

ನಮ್ಮ ಡ್ರಾಯಿಂಗ್ ಟೀಚರ್ ಗ್ರೇಟಾ ಸತ್ಯಾರ್ಥಿಯವರ ಕೈಯಲ್ಲರಳುವ ಚಿತ್ರಕಲೆಯ ಸೊಗಸನ್ನು ನೋಡಿಯೇ ಅರಿಯಬೇಕು. ಮಂಗಳೂರ ಟೌನ್‌ಹಾಲ್‌ನಲ್ಲಿ ಭಿತ್ತಿಚಿತ್ರ ಬಿಡಿಸಿದ ಕಲೆಗಾರಿಕೆ ಅವರದು. ನಾನು ಕಲಿಯುತ್ತಿದ್ದಾಗಲೇ ಕರುಳಿನ ಶಸ್ತ್ರಕ್ರಿಯೆಗೊಳಗಾದ ಅವರು ಈಗಲೂ ಆರೋಗ್ಯದಿಂದಿದ್ದಾರೆ. ನಮ್ಮ ಪಾಲಿಗೆ ಅವರೂ ಪ್ರೀತಿಯ ಗ್ರೇಟಾಂಟಿ.

ಇನ್ನು ನಮ್ಮಮ್ಮನ ತಂಗಿಯಂತೆ, ನಮ್ಮ ಮನೆಯವರಲ್ಲೊಬ್ಬರಂತೆ ಆತ್ಮೀಯರಾದ ಭಾಮಾಂಟಿ ನನಗೆ ಮುದ್ದಾದ ಅಕ್ಷರಗಳಿಂದ ಸವಿಯಾದ ಕನ್ನಡ ಕಲಿಸಿದವರು. ಇಂದಿಗೂ

ಅವರ ಅಕ್ಷರ ಮುತ್ತಿನಂತಿದೆ. ಅಮ್ಮ, ಗೈಡಿಂಗ್ ತರಬೇತಿಗೆಂದು ಹೈದರಾಬಾದ್‌ಗೆ ಹೋದಾಗ, ಗೈಡ್ಸ್ ಕ್ಯಾಂಪ್ ಸ್ಕೌಟ್ಸ್ ಜಂಬೂರಿ ಎಂದು ಮೈಸೂರಿಗೆ ಹೋದಾಗ ಮನೆಯವರಾಗಿರುತ್ತಿದ್ದ ಆಂಟಿ, ಪ್ರೀತಿ, ಮಾರ್ದವದ ಒರತೆ; ಅವರ ವಾತ್ಸಲ್ಯದ ತಂಪಿನಲ್ಲಿ ಬೆಳೆದವರು, ನಾವು. ಪಾಠ ಡಿಕ್ಟೇಟ್ ಮಾಡುವಾಗ ತಪ್ಪಾದರೆ, ಮಕ್ಕಳ ಪುಸ್ತಕ ಚಿತ್ತಾಯ್ತಲ್ಲಾ ಎಂದು ನೊಂದುಕೊಳ್ಳುತ್ತಿದ್ದವರು. "ಹರಿವುದೆನ್ನ ಮನವು ಹಿಂದೆ, ಕಳೆದ ದಿನದ ಹಾದಿ ಹಿಡಿದೂ..." ಎಂದು ಅವರು ಹಾಡಿ ಪಾಠ ಮಾಡಿದ ಆ ಕವನವನ್ನು ಹಾಡಲೆತ್ನಿಸಿದರೆ ಈಗಲೂ ನನ್ನ ಕಂಠ ಗದ್ಗದವಾಗುತ್ತದೆ. ನನ್ನ ಸಾಹಿತ್ಯಾಸಕ್ತಿಗೆ ನೀರೆರೆದು ಪೋಷಿಸಿದವರು, ಆಂಟಿ. ಭಾಮಾ ಟೀಚರ್, ವಸಂತಿ ಟೀಚರ ತಂಗಿ, ಎಂದೇ ಶಾಲೆಯಲ್ಲಿ ಅನೇಕರು ತಿಳಿದುಕೊಂಡಿದ್ದರು. ಯಾರನ್ನೂ ನೋಯಿಸದ, ಮೃದು ಮಧುರ ನುಡಿಗಳ ಸಹೃದಯಿಯಾದ ಭಾಮಾಂಟಿಯೇ ಕನ್ನಡದ ನನ್ನ ಪ್ರಥಮ ಗುರು.

ವಿನೋದಶೀಲರೂ, ತೀಕ್ಷ್ಣಮತಿಯೂ ಆಗಿದ್ದು, ಶಾಲೆಯ ಉಚ್ಛ್ರಾಯಕ್ಕೆ ಕಾರಣರಾಗಿದ್ದ ಮುಖ್ಯೋಪಾಧ್ಯಾಯಿನಿ ರಾಧಾ ಶೆಟ್ಟಿ, ವಿವಾಹಾನಂತರ ರಾಧಾ ರಾವ್ ಅನಿಸಿಕೊಂಡಿದ್ದರು. ಬಿಡಾರಂ ಕೃಷ್ಣಪ್ಪನವರ ಮಗನಾದ, ಸಮಾಜಸೇವಕ, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಕೆ. ಎಲ್. ಎನ್. ರಾವ್ ಅವರು ಇವರ ಪತಿ. ಇವರ ಪ್ರೇಮವಿವಾಹಕ್ಕೆ ನಾಂದಿಯಾಗಿ ಕೆ. ಎಲ್. ಎನ್. ರಾಯರ ಹದಿಮೂರು ಪುಟಗಳ 'ಮೇಘಸಂದೇಶ'ವನ್ನು ರಾಧಾಂಟಿಯ ಬಳಿಗೊಯ್ದವರು ನನ್ನಮ್ಮನಂತೆ! ಇದೆಲ್ಲ ನನ್ನ ಜನನಕ್ಕೂ ಮುನ್ನ ನಡೆದ ಸತ್ಯಕಥೆ! ಅದೇ ಸಮಯ ಶಾಲೆಯಲ್ಲಿ ರೂಪುಗೊಳ್ಳುತ್ತಿದ್ದ ಇನ್ನೊಂದು ಪ್ರೇಮಕಥೆ ಲೀಲಾ ಹಾಗೂ ಶಿವರಾಮ ಕಾರಂತರದು! ನಾನು ಶಾಲೆ ಸೇರುವ ಬಹು ಮುನ್ನವೇ ಕಾರಂತರು ಅಲ್ಲಿಂದ ನಿರ್ಗಮಿಸಿದ್ದರೂ, ಮೂರು ವರ್ಷದವಳಿದ್ದಾಗ ಬಳಿಯಲ್ಲಿನ ಥಿಯೊಸಾಫಿಕಲ್ ಸೊಸೈಟಿ ಹಾಲ್‌ನಲ್ಲಿ ನೋಡಿದ ಕಾರಂತರ 'ಕಿಸಾಗೌತಮಿ' ನಾಟಕ ಇನ್ನೂ ನನ್ನ ಕಣ್ಣಿಗೆ ಕಟ್ಟಿದೆ. ಆಚಾರ-ವಿಚಾರಗಳಲ್ಲಿ ನನ್ನ ಸರ್ವಪ್ರಥಮ ಗುರುವಾದ ನನ್ನ ತಂದೆಯವರು ಆಗಾಗ ಉಚ್ಚರಿಸುತ್ತಿದ್ದ 'ಬುದ್ಧಂ ಶರಣಂ ಗಚ್ಛಾಮಿ...' ಇದನ್ನು ಸ್ಥಿರವಾಗುಳಿಸಿದೆ.

ಇಂಗ್ಲಿಷ್‌ನಲ್ಲಿ ಹೆಚ್ಚಿನ ತರಬೇತಿಗಾಗಿ ಸರಕಾರದ ವತಿಯಿಂದ ಅಮೆರಿಕಾಕ್ಕೆ ಹೋಗಿಬಂದ ರಾಧಾಂಟಿಯ ನಡೆ ನುಡಿಯಲ್ಲಿ ಓಜಸ್ಸಿತ್ತು. ಅವರ ಮುಂದಾಳುತ್ವದಲ್ಲಿ ಶಾಲೆ ತನ್ನ ಸರ್ವಾಂಗೀಣ ಪ್ರಗತಿ ಸಾಧಿಸಿತು ಎನ್ನಬಹುದು. ಅವರ ಆಫೀಸ್ ಕೋಣೆಯಲ್ಲೇ ಸಾಯನ್ಸ್ ಲ್ಯಾಬ್‌ನ ಅಸ್ಥಿಪಂಜರವಿದ್ದು, ಸುಮ್ಮಸುಮ್ಮನೆ ಒಳಹೊಕ್ಕು ಗಾಳಿಗೆ ಕಿರುಗುಡುವ ಆ ತೂಗುವ ಅಸ್ಥಿಪಂಜರವತ್ತ ಕಣ್ಣು ಹಾಯಿಸಿ ಬರುವ ಕೌತುಕ ನನ್ನದಾಗಿತ್ತು. ಅಮ್ಮ ಪಿ. ಟಿ. ಹಾಗೂ ಗೈಡಿಂಗ್ ಟೀಚರಾಗಿದ್ದರಿಂದ, ಆಫ್ಟರ್‌ಕ್ಲಾಸ್ ಗೇಮ್ಸ್ ಹಾಗೂ ಗೈಡಿಂಗ್ ನಡೆಸಿ ಅಮ್ಮ ಮನೆ ಮುಟ್ಟುವಾಗ ಗಂಟೆ ಆರಾಗುತ್ತಿತ್ತು. ಮನೆಯಲ್ಲಿ, ಅಂಗಳದಲ್ಲಿ ಕುಳಿತು, ಎದುರು ಬಯಲಲ್ಲಿ ಅಮ್ಮನ ಈ ತರಬೇತಿಗಳನ್ನು ಆಸೆಕಣ್ಣುಗಳಿಂದ ದಿಟ್ಟಿಸುತ್ತಿದ್ದೆ, ನಾನು. ಸಂಜೆಗಳಲ್ಲಿ, ಹೀಗಾಗಿ ನಮಗೆ ತಿಂಡಿಯೆಂದರೆ ಹತ್ತಿರದ ಪಿ.ವಿ.ಎಸ್. ಬೇಕರಿಯ ದುಂಡನೆ ಆಕಾರದ ಬ್ರೆಡ್. ಒಂದು ಸಂಜೆ ಬೇಕರಿ ಮುಚ್ಚಿದ್ದರಿಂದ ತಿಂಡಿಯಿಲ್ಲದೆ ನಾವು ಅಮ್ಮನನ್ನು

ಪೀಡಿಸುತ್ತಿದ್ದೆವು. ಆಗ ಒಳಬಂದ ರಾಧಾಂಟಿ. "ಹೊರಡಿ" ಎಂದು ಅಮ್ಮನನ್ನೂ ನಮ್ಮನ್ನೂ ಹೊರಡಿಸಿಕೊಂಡು, ಅದೇ ಆರಂಭವಾಗಿದ್ದ ವುಡ್‌ಸೈಡ್ ಹೊಟೇಲ್‌ನಲ್ಲಿ ತಿನ್ನಿಸಿದ ಮಸಾಲೆ ದೋಸೆ ಹಾಗೂ ಗುಲಾಬ್ ಜಾಮೂನ್‌ನ ರುಚಿ ಇಂದಿಗೂ ಮರೆವಂತಹುದಲ್ಲ! ಇಂದು ಇಂತಹ ತಿನಿಸುಗಳನ್ನು ತಿಂದು ಬೇಸತ್ತಿರಬಹುದು, ಆದರೆ ಅಂದಿನ ಆ ರುಚಿ ಮಾತ್ರ ಅಮರ!

ನನ್ನ ಬರಹಗಳನ್ನೆಲ್ಲ ಓದಿ ಪ್ರೋತ್ಸಾಹಿಸುತ್ತಿದ್ದ, ನನ್ನ 'ಗಾಸ್ ವಿತ್ ದ ವಿಂಡ್' ಬರುವುದನ್ನೇ ಕಾಯುತ್ತಿದ್ದ ನನ್ನ ರಾಧಾಂಟಿ, ಕೃತಿ ಬಿಡುಗಡೆಗೊಳ್ಳುವ ಮೂರು ತಿಂಗಳ ಮೊದಲೇ ಇಹಯಾತ್ರೆ ಮುಗಿಸಿ ನಮ್ಮನ್ನಗಲಿದರು. ಕಳೆದ ಮೇ ತಿಂಗಳಲ್ಲಿ ಕೃತಿಯ ಕರಡು ಪ್ರತಿ ತಿದ್ದಲೆಂದು ಬೆಂಗಳೂರಿಗೆ ಹೋದವಳು ಆಂಟಿಯನ್ನು ಕಂಡು, ಅವರು ಪ್ರೀತಿಯಿಂದ ಮಾಡಿ ಕೊಟ್ಟ ಕಾಫಿ-ತಿಂಡಿ ಸೇವಿಸಿ ನಮಸ್ಕರಿಸಿ ಬಂದಿದ್ದೆ. "ಬೇಬಿ, ಎಷ್ಟು ಸಂತೋಷಾಯ್ತಮ್ಮಾ ನಿನ್ನನ್ನು ನೋಡಿ" ಎಂದ ಆ ಪ್ರೀತಿ ಸುರಿವ ಮಾತು ಹೃದಯ ತುಂಬಿ ನಿಂತಿದೆ; ಕಣ್ಣಲ್ಲಿ ಬಾಷ್ಪಾಂಜಲಿ ತುಂಬಿದೆ...!

ಪಿ.ಟಿ. ಟೀಚರಾಗಿ ಅಮ್ಮ, ಶಾಲೆಯ ವಿದ್ಯಾರ್ಥಿನಿಯರನ್ನು ಆಟೋಟಗಳಿಗೆ ತರಬೇತುಗೊಳಿಸುತ್ತಿದ್ದ ಆ ಪರಿ ನೋಡಿಯೇ ಅರಿಯಬೇಕು. ತಂದೆಯವರ ಅನಾರೋಗ್ಯದ ಕಾರಣ ನಿದ್ದೆಯಿಲ್ಲದ ರಾತ್ರಿಗಳನ್ನು ಕಳೆದರೂ ಶಿಕ್ಷಕಿಯಾಗಿ ಅಮ್ಮ ಕರ್ತವ್ಯಲೋಪ ಮಾಡಿದುದಿಲ್ಲ. ಮನೆಯಲ್ಲೂ ಅಚ್ಚುಕಟ್ಟಾಗಿ ಕೆಲಸ ಕಾರ್ಯ ನಿಭಾಯಿಸುವ ಅಚ್ಚ ಗೃಹಿಣಿ! ಅಮ್ಮ ಪಿ.ಟಿ. ಟೀಚರಾಗಿದ್ದ ಆ ವರ್ಷಾನುವರ್ಷ ಬೆಸೆಂಟ್ ಶಾಲೆಗೆ ದಸರಾ ಸ್ಪೋರ್ಟ್ಸ್‌ನಲ್ಲೂ, ಅಂತರ್ಶಾಲಾ ಸ್ಪರ್ಧೆಗಳಲ್ಲೂ ದೊರಕಿದ ಚಾಂಪಿಯನ್‌ಶಿಪ್, ಶೀಲ್ಡ್‌ಗಳು ಲೆಕ್ಕವಿಲ್ಲದಷ್ಟು. ಪ್ರೆಸಿಡೆಂಟ್ಸ್ ಗೈಡ್ ಪ್ರಶಸ್ತಿಗಳೂ ಅಗಣಿತ. ಈಗಿರುವ ಉತ್ತಮ ಶಿಕ್ಷಕಿ ಪ್ರಶಸ್ತಿಗಳ ಅಟಾಟೋಪ ಆಗಿರಲಿಲ್ಲ. ಇದ್ದಿದ್ದರೆ, ಯಾವುದೇ ಪ್ರಶಸ್ತಿಗೂ ಮೀರಿದ ಸಾಧನೆ ಅವರದು!

ನಾನು ಎಂಟನೇ ತರಗತಿ ಮುಗಿಸಿದಾಗ ಶಾಲೆಯ ಆವರಣದಲ್ಲಿ ನಾವಿದ್ದ ಮನೆಯ ಜಾಗದಲ್ಲಿ ಹೋಮ್ ಸಾಯನ್ಸ್ ವಿಭಾಗ ಬರುವುದೆಂದು, ಆ ಯೋಜನೆಗಾಗಿ ನಾವಿದ್ದ ಮನೆಯನ್ನು ಬಿಟ್ಟು ಹೋಗಬೇಕಾಯ್ತು. ದೂರ ಉರ್ವದಲ್ಲಿ ಬಾಡಿಗೆ ಮನೆ ದೊರೆತಾಗ ದೂರವೆಂಬ ಕಾರಣಕ್ಕೆ ಶಾಲೆಯನ್ನೂ ಬದಲಿಸಬೇಕಾಗಿ ಬಂತು. ಶಾಲಾ ಲೈಬ್ರೆರಿ, ಲೈಟ್‌ಹೌಸ್ ಹಿಲ್ ಲೈಬ್ರೆರಿ, ಕಾರ್ನಾಡ್ ಸದಾಶಿವರಾವ್ ಲೈಬ್ರೆರಿ ಎಂದು ಈ ವಾಚನಾಲಯಗಳ ಸಾಹಿತ್ಯ ಸಂಪತ್ತನ್ನು ಮನಸೋಕ್ತ ಅನುಭವಿಸುವ, ಅವಕಾಶವಿತ್ತ ನೆಲೆಯದು! ಬಕುಲದ ಸುಮರಾಶಿಯ, ಉದ್ದಕ್ಕೂ ಹಬ್ಬಿದ ಮಧುಮಾಲತಿ ಬಳ್ಳಿಯ ಹೂಗಳ ನರುಗಂಪು, ಅಮ್ಮ ನೆಟ್ಟು ಬೆಳೆಸಿದ, ಮನೆ ಹಾಗೂ ಶಾಲೆಯ ವಿಶಾಲವಾದ ಕಣ್ಮನ ಸೆಳೆವ ಹೂದೋಟ, ಅಚ್ಚುಮೆಚ್ಚಿನ ಶಿಕ್ಷಕವೃಂದ ಎಲ್ಲವನ್ನೂ ತೊರೆದು ಹೋಗುವಾಗ ನೀರಿನಿಂದ ಕಿತ್ತ ತಾವರೆಯಂತಾದ ಆ ಸ್ಥಿತಿ! ಇಂದಿಗೆ ದಶಕಗಳೇ ಕಳೆದಿದ್ದರೂ ಇನ್ನೂ ನನ್ನ ಜೀವ ಅಲ್ಲೇ ಇದೆ.

ಮುಂದೊಂದು ವರ್ಷ ಲೇಡಿ ಹಿಲ್ ಶಾಲೆಯ ವಿದ್ಯಾರ್ಥಿನಿ ಆಗಿದ್ದಾಗ, ಕನ್ನಡ ಕಲಿಸಿದ ವಿದ್ವಾನ್ ಶಂಭು ಭಟ್ಟರನ್ನು ಮರೆಯಲಾರೆ. ಅವರು ಮಾಡಿದ 'ಕಡೆ ಕಂಜಿ' ಕವನದ ಪಾಠ

ಇಂದಿಗೂ ಕಿವಿಯಲ್ಲಿ ಮೊಳಗುತ್ತಿದೆ. 'ಭಕ್ತ ಕಬೀರ್' ಹಿಂದೀ ನಾಟಕದಲ್ಲಿ ಪಾತ್ರ ವಹಿಸಿ ಎಲ್ಲರಿಗೂ ಅಚ್ಚುಮೆಚ್ಚಾಗಿದ್ದೆ. ವಿಜ್ಞಾನದಲ್ಲಿ ಅಭಿರುಚಿ ತೋರಿ ಶಿಕ್ಷಕಿ ಜರಿನ್ ಪಾಸ್ ಟೀಚರ್‌ಗೆ ಮೆಚ್ಚಿನವಳಾಗಿದ್ದೆ. ಹೀಗಿದ್ದೂ ಒಂದಿನ, ಶಾಲೆಗೆ ತಡವಾಗಿ ಬಂದುದರಿಂದ ಮಾಷ್ಟ್ರ ಶಂಭಟ್ಟರು, ಬಾಗಿಲಲ್ಲೇ ತಡೆದು ನಿಲ್ಲಿಸಿ ಕಠೋರವಾಗಿ ತಡವಾದ ಕಾರಣ ಕೇಳಿದಾಗ, ಅಮ್ಮನಿಗೆ ಸೌಖ್ಯವಿಲ್ಲವೆಂದು ತಡವರಿಸಿದ್ದೆ! ಶಾಲೆಗೆ ಹೋಗುತ್ತಿದ್ದ ಅಮ್ಮನನ್ನು ದಾರಿಯಲ್ಲಿ ಭೇಟಿಯಾಗಿದ್ದ ಮಾಷ್ಟ್ರ, ನನ್ನ ಸುಳ್ಳಿಗೆ ಕನಲಿ, ಹೆಡ್‌ಮಿಸ್ಟ್ರೆಸ್ ಬಳಿಗೆ ಕಳುಹಿದರು! ನನ್ನ ಕೀಳು ಅಪರಾಧಕ್ಕಾಗಿ, ಆ ಪೀರಿಯಡ್ ಪೂರ್ತಿ ಆಫೀಸ್ ಕೋಣೆಯನ್ನು ಧೂಳು ಒರೆಸಿ ಸ್ವಚ್ಛವಾಗಿಸುವ ಶಿಕ್ಷೆ ನನ್ನ ಪಾಲಿಗೆ ಬಂತು! ಅಂದು ನಾನು ಕುಗ್ಗಿ ಹೋಗಿದ್ದೆ.

ವರ್ಷಾಂತ್ಯದಲ್ಲಿ ಪುನಃ ಬಿಡಾರ ಬದಲಾಗಿ ಸೈಂಟ್ ಆಗ್ನಿಸ್ ವಿದ್ಯಾರ್ಥಿನಿಯಾದ ನನಗೆ ಅಲ್ಲಿ ಅಚ್ಚುಮೆಚ್ಚಿನ ಶಿಕ್ಷಕಿಯಾಗಿ ದೊರೆತವರು, Social Studies ಕಲಿಸುತ್ತಿದ್ದ ಸೀತಾ ಬ್ಯಾ ಟೀಚರ್. ಮೃದು ನುಡಿಯ ವಾತ್ಸಲ್ಯಮಯಿ ಆದ ಸೀತಾ ಬ್ಯಾ ಟೀಚರ್ ನನ್ನನ್ನು ಹೃದಯಕ್ಕೆ ಹತ್ತಿರವಾಗಿಸಿಕೊಂಡವರು. ಟೀಚರ್ ನಮಗೆ ನೋಟ್ಸ್ ಕೊಡುತ್ತಿರಲಿಲ್ಲ. ಆದರೆ ಅವರು ಪಾಠ ಮಾಡುವಾಗ ನಾವೆಲ್ಲರೂ ಕೇಳುತ್ತಿದ್ದಂತೆಯೇ ನೋಟ್ಸ್ ಮಾಡಿಕೊಳ್ಳಬೇಕಿತ್ತು. ಅವರ ಪಾಠದಲ್ಲಿ ನಾನು ತರಗತಿಗೇ ಮುಂದಾಗಿದ್ದೆ. ಅಷ್ಟೊಂದು ಆಸ್ಥೆಯಿಂದ ನಾನು ಬರೆದಿಟ್ಟು ಮಾಡಿಕೊಂಡಿದ್ದ ಆ ನೋಟ್ಸ್ ಪುಸ್ತಕವನ್ನು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಮುನ್ನ ಯಾರೋ ಎಗರಿಸಿ ಬಿಟ್ಟಾಗ ನನಗಾದ ನೋವು ಅಷ್ಟಿಷ್ಟಲ್ಲ!

ನೋಟ್‌ಬುಕ್ಕನ್ನೇ ಕಳಕೊಂಡರೂ ಆ ವಿಷಯದಲ್ಲಿ ಪ್ರಥಮ ದರ್ಜೆ ಅಂಕಗಳು ಬರದಿರಲಿಲ್ಲ. ಟೀಚರ ಪಾಠದ ಮೋಡಿ ಹಾಗಿತ್ತು. ನಟಿ, ದಿ. ಕಲ್ಪನಾರ ಚಿಕ್ಕಮ್ಮ, ಅವರು. ಭಾರತ-ಚೈನಾ ಯುದ್ಧದ ಸಮಯ, ಒಂದಿನ ಟೀಚರ ಪಾಠ ಬೇಗ ಮುಗಿದಾಗ, ನಾನವರ ಅನುಮತಿ ಕೇಳಿ, ಮುಂದೆ ಬಂದು ನಿಂತು, "ಯಾರೂ ದೀಪಾವಳಿಗೆ ಪಟಾಕಿ ಸುಡಬಾರದು; ಅದು ನಮ್ಮ ಸೈನಿಕರ ಮೇಲೆ ಸಿಡಿವ ಯುದ್ಧಾಸ್ತ್ರದಂತೆ ಭಾಸವಾಗುವುದು," ಎಂದು ಪುಟ್ಟ ಭಾಷಣ ಬಿಗಿದಿದ್ದೆ. ಶಾಲೆಯಲ್ಲಿ ಇನ್‌ಫೋರ್ಮೇಶನ್ ಮತ್ತು ಬ್ರಾಡ್‌ಕಾಸ್ಟಿಂಗ್ ಮಂತ್ರಿಯೂ ಆಗಿದ್ದ ನನ್ನ ಈ ಭಾಷಣವನ್ನು ಟೀಚರ್, ಮರುದಿನ ಎಸೆಂಬ್ಲಿಯಲ್ಲಿ ನಾನು ಪುನರುಚ್ಚರಿಸುವಂತೆ ಮಾಡಿದ್ದರು. ಅಂತಹ ಪ್ರಿಯ ಸೀತಾ ಬ್ಯಾ ಟೀಚರ್ ಇತ್ತೀಚೆಗೆ ತೀರಿಕೊಂಡರೆಂದು ಇಲ್ಲಿನ ನನ್ನ ಸಾಹಿತ್ಯ ಬಳಗದ ಗೆಳತಿ ತುಳಸೀ ವೇಣುಗೋಪಾಲ್, ತಮ್ಮ ಆ ಬಂಧುವಿನ ಮರಣ ವಾರ್ತೆಯನ್ನು ನನಗರುಹಿದಾಗ, ಅಪಾರ ನಷ್ಟವನ್ನನುಭವಿಸಿದ ನೋವು ನನ್ನದಾಯ್ತು.

St. Agnes Cllege ನಲ್ಲಿ ನನಗೆ ಅಚ್ಚುಮೆಚ್ಚಿನವರಾಗಿದ್ದ Botany ಮಿಸ್ ಲೀಲಾ ರಾವ್ ತೋರಿದ ಮಮತೆಯನ್ನು, ಅವರ ಪಾಠದ ಶಿಸ್ತನ್ನು ಮರೆಯಲಾಗದು. ಆರಂಭದಲ್ಲಿ ಉತ್ತಮ ವಿದ್ಯಾರ್ಥಿನಿಯಾಗಿದ್ದರೂ, ಅವರ ನಿರೀಕ್ಷೆಯನ್ನು ಕೊನೆವರೆಗೆ ಉಳಿಸಿಕೊಳ್ಳಲಿಲ್ಲವೆಂಬ ಕೊರಗು ನನ್ನಲ್ಲುಳಿದಿತ್ತು. Zoology ಡಿಪಾರ್ಟ್‌ಮೆಂಟ್‌ನ ಹೆಡ್ ಆಗಿ ಬಂದ ಲಲಿತಾ ವೇಲಾಯುಧನ್ ಎಲ್ಲರಿಂದಲೂ ದೂರವಿದ್ದರೂ ನನ್ನನ್ನು ಹತ್ತಿರವಾಗಿಸಿಕೊಂಡಿದ್ದರು. ಈ ಇನ್‌ಫ್ಯಾಚುಯೇಶನ್ ಬಹುಶಃ ನನ್ನ ಏಕಾಗ್ರತೆಗೆ ತೊಡಕಾಗಿದ್ದಿರಬಹುದು. ಮೆಚ್ಚಿನ ಮಿಸ್ ಲೀಲಾ ರಾವ್‌ರ ಪಠ್ಯವಿಷಯದ ಬಗೆಗಿದ್ದ ಅಪರಾಧ ಪ್ರಜ್ಞೆಯಿಂದಾಗಿಯೋ ಏನೋ,

ಮತ್ತೆ ಇಪ್ಪತ್ತೈದು ವರ್ಷಗಳ ವರೆಗೆ ಕನಸೊಂದು ನನ್ನನ್ನು ಕಾಡುತ್ತಿತ್ತು: ಕಾಲೇಜ್ ಪರೀಕ್ಷೆಗೆಂದು ನಾನು ರೈಲು ನಿಲ್ದಾಣಕ್ಕೆ ಧಾವಿಸುತ್ತಿದ್ದೇನೆ. ನಿಲ್ದಾಣದಲ್ಲಿ ರೈಲು ನಿಂತಿರುವುದು ಕಾಣುತ್ತಿದೆ. ಪಕ್ಕದಲ್ಲೂ ಹಳಿಯ ಮೇಲೂ ಓಡುತ್ತೋಡುತ್ತಾ ಸಾಗುವಾಗ ರೈಲು ಶಿಳ್ಳೆ ಹೊಡೆಯುತ್ತದೆ. ಎಷ್ಟು ಓಡಿದರೂ ನಾನು ಸ್ಟೇಶನ್ ತಲುಪುವುದಿಲ್ಲ; ರೈಲು ಹೋಗಿಬಿಡುತ್ತದೆ! ಪದೇ ಪದೇ ಕಾಣಿಸಿಕೊಳ್ಳುತ್ತಿದ್ದ ಈ ಕನಸಿನಿಂದ ಬೆದರಿ ನಾನು ಎಚ್ಚರುತ್ತಿದ್ದುದು ಎಷ್ಟು ಸಲವೋ! ಇಪ್ಪತ್ತೈದು ವರ್ಷಗಳ ನಂತರ ಒಂದಿನ, ನಮ್ಮ ತಂದೆಯವರು ಆಸ್ಪತ್ರೆಯಲ್ಲಿದ್ದಾಗ, ಅವರ ಸ್ಪಾಂಜಿಂಗ್ ನಡೆವ ವೇಳೆ, ಮಿಸ್ ಲೀಲಾ ರಾವ್‌ರನ್ನು ಕಾಣಲೆಂದು ಹೋದೆ. ಬಾಗಿಲು ತೆರೆದೊಡನೇ, "ಓ! ಶ್ಯಾಮಲಾ!" ಅಂದುಬಿಟ್ಟರು! ನನಗಾದ ಸಂತೋಷಕ್ಕೆ ಮೇರೆಯಿರಲಿಲ್ಲ. ಬಳಿಕ ನಮ್ಮ ಪತ್ರವ್ಯವಹಾರ ಆರಂಭವಾಯ್ತು. ಪತ್ರದಲ್ಲಿ ನನ್ನ ಕನಸಿನ ಬಗ್ಗೆ ನಿವೇದಿಸಿಕೊಂಡಾಗ, ಮಿಸ್ ಬರೆದ ಪ್ರೀತಿ ವಾತ್ಸಲ್ಯದ ಉತ್ತರ, ನನ್ನಾ ಕನಸನ್ನು ಬೇರುಸಮೇತ ಒಡಿಸಿ ಬಿಟ್ಟಿತು! ಅಮೆರಿಕಾಕ್ಕೆ ಹೋಗಿದ್ದಾಗ ಮಿಸ್ ಬರೆಯುತ್ತಿದ್ದ ಪತ್ರಗಳಲ್ಲಿನ ಪ್ರಕೃತಿ ವರ್ಣನೆಯನ್ನೋದಿ, ಅವರು ಸಸ್ಯಶಾಸ್ತ್ರದ ಶಿಕ್ಷಕಿ; ಇಂಗ್ಲಿಷ್ ಸಾಹಿತ್ಯದ ಅಧ್ಯಾಪಕಿ ಅಲ್ಲವೆಂದು ಯಾರು ತಾನೇ ಹೇಳಬಹುದು ಎಂದನಿಸುತ್ತಿತ್ತು. ಮೊನ್ನೆ ಮೊನ್ನೆ ಮಂಗಳೂರಲ್ಲಿ ನಡೆದ ನನ್ನ ಅನುವಾದ ಕೃತಿ, 'ಗಾನ್ ವಿತ್ ದ ವಿಂಡ್'ನ ಬಿಡುಗಡೆಯ ಸಮಾರಂಭಕ್ಕೂ ಮಿಸ್ ಬಂದು ನನ್ನನ್ನು ಹರಸಿದರು. ನಾನು ಕಾಲೇಜ್ ಬಿಟ್ಟ ಬಳಿಕ ಅವರು ಲೀಲಾ ಉಪಾಧ್ಯಾಯ ರಾಗಿ, ಮತ್ತೆ ನಿವೃತ್ತಿಯ ಬಳಿಕ ಈಗ 'ಶಾರದಾ ವಿದ್ಯಾಲಯ'ದ ಪ್ರಾಂಶುಪಾಲರಾಗಿರುವ ಚಟುವಟಿಕೆಯ ಕರ್ತವ್ಯಶೀಲೆ!

ಕಾಲೇಜ್‌ನಲ್ಲಿ ನನಗೆ ಕನ್ನಡ ಕಲಿಸಿದ ಪಾಲೆತ್ತಾಡಿ ಗೋಪಾಲಕೃಷ್ಣ ಭಟ್ಟರನ್ನು ನಾನೆಂದೂ ಮರೆಯೆ. ಸದಾ ಸೂಟ್‌ನಿಂದಲಂಕೃತರಾಗಿ ಬೈಕ್‌ನಲ್ಲಿ ನೆಟ್ಟನೆ ಕುಳಿತು ಬರುವ, ನೇರ ನಿಲುವಿನ ನೇರ ನಡೆನುಡಿಯ ಮಾಷ್ಟ್ರನ್ನು, ಅವರ ಮೆಲುನುಡಿಯ ಪಾಠಗಳನ್ನು ಇಂದೂ ನೆನಪಿಸಿಕೊಳ್ಳುತ್ತೇನೆ. ವಿದ್ಯಾರ್ಥಿನಿಯರು ಮೌನವಾಗಿ ಏಕಾಗ್ರಚಿತ್ತದಿಂದ ಆಲಿಸಬೇಕೆನ್ನುತ್ತಿದ್ದ ಅವರು, ಒಂದಿಷ್ಟು ಸದ್ದಾದರೂ ಮತ್ತೂ ದನಿ ತಗ್ಗಿಸಿ ಪಾಠ ಮಾಡುತ್ತಿದ್ದರು. ಏಕಾಗ್ರತೆಯಿಂದ ಆಲಿಸಿದರೆ ಸ್ವರ ಎಷ್ಟೇ ಮೆಲುವಾಗಿದ್ದರೂ ಕೇಳುವದೆನ್ನುವ ಅವರು, ಶಬ್ದದ ಬಗ್ಗೆ, ಶಬ್ದ ತರಂಗಗಳಿಗೆ ನಾಶವಿಲ್ಲದಿರುವ ಬಗ್ಗೆ, ಏಕಾಂತದಲ್ಲಿ ಶಬ್ದವು ಪುನರುತ್ಪತ್ತಿಯಾಗುವ ಬಗ್ಗೆ, ಇನ್ನೂ ಹತ್ತು ಹಲವು ರೋಚಕ ವಿಜ್ಞಾನ ವಿಷಯಗಳನ್ನೂ ತಿಳಿಸುತ್ತಿದ್ದರು! ಹಿಂದೂಯಿಸಮ್ ಬಗ್ಗೆ ಪುಟ್ಟದೊಂದು ಉಪನ್ಯಾಸಕ್ಕೆ ನನಗೆ ವಿಷಯವನ್ನೊದಗಿಸಿದವರು! 'ಅಭಿಜ್ಞಾನ ಶಾಕುಂತಲ'ವನ್ನು ನಮಗೆ ಪಾಠ ಮಾಡುತ್ತಿದ್ದವರು, ಸಿಸ್ಟರ್ ಇವ್ಯಾಂಜಲಿಸ್ಟಾ ಆದರೂ, ಪರೀಕ್ಷೆಯ ಪೇಪರ್ ತಿದ್ದಿದ ಮಾಷ್ಟ್ರು, ನನ್ನ ಉತ್ತರವನ್ನುದ್ದೇಶಿಸಿ, "ರಸಗವಳ ಬಡಿಸಿ ಮಧ್ಯದಲ್ಲೇ ಎಲೆ ಕಿತ್ತುಕೊಂಡು ಹೋದ ಹಾಗಾಯ್ತು! ಅದ್ಯಾಕೆ ಕಂಪ್ಲೀಟ್ ಮಾಡಲಿಲ್ಲ, ಶ್ಯಾಮಲಾ?" ಎಂದು ಕೇಳಿದ್ದರು.

ಸಿಸ್ಟರ್ ಇವಾಂಜಲಿಸ್ಟಾ 'ಶಾಕುಂತಲ'ದ ಶಬ್ದಾರ್ಥ ವಿವರಣೆಯನ್ನೆಲ್ಲ ಸರಿಯಾಗಿಯೇ ಮಾಡುತ್ತಿದ್ದರೂ, ಪ್ರತೀ ಪಾಠದ ಕೊನೆಗೆ, ಶಕುಂತಳೆಯ ಚಾರಿತ್ರ್ಯದ ಬಗ್ಗೆ, ಆಕೆ ಕಾಲು ಜಾರಿ ದುರವಸ್ಥೆಗೀಡಾದ ಬಗ್ಗೆ, ಕೂಲಂಕಷ ವಿಮರ್ಶೆ ಹಾಗೂ ತನ್ಮೂಲಕ ವಿದ್ಯಾರ್ಥಿನಿಯರಿಗೆ

ಎಚ್ಚರಿಕೆಯ ಮಾತುಗಳು ಕಾದಿರುತ್ತಿದ್ದುವು. ನೀತಿಬೋಧೆಗೂ (Moral Science) ಅವರೇ ಶಿಕ್ಷಕಿಯಾಗಿದ್ದರಿಂದ ಅಲ್ಲಿ ಪುನಃ ಈ ಶಿಕ್ಷೆ ಕಾದಿರುತ್ತಿತ್ತು. ಒಂದಿನ ಹುಡುಗಿಯರೆಲ್ಲ ರೋಸಿ ಹೋಗಿ ಕ್ಲಾಸ್ ಬಾಯ್‌ಕಾಟ್ ಮಾಡುವ ನಿರ್ಧಾರದಿಂದ ಹೊರಗೆ ಹುಲ್ಲುಹಾಸಿನ ಮೇಲೆ ತಳವೂರಿ, ಮತ್ತೆ ಕರೆ ಬಂದ ಮೇಲೆ ಉಪಾಯವಿಲ್ಲದೆ ಕ್ಲಾಸ್ ಸೇರಿಕೊಂಡಿದ್ದೆವು. ನೀತಿಬೋಧೆಯ ಪರೀಕ್ಷೆಯಲ್ಲಿ ಪುಟಗಟ್ಟಲೆ ಉತ್ತರ ಬರೆದು ಪ್ರತೀ ವರ್ಷ ಮೊದಲ ಸ್ಥಾನ ಗಿಟ್ಟಿಸಿ, ಸಿಸ್ಟರ ನೆಚ್ಚಿನ ವಿದ್ಯಾರ್ಥಿನಿಯಾಗಿದ್ದ ನನ್ನ ಮೇಲೆ ಗೆಳತಿಯರ ಕೆಂಗಣ್ಣು ಹರಿಯುತ್ತಿತ್ತು. ನೀತಿಬೋಧೆಯ ಭಾರದಿಂದ 'ಶಾಕುಂತಲ' ಕಾವ್ಯ ತನ್ನ ಸೌಂದರ್ಯವನ್ನು ಕಳಕೊಳ್ಳುತ್ತಿದ್ದುದಂತೂ ನಿಜ! ಈಗ ಸಿಸ್ಟರ್ ಇವಾಂಜಲಿಸ್ಟಾ ಕ್ರಿಸ್ತೈಕ್ಯರಾಗಿದ್ದಾರೆ.

"ರಸಗವಳವನ್ನು ಬಡಿಸಿದಂತೆ..." ಎಂದು ನನ್ನ ಸರ್, ನನ್ನ ಶಾಕುಂತಲದ ಉಪಾಖ್ಯಾನದ ಬಗ್ಗೆ ಹೇಳಿದ್ದರೆ, ಆ ಶ್ಲಾಘನೆ ನನಗೆ ಪ್ರಾಪ್ತವಾಗಲು ಕಾರಣರಾದವರು, ನಮ್ಮ ನೆರೆಯಲ್ಲಿದ್ದು ಕಾಳಿದಾಸನ ರುಚಿಯನ್ನು ನನಗೆ ಹತ್ತಿಸಿದ ಪೂಜ್ಯ ಗುರು ಶ್ರೀ ತೆಕ್ಕುಂಜ ಗೋಪಾಲಕೃಷ್ಣ ಭಟ್ಟರು. 'ಶಾಕುಂತಲದಲ್ಲಿ ಚತುರ್ಥಾಂಕದ ಪ್ರಾಮುಖ್ಯತೆ' ಎಂದೊಂದು ಪ್ರಬಂಧದ ಸಿದ್ಧತೆಯಲ್ಲಿ ಮಾರ್ಗದರ್ಶನಕ್ಕಾಗಿ ನಾನು ಅವರ ಬಳಿ ಹೋಗಿದ್ದೆ. ಅವರ ನೆರೆಗೆ ಬಂದ ಮೊದಲ ದಿನವೇ, ಕಾಲೇಜ್‌ಗೆ (St. Aloysius College) ಹೊರಟು, ನಮ್ಮ ಮನೆಯೆದುರು ನಡೆದು ಬಂದ ಭಟ್ಟರನ್ನು ಗಮನಿಸದೆ, ಗಂಜಿ ನೀರನ್ನು ಹೊರಚೆಲ್ಲಿ, ಅವರು ಬೆಚ್ಚಿ ಹಿಂದಡಿಯಿಡುವಂತಹ ಪ್ರಮಾದಗೈದವಳು, ನಾನು! ಕ್ಷಮೆ ಯಾಚಿಸಿದಾಗ, "ಚಿಂತೆಯಿಲ್ಲ" ಎಂದು ನಸುನಕ್ಕು, ಬಟ್ಟೆ ಕೊಡವಿಕೊಂಡು ಹಾಗೇ ಹೋಗಿದ್ದರವರು. ಮುಂದೆ ನನ್ನನ್ನು ತಮ್ಮ ಹೃದಯಕ್ಕೆ ಹತ್ತಿರಾಗಿಸಿಕೊಂಡು, ವಾತ್ಸಲ್ಯದಿಂದ ನನ್ನ ಸಾಹಿತ್ಯಾಭಿರುಚಿಗೆ ಪ್ರೋತ್ಸಾಹದ ತನಿರಸವನ್ನೆರೆದವರು. ಮುಂಬಯಿಗೆ ಬಂದಾಗ ಮನೆಗೆ ಬಂದು ಊಟವನ್ನೂ ಮಾಡಿಕೊಂಡು, "ಆ ದಿನ ನಮಗೆ ವ್ರತವಿತ್ತು. ಆದರೂ ನಿನ್ನ ಮೇಲಿನ ವಾತ್ಸಲ್ಯದಿಂದ ವ್ರತಭಂಗ ಮಾಡಿಕೊಂಡಿದ್ದೇವೆ. ಪ್ರೀತಿ, ಶುಚಿ, ರುಚಿಯೆದುರು ವ್ರತ ಮುಖ್ಯವಲ್ಲ. ನಿನ್ನ ಗುಣಗಳಿಗಾಗಿ ನಿನ್ನನ್ನು ಮೆಚ್ಚಿಕೊಂಡು ಮಗಳಂತೆ ಭಾವಿಸಿದ್ದೇವೆ... ಸಮಯ ಸಿಕ್ಕಾಗ ಬರೆಯುತ್ತಿರು," ಎಂದು ಬರೆದ ಆ ವಾತ್ಸಲ್ಯ ತುಂಬಿದ ಪತ್ರಕ್ಕೆ ಸಮಯದಲ್ಲಿ ಉತ್ತರ ಬರೆಯುವಲ್ಲಿ ನಾನು ವಿಫಲಳಾಗಿದ್ದೆ. ಮತ್ತೆ ಕೆಲ ದಿನಗಳಲ್ಲೇ, ಮಾಷ್ಟ್ರು, ಶಸ್ತ್ರಕ್ರಿಯೆಯೊಂದರಲ್ಲಿ ಅರಿವಳಿಕೆಯಿಂದ ಮರಳಿ ಬರಲಾಗದೆ ಪರಂಧಾಮವನ್ನೈದಿದ ಬಗ್ಗೆ ತಿಳಿದಾಗ ಮನಕ್ಕಾದ ನೋವು ಇಂದಿಗೂ ಮಾಸಿಲ್ಲ. "ಬರೆದುದೆಲ್ಲವೂ ಸುಂದರವಾಗಿರುವುದು ಮುಖ್ಯ" ಎಂಬ ಗುರುವಚನದಿಂದ ಹರಸಿದವರವರು.

ನನ್ನ ಜೀವದುಸಿರಾದ ಸಾಹಿತ್ಯಾರಾಧನೆ ಹಾಗೂ ಸಾಹಿತ್ಯಸಾಧನೆಯ ಪಥದಲ್ಲಿ ನನ್ನ ಹೆಜ್ಜೆ ಗುರುತುಗಳು ಇಂದು ಮೂಡಿದ್ದರೆ, ಮಾನವೀಯತೆಯ ಬೆಳಕಿನಿಂದ ಆ ಪಥವನ್ನು ಬೆಳಗಿದ ಆ ಎಲ್ಲ ಗುರುತೇಜಕ್ಕೆ ನನ್ನ ನಮನ.

■ ಶ್ಯಾಮಲಾ ಮಾಧವ : ೩೫/೩, ಜಲಾರಾಮ್ ನಗರ, ಎ. ಬಿ. ರೋಡ್
ಘಾಟ್‌ಕೋಪರ್ (ಪೂರ್ವ), ಮುಂಬಯಿ-೪೦೦ ೦೭೭

■

೧. ನನ್ನ ಭೂತ ನನ್ನ ಹೆಗಲ ಮೇಲೆ ನಿಂತಿದೆ

ಇದು ಸಂಸ್ಕೃತಿಯ ಗೆಲುವೊ ಅಥವಾ ಸೋಲೊ?
ನನ್ನ ಭೂತದ ಭಾರ ಇನ್ನೂ ನನ್ನ ಹೆಗಲ ಮೇಲೆ ನಿಂತಿದೆ.
ಇಂದಿಗೂ ನಾ ಓಡಿ ಅದ ತಬ್ಬಿಕೊಂಡರೆ
ನನ್ನೆದೆಯಲ್ಲಿ ದಟ್ಟಡವಿ ಮೂಡಿ
ಹಣೆಯ ಮೇಲೆ ಕೊಂಬುಗಳು ಚಿಗುರುತ್ತವೆ.

ಭೂತದ ನೆರಳು ನನ್ನ ಮೇಲೆ ಬೀಳುತ್ತಿರುತ್ತದೆ
ನಾ ಕಂಡ ಆ ನೆತ್ತರಿನ ಯುಗಗಳನ್ನೇಕೆ ಮುಚ್ಚಿಡಲಿ?
ಹಲ್ಲುಗಳು ರಕ್ತದಲ್ಲಿ ಮುಳುಗೆದ್ದಂತೆ ಕಾಣುತ್ತವೆ.

ನನ್ನೊಬ್ಬನ ಬದುಕಿನ ಅಸ್ತಿತ್ವಕ್ಕಾಗಿ
ನನ್ನ ಜೊತೆ ಪ್ರೀತಿ-ವೈರ ಎರಡೂ
ಇರದವರನ್ನು ಬೇಟೆಯಾಡುತ್ತೇನೆ
ಅವರ ಮೇಲೆರಗುತ್ತೇನೆ.

ನನ್ನ ದೇಹವೆಂದರೆ ಬರೀ ಹೊಟ್ಟೆ, ಹೃದಯ - ಬುದ್ಧಿಗಳಲ್ಲ
ಕೈಯೊಳಗೆ ಬೆಂಕಿ ಹಿಡಿದು ಎಷ್ಟೋ ಅವತಾರಗಳು ಮುಂದೆ ಬಂದವು
ಈ ಭೂತದ ಕಲೆಯು ತೊಳೆಯಲಾಗದೆ ಕೈಚೆಲ್ಲಿ ನಿಂತವು.

ಹಣೆಯ ಮೇಲೆ ಸಭ್ಯತೆಯ ಬಣ್ಣ ಬಳಿದುಕೊಂಡರೂ
ಅನಾಗರಿಕತೆಯ ಆ ಕಪ್ಪು ಮಸಿ ದೂರವಾಗಲಿಲ್ಲ
ಹಳ್ಳಿಗಳ ಬೆಳೆಸಿದೆವು, ನಗರಗಳ ಹುಟ್ಟು ಹಾಕಿದೆವು
ಆದರೆ ಅಡವಿಯ ಸಂಬಂಧವಿನ್ನೂ ಕಳೆಯಲಿಲ್ಲ.
ಯಾವುದಾದರೊಂದು ತಿರುವಿನಲ್ಲಿ ಮನದಾಳದ ನೋವು ರೆಕ್ಕೆ ಬಿಚ್ಚಿದರೆ
ಅಲ್ಲೊಂದು ಮುಗ್ಧ ಭೇಟೆ ಕಾಣುತ್ತದೆ
ಯಾಕೋ ಗೊತ್ತಿಲ್ಲ, ದೌರ್ಬಲ್ಯ ಸವಾರಿ ಮಾಡುತ್ತದೆ.
ಮರದಡಿಗೆ ಜೋತುಬಿದ್ದ ಹರಿದ ಬಳ್ಳಿಯೊಂದು
ಮತ್ತೆ ಚಿಗುರತೊಡಗುತ್ತದೆ
ನನ್ನ ಕಾಲುಗಳ ನಡುವೆ ದಬ್ಬಿ ಹಿಡಿದು ನೆಗೆದರೂ
ಶತಮಾನಗಳಿಂದೇರಿದ ಎತ್ತರದಿಂದ ಒಮ್ಮೆಲೇ
ಬಿದ್ದುಬಿಡುತ್ತೇನೆ.

ಇದು ಸಂಸ್ಕೃತಿಯ ಗೆಲುವೊ ಅಥವಾ ಸೋಲೋ
ನನ್ನ ಭೂತದ ಭಾರ ಇನ್ನೂ ನನ್ನ ಹೆಗಲ ಮೇಲಿದೆ.

೨. ಮಧ್ಯಾಹ್ನ

ಈ ಪಯಣದ ಭಾಗ್ಯ ಸೋಲು ಅಥವಾ ಗೆಲುವು
ಹೊಸದಲ್ಲ ಈ ಪಯಣ, ಹಳೆಯದೂ ಅಲ್ಲ.
ಈ ಪಯಣವೊಂದು ಶಿಕ್ಷೆಯಲ್ಲ ಪುಣ್ಯದ ಫಲವೂ ಅಲ್ಲ
ಈ ಪಯಣದ ದಿಕ್ಕಿಗೆ ಯಾವ ದೇವರೂ ಇಲ್ಲ.

ನಿನ್ನ ಗೆಲುವು ಮಹತ್ವದ್ದಲ್ಲ ನನ್ನ ಸೋಲು ಮಹತ್ವದ್ದಲ್ಲ
ಅದು ಆದಿಯಲ್ಲ, ಅಂತ್ಯ ಕೂಡ ಇದಲ್ಲ
ಉಳಿವಿಗಾಗಿ ಹೋರಾಟ ಇನ್ನೂ ಶುರುವಾಗಿಲ್ಲ
ಅದು ಶುರುವಾದರೂ ಇದು ನಿರ್ಣಯದ ಕ್ಷಣವಲ್ಲ.

ಪ್ರಳಯದ ಘೋಷವಿನ್ನೂ ಹತ್ತಿಕ್ಕಿದ ಸ್ವರದಲ್ಲೆ ಕೇಳುತ್ತಿದೆ
ಕೆಲವರಿಗೆ ಕೇಳಿಸಿದೆ, ಕೆಲವರಿಗಿನ್ನೂ ಕೇಳಿಸಿಲ್ಲ
ಕೆಲವರು ನಂಬಿದ್ದಾರೆ, ಇನ್ನೂ ಕೆಲವರು ನಂಬಿಲ್ಲ
ಕೆಲವರು ನೆಲ ಬಿಟ್ಟು ಎದ್ದಿದ್ದಾರೆ, ಕೆಲವರಿನ್ನೂ ಎದ್ದಿಲ್ಲ.

ಇದು ಯಾತ್ರೆಯೆನ್ನುವುದಾದರೆ ಈ ಯಾತ್ರೆಯ ಪರಿಣಾಮ ಗೊತ್ತು
ಇಲ್ಲಿ ಯಾರೂ ಅಪರಿಚಿತರಲ್ಲ– ಪರಿಚಿತರೂ ಇಲ್ಲ.
ಇಲ್ಲಿ ಯಾರಿಂದ ಯಾರಿಗೂ ಖುಶಿಯಿಲ್ಲ ಸಿಟ್ಟೂ ಇಲ್ಲ
ಇಲ್ಲಿ ಯಾರ ಸ್ಥಿತಿಯನ್ನಾರೂ ತಿರುಗಿ ಕೇಳುವುದಿಲ್ಲ.

೩. ಗಜಲ್

ಒಮ್ಮೆ ಬಿಸಿಲಿನ ಹಾಗೆ ಮಗದೊಮ್ಮೆ ನೆರಳಿನ ಹಾಗೆ
ಕಾಣುವುದು ನನ್ನೂರು ನನಗೆ ಹಲವಾರು ಬಗೆ.

ಈಗಲೂ ಯಾರಾದರೂ ನನ್ನೊಡನೆ ಕಟ್ಟಿದರೆ ಪಣ
ಹೋಗಿ ಕುಳಿತುಕೊಳ್ಳುವೆ ನನ್ನೂರಿನ ಆಲದ ಮರದ ಕೆಳಗೆ.

ಒಂದು ರೊಟ್ಟಿಯ ಬೆಂಬತ್ತಿ ಬಂದಿದ್ದೇನೆ ಇಷ್ಟು ದೂರ
ನಡೆದ ಹೆಜ್ಜೆಗಳು ನನ್ನ ಹೆಜ್ಜೆಗಳಲ್ಲವೆನ್ನಿಸುತ್ತಿದೆ ನನಗೆ.

ದಿನದ ರೊಟ್ಟಿಯ ಬಯಕೆ ಯಾರನ್ನು ತುಳಿಯುತ್ತಿದೆಯೋ
ಅಂಥವನ ಪ್ರತಿಭಟನೆ ಹೆದರಿದ ಬೆಕ್ಕಿನ ದನಿಯ ಹಾಗೆ.

ಮುಂಬೈ ಶಹರದ ನಕ್ಷತ್ರಗಳ ತಣ್ಣನೆಯ ನೆರಳೆನಗೆ
ಹಳ್ಳಿಯ ದನಗಾಹಿಗಳಿಗೆ ಬೇಸಿಗೆಯ ಬಿಸಿಲುರಿ ಹೇಗೊ ಹಾಗೆ.

೪. ಒಂದು ಕ್ಷಣ

ಬದುಕು ಕೆಲವು ಕ್ಷಣಗಳಿಗೆ
ಕೊಟ್ಟ ಹೆಸರು.

ಅದರಲ್ಲಿಯೂ ಆ ಒಂದು ಕ್ಷಣ
ಆ ಕ್ಷಣದೊಳಗೆ ಮಾತಾಡುವ
ಎರಡು ಜೊತೆ ಕಂಗಳು
ತಹದ ಬಟ್ಟಲಿನಿಂದ
ನೇರ ಹೃದಯದಾಳಕ್ಕಿಳಿದವು.

ಇಂದು
ನೀನು ಏನೂ ಹೇಳಬೇಡ
ನಾನೂ ಏನನ್ನೂ ಹೇಳುವುದಿಲ್ಲ
ಹೀಗೆಯೇ ಕುಳಿತಿರೋಣ

ಕೈಯಲ್ಲಿ ಕೈಯಿಟ್ಟು
ದುಃಖದ ಕಾಣಿಕೆಯ ಭಾರ ಹೊತ್ತು
ಬೆಚ್ಚನೆಯ ಭಾವಗಳಲ್ಲಿ ಬಂಧಿಯಾಗಿ.

ಯಾರಿಗೆ ಗೊತ್ತು?
ಇದೇ ಕ್ಷಣದಲ್ಲಿ
ದೂರ ಪರ್ವತದಲ್ಲಿ ಎಲ್ಲೋ
ಮಂಜು ಕರಗತೊಡಗೀತು.

ಬನ್ನಿ ಕನಸುಗಳೆ ಬನ್ನಿ

ಮಾಧವಿ ಭಂಡಾರಿ

ಬನ್ನಿ ಕನಸುಗಳೆ ಬನ್ನಿ
ನನ್ನೊಡನೆ ಉರಿವ ದೀಪಗಳೂ
ಆರಿ ಹೋಗಿವೆ ಈಗ ಎಣ್ಣೆ ತೀರಿ
ಮಲಗಲೆತ್ನಿಸುವೆ ನಾನಿನ್ನು
ಬನ್ನಿ ಕನಸುಗಳೆ ಎಲ್ಲೆ ಮೀರಿ.
    ಜಂಜಡದ ಬದುಕ ಜಡತೆಯನು ಕೊಡವಿ
    ಸಂತಸದ ಹಾಯಿ ದೋಣಿಯನು ಬಿಡಿಸಿ
    ದುಃಖ ದುಮ್ಮಾನ ದಾರಿದ್ರ್ಯವನೆ ಗುಡಿಸಿ
    ತೀರ ಕಾಣದ ತೊರೆಯಲೀಜೋಣ
    ಬನ್ನಿ ಕನಸುಗಳೆ ಬನ್ನಿ.....
ಸೂರೆಗೊಳ್ಳುವ ದುಃಖ-ಸಮೃದ್ಧಿ
ಬರಲಿ ನಿಮ್ಮೊಡಗೂಡಿ ಸಿದ್ಧಿ
ಎಬ್ಬಿಸುವ ಗಂಟೆ ಕಿರುಗುಡುವ ಮುನ್ನ
ಬನ್ನಿ ಕನಸುಗಳೆ ಬನ್ನಿ
ಲಗ್ಗೆಯಿಡಿ, ಸೇರಿ ಬಿಡಿ ರೆಪ್ಪೆಯೊಳಕ್ಕೆ.

■ ಡಾ. ಮಾಧವಿ ಭಂಡಾರಿ : ಮನೆ ಸಂ. ೩-೧೧೩ (ಡಿ), ಮಂದಾರ, ಪದ್ಮನಾಭನಗರ
ದಯಾನಾ ಚಿತ್ರಮಂದಿರದ ಹಿಂಭಾಗ, ಉಡುಪಿ-೫೭೬ ೧೦೧ ■

ದ್ರಾವಿಡ ಸಂಬಂಧ - ೨ : ಆರಂಭ ಕಾಲದ ದ್ರಾವಿಡ ಭಾಷಾ ನಕಾಶೆ

ಷ. ಶೆಟ್ಟರ್

ವಟವೇಂಕಟ ತೆಣ್‌ಕುಮಾರಿ ಆಯಿಟ್ಟೈ ತಮಿಳ್‌ಕೂಱುಂ ನಲ್ ಉಲಕತ್ತು

ಉತ್ತರದ ವೇಂಕಟ ದಕ್ಷಿಣದ ಕುಮಾರಿ ವರೆಗೆ ವಿಸ್ತರಿಸಿದ ತಮಿಳು ಭಾಷಿಕರ ಪವಿತ್ರ ಪ್ರದೇಶ

ನಕಾಶೆ ರಚನೆಯ ಉದ್ದೇಶ ಗಡಿಗಳನ್ನು ನಿರ್ಧರಿಸುವುದು. ಅದೊಂದು ಭೂಭಾಗದ ಸೀಮಾ ನಕಾಶೆಯಾಗಬಹುದು ಅಥವಾ ಆಂತರಿಕ ವಲಯಗಳದ್ದಾಗಬಹುದು. ಇಂತಹ ಕೆಲವು ನಕಾಶೆಗಳು ನಿಖರ ರೇಖೆಗಳನ್ನು ಪಡೆದಿದ್ದರೆ, ಇನ್ನು ಕೆಲವು ಜಾಳು-ಧೂಳಿನ ಸಂಕೇತಗಳನ್ನು ಮಾತ್ರ ಹೊಂದಿರುವುವು. ನಮ್ಮ ದೇಶದ ಇತಿಹಾಸಮುದ್ದಕ್ಕೂ ರಚಿಸಿದ ಪದಬಂಧದ ನಕಾಶೆಗಳು ಪಟರೂಪ ಪಡೆದುಕೊಂಡದ್ದು ೧೯ ನೆಯ ಶತಮಾನದಲ್ಲಿ ನಾವು ಪಾಶ್ಚಾತ್ಯರ ಸಂಪರ್ಕ ಹೊಂದಿದ ನಂತರ ಎಂದರೆ ತಪ್ಪಾಗಲಾರದು. ಜಂಬೂದ್ವೀಪ-ಭರತಖಂಡದ ಮಸುಕು-ಮಂಪರು ಪರಿಕಲ್ಪನೆ ನಮಗೆ ಅನಾದಿ ಕಾಲದಿಂದಲೂ ಇದ್ದುದೇನೊ ನಿಜವೇ, ಆದರೆ ಆ ವಿಶಾಲ ಭೂಖಂಡದ ಅಂಚು ಮತ್ತು ಆಂತರಿಕ ವಲಯಗಳ ಸ್ಪಷ್ಟತೆ ನಮಗೆ ಅಷ್ಟೇನೂ ಪ್ರಸ್ತುತವೆನಿಸಿರಲೇ ಇಲ್ಲ. ಪಟನಕಾಶೆಯನ್ನು ಅಳವಡಿಸಿಕೊಂಡ ನಂತರವೂ ಅಂಗುಳಪಟ್ಟಿಯ ಭೂ ಮಾಪನ, ಅಕ್ಷಾಂಶ-ರೇಖಾಂಶ ನಿರ್ದೇಶನ, ಪರಿಸರ ಘಟಕಗಳ ಸಮೀಕರಣ, ಈ ಮುಂತಾದವು ನಮ್ಮ ನಕಾಶೆಗಳ ಹೊರಗೆ ಉಳಿದದ್ದೇ ಹೆಚ್ಚು. ಈ ಕಾರಣ, ಒಂದೋ-ಎರಡೋ ಹೆಗ್ಗುರುತುಗಳನ್ನು ಸೂಚಿಸಿ, ಉಳಿದ ಸೀಮಾರೇಖೆಗಳನ್ನೆಲ್ಲ ಕಲ್ಪನೆಗೆ ಬಿಟ್ಟ ನಕಾಶೆಗಳನ್ನೇ ನಾವು ಇಂದಿಗೂ ನಮ್ಮ ಇತಿಹಾಸ ಗ್ರಂಥಗಳಲ್ಲಿ ಹೆಚ್ಚು ಕಾಣುತ್ತಿರುವೆವು.[೧] ಈ ಹಿನ್ನೆಲೆಯಲ್ಲಿ ದಕ್ಷಿಣ ಭಾರತದ ಎರಡು ಭಾಷಾ ನಕಾಶೆಗಳನ್ನು ನಾವಿಲ್ಲಿ ಪರಿಶೀಲಿಸಬೇಕಾಗಿದೆ : ಇವುಗಳಲ್ಲಿ ಒಂದು, ಆರಂಭಕಾಲದ 'ತಮಿಳಹಂ' ನಕಾಶೆ; ಮತ್ತೊಂದು 'ಕನ್ನಡದೊಳ್ ಭಾವಿಸಿದ ಜನಪದ'ದ ನಕಾಶೆ. ನಮಗೆ ಪ್ರಸ್ತುತವಾದ ಎರಡನೆಯ ನಕಾಶೆಯನ್ನು ರೂಪಿಸಿಕೊಳ್ಳಲು ಮೊದಲ ನಕಾಶೆಯ ಸಮಗ್ರ ಕಲ್ಪನೆ ಅವಶ್ಯವೆಂಬುದು ನನ್ನ ಅನಿಸಿಕೆ. ಈ ಲೇಖನವು ಆ ದಿಕ್ಕಿನೆಡೆ ಇಟ್ಟ ಒಂದು ಹೆಜ್ಜೆ.

ಭಾಷಾ ನಕಾಶೆ ನಿರ್ಮಾಣ :

ಭಾಷಾ ಆಧಾರದ ಮೇಲೆ ತನ್ನ ಜನಾಂಗದ ಭೂಮಿತಿಯನ್ನು ಕಂಡುಕೊಳ್ಳುವ ಕಾರ್ಯಕ್ಕೆ ತೊಲ್ ಕೈ ಹಾಕಲಿಲ್ಲ; ಕಾರಣ ಅವನ ಗ್ರಂಥವಲ್ಲೆಲ್ಲೂ 'ತಮಿಳಹಂ'ನ ಪ್ರಸ್ತಾಪವನ್ನು ನಾವು ಕಾಣುವುದಿಲ್ಲ. ಆದರೂ ಭಾಷಾ ಅಡಿಗಟ್ಟಿನ ಮೇಲೆ ಗುರುತಿಸಿಕೊಂಡ ಭಾರತೀಯರಲ್ಲಿ ತಮಿಳರಿಗೆ ಅಗ್ರಸ್ಥಾನವಿರುವುದನ್ನು ನಾವು ನಿರ್ಲಕ್ಷಿಸುವಂತಿಲ್ಲ. ಪ್ರಾಕೃತ ಮತ್ತು ಸಂಸ್ಕೃತ ಭಾಷಿಕರಾರೂ ಮಾಡದಿದ್ದುದನ್ನು ತಮಿಳರು ಮಾಡಿ, ತಮ್ಮ ಭಾಷೆಯೊಂದಿಗೆ ಗುರುತಿಸಿಕೊಂಡದ್ದು ನಮ್ಮ ಭಾಷಾ ಇತಿಹಾಸದಲ್ಲಿಯೇ ಒಂದು ಅಪೂರ್ವ ಘಟನೆ. ಇವರಿಗೆ ಸರಿಸುಮಾರು ಸಮಕಾಲೀನರಾದ ದೇಶದ ವಾಯುವ್ಯ ಗಡಿಯಲ್ಲಿ ನೆಲಸಿದ್ದ ಗ್ರೀಕರೂ

ಅರ್ಮೀನಿಕರೂ ಭಾಷೆಯ ತಳಹದಿಯ ಮೇಲೆ ಗುರುತಿಸಿಕೊಂಡದ್ದನ್ನು ಉದಾಹರಿಸಬಹುದು; ಆದರೆ, ಅಲ್ಪಸಂಖ್ಯಾತರೂ ಹೊರದೇಶದವರೂ ಆದ ಅವರಿಗೆ ತಮಿಳರಿಗಿದ್ದ ನಿಶ್ಚಿತ ಪ್ರಾದೇಶಿಕ ಮೇರೆಯಾಗಲೀ ಸಾಹಿತ್ಯ ಸಂಪತ್ತಾಗಲೀ ಇರಲಿಲ್ಲವೆಂಬುದು ಗಮನಾರ್ಹ. ಭಾಷೆಯ ತಳಹದಿಯ ಮೇಲೆ ಜನಾಂಗವನ್ನು ಗುರುತಿಸುವ ಗೊಡವೆಗೆ ಹೋಗದ ಸಂಸ್ಕೃತ ಭಾಷಿಕರು ಇವರನ್ನು ತಮಿಳರೆಂದು ಗುರುತಿಸದೇ 'ದ್ರಾವಿಡ'ರೆಂದು ಗುರುತಿಸಿದರು. ಆದರೆ ಪಾಲೀ-ಪ್ರಾಕೃತ ಜನಾಂಗ ಮತ್ತು ಆರಂಭ ಕಾಲದ ವಿದೇಶಿಯರು ಇವರನ್ನು ದಮಿಲ(ತಮಿಳ)ರೆಂದೇ ಸಂಬೋಧಿಸಿದರು. ಮೊದಲನೆಯದಕ್ಕೆ ಸಂಸ್ಕೃತ ಭಾಷೆಯ ಮಹಾಭಾರತ(ಭೀಷ್ಮಪರ್ವ)ವನ್ನೂ, ಕೆಲವು ಪುರಾಣ(ವಿಶೇಷವಾಗಿ ಭಾಗವತ, ಬ್ರಹ್ಮಾಂಡ, ವಾಯು ಮತ್ತು ಮತ್ಸ್ಯ)ಗಳನ್ನೂ, ಬೃಹತ್‌ಸಂಹಿತಾ ಮುಂತಾದ ಗ್ರಂಥಗಳಲ್ಲಿ ಬರುವ 'ದ್ರಾವಿಡ', 'ದ್ರಮಿಳ' ಪದಗಳನ್ನೂ, ಎರಡನೆಯದಕ್ಕೆ ಪಾಲೀ ಪಠ್ಯಗಳಲ್ಲಿ ಬರುವ 'ದಮಿಲ', 'ದಮಿಲರಠ' ಮತ್ತು ಗ್ರೀಕರ ವರದಿಗಳಲ್ಲಿ ಕಾಣಿಸುವ 'ದೈಮಿರಿಸ್', 'ಲಿಮಿರಿಸ್' ಮುಂತಾದ ಪದಗಳನ್ನು ಉದಾಹರಿಸಬಹುದು.[೨] ಒಂಭತ್ತನೆಯ ಶತಮಾನದಲ್ಲಿ ಮಾರ್ಗಕಾರನು 'ಕನ್ನಡದೊಳ್ ಭಾವಿಸಿದ ಜನಪದ'ವೆಂಬ ಭಾಷಾ ಆಧಾರಿತ ವಲಯವನ್ನು ಸಂಕೇತಿಸಿ, ನಾಡಿನ ಇತಿಹಾಸದಲ್ಲಿ ಕನ್ನಡಿಗರಿಗೆ ಎರಡನೆಯ ಸ್ಥಾನವನ್ನು ದೊರಕಿಸಿಕೊಟ್ಟನು. ಸುಮಾರು ಒಂಭತ್ತು ಶತಮಾನಗಳಷ್ಟು ಅಂತರವಿದ್ದರೂ, ಈ ಎರಡು 'ಪ್ರಥಮ'ಗಳು ದ್ರಾವಿಡ ಭಾಷೆ, ಜನಾಂಗ ಮತ್ತು ಪ್ರದೇಶಕ್ಕೆ ಸಂಬಂಧಪಟ್ಟವುಗಳೆಂಬುದು ಗಮನಾರ್ಹ. ದಾಖಲಿತ ಉಲ್ಲೇಖಗಳನ್ನು ಗಮನಿಸಿದರೆ, ನಮ್ಮ ನೆರೆಯವರಾದ 'ಆಂಧ್ರ'ದವರಿಗೆ ಕನ್ನಡಿಗರಿಗಿಂತ ಹೆಚ್ಚು ನಿಖರವಾದ ಪುರಾತನತೆ ಇದ್ದುದನ್ನು ಗುರುತಿಸಲು ಸಾಧ್ಯವಾಗಬಹುದು,[೩] ಆದರೆ ಅವರು 'ತೆಲಗು' ಪದದಿಂದ ತಮ್ಮನ್ನು ತಾವು ಗುರುತಿಸಿಕೊಳ್ಳತೊಡಗಿದ್ದು ಬಹುಕಾಲದ ನಂತರವೇ. ಇದು ಏನೇ ಇರಲಿ, ಭಾಷಾ ತಳಹದಿಯ ಮೇಲೆ ಗುರುತಿಸಿಕೊಳ್ಳುವ ಸಂಪ್ರದಾಯವು ದ್ರಾವಿಡರಲ್ಲಿ— ಅದರಲ್ಲೂ ದಕ್ಷಿಣ ಭಾರತದ ಬುಡಕಟ್ಟಿನ, ಗಿರಿ ಪ್ರದೇಶದ— ಜನಾಂಗಗಳಲ್ಲಿ ಒಂದಿಲ್ಲೊಂದು ಬಗೆಯಲ್ಲಿ ಆರಂಭ ಕಾಲದಿಂದಲೂ ರೂಢಿಯಲ್ಲಿತ್ತೆನ್ನುವುದು ಮುಖ್ಯ. ಈ ಜನಾಂಗಗಳಿಗೆ ಸ್ವಂತದ್ದೆಂಬ ಭಾಷೆ, ಜನಪದ, ರಾಜಕೀಯ ಪ್ರಜ್ಞೆ, ಸಮಾಜ, ಸಂಸ್ಕೃತಿ ಮತ್ತು ಭೂವಲಯಗಳಿದ್ದವು; ಆದರೆ ಇವರಲ್ಲಿ ಬಹುತೇಕರನ್ನು ಇತಿಹಾಸದ ತೆರೆಯ ಮರೆಗೆ ನೂಕಿದ್ದು ಅವರಿಗಿದ್ದ ಲಿಪಿಯ ಅಭಾವ. ಹಾಗೆ ನೋಡಿದರೆ, ಬಹುಶಃ ತಮಿಳರನ್ನು ಹೊರತುಪಡಿಸಿ, ಕ್ರಿಸ್ತ ಶಕೆಯ ಹೊರಳಿನಲ್ಲಿ (ಕ್ರಿ.ಪೂ. ೩ ರಿಂದ ಕ್ರಿ.ಶ. ೩ ರ ವರೆಗೂ), ನಮ್ಮ ದೇಶದ ಯಾವುದೇ ಪ್ರಧಾನ ಭಾಷಿಕರಿಗೂ ತಮ್ಮದೇ ಆದ ಲಿಪಿ ಇರಲಿಲ್ಲ— ಈ ಕಾರಣದಿಂದಾಗಿ, ಉತ್ತರದ ಸಿಂಧುವಿನಿಂದ ದಕ್ಷಿಣದ ಕಾವೇರಿ ವರೆಗೂ ಏಕೈಕ ಲಿಪಿಯಾಗಿ ಬ್ರಾಹ್ಮೀ ಪ್ರಸಾರಗೊಳ್ಳಲು ಸಾಧ್ಯವಾಯಿತು. ನಮ್ಮ ನಾಡಿನ ವಾಯವ್ಯ ಭಾಗದಲ್ಲಿ ಬಳಕೆಗೆ ಬಂದ ಗ್ರೀಕ್, ಅರ್ಮೈಕ್ ಮತ್ತು ಖರೋಷ್ಠಿ ಲಿಪಿಗಳನ್ನು ದೇಶೀಯವೆನ್ನಲು ಕೆಲವು ಅನುಮಾನಗಳು ಅಡ್ಡ ಬರುವುವು. ಆದರೆ ಕ್ರಿ.ಪೂ. ೨ ನೆಯ ಶತಮಾನದ ತಮಿಳುನಾಡಿನಲ್ಲಿ ಸಾರ್ವತ್ರಿಕವಾಗಿ ಬಳಕೆಯಲ್ಲಿದ್ದ ತಮಿಳು-ಬ್ರಾಹ್ಮೀ ಲಿಪಿಯು ದೇಶೀಯದ್ದೆನ್ನಲು ಅಂತಹ ಅನುಮಾನಕ್ಕೆ ಎಡೆ ಇಲ್ಲ.[೪] ತಮಿಳಿನ ದೇಶಿ ಪ್ರಭೇದವಾದ 'ವಟ್ಟೆಲುತ್ತು' ಲಿಪಿಯು ಬಳಕೆಗೆ ಬಂದ ಕಾಲ(ಕ್ರಿ.ಶ. ೪ ನೆಯ ಶತಮಾನ)

ಕ್ಕಾಗಲೇ ಕನ್ನಡವೂ ಪ್ರಬುದ್ಧ ಲಿಪಿಯಾಗಿ ಬೆಳೆದು ನಿಂತು ಪ್ರಬುದ್ಧ ಭಾಷೆಯಾಗಲು ಸನ್ನದ್ಧಗೊಳ್ಳತೊಡಗಿತ್ತು.

ತಮಿಳು ಭಾಷಿಕರು ತಮ್ಮ ಪರಿಧಿಯ ಹೊರ ಅಂಚಿನಲ್ಲಿದ್ದ ಉತ್ತರ(ಪಟುಕರು) ದವರೊಡನೆ ಮಿತ್ರ-ಶತ್ರು ಸಂಬಂಧ ಹೊಂದಿದ್ದ ಸಂದರ್ಭದಲ್ಲಿ, ಈ ಎರಡು ಘಟಕಗಳ ನಡುವಣ ಪ್ರದೇಶವನ್ನು ಭೌಗೋಳಿಕವಾಗಿ ಹಂಚಿಕೊಂಡ 'ಲಿಪಿರಹಿತ' ಜನಾಂಗಗಳು (ಪ್ರಧಾನವಾಗಿ ಕೊಡಗ, ತುಳುವ ಮತ್ತು ಕೊಂಕಣಗ) ಸುಮಾರು ಅರ್ಧ ಸಹಸ್ರ ವರ್ಷಕಾಲದ ಇತಿಹಾಸದಲ್ಲಿ ತಮ್ಮ ಸ್ವಂತಿಕೆಯನ್ನು ಮರೆದವು. ತಮಿಳು ಸಂಪರ್ಕಕ್ಕೊಳಗಾದರೂ ತಮಿಳಿಗೆ ಸಂಪೂರ್ಣ ಶರಣಾಗದ ಅಗ್ಗಳಿಕೆ ಇವರದ್ದಾಗಿತ್ತು. ಒಂದು ಬಗೆಯಲ್ಲಿ ಅಡ್ಡಗೋಡೆಯಾಗಿ ಮತ್ತೊಂದು ಬಗೆಯಲ್ಲಿ ಸಂಪರ್ಕಸೇತುವೆಯಾಗಿ ನಿಂತು, ಸ್ವಂತಿಕೆಯನ್ನು ಗಳಿಸಿಕೊಳ್ಳಲು ದ್ರಾವಿಡವೃಕ್ಷದ ಮತ್ತೊಂದು ಕೊಂಬೆಯಾದ ಕನ್ನಡಕ್ಕೆ ಅನುವು ಮಾಡಿಕೊಟ್ಟ ಶ್ರೇಯಸ್ಸು ಕಾವೇರೀ ಉದರದ ಈ ಜನಾಂಗಗಳಿಗೆ ಸಲ್ಲುವುದೆನ್ನಬಹುದು. ಇಷ್ಟೊಂದು ಮಹತ್ವದ ಪಾತ್ರ ವಹಿಸಿದ ಈ ವಲಯಗಳನ್ನು ಸರಿಯಾಗಿ ಅರಿತುಕೊಳ್ಳುವ ಆವಶ್ಯಕತೆ ನಮಗಿದೆ, ಏಕೆಂದರೆ ಅವನ್ನು ಅರಿತುಕೊಂಡಾಗ ಮಾತ್ರ ತಮಿಳರ 'ವೇಂಕಟಂ'ನ ಮತ್ತು ಮಾರ್ಗಕಾರನ 'ಕಾವೇರಿಯಿಂದಮಾ...'ದ ಸೀಮಾ ರೇಖೆಗಳು ನಮಗೆ ಅರ್ಥವಾಗಬಲ್ಲವು.

ಭಾಷೆ ಮತ್ತು ಜನಾಂಗ – ತೊಲ್ಕಾಪ್ಪಿಯಾಣಾರ್ ಚಿಂತನೆಗಳು :

ತಮಿಳು ಮತ್ತು ಸೆನ್ತಮಿಳ್ : ಒಂದು ಸಾವಿರದ ಆರುನೂರಾ ಎರಡು ಪದ್ಯಗಳನ್ನೊಳಗೊಂಡ ತೊಲ್ಕಾಪ್ಪಿಯಮ್‌ನಲ್ಲಿ ಮೂರಕ್ಕಿಂತ ಹೆಚ್ಚು ಬಾರಿ 'ತಮಿಳು' ಪದವನ್ನು ಬಳಸಿಲ್ಲ. ಇವುಗಳಲ್ಲಿ ಒಂದು ಪದರಚನೆಗೆ ಲಕ್ಷ್ಯವಾಗಿ, ಇನ್ನೆರಡು 'ಸೆನ್ತಮಿಳ್' ವ್ಯಾಖ್ಯಾಂಗವಾಗಿ ಬರುವುವು.[೫] ಧ್ವನಿ ನಿಯಮಗಳನ್ನು ಚರ್ಚಿಸುವಾಗ 'ಟ'ಕಾರಾಂತ್ಯ ಪದಕ್ಕೆ 'ಅಕ್ಕು' ಮಧ್ಯವರ್ತಿ ಯಾಗುವುದನ್ನು ತಿಳಿಸುತ್ತಾ ಈ ವೈಯಾಕರಣಿಯು ಮೊಟ್ಟಮೊದಲು 'ತಮಿಳು'ಪದವನ್ನು ಉಲ್ಲೇಖಿಸುವನು. ಇದು ಭಾಷಾ ವೈಲಕ್ಷಣ್ಯಕ್ಕೆ ಸಂಬಂಧಿಸಿದ ಆನುಷಂಗಿಕ ಉಲ್ಲೇಖ ಮಾತ್ರ. ಆದರೆ ಸೆನ್ತಮಿಳ್‌ಗೆ ಅವನು ಕೊಡುವ ಎರಡು ನಿದರ್ಶನಗಳು ಇದಕ್ಕಿಂತ ಅರ್ಥಪೂರ್ಣವಾದ ಚರ್ಚೆಯೆಡೆಗೆ ನಮ್ಮನ್ನು ಕೊಂಡೊಯ್ಯುವುವು.[೬] ತಮಿಳು ಸಾಹಿತ್ಯ ಭಂಡಾರವನ್ನು 'ಇಯಲ್ ಶೊಲ್', 'ತಿರಿಶೊಲ್', 'ತಿಶೈಶೊಲ್' ಮತ್ತು 'ವಟಶೊಲ್' ಎಂಬ ನಾಲ್ಕು ವರ್ಗಗಳಡಿ ತಂದು, ಇವುಗಳಲ್ಲಿ ಶಬ್ದಾರ್ಥ ನಿರ್ವಚನ ನಿಯಮಗಳನ್ನು ಎಳ್ಳಷ್ಟೂ ಉಪೇಕ್ಷಿಸದ 'ಇಯಲ'ನ್ನು ಅವನು ನಿದರ್ಶಿಸುವನು. ಇದು ಸೆನ್ (ಶುದ್ಧ, ಪವಿತ್ರ) ತಮಿಳು ಭಾಷೆಯ ಕಟ್ಟಳೆಗಳನ್ನು ಅತಿ ನಿಷ್ಠುರವಾಗಿ ಪಾಲಿಸಿಕೊಂಡು ಬಂದ ಪ್ರಭೇದವೆಂಬುದು ಅವನ ಅಭಿಮತ. 'ತಿಶೈಶೊಲ್' ಹನ್ನೆರಡು ಬಗೆಯ ದೇಸಿ ನುಡಿಗಟ್ಟಿಗೆ ಸಂಬಂಧಿಸಿದ್ದು; 'ವಟಶೊಲ್' ಸಂಸ್ಕೃತದಿಂದ ಪಡೆದುಕೊಂಡ ಪದಗಳನ್ನು ತಮಿಳಿನ ಧ್ವನಿ ನಿಯಮದಡಿ ತಂದುಕೊಳ್ಳುವುದಕ್ಕೆ ಸಂಬಂಧಿಸಿದ್ದು. ಸುಮಾರು ಒಂಭತ್ತು ಶತಮಾನಗಳ ನಂತರ ಸರಿಸುಮಾರು ಇದೇ ಬಗೆಯ ಪ್ರಯತ್ನವನ್ನು ಮಾರ್ಗಕಾರನೂ ಮಾಡಿದನು. ಅವನೂ ತಿರುಳ್ಗನ್ನಡ ನಾಡಿನ (ಕರಾಮಾ ೧-೩೨) ದೇಸಿ ವೈವಿಧ್ಯತೆಯ (೪೭-೪೭), ಸಂಸ್ಕೃತ ಪದಗಳನ್ನು ಕನ್ನಡಕ್ಕೆ ಅಳವಡಿಸಿಕೊಳ್ಳುವ (೫೧-೬೧) ವಿಚಾರಗಳನ್ನು ಮಂಡಿಸಿದನು. ಆದರೆ ಮಾರ್ಗಕಾರನ ಚರ್ಚೆಯು ಇಷ್ಟಕ್ಕೇ ನಿಲ್ಲದೇ

'ಕನ್ನಡಮೊಳ್ ಭಾವಿಸಿದ ಜನಪದ', ಅದರ ಸ್ಥೂಲ ಸ್ವರೂಪ, ದೇಶಿಯರ ಗುಣಾಪಗುಣ, ಈ ಮೊದಲಾದ ವಿಷಯಗಳನ್ನು ಸೇರಿಸಿಕೊಂಡು ಕವಿರಾಜಮಾರ್ಗದ ಹರವನ್ನು ವಿಸ್ತರಿಸಿಕೊಟ್ಟಿತು.

ಜನಾಂಗದ ವಿಶಿಷ್ಟ ಹೆಸರು : 'ತಮಿಳಹಂ'ನ ಗಡಿ ಗುರುತಿಸುವ ಗೊಡವೆಗೆ ಹೋಗದ ತೊಲ್ ಒಂದು ಜನಾಂಗವು ಯಾವ ಆಧಾರದ ಮೇಲೆ ತನ್ನದೆಂಬ ಹೆಸರನ್ನು ಪಡೆಮುಕೊಳ್ಳುವುದು? ಎಂಬ ಪ್ರಶ್ನೆಯನ್ನೆತ್ತಿದನು. ಇಂತಹ ಮಹತ್ವದ ಪ್ರಶ್ನೆಯನ್ನೆತ್ತಿದ ಭಾರತೀಯ ವಾಙ್ಮಿಗಳಲ್ಲಿ ಇವನೇ ಮೊದಲಿಗನೆಂದು ಕಾಣುವುದು. "ಚಿಂತಿಸಿ ನೋಡಲಾಗಿ, ಬೇರೆ ಬೇರೆ ಜನಾಂಗಗಳು ಅವರವರ ಪ್ರಕೃತಿ ಪರಿಸರ ಮತ್ತು ಪಾರಂಪರಿಕ ಕಸಬುಗಳಿಗನುಗುಣವಾಗಿ ತಮ್ಮ ಹೆಸರುಗಳನ್ನು ಪಡೆಮುಕೊಳ್ಳುವರು", ಎಂಬ ಮಾತನ್ನು ಅಹಂ ಪ್ರಭೇದವನ್ನು ಚರ್ಚಿಸುವಾಗ ಅವನು ಸ್ಪಷ್ಟಪಡಿಸಿದನು.[2] ಅಂದರೆ ಒಂದು ಜನಾಂಗವು ಮತ್ತೊಂದಕ್ಕಿಂತ ಭಿನ್ನವೆನಿಸಲು, ಅವರು ನಿಂತ ನೆಲ ಮತ್ತು ಕೈಕೊಂಡ ಕಸಬುಗಳು ಉಳಿದೆಲ್ಲವುಗಳಿಗಿಂತಲೂ – ಭಾಷೆ ಮತ್ತು ಧರ್ಮವನ್ನು ಒಳಗೊಂಡು– ಮುಖ್ಯವೆಂಬುದು ಅವನ ಮಾತಿನ ಇಂಗಿತ. ಇನ್ನೂ ಒಂದು ಹೆಜ್ಜೆ ಮುಂದುವರಿದು, ಇವು ಸಾಮಾಜಿಕ ಸ್ತರಗಳನ್ನು ಸೃಷ್ಟಿಸುವ ಪ್ರಬಲ ಶಕ್ತಿಗಳೂ ಆಗಿವೆ, ಎಂದು ಅವನು ಪ್ರತಿಪಾದಿಸಿದನು.

ತಿಣೈ ಸಿದ್ಧಾಂತ : ಜನಾಂಗವನ್ನು ಭೌಗೋಳಿಕ ಮತ್ತು ಔದ್ಯಮಿಕ ಅಡಿಗಲ್ಲಿನ ಮೇಲೆ ನಿಲ್ಲಿಸಲು ತೊಲ್ ಒಂದು ವಿನೂತನ ಸಿದ್ಧಾಂತವನ್ನು ರೂಪಿಸಿ ಅದನ್ನು 'ತಿಣೈ' ಪದದಿಂದ ಪ್ರಸಾರಕ್ಕೆ ತಂದನು. ಅವನೇ ಸ್ವತಃ ಈ ಪದವನ್ನು ಅರ್ಥೈಸಲಿಲ್ಲ, ಆದರೆ ಅದು 'ಭೂಮಿ', 'ಪ್ರದೇಶ', 'ಪರಿಸರ'ವನ್ನು ಪ್ರಧಾನವಾಗಿ ಸೂಚಿಸುವ ಪದವೆಂದು ಅಭಿಮತವಿದೆ. 'ತಿಣೈ'ಯ ಅಡಿ ಐದು ಆಂತರಿಕ ಪ್ರದೇಶಗಳನ್ನು ಅವನು ಹೆಸರಿಸಿದನು. ಅವು 'ಮುಲ್ಲೈ', 'ಕುಱಿಂಜಿ', 'ಪಾಲೈ', 'ಮರುತನ್' ಮತ್ತು 'ನೇಯ್ತಲ್'. ಇವು ಕ್ರಮವಾಗಿ ಕಾಡು, ಗಿರಿ, ಮರುಭೂಮಿ, ಕೃಷಿ ಮತ್ತು ಕರಾವಳಿ ಪ್ರದೇಶಗಳನ್ನು ಪ್ರತಿನಿಧಿಸುವುವು. ಪಂಚ ತಿಣೈಗಳನ್ನು ಹೆಸರಿಸಿದರೂ ವಾಸ್ತವವಾಗಿ ತೊಲ್ ಪ್ರತಿಪಾದಿಸಿದ್ದು ಇವುಗಳಲ್ಲಿ ನಾಲ್ಕನ್ನು ('ನನಿಲವರ್') ಮಾತ್ರ. 'ಪಾಲೈ' ಎಂಬುದು 'ತಮಿಳಹಂ' ಪ್ರಕೃತಿ ನಿಯಮಕ್ಕೆ ಒಗ್ಗದ ಪ್ರದೇಶ; ಏಕೆಂದರೆ ಮರುಭೂಮಿಯನ್ನು ಸಮಗ್ರವಾಗಿ ಪ್ರತಿನಿಧಿಸುವ ಪ್ರದೇಶ ಇಲ್ಲಿ ಇಲ್ಲ. ಈ ಕಾರಣ ಪಾಲೈ ಅರ್ಥವನ್ನು ಮಾರ್ಪಡಿಸಿ, ಪಾಳುಭೂಮಿ ಋತುಚಕ್ರದಲ್ಲಿ ಬೆಂಡಾದ, ಹಸಿರು ಕಳೆದುಕೊಂಡ, ಒಣಕಲು ಭೂಮಿ ಎಂದು ವಿವರಿಸಿ, ಇದು ಉಳಿದ ನಾಲ್ಕು ತಿಣೈಗಳಲ್ಲಿ ಯಾವುದಾದರೊಂದರಲ್ಲಿ ಕಾಣಿಸಿಕೊಳ್ಳಬಹುದಾದ ಪ್ರದೇಶವೆಂದು ನಿರ್ಣಯಿಸಲಾಗಿದೆ.[3] ಈ ಪ್ರಕೃತಿ ದೃಶ್ಯಗಳು (ಲ್ಯಾಂಡ್‌ಸ್ಕೇಪ್ಸ್) ತಮಿಳುನಾಡಿನ ಸಹಜ ಭೂವಲಯಗಳನ್ನು ಪ್ರತಿಬಿಂಬಿಸುವುವು ಮಾತ್ರವಲ್ಲದೆ ಭ್ರೂಣಾವಸ್ಥೆಯ (ಪ್ರೋಟೋ) ದ್ರಾವಿಡ– ವಿಶೇಷವಾಗಿ ತಮಿಳು ಜನಾಂಗವು– ಗಿರಿಕಾನನದಿಂದ ಕೃಷಿಯೋಗ್ಯ ಪ್ರದೇಶದೆಡೆಗೆ, ಅಲ್ಲಿಂದ ಕರಾವಳಿ ಪ್ರದೇಶಕ್ಕೆ ವ್ಯಾಪಿಸಿಕೊಂಡದ್ದನ್ನೂ ನವ್ಯಶಿಲಾಯುಗದ ಬೇಟೆಗಾರನು ಪಶುಪಾಲನೆಯೆಡೆಗೆ ಹೆಜ್ಜೆ ಹಾಕುತ್ತಾ ಮುಂದೆ ಕೃಷಿಕನಾಗಿ ಮೀನುಗಾರನಾಗಿ ನೆಲೆನಿಂತದ್ದನ್ನೂ ಪ್ರಾಕ್ತನ ಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರು ಗುರುತಿಸಿರುವರು.[8]

ತಿಣ್ಣೈಯ ಮೂರು ಪ್ರಧಾನ ಗುಣಗಳು : 'ಮುತಲ್' (ವಿಶಿಷ್ಟ, ಪ್ರಧಾನ), 'ಕರು' (ಭೌತಿಕ, ಭೌಗೋಳಿಕ) ಮತ್ತು 'ಉರಿ' (ಸಮಾನಾಂತರ, ಪರಸ್ಪರ) ಎಂಬವುಗಳನ್ನೆಲ್ಲ 'ಉಲಕಮ್' (ಪ್ರಪಂಚ, ಲೋಕ, ವಿಶ್ವ) ಎಂದು ವ್ಯಾಖ್ಯಾನಿಸಿ, ಈ ಪ್ರತಿಯೊಂದು ಪ್ರಪಂಚದ ಜನಾಂಗದ ಆಹಾರ, ದೈವ, ಸಸ್ಯಜಾತಿ, ಪ್ರಾಣಿವರ್ಗ, ಕಸಬು, ಅವರವರಿಗೇ ವಿಶಿಷ್ಟವಾದುದರಿಂದ, ಅವರನ್ನು 'ತಿಣ್ಣೈನಿಲೈಪೇಯರ್' (ತಿಣ್ಣೈಯಲ್ಲಿ ಉದ್ಭವಿಸಿದವರು) ಎಂದು ಭಾವಿಸುವುದು ಯೋಗ್ಯವೆಂದು ತೊಲ್ ಸೂಚಿಸಿದನು. ಅಂದರೆ, ಒಂದು ಜನಾಂಗವನ್ನು ರೂಪಿಸುವ ಪ್ರಧಾನ ಹೇತು ಪ್ರಕೃತಿ ಅಥವಾ ಪರಿಸರ ಎಂಬುದು ಇದರ ಅರ್ಥ. ಇದಕ್ಕೆ ಉದಾಹರಣೆಯಾಗಿ ತೊಲ್ ಗೋವಳ(ಆಯರ್)ರನ್ನು ಮತ್ತು ಬೇಡರನ್ನು (ವೇಟ್ಟುವರ್) ಹೆಸರಿಸಿದನು. ತಿಣ್ಣೈಗಳ ಜನಾಂಗಗಳನ್ನೆಲ್ಲ ಅವರವರ ವಿಶಿಷ್ಟ ಹೆಸರುಗಳಿಂದ ತೊಲ್ ಗುರುತಿಸುವ ಆವಶ್ಯಕತೆಯನ್ನು ಕಾಣಲಿಲ್ಲ; ಆದರೆ ನಂತರ ಕಾಲದ ಅವನ ಶಿಷ್ಯವರ್ಗವು (ಪ್ರಧಾನವಾಗಿ ಇಳಂಪು ಮತ್ತು ನಚ್ಚಿ) ಈ ಪ್ರಶ್ನೆಯನ್ನು ಅತಿ ತೀಕ್ಷ್ಣವಾಗಿ ಪರಿಗಣಿಸಿ, ಅವರ ಸಮಗ್ರ ಯಾದಿಯೊಂದನ್ನು ಸಿದ್ಧಪಡಿಸಿದರು. ಶಂಗಂ ಕವಿಗಳೂ ಇದನ್ನು ಅಷ್ಟೇ ಗಂಭೀರವಾಗಿ ಪರಿಗಣಿಸಿ, ನದಿದಡದಿಂದ ದೂರ ನೆಲಸಿದ್ದ ಇಂತಹ ಜನಾಂಗಗಳಲ್ಲಿ ಪರತವರ್, ಮರವರ್, ಪೂಲಿಯರ್, ಕೋಸರ್, ಆವಿಯರ್, ಓವಿಯರ್, ವೇಟುರ್, ಅರುವಾಳರ್, ಅಂಟರ್, ಕಳವರ್ ಮುಂತಾದವರನ್ನು ಗುರುತಿಸಿದರು.[೧೦]

ವರ್ಣ-ವರ್ಗ ಸಂಗಮು, ಸಂಕರಣ(?) : ವರ್ಣ ಮತ್ತು ವರ್ಗ ಸಂಕರಣವು ವೈದಿಕರನ್ನು ಒಂದು ಬಗೆಯ ಚಿಂತನೆಗೀಡುಮಾಡಿದರೆ ತೊಲ್‌ನನ್ನು ಮತ್ತೊಂದು ಬಗೆಯ ಚಿಂತನೆಗೆ ಹಚ್ಚಿತೆಂದು ಕಾಣುವುದು. ಜನಾಂಗಗಳಿಗೆ ವಿಶಿಷ್ಟವೆನಿಸಿದ ಕಸುಬುಗಳು ಮತ್ತು ಪರಿಸರಗಳು ಒಂದರಲ್ಲೊಂದು ಬೆರಕೆಗೊಳ್ಳಲು ಸಾಧ್ಯವೇ ಎಂಬ ಪ್ರಶ್ನೆಗೆ ಉತ್ತರವಾಗಿ 'ಒಂದು ಜನಾಂಗದ ಕಸಬುಗಳು ಮತ್ತೊಂದು ಜನಾಂಗದ ಕಸಬುಗಳೊಡನೆ ಬೆರೆಯಬಹುದು, ಆದರೆ ಒಂದು ಪ್ರದೇಶದ ವಿಶೇಷತೆಗಳು ಮತ್ತೊಂದರಲ್ಲಿ ಬೆರೆತುಕೊಳ್ಳಲು ಸಾಧ್ಯವಾಗದು', ಎಂದು ಅವನು ಸ್ಪಷ್ಟಪಡಿಸಿದನು. ಆದರೂ 'ತಿಣ್ಣೈಮಯಕ್ಕಮ್'ನ ಅಡಿ, ಈ ಸಿದ್ಧಾಂತವನ್ನು ಸ್ವಲ್ಪ ಮಾರ್ಪಡಿಸಿ, ಪ್ರಕೃತಿ ನಿಯಮಗಳು ಭಂಗಗೊಂಡಾಗ, ಅಥವಾ ಅವನ್ನು ಭಂಗಗೊಳಿಸಿದಾಗ, ತಿಣ್ಣೈಗಳ ನೈಜ ಸ್ಥಿತಿಗಳಲ್ಲಿಯೂ ಬದಲಾವಣೆಗಳಾಗುವ ಸಾಧ್ಯತೆಗಳಿಲ್ಲದಿಲ್ಲವೆಂದು ಅವನು ಪ್ರಕೃತಿ ಸಂಕರಣಕ್ಕೆ ಎಡೆಮಾಡಿಕೊಟ್ಟನು.[೧೧] ನಿಸರ್ಗ ಸಹಜ ನಿಯಮಗಳನ್ನು ಉಲ್ಲಂಘಿಸದೆ ಭೂ ಪ್ರದೇಶಗಳು (ಆಂತರಿಕ ಘಟಕಗಳು) ಮಾರ್ಪಾಟಾಗಲಾರವು ಎಂಬ ಅವನ ನಿರ್ಣಯ ಎಷ್ಟು ಮಹತ್ವದ್ದೋ, ಜೀವಂತ ಜನಾಂಗದ ಪ್ರಗತಿಗೆ ಕಸಬುಗಳ ಕೊಡುಕೊಳ್ಳುವಿಕೆಯೂ ಅವಶ್ಯವೆಂಬ ಅವನ ಸಾಮಾಜಿಕ ಸಿದ್ಧಾಂತವೂ ಅಷ್ಟೇ ಮಹತ್ವದ್ದಾಗಿದೆ. ಜಾತಿಸಂಕರಣದ ಬಗ್ಗೆ ಅವನು ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ, ಏಕೆಂದರೆ ಅವನ ದೃಷ್ಟಿಯಲ್ಲಿ ಸಮಾಜವು ದೃಢತೆ ಪಡೆದುಕೊಳ್ಳುವುದು ಪ್ರಕೃತಿ ಮತ್ತು ಕಸಬುಗಳಿಂದ, ಹುಟ್ಟಿನ ಹಕ್ಕಿನಿಂದಲ್ಲ. ತೊಲ್‌ನ ಈ ಸಿದ್ಧಾಂತವು ಆನಂತರ ಕಾಲದ ಚಿಂತಕರ ವಿಶೇಷ ಗಮನವನ್ನು ಸೆಳೆದು, ವೃತ್ತಿಪರಿವರ್ತನೆಗಳ(ಸಂಕರ?) ಬಗೆಯನ್ನು ಗುರುತಿಸಲು ಪ್ರಚೋದಿಸಿತೆಂದು ಕಾಣುವುದು.

ಪೂಸರ್‌ಅಱ್ರುಪದಿ ಮತ್ತು ಮಲೈಪಟುಕಟಾಮ್ ಅವಿ ಬರುವ ಒಂದು ಸುಂದರ ಚಿತ್ರವು ಈ ನಿಯಮವನ್ನು ಸಮರ್ಥವಾಗಿ ಪ್ರತಿಬಿಂಬಿಸಬಹುದೆನಿಸುವುದು : [೧೨]

> ಗಿರಿಜನರ ವಿಶಿಷ್ಟ ಹಾಡುಗಳನ್ನು ಮೀನುಗಾರರು ಗುಣಗುಣಿಸುವರು. ಕರಾವಳಿ ಜನರ ಹೂಮಾಲೆಗಳನ್ನು ಗಿರಿಜನರು ಧರಿಸುವರು. ಬೆಟ್ಟ ಪ್ರದೇಶದ ಒಕ್ಕಲಿಗರ ಪದಗಳನ್ನು ಕುರುಬರು ಹಾಡುವರು. ಹುಲ್ಲುಗಾವಲಿನಲ್ಲಿ ಅರಳುವ ಹೂವಿನ ಸೊಬಗನ್ನು ಒಕ್ಕಲು ಮಕ್ಕಳು ಶ್ಲಾಘಿಸುವರು. ಹೊಲದಲ್ಲಿ ಬಿಟ್ಟ ತೆನೆಗಳಿಗೆ ಕಾಡುಕೋಳಿ ಕೊಕ್ಕನ್ನಿಕ್ಕುವುದು. ಕಾಡು ಜೋಳದ ತೆನೆಯನ್ನು ಕೇರಿಯ ಕೋಳಿ ಕುಕ್ಕಿ ಹೆಕ್ಕುವುದು. ಬೆಟ್ಟದ ಮಂಗ ಉಪ್ಪು ನೀರಿನ ಸಮುದ್ರದಲ್ಲಿ ಮಿಂದು ಆನಂದಿಸುವುದು. ಲವಣ ಮಿಶ್ರಿತ ಜವುಳಿನ ಕೊಕ್ಕರೆಯು ಗಿರಿ ಏರಿ ಗರಿಗೆದರಿ ಕುಣಿದಾಡುವುದು.

ಭಾಷಾ ನಕಾಶೆ ನಿರ್ಮಾಣದ ಪ್ರಥಮ ಹೆಜ್ಜೆ :

‘ಸೆನ್ತಮಿಳ್ ಸೆರ್‍ನ್ದ ಪನ್ನಿರ್ ನಿಲಂ’ ಅಥವಾ ‘ಹದಿಮೂರು ವಲಯಗಳಲ್ಲಿ ವಿಂಗಡಿಸಿಕೊಂಡ ಪರಿಶುದ್ಧ ತಮಿಳು ಪ್ರದೇಶ’ದ ಚರ್ಚೆಯು ತೊಲ್ ನಂತರದ ತಮಿಳರಿಗೆ ಪ್ರಧಾನ ವಸ್ತುವಾಯಿತು. ಇವುಗಳಲ್ಲಿ ಸೆನ್ತಮಿಳ್ ಪ್ರದೇಶವು ಉತ್ತರದ ವೈಕ್ಕೈ ನದಿಯಿಂದ ದಕ್ಷಿಣದ ಮರುತಮ್ ವರೆಗೂ ಪೂರ್ವದ ಕರವೂರಿನಿಂದ ಪಶ್ಚಿಮದ ಮರವೂರ್ ವರೆಗೂ ವಿಸ್ತರಿಸಿಕೊಂಡಿತ್ತೆಂದು ಕವಿ ಎಟಿಂಪುರನರ್ ತಿಳಿಸಿದರೆ, ಇನ್ನುಳಿದ ಹನ್ನೆರಡು ವಲಯಗಳ ಒಂದು ಸಮಗ್ರ ಚಿತ್ರವನ್ನು ಟೀಕಾಕಾರ ನಣ್ಣೂಲ್ ಪರಿಶೋಧಿಸಿ ಪ್ರಕಟಿಸಿದನು. ಇದರಲ್ಲಿ ಅವನು ದಕ್ಷಿಣಪಾಂಟಿನಾಡು, ಕುಡುನಾಡು, ಕುತ್ತ ನಾಡು, ಕರ್ಕನಾಡು, ವೇನಾಡು, ಪುಲಿನಾಡು, ಪನ್ರಿನಾಡು, ಅರುಯನಾಡು, ಅರುವಪಡತಲೈನಾಡು, ಶೀತನಾಡು, ಮಲೈನಾಡು ಮತ್ತು ಪುನಲ್‌ನಾಡುಗಳನ್ನು ಕಂಡನು.[೧೩] ಈ ಅಂತರ ವಲಯಗಳ ಚರ್ಚೆಯನ್ನು ಇಲ್ಲಿಗೇ ಕೈಬಿಟ್ಟು ನೇರವಾಗಿ ನಾವು ‘ತಮಿಳಹಂ’ ನಕಾಶೆಯ ಚರ್ಚೆಯನ್ನು ಕೈಗೆತ್ತಿಗೊಳ್ಳಬಹುದು.

‘ವಟವೇಂಕಟ ತೆಣ್‌ಕುಮಾರಿ ಆಯಿಟೈ ತಮಿಳ್‌ಕೂಱುಂ ನಲ್ ಉಲಕತ್ತು’, ಅಂದರೆ ಉತ್ತರದ ವೇಂಕಟ ದಕ್ಷಿಣದ ಕುಮಾರಿ ವರೆಗೆ ವಿಸ್ತರಿಸಿದ್ದ ತಮಿಳು ಭಾಷಿಕರ ಪವಿತ್ರ ಪ್ರದೇಶ’ ಎಂಬ ಪ್ರಸ್ತಾಪವನ್ನು ಪ್ರಪ್ರಥಮ ಬಾರಿಗೆ ಮಾಡಿದವನು ಪಣಂಪಾರಣಾರ್. ಇದನ್ನು ಮಾಡಿದ್ದು, ‘ತೊಲ್ಕಾಪ್ಪಿಯಮ್’ಗೆ ಅವನು ಬರೆದ ಹದಿನೈದು ಸಾಲುಗಳ ಸ್ತುತಿಪದ್ಯ (ಪಾಯಿರಂ)ದಲ್ಲಿ.[೧೪] ಇವನು ಶಂಗಂ ಕವಿಗಳಲ್ಲಿ ಒಬ್ಬನಾಗಿದ್ದನೆಂಬುದನ್ನು ‘ಕುಱುಂತೊಕೈ’ ಯಲ್ಲಿರುವ ಅವನ ಒಂದು ಕವನವನ್ನು, ಪ್ರಾತಃಸ್ಮರಣೀಯ ವೈಯಾಕರಣಿಗಳಲ್ಲಿ ಇವನೊಬ್ಬ ನಾಗಿದ್ದನೆಂಬುದಕ್ಕೆ ಅವನ ವ್ಯಾಕರಣ ಗ್ರಂಥಕ್ಕೆ ೧೩ ನೆಯ ಶತಮಾನದಲ್ಲಿ ಬರೆದ ನಣ್ಣೂಲ್‌ನ ಟೀಕೆಯನ್ನು ನಿದರ್ಶಿಸಲಾಗುವುದು.[೧೫] ಪಣಂ ಬರೆದ ಈ ಸ್ತುತಿ ಪದ್ಯದಲ್ಲಿ ತೊಲ್‌ನ ಗ್ರಂಥ, ಅಂದಿನ ಆಳರಸ, ಅವನ ಆಸ್ಥಾನ ಪಂಡಿತನಾದ ಅತಂಕೋಟಾಚಾರ್ಯನ ಬಗ್ಗೆ ವಿವರ ಕೊಡಲಾಗಿದೆ. ಕಾವ್ಯಬಂಧದಲ್ಲಿರುವ ‘ಪಾಯಿರಂ’ವನ್ನು ಗದ್ಯಕ್ಕೆ ತಂದುಕೊಂಡರೆ ಅದು ಸ್ಥೂಲವಾಗಿ ಕನ್ನಡದಲ್ಲಿ ಹೀಗೆ ಓದಿಸಿಕೊಳ್ಳುವುದು :

> ‘ಬಡಗಣ ವೇಂಕಟ ತೆಂಕಣ ಕುಮಾರಿಗಳ ನಡುವಣ ತಮಿಳಭಾಷಿಕರ ಪರಿಶುದ್ಧ ಪ್ರದೇಶದಲ್ಲಿ, ಧ್ವನಿ, ಪದ, ಶಬ್ದಾರ್ಥ, ಜನಪದ (ದೇಸಿ) ಮತ್ತು ಕಾವ್ಯಭಾಷೆ(ಮಾರ್ಗೀ)ಯ ಪ್ರಭೇದಗಳನ್ನಲ್ಲದೆ,

ಈ ನೆಲದಲ್ಲಿ ಬೇರು ಬಿಟ್ಟಿದ್ದ ಸಾಧಿತ ತಮಿಳು ಭಾಷಾ ವೈಲಕ್ಷಣ್ಯಗಳನ್ನು ಪೂರ್ವಾಚಾರ್ಯರ ಪರಿಭಾಷೆಯಲ್ಲಿ ಪರಿಚಯಿಸಿಕೊಂಡು, ವಿವೇಕದಿಂದ ವಿಚಕ್ಷಿಸಿ, ಈ ಸುಂದರ ಕೃತಿಯನ್ನು ಸಿದ್ಧಗೊಳಿಸಿ, ಪರಿಶುದ್ಧ ನುಡಿ ನಿಯಮಗಳನ್ನೂ ಚತುರ್ವೇದಾಂತರ್ಗತ ಜ್ಞಾನವನ್ನೂ ಸಂಪಾದಿಸಿಕೊಂಡ ಅತಂಕೋಟಾಚಾರ್ಯನ ಸಮ್ಮುಖದಲ್ಲಿ, ನಿಲಂತರುವನ್ ಪಾಂಟಿಯನ ಆಸ್ಥಾನ ಸಭೆಯಲ್ಲಿ, ಈ ಮಹಾರ್ಘ್ಯ ಕೃತಿಯನ್ನು ಮಂಡಿಸಿ,

ನಿಖರ ನುಡಿಗಳಲ್ಲಿ, ಸರಳ ಶೈಲಿಯಲ್ಲಿ, ಇದರ ಬಂಧವನ್ನು ವ್ಯಾಖ್ಯಾನಿಸಿ, ಕೀರ್ತಿಶಿಖರಕ್ಕೇರಿದ ಐಂತಿರಮ್ ಶಾಖಾ ಪಾರಂಗತನಾದ ಈ ಪಂಡಿತಯೋಗಿಯು ಸಾಗರಾವೃತ ಭೂಮಂಡಲದಲ್ಲಿ ಪ್ರತಿಷ್ಠಾಪಿಸಿದನು.

ಆತನ ಹೆಸರು ತೊಲ್ಕಾಪ್ಪಿಯಾಣಾರ್.[೧೬]

(ಈ ಪಾಯಿರಂದಲ್ಲಿ ಬರುವ ಪ್ರಮುಖ ತಮಿಳು ಪದಗಳು ಮತ್ತು ಅವುಗಳ ಅರ್ಥ ಇಂತಿವೆ : 'ವಟ'= ಬಡಗಣ; ಉತ್ತರ. 'ವೇಂಕಟ'=ವೆಂಕಟಾದ್ರಿ; ತಿರುಮಲೈ ಬೆಟ್ಟ. 'ತೆಣ್'=ತೆಂಕಣ; ದಕ್ಷಿಣ. 'ಕುಮಾರಿ'= ಕನ್ಯಾಕುಮಾರಿ; ದಕ್ಷಿಣಭಾರತದ ಭೂ ಅಂಚು; ಈ ಹೆಸರಿನ ಒಂದು ನದಿ(?), ಒಂದು ಬೆಟ್ಟ(?). 'ಆಯಿಟೈ'=ಮಧ್ಯದ; ನಡುವಣ, ಕನ್ಯಾಕುಮಾರಿಯಿಂದ ವೆಂಕಟಾದ್ರಿ ವರೆಗಿನ 'ತಮಿಳ್‌ಕೂಱುಂ'= ತಮಿಳು ಭಾಷಿಕರ; ತಮಿಳು ಜನಾಂಗೀಯ. 'ನಲ್' ಪವಿತ್ರ; ಪರಿಶುದ್ಧ).

ಶಂಗಂ ಕವಿಗಳ ತಮಿಳಹಂ : ಪಣಂಪಾರಣಾರ್ ಕೊಟ್ಟ ಈ ವಿವರಗಳು ಸ್ವತಃ ತೋಲ್‌ನಿಂದ ಬಂದವುಗಳೇನೋ ಎನ್ನುವಷ್ಟು ಮುಂದೆ ಅವು ಪ್ರಸಾರ ಪಡೆದುಕೊಂಡವು. ಆನಂತರದ ಶಂಗಂ ಕವಿಗಳು ಮತ್ತು ಮಧ್ಯಕಾಲೀನ ವ್ಯಾಖ್ಯಾನಕಾರರು (ಉರೈಯಾ ಶಿರಿಯರ್) ಇವನ್ನೇ ಆಧಾರವಾಗಿಸಿಕೊಂಡು 'ತಮಿಳಹಂ' ಗಡಿಗಳನ್ನು ಪ್ರತಿಪಾದಿಸಿದರು.[೧೭] ವೇಂಕಟವು ಉತ್ತರದ ಗಡಿಯೆಂಬುದನ್ನು ಕನಿಷ್ಠ ಒಂದು ಡಜನ್ ಸಾರಿ ಪುನರುಚ್ಚರಿಸುವ ಈ ಕವಿಗಳು ಕೆಲವು ಬಾರಿ ಅದನ್ನು 'ವಡಮಲೈ' (ಉತ್ತರದ ಬೆಟ್ಟ), 'ನೆಡಿಯೋಳ್' (ತಿರುಮಾಳ್‌ಗಿರಿ), 'ವಡವೇಂಕಟಂ' (ಉತ್ತರದ ವೆಂಕಟಾದ್ರಿ) ಎಂದು ಪುರಣಾನೂರು, ಪತ್ತುಪಾಟ್ಟು, ಶಿಲಪ್ಪದಿಕಾರಂಗಳಲ್ಲಿ ಮತ್ತು ನಚ್ಚಿ ರಚಿಸಿದ ಟೀಕಾಗ್ರಂಥದಲ್ಲಿ ಹೆಸರಿಸಿರುವರು.[೧೮] ಕುಮಾರಿಯ ಬಗ್ಗೆ ಇಂತಹ ಪ್ರತಿಪದಗಳು ಅಪರೂಪವಾದರೂ ಇಳಂಗೋ ಅಟಿಗಳ್ ಇದನ್ನು 'ತೊಡಿಯೊಳ್' ಎಂದು ಮತ್ತು ನಚ್ಚಿಯು 'ತೆಣ್‌ಕುಮಾರಿ' ಎಂದು ಸಂಬೋಧಿಸಿರುವುದನ್ನು ಗಮನಿಸಿವುದವಶ್ಯ.[೧೯] ಆದರೆ ಕುಮಾರಿಯ ಸ್ವರೂಪದ ಬಗ್ಗೆ ಇವರಲ್ಲಿ ಭಿನ್ನಾಭಿಪ್ರಾಯಗಳಿದ್ದದ್ದು ಎದ್ದು ಕಾಣುವುದು. ಇದೊಂದು ಬಂದರು ಅಥವಾ ಕರಾವಳಿ ಪಟ್ಟಣವೆಂದು ಒಬ್ಬ ಕವಿ ಹೇಳಿದ್ದರೆ, 'ಬೆಟ್ಟ'ವೆಂದು, 'ನದಿ' ಎಂದು ಇನ್ನು ಕೆಲವರು ಪ್ರತಿಪಾದಿಸಿದರು. ಇವರೆಲ್ಲರಿಗಿಂತ ಭಿನ್ನವಾಗಿ (ಶಿಲಪ್ಪದಿಕಾರಂನ ಟೀಕಾಕಾರ) ನಕ್ಕಿ ಮತ್ತು (ತೊಲ್ಕಾಪ್ಪಿಯಮ್‌ನ ಟೀಕಾಕಾರ) ನಚ್ಚಿ ಅದು ಇಂದಿನ ಕನ್ಯಾಕುಮಾರಿಯೇ ಅಲ್ಲ, ಶ್ರೀಲಂಕೆಯ ಆಚೆಗೆ (ದಕ್ಷಿಣಕ್ಕೆ) ಇದ್ದ ಪುರಾತನ ಕಾಲದ 'ತಮಿಳಹಂ'ನ ಹೊರ ಅಂಚು; ಕುಮಾರಿ ಮತ್ತು ಪಹರೂಳಿ ನದಿಗಳು ಹರಿಯುತ್ತಿದ್ದ ಆ ಫಲವತ್ತಾದ ಪ್ರದೇಶವು ಮುಂದೊಮ್ಮೆ ಸಂಭವಿಸಿದ 'ಮಹಾ ಸುನಾಮಿ'ಯಲ್ಲಿ (ಹಿಂದೂ ಮಹಾಸಾಗರ) ಕಡಲಡಿ ಸೇರಿತೆಂದು ಸೂಚಿಸಿದರು.[೨೦] ಸುಮಾರು ಇದೇ ಕಾಲದ ರೋಮ್ ದೇಶದ ಪ್ಲಿನಿ ಮತ್ತು ಪೆರಿಪ್ಲಸ್ ಕರ್ತೃವು 'ಪರಲಿಯ', 'ಕುಮಾರಿ',

'ಕೊಲ್‌ಚ್ಚೆ' ಎಂಬ ಮುತ್ತು ನಿಕ್ಷೇಪದ ಸಾಗರಕ್ಷೇತ್ರ ಮತ್ತು 'ಕೇಪ್‌ಕೊರ್ಮೈ'ಗಳನ್ನು ಉಲ್ಲೇಖಿಸಿರುವುದನ್ನು ಇಲ್ಲಿ ನೆನೆಯಬಹುದು.[೨೦]

ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಪವಿತ್ರ ಗಿರಿಪಟ್ಟಣವಾದ ತಿರುಪತಿ ನಮಗೆಲ್ಲರಿಗೂ ತುಂಬಾ ಪರಿಚಿತವಾದ ಕ್ಷೇತ್ರ. ಚೆನ್ನೈಯ ವಾಯವ್ಯಕ್ಕೆ, ಬಂಗಾಳಕೊಲ್ಲಿಯ ಪೂರ್ವಕ್ಕಿರುವ ಈ ಗಿರಿಸಾಲು ಶಂಗಂ ಕಾಲದಲ್ಲಿ 'ಪುಳ್ಳಿ' ರಾಜ್ಯದ ಗಡಿಯಾಚೆ ಇತ್ತೆಂದೂ ಚೇರ ರಾಜನಾದ ವಾನವರಂಬನ್‌ನ ಅಧಿಕಾರದಿಂದ ಮುಕ್ತವಾಗಿತ್ತೆಂದೂ ಶಂಗಂ ಕವಿಗಳು ತಿಳಿಸಿರುವರು.[೨೨] ಪುರಂ ಇದನ್ನು ಕೀಟವನ್ ಒಡೆತನಕ್ಕೊಪ್ಪಿಸಿದರೆ, ಅಹಂ ಇಳನಾಗರನ್ ಒಡೆತನಕ್ಕೆ ಒಪ್ಪಿಸುವುದು.[೨೩]

ಶಂಗಂ ಕವಿಗಳ 'ವಟುಕರು' : 'ತಮಿಳಹಂ'ನ ಈಶಾನ್ಯ ಗಡಿಯನ್ನು ಗುರುತಿಸಲು ತೋರಿಸಿದಷ್ಟು ಆಸಕ್ತಿಯನ್ನು ಅವರ ನೆತ್ತಿಯ ಮೇಲಿನ ಉತ್ತರ ಗಡಿಯನ್ನಾಗಲೀ ಭುಜಭಾಗದಲ್ಲಿಯ ವಾಯವ್ಯ ಗಡಿಯನ್ನಾಗಲೀ ಗುರುತಿಸಲು ಶಂಗಂ ಕವಿಗಳು ತೋರಲಿಲ್ಲ; ಈ ಕಾರಣ, 'ಕನ್ನಡ ಜನಪದ'ಕ್ಕೆ ನೇರವಾಗಿ ಸಂಬಂಧಿಸಿದ ಕಾವೇರಿಯ ಉಗಮ ಪ್ರದೇಶಗಳಲ್ಲಿ ಅವರ ಅಂಕಿತದಲ್ಲಿದ್ದ-ಅಂಕಿತದ ಹೊರಗಿದ್ದ ಪ್ರದೇಶದ ಸ್ಪಷ್ಟ ಚಿತ್ರವು ನಮಗೆ ದೊರಕದಂತಾಗಿದೆ. ಇವನ್ನು ದೃಢೀಕರಿಸಿಕೊಳ್ಳದೇ ಮಾರ್ಗಕಾರನ 'ಕಾವೇರಿಯಿಂದಮಾ....' ಗಡಿರೇಖೆಯ ನಿಜ ಸ್ವರೂಪವನ್ನು ತಿಳಿದುಕೊಳ್ಳಲು ನಮಗೆ ಸಾಧ್ಯವಾಗುವುದಿಲ್ಲ.

ಶಂಗಂ ಕವಿಗಳು ಉತ್ತರ ಗಡಿಯ ಪ್ರಧಾನ ಜನಾಂಗ, ಭಾಷೆ ಮತ್ತು ಪ್ರದೇಶಗಳನ್ನು ವೈಯಕ್ತಿಕ ಹೆಸರುಗಳಿಂದ ಸ್ಪಷ್ಟಪಡಿಸದೆ ಇವರನ್ನೆಲ್ಲಾ ವೇಂಕಟಂನ ಉತ್ತರಕ್ಕಿದ್ದವರೆಂದು ಹೇಳಿ, 'ವಟುಕರು' (ವಡುಗರು=ಉತ್ತರದವರು) ಎಂಬ ಒಂದೇ ಒಂದು ಪದದಿಂದ ಗುರುತಿಸಿರುವರು. ಇವರಿಗೆ ತಮಿಳು ಭಾಷೆ ತಿಳಿದಿರಲಿಲ್ಲವೆಂಬುದನ್ನು ಕವಿ ಮಾಮುಲ್ನಾರ್ ನಂಥವರು ಒತ್ತಿ ಹೇಳಿರುವರು.[೨೪] ಮಣಿಮೇಖಲೈಯಲ್ಲಿ 'ವಡಮೋಟಿಯಾಳರ್' ಎಂಬ ಪ್ರಯೋಗ ಬರುವುದು– ಇದರ ಅರ್ಥ 'ಉತ್ತರದ ಭಾಷೆಯವರು' ಎಂದು.[೨೫] ಸಂಸ್ಕೃತ ಭಾಷೆಯಲ್ಲಿ ವ್ಯವಹರಿಸುತ್ತಿದ್ದ ಬ್ರಾಹ್ಮಣರನ್ನು ಈ ಪದವು ನಿರ್ದೇಶಿಸುವುದೆಂದು ಕೆಲವು ಸಂಸ್ಕೃತಾಭಿಮಾನಿ ತಮಿಳರು ವಾದಿಸಿರುವರು; ಆದರೆ, 'ತಮಿಳಹಂ' ಉತ್ತರದ ಗಡಿಗೆ ಹೊಂದಿಕೊಂಡ– ವಿಶೇಷವಾಗಿ ತೆಲುಗು (ಆಂಧ್ರ) ಮತ್ತು (ಕೊಡಗು, ತುಳು ಮತ್ತು ಕೊಂಕಣಿಗರನ್ನೊಳಗೊಂಡ) ಕನ್ನಡ (ಕರ್ನಾಟಕ) ಜನಾಂಗವನ್ನು– ಇದು ಸೂಚಿಸುವುದೆಂಬುದು ನನ್ನ ಅನಿಸಿಕೆ. ಹೀಗೆ ಹೇಳಲು ನನಗೆ ಎರಡು ಕಾರಣಗಳುಂಟು– ಮಣಿಮೇಖಲೈ (ಸು. ೬ ನೆಯ ಶತಕ) ಕಾಲಕ್ಕಾಗಲೇ ಆರ್ಯ ಜನಾಂಗದ ಮತ್ತು ಭಾಷಿಕರ ಪರಿಚಯವು ತಮಿಳರಿಗೆ ಸಾಕಷ್ಟಾಗಿದ್ದುದರಿಂದ, ಹೀಗೆ ಸುತ್ತಿ-ಬಳಸಿ ಬ್ರಾಹ್ಮಣರನ್ನು ನಿರ್ದೇಶಿಸುವ ಆವಶ್ಯಕತೆ ಅವರಿಗೆ ಇರಲಿಲ್ಲವೆಂಬುದು ಇವರಲ್ಲಿ ಒಂದು; ವಟುಕ ('ವಡಮೋಟು') ಪದವು ಆರಂಭ ಕಾಲದಿಂದಲೂ ವಿಶೇಷವಾಗಿ ಉತ್ತರದ ಗಡಿಯಂಚಿನ, ತಮಿಳು ಭಾಷೆಯನ್ನು ಅರಿಯದ, ಜನಾಂಗವನ್ನೇ ನಿರ್ದೇಶಿಸಿರುವುದರಿಂದ, ಇಲ್ಲಿ ಮಾತ್ರ ಅದಕ್ಕೊಂದು ಹೊಸ ಅರ್ಥವನ್ನು ಹಚ್ಚುವ ವಿಶೇಷ ಕಾರಣವಿಲ್ಲವೆಂಬುದು, ಮತ್ತೊಂದು. ವೇಂಕಟವನ್ನು ಕೇಂದ್ರಬಿಂದುವನ್ನಾಗಿ ಮಾಡಿಕೊಂಡು, ಮೇಲಿಂದಮೇಲೆ ಉತ್ತರದ ಗಡಿಯನ್ನು ಶಂಗಂ ಕವಿಗಳು

ಗುರುತಿಸಿರುವುದರಿಂದ, 'ವಟುಕರು' ಎಂದು ಅವರು ನಿರ್ದೇಶಿಸಿರುವವರು ಆಂಧ್ರರನ್ನೇ ಹೊರತು ಮತ್ತಾರನ್ನೂ ಅಲ್ಲ, ಎಂಬ ಮತ್ತೊಂದು ವಾದವೂ ಉಂಟು. ಅಶೋಕನ ಶಾಸನಗಳಲ್ಲಿ (ಕ್ರಿ.ಪೂ. ೩ ನೆಯ ಶತಕ) ಆಂಧ್ರರಿಗೆ ಮಾನ್ಯತೆ ದೊರೆತಿರುವುದನ್ನು ಉದಾಹರಿಸಿ, ಉತ್ತರದ ಗಡಿಯಲ್ಲಿ ಆಂಧ್ರರಷ್ಟು ವ್ಯವಸ್ಥಿತರಾಗಿ ಸಂಘಟಿತಗೊಂಡಿದ್ದ ಜನಾಂಗವು ಮತ್ತೊಂದು ಇರಲಿಲ್ಲವೆಂದೂ ಇವರು ಪ್ರತಿಪಾದಿಸುವರು.[೨೬] ಶಂಗಂ ಸಾಹಿತ್ಯ ಮತ್ತು ಅಶೋಕನ ಶಾಸನಗಳು ಆಂಧ್ರರ ಅಸ್ತಿತ್ವವನ್ನು ಪೋಷಿಸಿದಂತೆ 'ಕನ್ನಡದ' ಜನಾಂಗವನ್ನು ಪೋಷಿಸದಿದ್ದರೂ ಈ ಆಕರಗಳೇ 'ತಮಿಳಹಂ'ನ ವಾಯವ್ಯ ಮಗ್ಗಲಿನಲ್ಲಿದ್ದ ವಟುಕರನ್ನು ಪೋಷಿಸುವುದನ್ನು ನಾವು ಶೋಧಿಸಿ ತೆಗೆಯಬಹುದೆಂದು ನನಗನಿಸುವುದು.

ಅಶೋಕನ ಪ್ರಪ್ರಥಮ ಗಡಿ ಗುಂಡುಗಳು : ಶಂಗಂ ಕವಿಗಳು ವೇಂಕಟ-ಕುಮಾರಿ ನಡುವಣ ಪ್ರದೇಶವನ್ನು ಗುರುತಿಸುವುದಕ್ಕಿಂತ ಸುಮಾರು ೨-೩ ಶತಮಾನ ಕಾಲ ಮುಂಚೆಯೇ ಅಶೋಕನು ಸೀಮಾ-ಸಂದೇಶದ ಗುಂಡುಗಲ್ಲುಗಳಿಂದ, ತಮಿಳು ಮತ್ತು ತಮಿಳೇತರ ವಲಯಗಳ ನಕಾಶೆಯನ್ನು ನಿರ್ಮಾಣ ಮಾಡಿದ್ದನು. ಪದರೂಪದಲ್ಲಾಗಲೀ ಪಟರೂಪದಲ್ಲಾಗಲೀ ಇರದ ಈ ಹೆಬ್ಬಂಡೆಗಳು ದಕ್ಷಿಣ ಭಾರತೀಯರ ಆಂತರಿಕ ವಲಯಗಳ ನಾಂದಿ ನಕಾಶೆಯನ್ನು ರೂಪಿಸಿದ ಪ್ರಪ್ರಥಮ ರೇಖೆಗಳಾದವು. ಇದರಲ್ಲಿ ಅಶೋಕನ ರಾಜ್ಯದೊಳಗಿನ ಆಂಧ್ರ, ಪಿತಿನಿಕ ಜನಾಂಗಗಳ ವಲಯಗಳನ್ನಲ್ಲದೆ ಇಸಿಲ-ಸುವರ್ಣಗಿರಿ ಪ್ರದೇಶಗಳನ್ನೂ ರಾಜ್ಯದ ಹೊರಗಿದ್ದ ಚೋಡ, ಪಾಂಟಿಯ, ಕೇರಳಪುತ್ರ, ಸಾತ್ಯಪುತ್ರ, ತಾಮ್ರಪರ್ಣಿ(ಶ್ರೀಲಂಕೆ) ವಲಯಗಳನ್ನೂ ನಿರ್ದೇಶಿಸಲಾಗಿದೆ. ಅಲ್ಲದೆ ತನ್ನ ಜೀವಿತಾವಧಿಯಲ್ಲಿ ದೇಶಾದ್ಯಂತ ಕೊರೆಸಿದ ಸೂಕ್ಷ್ಮಸಂದೇಶವನ್ನು ಹೊತ್ತ ಶಾಸನಗಳಲ್ಲಿ ನಿಖರ ಅರ್ಧ ಪ್ರಮಾಣ(ಹದಿನೆಂಟು ಮೈನರ್ ಈಡಿಕ್ಟ್‌ಗಳಲ್ಲಿ ಒಂಭತ್ತು)ದ ಗುಂಡುಗಲ್ಲುಗಳನ್ನು ಅಶೋಕನು ಇಂದಿನ ಕರ್ನಾಟಕ ಪ್ರದೇಶದಲ್ಲಿ ಇರಿಸಿದ್ದು ಒಂದು ವಿಶೇಷ. ಅಶೋಕನು ಅಕ್ಷರದಲ್ಲಿ ಸ್ಪಷ್ಟಪಡಿಸಿರುವ ಭೌಗೋಲಿಕ ಹೆಗ್ಗುರುತಿನಷ್ಟೇ ಮಹತ್ವದ ಮಾಹಿತಿಯನ್ನು ಈ ಸೂಕ್ಷ್ಮ ಸಂದೇಶದ ಗುಂಡುಗಳು ಮೌನವಾಗಿ ಸಾರಿದವು.[೨೭] ಸ್ವಇಚ್ಛೆಯಿಂದ ತುಂಗಭದ್ರೆಯ ಆಜುಬಾಜಿನ ಪ್ರದೇಶಕ್ಕೆ ತನ್ನ ಆಧಿಪತ್ಯವನ್ನು ಸೀಮಿತಗೊಳಿಸಿಕೊಂಡು, ಅದರ ದಕ್ಷಿಣಕ್ಕೆ ಮತ್ತು 'ತಮಿಳಹಂ' ಉತ್ತರಕ್ಕಿದ್ದ 'ಬಫ್ಫರ್' ವಲಯವನ್ನು ಸ್ವತಂತ್ರವಾಗಿ ಆಳುತ್ತಿದ್ದ ಭೂಪರಿಗೆ ಅಶೋಕನು ಬಿಟ್ಟುಕೊಟ್ಟದ್ದನ್ನು ಇವು ಬಹಿರಂಗಪಡಿಸುವುವು. ಆ ಭೂಪರ ಭೂ ವಲಯಗಳಲ್ಲಿ ಬನವಾಸಿ ಮತ್ತು ಮಹಿಷಮಂಡಲಗಳು ಸೇರಿರಲು ಸಾಧ್ಯ. ಇದರಲ್ಲಿ ಅಶೋಕನ 'ಮಹಿಷಮಂಡಲ'ದ ಸ್ವರೂಪವೇನೇ ಆಗಿರಲಿ, ತಮಿಳಹಂನ ಪಶ್ಚಿಮ(ಪಶ್ಚಿಮ ಉತ್ತರ)ದಲ್ಲಿ ತಮಿಳೇತರ ಸ್ವತಂತ್ರ ರಾಜ್ಯವೊಂದು ಇತ್ತೆಂಬುದನ್ನು ಶಂಗಂ ಕವಿಗಳೇ ಬಹಿರಂಗಪಡಿಸಿರುವರು. ಅವರು ಈ ಪ್ರದೇಶವನ್ನು ತಮಿಳು ಭಾಷೆಯಲ್ಲಿ 'ಎರುಮೈನಾಟು', 'ಎರುಮೈನಲ್‌ನಾಟು' (ಎರುಮೈ> ಎಮ್ಮೆ=ಮಹಿಷ) ಎಂದು ಕರೆದರು. ಇದಕ್ಕೆ ವಟುಕರ ನಾಯಕನಾದ 'ಎರುಮೈ ಊರವನ್' ಅಧಿಪತಿಯಾಗಿದ್ದನೆಂದೂ ಘೋಷಿಸಿದರು. ಈ ಎಲ್ಲ ವಿವರಗಳು ಅಹಂನಲ್ಲಿ ದೊರೆಯುವುವಲ್ಲದೆ ಸಮಕಾಲೀನ ಶಾಸನಗಳಿಂದಲೂ ಇವು ಪುರಸ್ಕರಿಸಲ್ಪಡುವುವು.[೨೮] ಇದು ಕನ್ನಡ ಪ್ರದೇಶದ ಸ್ವತಂತ್ರ ರಾಜ್ಯವನ್ನು ಸೂಚಿಸುವದೆಂಬುದರಲ್ಲಿ ಅನುಮಾನವಿಲ್ಲ. ಅಂದರೆ,

'ತಮಿಳಹಂ' ಉತ್ತರ ಗಡಿಯನ್ನು ಶಂಗಂ ಕವಿಗಳು ತಮ್ಮ ಕಾವ್ಯಗಳಲ್ಲಿ ವರ್ಣಿಸಿದಂತೆ ವೇಂಕಟವು ಮಾತ್ರ ನಿರ್ದೇಶಿಸುತ್ತಿರಲಿಲ್ಲ, ಅವರ ಕಾವ್ಯವೂ ಶಾಸನಿತ ದಾಖಲೆಗಳೂ ತಿಳಿಸುವಂತೆ ಕಾವೇರಿಯ ಉಗಮ ಪ್ರದೇಶ(ಕೊಡಗು ಮತ್ತು ದಕ್ಷಿಣ ಮೈಸೂರು) ಎರುಮೈನಾಡೂ ನಿರ್ದೇಶಿಸುತ್ತದೆಂಬುದು ಇದರಿಂದ ವ್ಯಕ್ತಗೊಳ್ಳುವುದು.

'ತಮಿಳಹಂ'ನ ಮೂರು ಬಗೆಯ ಗಡಿರೇಖೆಗಳು : ಕ್ರಿ.ಶ. ಮೊದಲರ್ಧ ಸಹಸ್ರಮಾನದ ಕವಿಗಳು ಮೂರು ಬಗೆಯ ಗಡಿಗಳನ್ನು ಗುರುತಿಸಿದರು. ಇವುಗಳಲ್ಲಿ ಒಂದು, ಐತಿಹ್ಯ-ಆಧಾರಿತ 'ವಿಶಾಲ ತಮಿಳಹಂ'ನ ಗಡಿ. ಇದು ಉತ್ತರದ ಅನಿಶ್ಚಿತ ಮೇರೆಯಿಂದ ಪ್ರಾರಂಭಗೊಂಡು, ದಕ್ಷಿಣದ ಶ್ರೀಲಂಕೆಯಾಚೆಯ ವರೆಗೂ ವಿಸ್ತರಿಸಿ, ಕುಮಾರಿ-ಪಹರೂಳಿಯ ನದಿಗಳನ್ನೊಳಗೊಂಡಿತ್ತು. ಎರಡನೆಯದು, ಉತ್ತರದ ಹಿಮಾಲಯದಿಂದ ಆರಂಭಿಸಿ, ದಕ್ಷಿಣದ ಕುಮಾರಿ ವರೆಗೂ ಹಬ್ಬಿತ್ತು. ಮೂರನೆಯದು, ವಾಸ್ತವವಾದ, ಐತಿಹಾಸಿಕ ಆಕರಗಳಿಂದ ಒಂದಿಲ್ಲೊಂದು ಬಗೆಯಲ್ಲಿ ಬೆಂಬಲ ಪಡೆದ, ವೇಂಕಟಂ-ಕುಮಾರಿ ನಡುವಣದ್ದಾಗಿತ್ತು. ಇವುಗಳಲ್ಲಿ ಮೊದಲಿನದನ್ನು ಮುಂದಿನ ಲೇಖನದಲ್ಲಿ ಚರ್ಚಿಸುವೆನು.[೨೯] ಉಳಿದೆರಡನ್ನು ಸಂಗ್ರಹ ರೂಪದಲ್ಲಿ ಇಲ್ಲಿ ಪ್ರಸ್ತುತಪಡಿಸಲು ಪ್ರಯತ್ನಿಸುವೆನು.

ಹಿಮಾಲಯ-ಕುಮಾರಿ ನಡುವಣ ಪ್ರದೇಶ : ಪದಿಱ್ರುಪತ್ತು, ಕಲಿತ್ತೊಕೈ, ಪುರಣಾನೂರು, ಶಿಲಪ್ಪದಿಕಾರಂ, ಪೆರುಂಗದೈ ಮುಂತಾದ ತಮಿಳು ಕಾವ್ಯಗಳಲ್ಲಿ **'ಇಮಯಮ್'** (ಹಿಮಾಲಯ) ಉಲ್ಲೇಖ ಬರುವುದು. ನೆಡುಚೇರನ್ ಆದನ್ ಎಂಬ ಚೇರ ಅರಸನನ್ನು ಇಮಯಪರಂಬನ್ (ಹಿಮಾಲಯದ ವರೆಗೂ ಕೀರ್ತಿ ವಿಸ್ತರಿಸಿಕೊಂಡವನು) ಎಂದು ಶ್ಲಾಘಿಸಲಾಗಿದ್ದು, ಅವನು ಆರ್ಯರನ್ನೆಲ್ಲಾ ಸೋಲಿಸಿ, ಯವನರನ್ನು ಬಂಧಿಸಿ, ಚೇರರ ಲಾಂಛನವಾದ ಧನುಸ್ಸನ್ನು ಹಿಮಾಲಯದ ಬಂಡೆಗಲ್ಲಿನ ಮೇಲೆ ಕೊರೆಸಿ ತನ್ನ ಅಗ್ಗಳಿಕೆಯನ್ನು ಮೆರೆದನೆಂದು ಪದಿಱ್ರುಪತ್ತಿನಲ್ಲಿ ವರ್ಣಿಸಲಾಗಿದೆ. 'ಇಮಯ್ ವರಂಬನ್' ಎಂಬ ಪದವನ್ನು 'ಇಮಯರ್ ಅನ್‌ಬನ್' ಎಂದು ವಿಶ್ಲೇಷಿಸಿ, ಅವನು ದೇವರಿಗೆ ಪ್ರೀತಿಪಾತ್ರನಾದವ(ದೇವಾನಾಂಪ್ರಿಯ)ನೆಂದು ಅರ್ಥೈಸಲಾಗಿದೆ. ಇದರಂತೆ ಇವನ ಪುತ್ರ ಶಂಗುಟ್ಟುವನ್ ಕೂಡಾ ಹಿಮಾಲಯದ ಬಂಡೆಗಲ್ಲಿನ ಮೇಲೆ ಇದೇ ರಾಜಲಾಂಛನವನ್ನು ಕೊರೆಸಿ, ತಂದೆಗೆ ಸರಿಸಮಾನನೆನಿಸಿದನೆಂದು ಶಿಲಪ್ಪದಿಕಾರಂ ತಿಳಿಸುವುದು. ತಲೈಯಾಲಂಗಾನಲ್ ನೆಡುಞ್ಜೆಟಿಯನ್ ರಾಜ್ಯವು ದಕ್ಷಿಣದ ಕುಮಾರಿಯಿಂದ ಉತ್ತರದ ಉನ್ನತ ಪರ್ವತಗಳ ವರೆಗೂ ಪಶ್ಚಿಮದಲ್ಲಿ ಸಮುದ್ರದ ವರೆಗೂ ವಿಸ್ತರಿಸಿದ್ದುದನ್ನು ಪುರಣಾನೂರಿನ ಕುರುಂಕಿಳಾರ್ ಎಂಬ ಕವಿಯು ದಾಖಲಿಸಿರುವನು. ತನ್ನ ಪೋಷಕನಾದ ಆಯ್ ಅಂಡಿರರ್‌ನನ್ನು ಕೊಂಡಾಡುತ್ತಾ ಕವಿ ಮುಡಮೋಶಿಯಾರ್ ಈ ಲೋಕದ ಅಸ್ತಿತ್ವಕ್ಕೆ ಉತ್ತರದ ಹಿಮಾಲಯ ಮತ್ತು ದಕ್ಷಿಣದ ಆಯ್ಕುಡಿ ಆಧಾರಸ್ತಂಭಗಳಾಗಿರುವವೆಂದು ಕೊಂಡಾಡಿರುವನು.[೩೦] ಈ ಎಲ್ಲ ಉಲ್ಲೇಖನಗಳೂ ತಮಿಳು ರಾಜರ ಮೇರೆಗಳನ್ನು ನಿರ್ದೇಶಿಸುವುದಲ್ಲದೆ, 'ತಮಿಳಹಂ'ನ ಗಡಿಗಳನ್ನಲ್ಲವೆಂಬುದನ್ನು ಗಮನಿಸುವುದವಶ್ಯ. ಇವೆಲ್ಲವೂ ಕವಿಗಳ ಉತ್ಪ್ರೇಕ್ಷಿತ ಹೇಳಿಕೆಗಳು ಎಂಬುದನ್ನೂ ಗಮನಿಸುವುದವಶ್ಯ. ಇಷ್ಟೇ ಆವಶ್ಯಕವಾಗಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ದೊರೆತ ಸಂದರ್ಭಗಳನ್ನೆಲ್ಲಾ ಬಳಸಿಕೊಂಡು, ತಮ್ಮ ಪೋಷಕರ, ರಾಜರ, ನಾಯಕರ ಮತ್ತು ಭಾಷಿಕರ ಪ್ರಾದೇಶಿಕ

ಮೇರೆಗಳನ್ನು ಗುರುತಿಸುವ ಸಂಪ್ರದಾಯವನ್ನು ಶಂಗಂ ಕವಿಗಳು ಕ್ರಿ.ಶ. ಆರಂಭ ಕಾಲದಲ್ಲಿಯೇ ಪ್ರಾರಂಭಿಸಿದ್ದು. ಪಾಂಡ್ಯ ರಾಜ್ಯದ ಗಡಿಗಳನ್ನು ಪ್ರಸ್ತಾಪಿಸುತ್ತಾ ಕವಿ ಕಟ್ಟಿರೈಕಾದ್ಯ, ಕೊರ್ಕೈಯ ಅಧಿಪತಿಯಾದ ಇವನು ಕುಮಾರಿಯ ರಕ್ಷಕನೆಂದೂ ಪೊಡಿಯಿಲ್ ಬೆಟ್ಟದ ಒಡೆಯನೆಂದೂ ಶಿಲ್ಪದಿಕಾರಂನಲ್ಲಿ ವರ್ಣಿಸಿರುವುದಲ್ಲದೆ, ಹಿಮಾಲಯವನ್ನು ಉತ್ತರದ ಮೇರೆಗಲ್ಲನ್ನಾಗಿ ಅವನು ಮಾಡಿಕೊಂಡಿದ್ದನೆಂದೂ ಹೇಳಿರುವನು.[೩೧]

ನಾಲ್ಕೂ ದಿಕ್ಕಿನ ಗಡಿ ಗುರುತಿಸಿಕೊಂಡ ತಮಿಳಹಂ : ವೇಂಕಟ ಮತ್ತು ಕುಮಾರಿಗಳ ಮೇರೆಗಳನ್ನು ಪಡೆದುಕೊಂಡಿದ್ದ 'ತಮಿಳಹಂ' ಉಲ್ಲೇಖವು ಪಣಂನಿಂದ ಪ್ರಾರಂಭವಾಗಿ ಶಿಲಪ್ಪದಿಕಾರಂನ ಕರ್ತೃವಿನ ವರೆಗೂ ಮುಂದುವರಿದರೂ ಈ ಕಾಲಾವಧಿಯ ಬಹುತೇಕ ಕವಿಗಳು ತಮಿಳಹಂನ ಪೂರ್ವ ಮತ್ತು ಪಶ್ಚಿಮದ ಮೇರೆಗಳನ್ನು ಪ್ರಸ್ತಾಪ ಮಾಡದೇ ಇರಲು ಕಾರಣ, ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಮತ್ತು ಪೂರ್ವದ ಬಂಗಾಳಕೊಲ್ಲಿ ಅದರ ಸಹಜ ಮೇರೆಯಾಗಿದ್ದುದೆನ್ನಬಹುದು. ಆದರೂ ಆಗೊಮ್ಮೆ ಈಗೊಮ್ಮೆ ತಮಿಳಹಂನ ಪೂರ್ವ ಮತ್ತು ಪಶ್ಚಿಮದ ಮೇರೆಗಳನ್ನೂ ಅವರು ಹೆಸರಿಸಿರುವರು. ಉದಾಹರಣೆಗೆ, ಪತ್ತುಪಾಟುವಿನ ಕವಿ ಮುಂಗಡಿ ಮರದನ್ ಪಾಂಡ್ಯ ರಾಜ್ಯದ ನಾಲ್ಕು ಮೇರೆಗಳಲ್ಲಿ ವೇಂಕಟ-ಕುಮಾರಿಗಳನ್ನಲ್ಲದೆ ಪೂರ್ವ ಮತ್ತು ಪಶ್ಚಿಮದ ಕಡಲುಗಳನ್ನೂ ಉಲ್ಲೇಖಿಸಿದನು.[೩೨] ಚೇರ, ಪಾಂಟಿಯ ಮತ್ತು ಚೋಳರು ಒಮ್ಮೆ ಒಂದೇ ವೇದಿಕೆಯನ್ನಲಂಕರಿಸಿದ್ದ ಅಪೂರ್ವ ದೃಶ್ಯವೊಂದನ್ನು ವರ್ಣಿಸುತ್ತಾ ಕವಯಿತ್ರಿ ಅವ್ವೈಯಾರ್ ಈ ಮೂರು ಮುಕುಟಧಾರಿ(ನೆಡುಮುಡಿ-ಮೂವೇಂದಾರ್)ಗಳನ್ನು 'ತಮಿಳಹಂ' ನಕಾಶೆಯಲ್ಲಿ ಬಂಧಿಸಿದಳು.[೩೩] ಇದರಂತೆ, ಹಲವು ಉಪನಾಯಕರನ್ನೂ —ಶಿರ್ರರಸರ್, ಕುಕುನಿಲಮನ್ನಾರ್— ಮುಡವನಾರ್, ಕಪಿಲರ್, ಕಾವಿರಿಪೂಂಪಟ್ಟಿನತ್ತುಕ್ಕಾರಿ ಕಣ್ಣನಾರ್ ಮೊದಲಾದ ಕವಿಗಳು ಇಂತಹ ನಕಾಶೆಯೊಳಗೆ ತಂದಿರಿಸಿದರು. ಶಂಗಂ ಕಾಲದ ಕೊನೆಯಂಚಿಗೆ ಬಂದಾಗ, ಇದಿನ್ನೂ ಹೆಚ್ಚು ನಿಖರತೆಯನ್ನು ಪಡೆದುಕೊಂಡಿತೆಂಬುದಕ್ಕೆ ಶಿಲಪ್ಪದಿಕಾರಂನ ಪುಹಾರ್‌ಕಾಂಡದಲ್ಲಿ ಬರುವ ಒಂದು ಘಟನೆಯನ್ನು ಉದಾಹರಿಸಬಹುದು. ಚತುರಮಂತ್ರಿ ವಸಂತನೊಡಗೂಡಿ ಖ್ಯಾತ ಅರಸನಾದ ಮಾರನ್ ತನ್ನ ಪ್ರಭಾವವನ್ನು ಫಲವತ್ತಾದ 'ತಮಿಳಹಂ' ಮೇಲೆ ಸಾಧಿಸಿಕೊಂಡ ಬಗೆಯನ್ನು ವಿವರಿಸುತ್ತಾ ಆ ಪ್ರದೇಶವು ವಿಷ್ಣುವಿನ ಪವಿತ್ರ ಸ್ಥಾನವಾದ ಉತ್ತರದಲ್ಲಿ 'ನೆಡಿಯೊಳ್' ಮತ್ತು ದಕ್ಷಿಣದ 'ತೊಡಿಯೊಳ್' ನಡುವಣ ಪ್ರದೇಶವಾಗಿದ್ದುದನ್ನು ಮತ್ತು ಅದರಲ್ಲಿ ಬಹುಮಹಡಿ ಮನೆಗಳ 'ಮತುರೆ', ಹೆಸರಾಂತ 'ಉಜುಂತೈ', ಅದ್ಭುತವಾದ 'ವಾಜ್ಞಿ'ಗಳಲ್ಲದೆ ಸಾಗರದಲೆಗಳ ಭೋರ್ಗರೆತವನ್ನು ಮಾರ್ದನಿಸುತ್ತಿದ್ದ ಪುಹಾರ್ ಶೋಭಿಸುತ್ತಿದ್ದುದನ್ನೂ ಪೂಜ್ಯ ಯತಿಶ್ರೇಷ್ಠ(ಅಗಸ್ತ್ಯ)ನ ಪವಿತ್ರಪೊಡೆಯಿಲ್‌ನಿಂದ ಬೀಸುತ್ತಾ 'ದಕ್ಷಿಣ ಮಾರುತ'ನು ರಾಯಭಾರಿಯಂತೆ ವಸಂತಾಗಮನ ವನ್ನು ಘೋಷಿಸುತ್ತಿದ್ದುದನ್ನೂ ಮನಮುಟ್ಟುವಂತೆ ಚಿತ್ರಿಸಲಾಗಿದೆ.[೩೪] ಇಲ್ಲಿ ಬರುವ 'ಉಜುಂಗೈ' ಚೋಳರ ರಾಜಧಾನಿ ಉರೈಯಾರ್; 'ಮತುರೆ', ಪಾಂಡ್ಯರ ರಾಜಧಾನಿ ಮದುರೈ; 'ವಾಜ್ಞಿ' ಚೇರರ ರಾಜಧಾನಿ ಕರವೂರು. 'ಪುಹಾರ್' ಪ್ರಸಿದ್ಧ ಬಂದರು ಪಟ್ಟಣ, ಕಾವೇರಿಪೂಂಪಟ್ಟಿಣಂ ಅಥವಾ ಪೂಂಪುಹಾರ್. 'ತಮಿಳಹಂ'ನ ಮೇಲೆ ವಿಶಿಷ್ಟ ಬೆಳಕು ಚೆಲ್ಲುವ ಶಿಲಪ್ಪದಿಕಾರಂನಲ್ಲಿ ಬರುವ ಮತ್ತೊಂದು ಮಾತನ್ನೂ ಇಲ್ಲಿ ನೆನೆಯುವುದವಶ್ಯ. ಇದು ಇಂತಿದೆ :

ಪಂಚತಿಣೈ(ಐದು ಪ್ರಾದೇಶಿಕ ವಲಯ)ಗಳಲ್ಲಿ ನೆಲೆಸಿ, ಧರ್ಮಾರ್ಥಕಾಮ (ಎಂಬ ಪುರುಷಾರ್ಥ) ಗಳಿಗೆ ಶಿಷ್ಟರಾದ ದೇವತೆಗಳೂ ಮಾನವರೂ ಪರಿಶುದ್ಧ (ಸೆನ್ತಮಿಳ್ ಕಾವ್ಯಭಾಷೆ: ಮಾರ್ಗೀ ನುಡಿ) ಮತ್ತು ಪ್ರಸಿದ್ಧ (ತಮಿಳ್ ಆಡುನುಡಿ: ಸಾಮಾನ್ಯರ ಭಾಷೆ) ಎಂಬ ಎರಡು ಬಗೆಯನ್ನೊಳಗೊಂಡ ಅನ್ಯೋನ್ಯ ಪ್ರಾಸಬಂಧದ 'ಅಹಂ' ಮತ್ತು 'ಪುರಂ' ಕಾವ್ಯ ಪ್ರಭೇದಗಳನ್ನು ಪಾಟಲ್ (ಹಾಡು), ಎಳಾಲ್(ಯಾಳ ಸಂಗೀತ), ಪಣ್(ರಾಗ, ಆಲಾಪ), ಪಾಣಿ(ಮುದ್ರಾ), ಅರಂಕು(ರಂಗಕಲೆ), ವಿಲಕ್ಕ ಮತ್ತು ಆಟಲ್(ಅಂಗಭಂಗ; ಲಾಸ್ಯ)ಗಳಿಂದ, ಸುಲಭಗ್ರಾಹ್ಯವೂ ನಿರ್ದುಷ್ಟವೂ ಆದ ತಮಿಳು ಭಾಷೆಯಲ್ಲಿ ವ್ಯಾಖ್ಯಾನಿಸಿ ಉತ್ತುಂಗ ಶಿಖರ ಸಮೂಹವನ್ನು ಪ್ರತಿಬಿಂಬಿಸುವ ದರ್ಪಣದಂತೆ, 'ತಮಿಳಹಂ'ನ ಸೊಬಗನ್ನು ಈ ಕಾವ್ಯವು ಪ್ರತಿಬಿಂಬಿಸುವುದು.[೩೫]

ತೊಲ್ಕಾಪ್ಪಿಯಮ್‌ನಿಂದ ಶಿಲಪ್ಪದಿಕಾರಂ ವರೆಗಿನ (ಕ್ರಿ.ಶ. ೧ ರಿಂದ ೬ ನೆಯ ಶತಮಾನದ) ತಮಿಳು ಆಕರಗಳಿಂದ ನಾವು ತಿಳಿದುಕೊಳ್ಳಬಹುದಾದ ಪ್ರಧಾನ ಅಂಶಗಳನ್ನು ಇಲ್ಲಿ ಸಂಗ್ರಹಿಸಿ ಹೇಳುವುದಾದರೆ, ಅವು ಇಂತಿವೆ :

೧. 'ತಮಿಳಹಂ' ಅಥವಾ ತಮಿಳ ಭಾಷಿಕರ ಗಡಿಗಳನ್ನು ಗುರುತಿಸಲು ಆಸಕ್ತಿ ತೋರದ ತೊಲ್ಕಾಪ್ಪಿಯಾಣಾರ್, 'ತಮಿಳು' ಮತ್ತು 'ಸೆನ್ತಮಿಳು' ಪದಗಳ ಅರ್ಥವನ್ನು ವಿಶ್ಲೇಷಿಸಿ ಒಂದು ಪ್ರದೇಶದ (ತಿಣೈ) ಜನಾಂಗವು ಯಾವ ಆಧಾರದ ಮೇಲೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡು, ಸ್ವಂತ ಹೆಸರನ್ನು ಪಡೆದುಕೊಳ್ಳುವುದೆಂಬುದನ್ನೂ ತಮಿಳುನಾಡಿನ ಹದಿಮೂರು ಆಂತರಿಕ ವಲಯಗಳ ಸ್ವರೂಪಗಳನ್ನೂ ಪ್ರಪ್ರಥಮ ಬಾರಿಗೆ ವಾಙ್ಮಯವೇದಿಕೆಯ ಮೇಲೆ ತಂದನು;

೨. ತಮಿಳಹಂನ ಉತ್ತರ ಮತ್ತು ದಕ್ಷಿಣದ ಮೇರೆಗಳನ್ನು ಮೊಟ್ಟಮೊದಲು ಗುರುತಿಸಿದ ಶ್ರೇಯಸ್ಸು ಪಣಂಪಾರಣಾರ್‌ನದಾಗಿದ್ದು ಇವನು ಹೆಸರಿಸಿದ ವೇಂಕಟ-ಕುಮಾರಿ ಗಡಿಗಳು ಶಂಗಂ ಕವಿಗಳಿಂದ ಪುನಃ ಪುನಃ ಪ್ರತಿಪಾದಿಸಲ್ಪಟ್ಟವು; ಅಲ್ಲದೆ ಕೆಲವು ಶಂಗಂ ಕವಿಗಳು ತಮ್ಮ ಪೋಷಕ ರಾಜರ ಅಧಿಕಾರವ್ಯಾಪ್ತಿಯಲ್ಲಿದ್ದ ಭೂಪ್ರದೇಶವನ್ನು ವರ್ಣಿಸುತ್ತಾ 'ತಮಿಳಹಂ'ದ ಪೂರ್ವ ಮತ್ತು ಪಶ್ಚಿಮದ ಮೇರೆಗಳನ್ನೂ ಗುರುತಿಸಿದರು;

೩. ಮಹಾಕಾವ್ಯಗಳ ಕಾಲಕ್ಕೆ 'ತಮಿಳಹಂ' ಸೌಧದ ಭವ್ಯ ನಕಾಶೆಯು ನಿಖರತೆಯನ್ನೂ ಸಾರ್ವತ್ರಿಕ ಮಾನ್ಯತೆಯನ್ನೂ ಪಡೆದುಕೊಂಡು, ಅದು ಪೂರ್ವ ಪಶ್ಚಿಮದ ಎರಡು ಸಾಗರಗಳ ಉತ್ತರದ ವೇಂಕಟ ದಕ್ಷಿಣದ ಕುಮಾರಿಯ ನಡುವಣ ಪ್ರದೇಶದಲ್ಲಿ ಪ್ರತಿಷ್ಠಾಪಿತಗೊಂಡಿತು.

ಆಕರ ಟಿಪ್ಪಣಿ :

೧. ಈ ಬಗೆಯ ಅವೈಜ್ಞಾನಿಕ ನಕಾಶೆಗಳನ್ನು ವಿದ್ಯಾರ್ಥಿಗಳಿಗಾಗಿ ಪ್ರಕಟಿಸಿದ ಕೊಲ್ಲಿನ್ ಡೇವಿಸ್‌ನ 'ಯಾನ್ ಹಿಸ್ಟಾರಿಕಲ್ ಅಟ್ಲಾಸ್ ಆಫ್ ದಿ ಇಂಡಿಯನ್ ಪೆನಿನ್ಸುಲ' (ಓಯುಪಿ, ೧೯೪೯), ಮಾತ್ರವಲ್ಲದೆ ಪ್ರಮಾಣಿತ ಗ್ರಂಥಗಳಲ್ಲಿಯೂ ಕಾಣುವೆವು. ಇದಕ್ಕೆ ಎರಡು ಹೆಸರಾಂತ ಇತಿಹಾಸಕಾರರ ಗ್ರಂಥಗಳನ್ನಿಲ್ಲಿ ನಿದರ್ಶಿಸಬಯಸುವೆ : ೧. ಥಾಪರ್, ರೋಮಿಲ, ಅಶೋಕ ಅಂಡ್ ದಿ ಡಿಕ್ಲೈನ್ ಆಫ್ ದಿ ಮೌರ್ಯಾಸ್ (ಓಯುಪಿ, ೧೯೭೩), ಪು. ೪೮, ೧೨೪ ನಲ್ಲಿಯ ನಕಾಶೆಗಳು; ಇರ್ಫಾನ್ ಹಬೀಬ್ ಮತ್ತು ವಿವೇಕಾನಂದ ಝಾ, ಮೌರ್ಯನ್ ಇಂಡಿಯ, ಎ ಪೀಪಲ್ಸ್ ಹಿಸ್ಟರಿ ಆಫ್ ಇಂಡಿಯ, ಸಂ. ೪: ಅಲಿಗಢ್ ಹಿಸ್ಟೋರಿಯನ್ ಸೊಸೈಟಿಯ ಮಾಲಿಕೆ (ನವದೆಹಲಿ, ೨೦೦೪), ನಕಾಶೆ ೨-೩, ಪು. ೫೭; ಪು. ೯೩; ೩.೨-ಪು. ೧೫೨

೨. ಮಹಾಭಾರತ– 'ಭೀಷ್ಮಪರ್ವ'(ಅ. ೯)ದಲ್ಲಿ 'ದ್ರಾವಿಡ'ವಲ್ಲದೆ ಕೇರಳ, ಮಹಿಷಕ, ಕರ್ನಾಟಕ, ಕೊಂಕಣ ಚೋಳ ದೇಶಗಳನ್ನು, 'ಕರ್ಣಪರ್ವ'ದಲ್ಲಿ (ಅ. ೪೪) ದ್ರಾವಿಡ, ಆಂಧ್ರ, ನಿಷಾದರನ್ನು, 'ಅಶ್ವಮೇಧಪರ್ವ'ದಲ್ಲಿ (ಅ. ೨) ಅಭೀರ, ಪುಂಡ್ರ, ಶಬರರೊಡನೆ ದ್ರಾವಿಡರನ್ನೂ ಹೆಸರಿಸಿ, ಇವರನ್ನೆಲ್ಲ 'ಶೂದ್ರ' (ಅ. ೩೦) ರೆಂದು

ಕರೆದಿರುವುದನ್ನು ಇಲ್ಲಿ ನಿದರ್ಶಿಸಬಹುದು. ಭಾಗವತ (III. VIII ಮುಂ.), ಬ್ರಹ್ಮಾಂಡ (II), ವಾಯು (೫೮.೫೨), ಮತ್ಸ್ಯ (೧೧೪-೫೭), ಮುಂತಾದ ಪುರಾಣಗಳಲ್ಲಿ, ವರಾಹಮಿಹಿರನ ಬೃಹತ್ ಸಂಹಿತಾದಲ್ಲಿಯು ಅರವ (XIV, ೧೭), ದ್ರಾವಿಡ (IX, ೧೫, ೧೯ ಮುಂ.), ದ್ರವಿಡಾಧಿಪತಿ (IV, ೨೬) ಎಂಬ ಉಲ್ಲೇಖಗಳು ಬರುವುವು. ಈ ಸಂಸ್ಕೃತ ಪರಂಪರೆಗೆ ಬದಲಾಗಿ ಪಾಲೀ ಸಾಹಿತ್ಯದಲ್ಲಿ `ದಮಿಲರಠ' (ಕೊವೆಲ್. ಇ.ಬಿ. (ಸಂ.) ದಿ ಜಾತಕಾಸ್ ಆರ್ ಸ್ಟೋರೀಸ್ ಆಫ್ ದಿ ಬುದ್ಧಾಸ್ ಫಾರ್ಮರ್ ಬರ್ತ್ಸ್ (ಲಂಡನ್, ೧೯೫೭) : ಅಕತ್ತಿಜಾತಕ), `ದಮಿಲ', `ದಮಿಲದೇವಿ' (ಹರ್ಮನ್ ಓಲ್ಡೆನ್‌ಬರ್ಗ್ (ಸಂ.) ದೀಪವಂಶ (ಬರ್ಲಿನ್, ೧೮೭೯) XVIII, ೪೭; XXI, ೪೫) ಎಂಬ ಉಲ್ಲೇಖಗಳಿವೆ. `ಪೆರಿಪ್ಲಸ್' ಗ್ರಂಥದಲ್ಲಿ ಮತ್ತು ಪ್ಲಿನಿಯ ಭೂಗೋಳದಲ್ಲಿ `ದಮರಿಕೆ', `ದಮ್ಮರಿಕೆ' ಪದಗಳಿಂದ ತಮಿಳರನ್ನು ಉಲ್ಲೇಖಿಸಲಾಗಿದೆ. ಸುಬ್ರಹ್ಮಣಿಯನ್, ಎನ್. ಒರಿಜಿನಲ್ ಸೋರ್ಸಸ್ ಆಫ್ ದಿ ಹಿಸ್ಟರಿ ಆಫ್ ತಮಿಳ್ನಾಡು (ಉದುಮಲ್‌ಪೇಟ್, ೧೯೯೪), ಪು. ೩೨, ೩೭, ೪೪, ೪೮, ೨೬೫-೨೮೦

೩. ಅಶೋಕನ ೧೩ ನೆಯ ಮಹಾಶಾಸನ (ಮೇಜರ್ ಇಡಿಕ್ಟ್)ದಲ್ಲಿ ಮೌರ್ಯ ಸಾಮ್ರಾಜ್ಯದ ಜನಾಂಗಗಳಾದ ಭೋಜ, ಪಿತಿನಿಕ, ಪಾರಿಂದಗಳ ಜೊತೆಗೆ ಆಂಧ್ರರನ್ನೂ ಹೆಸರಿಸಲಾಗಿದೆ. ಇದಾದ ನಂತರ ಅವನ ರಾಜ್ಯದ ಹೊರಗಿದ್ದ ದಕ್ಷಿಣದ ನೆರೆರಾಜ್ಯಗಳಾದ ಚೋಡ, ಪಾಂಡಿಯ, ಕೇರಳಪುತ್ರ, ಸಾತ್ಯಪುತ್ರ ಮತ್ತು ತಾಮ್ರಪರ್ಣಿ (೨ ನೆಯ ಮಹಾಶಾಸನದಲ್ಲಿ)ಗಳನ್ನು ಹೆಸರಿಸಲಾಗಿದೆ.

೪. ನೋಡಿ– ಮಹಾದೇವನ್, ಇರಾವತಿ, ಐ., ಅರ್ಲಿ ತಮಿಳ್ ಎಪಿಗ್ರಾಫಿ : ಫ್ರಮ್ ದಿ ಅರ್ಲಿಯಸ್ಟ್ ಟೈಮ್ಸ್ ಟು ದಿ ಫಿಫ್ತ್ ಶಂಚುರಿ ಎ.ಡಿ., (ಚೆನ್ನೈ-ಹಾರ್ವರ್ಡ್ ವಿ.ವಿ.ಸ., ೨೦೦೩).

೫. ಮುರುಗನ್, ವಿ. (ಸಂ.), ತೊಲ್ಕಾಪ್ಪಿಯಮ್ ಇನ್ ಇಂಗ್ಲಿಷ್ (ಚೆನ್ನೈ, ೨೦೦೧), ೩೮೫, (I-iii, ೯೦).

೬. ಅದೇ., ೮೮೧ (II-IX-೨). ಅಲ್ಲದೆ ನೋ. ೮೮೦, ೮೮೩ (IX. ೩೯೨, ೩೯೪). ತೊಲ್ಕಾಪ್ಪಿಯಮ್‌ನ ಅತ್ಯಂತ ಪುರಾತನ ಟೀಕಾಕಾರನಾದ ಇಳಂಪುರನರ್‌ನ ಟಿಪ್ಪಣಿಗಳಿಗೆ ನೋ. ನಮಶ್ಶಿವಾಯ ಮುದಲಿಯಾರ್ (ಸಂ.), ಇಳಂಪುರನರ್ (ಚೆನ್ನೈ, ೧೯೨೮, ಪು. ೨೧೧), `ಶೊಲ್' ಚರ್ಚೆಗೆ ನೋ. ತಿರುನಾವಕ್ಕರಸು, ಕೆ.ಡಿ., ಚೀಫ್ಟನ್ಸ್ ಆಫ್ ದಿ ಸಂಗಂ ಏಜ್, (ಮದ್ರಾಸು, ೧೯೯೪), ಪು. ೪೪-೪೬

೭. ಅದೇ., ೯೪೭-೯೬೭, ೧೫೬೬

೮. 'ಅಕತ್ತಿಣೆಯರ್', ತೊಲ್. 'ಪೊರುಳ್', ೧-೨, ೫, ಮುಂ. ಹೋಲಿಸಿ, ಮಾರ್, ಜೋ. ರಾ., ದಿ ಏಯ್ಟ್ ಅಂಥೋಲಜೀಸ್, (ಮದ್ರಾಸು, ೧೯೮೫, ಪು. ೧೫-೧೭) ಈ ಪಂಚ ತಿಣೈಗಳಲ್ಲದೆ ಪ್ರಾದೇಶಿಕ ಸೀಮೆಯಿಡಿ. `ಕೈಕ್ಕಿಳೈ' ಮತ್ತು `ಪೇರುಂತಿಣೈ'ಗಳನ್ನು ಹೆಸರಿಸಲಾಗಿದೆ. `ತಿಣೈ' ಚರ್ಚೆಗೆ ಸರಿಸುಮಾರು ಒಂದು ಶತಮಾನ ಕಾಲದ ಇತಿಹಾಸವಿದೆ. ಆ ಚರ್ಚೆಯ ಸಾರಾಂಶವನ್ನು ಸಂಗ್ರಹಿಸಿ ಕೊಡುವುದೂ ಪ್ರಯಾಸದಾಯಕ. ಇದರ ಪರಿಚಯವಿರದ ಕನ್ನಡಿಗರಿಗೆ ಅದರ ಸ್ಥೂಲ ಚಿತ್ರವೊಂದನ್ನು ಕೊಡಲು ಪ್ರಯತ್ನಿಸುವೆ :

i. `ಕುಱುಂಜ್ಞಿ' ಎಂಬುದು ಹನ್ನೆರಡು ವರ್ಷಗಳಿಗೊಮ್ಮೆ ಅರಳುವ ಪರ್ವತ ಪುಷ್ಪ. ಚಿಕ್ಕ ಚಿಕ್ಕ ಕೀಟ ಮತ್ತು ನೀರಬುಗ್ಗೆಗಳಿರುವ ಗಿರಿಪ್ರದೇಶ ಇದರ ಜನ್ಮಸ್ಥಳ. ಇಲ್ಲಿಯ ನಿವಾಸಿಗಳ ಕಸಬು ಜೇನು ಶೇಖರಣೆ, ಗಡ್ಡೆ-ಗೆಣಸು ಅಗಿಯುವುದು, ಫಸಲನ್ನು ಮುತ್ತುವ ಪಕ್ಷಿಗಳನ್ನು ಓಡಿಸುವುದು. ಅವರ ಮುಖ್ಯ ಆಹಾರ ಉತ್ಪಾದನೆ ಭತ್ತ, ಬಿದಿರು ಮತ್ತು ಜೋಳ. ಪ್ರೇಮಿಗಳನ್ನು ರತಿಕೇಳಿಗೆ ಪ್ರೇರೇಪಿಸುವುದು ಈ ಪರಿಸರದ ವೈಶಿಷ್ಟ್ಯ (ತಮಿಳನಾಡಿನ ಪಳನಿ, ನೀಲಗಿರಿ,ಪಶ್ಚಿಮ ಘಟ್ಟ, ಇದಕ್ಕೆ ಉತ್ತಮ ಉದಾಹರಣೆ).

ii. `ಮುಲ್ಲೈ' ಎಂಬುದು ವರ್ಷಾನಂತರದ ಕಾಲದಲ್ಲಿ ಅರಳುವ ಧವಳವರ್ಣದ ಸುಗಂಧ ಪುಷ್ಪ. ಇದರ ಜನ್ಮಸ್ಥಾನ ನದೀ ನೀರುಣ್ಣುವ ಹುಲ್ಲುಗಾವಲು. ಇಲ್ಲಿಯ ಜನಾಂಗದ ಪ್ರಮುಖ ಉದ್ಯೋಗ ಪಶುಪಾಲನೆ, ಎಮ್ಮೆ ಕೋಣಗಳಿಂದ ಧಾನ್ಯ ಒಕ್ಕುವುದು ಮತ್ತು ಜೋಳವನ್ನು ಹಸನುಗೊಳಿಸಿ ಸಂಗ್ರಹಿಸುವುದು. ಇವರ ಪ್ರಧಾನ ಆಹಾರ `ವರಕು', `ಶಾಮೈ' ಮತ್ತು `ಮತಿರೈ' ಧಾನ್ಯಗಳು. ದೂರ ಪ್ರಯಾಣದಲ್ಲಿದ್ದ ಪ್ರಿಯಕರನಿಗಾಗಿ ಪರಿತಪಿಸುವ ಪ್ರಿಯೆಯ ಜೀವನಚಿತ್ರ ಇದರ ವೈಶಿಷ್ಟ್ಯ (ತಮಿಳುನಾಡಿನ ತಿರುಚಿನಾಪಳ್ಳಿಯಿಂದ ಮದುರೈ ವರೆಗಿನ, ಸೇಲಂನಿಂದ ಕೋಯಮತ್ತೂರು ವರೆಗಿನ ಪ್ರದೇಶ ಇದಕ್ಕೆ ಉತ್ತಮ ನಿದರ್ಶನ).

iii. `ಮರುತಮ್' ಎಂಬುದು ಕೆರೆ ಮತ್ತು ನದೀ ದಡಗಳಲ್ಲಿ ಬೆಳೆಯುವ ಹೆಮ್ಮರದಲ್ಲಿ ಬಿಡುವ ಹೂ. ನದಿ, ಬಾವಿ, ಕೆರೆಗಳಿಂದ ಹೇರಳವಾಗಿ ನೀರುಣ್ಣುವ ಫಲವತ್ತಾದ ಕೃಷಿಯೋಗ್ಯ ಭೂಮಿಯಲ್ಲಿ ಅಲ್ಲಿನ ನಿವಾಸಿಗಳು ಭತ್ತದ ಬೆಳೆ ಮತ್ತು ಪಶು ತಳಿಯನ್ನು ವೃದ್ಧಿಸುವ ಕಸಬಿನಲ್ಲಿ ತೊಡಗುವರು. ಭತ್ತ ಅವರ ವಿಶೇಷ ಆಹಾರ ಬೆಳೆ. ತನ್ನನ್ನು ವಂಚಿಸಿ ಸೂಳೆಯ ಸಂಗದಲ್ಲಿರುವ ಪ್ರಭಾವೀ ಪತಿಯ ಬಗ್ಗೆ ಆತಂಕಪಡುವ ಹೆಂಡತಿಯನ್ನು ಈ

ಪರಿಸರ ಪ್ರತಿಬಿಂಬಿಸುವುದು (ತಮಿಳುನಾಡಿನ ಕನ್ಯಾಕುಮಾರಿಯ ಪರ್ವತ ಪ್ರದೇಶ ಇದಕ್ಕೆ ಉದಾಹರಣೆ).

iv. `ನೈಯ್ದಲ್` ಎಂಬುದು ಜಲಪುಷ್ಪ. ಇದು ಕರಾವಳಿಯ ವಿಶೇಷತೆ. ಈ ಪರಿಸರದ ಜನಾಂಗದ ಮುಖ್ಯ ಕಸುಬು ಮೀನುಗಾರಿಕೆ, ಉಪ್ಪು ಉತ್ಪಾದನೆ ಮತ್ತು ಅದರ ಮಾರಾಟ. (ಸಮುದ್ರ ತೀರದಿಂದ) ದೂರ ಹೋದ ಪ್ರಿಯತಮನ ಆಗಮನಕ್ಕಾಗಿ ಪರಿತಪಿಸುವ ಕ್ರಿಯೆಯನ್ನು ಪ್ರತಿನಿಧಿಸುವುದು ಈ ಪರಿಸರದ ವಿಶೇಷ (ಕೇರಳ ಕರಾವಳಿ ಇದಕ್ಕೆ ಉತ್ತಮ ನಿದರ್ಶನ).

v. ಪಾಲೈ ಎಂಬುದು ಪಾಳು ಭೂಮಿ ಅಥವಾ ಮರುಭೂಮಿಯಲ್ಲಿ ಬೇಸಗೆಯಲ್ಲಿ ಅರಳುವ ಪುಷ್ಪ. ಈಗ ತಮಿಳುನಾಡಿನಲ್ಲಿ ಅಪರೂಪವಾಗಿರುವ ಈ ಪುಷ್ಪವನ್ನು ಶ್ರೀಲಂಕೆಯಲ್ಲಿನ್ನೂ ಕಾಣಲು ಸಾಧ್ಯ. ಬಾವಿ ಮತ್ತು ಚಿಕ್ಕ ನೀರ್ಬುಗ್ಗೆಗಳ ಪಾಡು ಭೂಮಿಯಲ್ಲಿಯ ಈ ಜನಾಂಗದ ಮುಖ್ಯ ಕಸುಬು ಕಳ್ಳತನ, ಕೊಳ್ಳೆ ಹೊಡೆಯುವುದು, ಪ್ರಯಾಣಿಕರನ್ನು ಪೀಡಿಸುವುದು. ಅಗಲಿದ ಪ್ರೇಮಿಗಳ ವಿರಹ ತಾಪವನ್ನು ಈ ಪರಿಸರ ಪ್ರತಿನಿಧಿಸುವುದು.

ಈ ತಿಣೈಗಳಲ್ಲಿ ಎದ್ದು ಕಾಣುವ ಅಂಶಗಳು, ವಿಶಿಷ್ಟ ಪರಿಸರ, ಅದಕ್ಕೆ ಹೊಂದಿಕೊಂಡ ಜನಾಂಗೀಯ ಕಸುಬು, ಅವರ ಜೀವನದಲ್ಲಿ ಸಾಮಾನ್ಯವೆನಿಸುವ ಪ್ರಣಯ ತುಡಿತದ ವಿಶಿಷ್ಟ ಪ್ರಭೇದ. ಐದು ಬಗೆಯ ಪುಷ್ಪಗಳು, ಐದು ಬಗೆಯ ಪರಿಸರ, ಕಸುಬು, ಮಾನಸಿಕ ತುಮುಲವನ್ನು ಸಮರ್ಥವಾಗಿ ಸಂಕೇತಿಸುವುವು.

೯. ಶ್ರೀನಿವಾಸ ಐಯಂಗಾರ್, ಪಿ. ಟಿ., ಹಿಸ್ಟರಿ ಆಫ್ ದಿ ತಮಿಳ್ಸ್ ಅಪ್ ಟು ೬೦೦ ಎ.ಡಿ. (ಮದ್ರಾಸು, ೧೯೨೯), ಪು. ೪ ಮತ್ತು ಇವರ ಲೇಖನ `ಎನ್‌ವೈರನ್‌ಮೆಂಟ್ ಅಂಡ್ ಕಲ್ಚರ್`, ತ್ರಿವೇಣಿ ೧-೩, (ಮದ್ರಾಸು, ೧೯೨೮), ಪು. ೭೨. ರಾಮಚಂದ್ರ ದೀಕ್ಷಿತರ್, ವಿ. ಆರ್., ಸ್ಟಡೀಸ್ ಇನ್ ತಮಿಳ್ ಲಿಟರೇಚರ್ ಅಂಡ್ ಹಿಸ್ಟರಿ, (ಮದ್ರಾಸು, ೧೯೩೬), ಪು. ೭೮. ಜ್ವಲೆಬಿಲ್, ಕೆ., `ತಮಿಳ್ ಪೊಯಟ್ರಿ ೨೦೦೦ ಇಯರ್ಸ್ ಅಗೋ`, ತಮಿಳ್ ಕಲ್ಚರ್ X-2, (ಮದ್ರಾಸು, ೧೯೬೦). ಕಾರ್ತಿಗೇಸು ಶಿವತಂಬೀ, ಸ್ಟಡೀಸ್ ಇನ್ ಏನ್ಷಿಯಂಟ್ ತಮಿಳ್ ಸೊಸೈಯಿಟಿ : ಇಕೊಲಜಿ, ಇಕಾನಮಿ, ಸ್ಟೇಟ್ ಫಾರ್ಮೇಶನ್, (ಚೆನ್ನೈ, ೧೯೯೮); ಪು. ೧೫-೧೯, ೯೨-೧೦೦; ಈ ಗ್ರಂಥದಲ್ಲಿಯ `ಶಂಕಂ ಲಿಟರೇಚರ್ ಅಂಡ್ ಆರ್ಕಿಯಾಲಜಿ`ಯ ಅಧ್ಯಾಯ ವಿಶೇಷ ಗಮನಾರ್ಹ, (ಪು. ೯೭-೧೦೦). ವೆಂಕಟ ಸುಬ್ರಮಣಿಯನ್, ಟಿ.ಕೆ., ಎನ್‌ವೈರನ್‌ಮೆಂಟ್ ಅಂಡ್ ಅರ್ಬನೈಜೇಷನ್ ಇನ್ ಅರ್ಲಿ ತಮಿಳಕಂ, (ತಂಜಾವೂರು, ೧೯೮೮), ಪು. ೧೩, ೨೩-೨೫, ೩೬ ಮುಂ.

೧೦. ತೊಲ್ಕಾಪ್ಪಿಯಮ್-ಪೊರುಲತಿಕರಮ್ (ನಚ್ಚಿ) ಪು. ೬; ಇಳಂಪುರಮ್, ಪು. ೨೦-೨೧. ತುರೈ ಅರಂಕಸಮ್ಮೆ ಶಂಕಕಾಲತ್ ಶಿರುಪ್ಪುಪೆಯರ್ಕಲ್, ಪಾರಿ ನಿಲಯಮ್, (ಮದ್ರಾಸು, ೧೯೯೦). ಪು. ೨೦೨-೩೪೧. ಪುನರ್ ಉಲ್ಲೇಖ– ಕಾರ್ತಿಗೇಸು ಶಿವತಂಬೀ, ಅದೇ., ಪು. ೧೩. ಅ.ಟಿ. ೩೬-೩೭ ಮತ್ತು ಪು. ೧೧-೧೨

೧೧. ಅದೇ., ಪು. ೧೨, ೧೫; ೧೭-೧೮. ಮುರುಗನ್, ಅದೇ., ೯೬೦-೬೧, ೯೯೪. ಅಲ್ಲದೆ ಸೂತ್ರ ೯೬೬-೬೭ (ಪು. ೩೭೯)ಗಳಲ್ಲಿಯ `ದೈವ, ಆಹಾರ, ಪಶು, ಪಕ್ಷಿ, ಕೋಲು, ಕೊಳಲು, ಕಸುಬುಗಳು ಒಂದು ಪ್ರದೇಶದ ವೈಶಿಷ್ಟ್ಯವನ್ನು ರೂಪಿಸುವುವು' ಎಂಬ ಮಾತು ಅತ್ಯಂತ ಗಮನಾರ್ಹ.

೧೨. ಪೊರುವರ್-ಆಮ್ರಪದಿ ೨೧೮-೨೩೬; ಮಲೈಪಟುಕಟಮ್, ೩೩೧-೩೩೪. ತಣಿನಾಯಗಮ್ ಝೇವಿಯರ್, ಎಸ್., ಲ್ಯಾಂಡ್‌ಸ್ಕೇಪ್ ಅಂಡ್ ಪೊಯಟ್ರಿ : ಎ ಸ್ಟಡಿ ಆಫ್ ನೇಚರ್ ಇನ್ ಕ್ಲಾಸಿಕ್ ತಮಿಳ್ ಪೊಯಟ್ರಿ, (ಚೆನ್ನೈ, ೧೯೯೭), ಪು. ೬೧-೬೨

೧೩. ಶೊಲ್. ೪೦೦. ನಣ್ಣೂಲ್, ೨೭೩. ಶಂಕರ ನಮಶ್ಶಿವರ್ ಟೀಕೆ, ಪು. ೨೫೫; ತಿರುನಾವಕ್ಕರಸು, ಅದೇ., ಪು. ೪೩-೪೬, ಅ.ಟಿ. ೮. ಕಾರ್ತಿಗೇಸು ಶಿವತಂಬೀ, ಅದೇ., ಪು. ೧೩, ಅ.ಟಿ. ೩೭. ಇಂದಿನ ತಮಿಳು ಸಮುದಾಯಗಳಲ್ಲಿ ಕಸಬು ಆಧರಿತ ವೆಳ್ಳಾಳ (ಕೃಷಿಕ), ಕರೈಯಾರ್ (ಕರಾವಳಿಯ ಮೀನುಗಾರ), ಪಳ್ಳರ್ (ಘಟ್ಟದ ಕೆಳಗಿನ ಕೃಷಿ ಶ್ರಮಿಕ)ಗಳನ್ನು ಇಲ್ಲಿ ನಿದರ್ಶಿಸಬಹುದು.

೧೪. ಮುರುಗನ್, ಅದೇ., ಪು. XXII-XXIII

೧೫. ಕುಱುಂತೊಗೈ, ಪ. ೧೪೪. ಪು. ೧೭೮; ಕಂದಸ್ವಾಮಿ, ಎಸ್. ಎನ್., ಅದೇ., ಪು. ೪೮

೧೬. ಮುರುಗನ್, ಅದೇ., ಪು. XXIII : 'ಪಣಂಪಾರಣಾರ್ ಸೊಣ್ಣತ್ತು'.

೧೭. ಈ ಟೀಕಾಕಾರ (ಉರೈಯಾಶಿರಿಯರ್)ರಲ್ಲಿ ಇಳಂಪೂರಣಾರ್, ಪೇರಾಶಿಯರ್, ತೆಯ್ವಶ್ಶಿಲೈಯಾರ್, ಕಲ್ಲಾಟನಾರ್ ಮತ್ತು ನಚ್ಚಿನಾರ್ಕ್ಕಿಣಿಯಾರ್ (ನಚ್ಚಿ) ಉಲ್ಲೇಖಾರ್ಹರು. ಇವರೆಲ್ಲಾ ಹೆಸರಾಂತರು ನಚ್ಚಿ. ಇವರ ಟೀಕಾಗ್ರಂಥಕ್ಕೆ, ನೋ., ಕನಕ್ಕೈಯರ್ (ಸಂ.) ತೊಲ್ಕಾಪ್ಪಿಯಮ್-ಪೊರುಳತಿಕಾರಂ-ನಚ್ಚಿನಾರ್ಕ್ಕಿಣಿಯಮ್, (ಚುನ್ನಕಂ, ೧೯೪೮), ಪು. ೬೧; ತೊಲ್ಕಾಪ್ಪಿಯಮ್-ಪೊರುಳತಿಕಾರಂ-

ಇಳಪ್ಪುರಣಮ್, (ಮದ್ರಾಸು. ೧೯೭೫). ಪು. ೨೦-೨೧. ಈ ಆಕರಗಳನ್ನು ಕಾರ್ತಿಗೇಸು ಶಿವತಂಬೀ ಯ (ಅದೇ., ಪು. ೧೩. ಅ.ಟಿ. ೩೬) ಗ್ರಂಥದಿಂದ ಪುನರ್ ಉಲ್ಲೇಖಿಸಲಾಗಿದೆ. ಈ ಉಲ್ಲೇಖಗಳ ಬಗ್ಗೆ ಚರ್ಚೆ ಮಾಡಲು ನನಗೆ ಅವಕಾಶ ಮಾಡಿಕೊಟ್ಟು, ನನ್ನ ತಿಳುವಳಿಕೆಯನ್ನು ಹೆಚ್ಚಿಸಿದ, ಇಬ್ಬರು ಮಿತ್ರರನ್ನು ನಾನು ಪ್ರೀತ್ಯಾದರದಿಂದ ನೆನೆಯಬೇಕು. ಅವರಲ್ಲಿ ಒಬ್ಬರು ಚೆನ್ನೈನ ಡಾ. ಆರ್. ನಾಗಸ್ವಾಮಿ (ನಿವೃತ್ತ ನಿರ್ದೇಶಕರು, ತಮಿಳುನಾಡು ಡಿಪಾರ್ಟ್‌ಮೆಂಟ್ ಆಫ್ ಆರ್ಕಿಯಾಲಜಿ, ಮತ್ತು ತಮಿಳು ಭಾಷಾ ಪಂಡಿತರು); ಇನ್ನೊಬ್ಬರು ದಿ ಫೈವ್ ಆಂಥೋಲೋಜೀಸ್ ಗ್ರಂಥದ ಕರ್ತೃವೂ ಶಂಗಂ ಸಾಹಿತ್ಯದ ಹೆಸರಾಂತ ಸ್ಕಾಟಿಷ್ ಸಂಶೋಧಕರಾದ ಮಾರ್ರ್, ಜೆ. ಆರ್. ಡಾ. ಮಾರ್ರ್‌ರವರು ಇತ್ತೀಚೆಗೆ ಭಾರತಕ್ಕೆ ಬಂದಾಗ (೨೦೦೫, ಫೆಬ್ರವರಿ) ಹಲವಾರು ಘಂಟೆಗಳ ಕಾಲ ನನ್ನೊಡನೆ ಚರ್ಚಿಸುವ ಕೃಪೆ ತೋರಿದರು.

೧೮. ಪುರ. ೬೨, ಸಾ. ೭, ಪತ್ತು. : ಮದುರೈಕಚ್ಚಿ, ಸಾ. ೭೦-೭೪; ಶಿಲಪ್ಪದಿಕಾರಂ VI. ಕಡಲಾದು ಕಾದೈ, ಸಾ. ೨೮-೩೧; ವೇಣರ್‌ಕಾದೈ, ಸಾ. ೧-೪

೧೯. ಶಿಲಪ್ಪದಿಕಾರಂ-ವೇಣರ್‌ಕಾದೈ, ಸಾ. ೧೭-೨೨

೨೦. ಅದೇ., ಕಟ್ಟುರೈಕಾದೈ XXII; ಮದುರೈಕ್ಕಂಡಂ ಸಾ. ೧೩-೨೨

೨೧. ವೆಂಕಟ ಸುಬ್ರಮಣಿಯನ್, ಟಿ.ಕೆ., ಅದೇ., ಪು. ೫೫

೨೨. ಅಹನಾ. ಕಟುಜ್ರಿಯಾನೈನಿರೈ ೮೫, ಸಾ. ೯; ಮಣಿಮಿಡಿಪವಳಂ ೩೬೫, ಸಾ. ೧೮-೨೦, ೩೯೯, ಸಾ. ೧೬-೧೮.

೨೩. ಪುರಂ. ೩೮೫, ಸಾ. ೧೧, ೩೮೯, ಸಾ. ೧೧; ಕಟುಜ್ರಿಯಾನೈನಿರೈ ೨೭, ಸಾ. ೬

೨೪. ಕುರುಂ. ೧೧; ಮಣಿಮಿಡಿಪವಳಂ, ೨೧೧, ಸಾ. ೭-೮, ೩೯೩, ಸಾ. ೧೮-೨೦, ೩೮೯, ಸಾ. ೧೬-೧೮; ಸುಬ್ರಹ್ಮಣಿಯನ್, ಎನ್., ಅದೇ. ಪು. ೧೦೮, ೧೧೬-೧೧೭

೨೫. ಮಣಿಮೇಖಲೈ V, ಸಾ. ೪೦, ಇದರಂತೆ ಇವರು ವಿಚಿತ್ರ ಭಾಷೆಯನ್ನಾಡುವ ಜನಾಂಗವೆಂದು ಶಿಲಪ್ಪದಿಕಾರಂ VI, ಸಾ. ೧೪೩ ನಲ್ಲಿ ಉಲ್ಲೇಖಿಸಲಾಗಿದೆ.

೨೬. ಅ. ಟಿ. ೩ ನೋಡಿ.

೨೭. ಕರ್ನಾಟಕ-ಆಂಧ್ರದಲ್ಲಿ ಅಶೋಕನು ಬರೆಸಿದ ಶಾಸನ ಮತ್ತು ಅವುಗಳ ವಿಶೇಷತೆಗೆ ನೋಡಿ, ಎಸ್. ಶೆಟ್ಟರ್, ಫುಟ್ ಪ್ರಿಂಟ್ಸ್ ಆಫ್ ಆರ್ಟಿಜಾನ್ಸ್ ಇನ್ ಹಿಸ್ಟರಿ : ಸಮ್ ರಿಫ್ಲೆಕ್ಷನ್ಸ್ ಆನ್ ಅರ್ಲೀ ಆರ್ಟಿಜಾನ್ಸ್ ಆಫ್ ಇಂಡಿಯಾ (ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ೬೪ ನೆಯ ವಾರ್ಷಿಕ ಅಧಿವೇಶನದ ಸರ್ವಾಧ್ಯಕ್ಷ ಭಾಷಣ, ಮೈಸೂರು, ೨೦೦೩), ಪು. ೧-೪೮

೨೮. 'ಎರುಮೈ ಕುಟನಾಟು' (ಅಹ. ೧೧೫-೫), 'ಎರುಮೈ ನಲ್‌ನಾಟು' (ಅದೇ., ೨೫೩, ೧೯), 'ಎರುಮೈಯೂರನ್' (ಅದೇ., ೩೬, ೧೭) ಎಂಬ ಉಲ್ಲೇಖಗಳಲ್ಲದೆ, ಇದು ತಮಿಳಹಂನ ಪಶ್ಚಿಮ(ಬಹುಶಃ ಉತ್ತರ-ಪಶ್ಚಿಮ)ಕ್ಕಿದ್ದು ಅಯಿರಿನದಿಯಿಂದ ನೀರುಣ್ಣುವ ಪ್ರದೇಶವೆಂದೂ ಅದನ್ನು ಮಟುಕರ ನಾಯಕನೊಬ್ಬ ಆಳುತ್ತಿದ್ದುದನ್ನೂ (ಅದೇ., ೨೫೩; ೧೮-೨೦) ವರ್ಣಿಸಲಾಗಿರುವುದಲ್ಲದೇ, ಕ್ರಿ.ಶ. ೧ ನೆಯ ಶತಮಾನದ ಸಿತ್ತನ್‌ವಾಸಲ್ ತಮಿಳುಬ್ರಾಹ್ಮೀ ಶಾಸನದಲ್ಲಿಯೂ ಇದು ಉಲ್ಲೇಖಿಸಲ್ಪಟ್ಟಿದೆ. ಈ ಆಧಾರಗಳ ಮೇಲೆ ಇದನ್ನು ಶಾಸನಿತ ಪ್ರಪ್ರಥಮ ಕನ್ನಡ (ಕಾವೇರಿ ಉಗಮದ) ಪ್ರದೇಶವೆಂದು ನಾವು ಭಾವಿಸಬಹುದು. ಇದರ ಹೆಚ್ಚಿನ ವಿವರಗಳನ್ನು ನನ್ನ ಮುಂದಿನ ಲೇಖನ ದ್ರಾವಿಡ ಸಂಬಂಧ-೪ ರಲ್ಲಿ ನೋಡಬಹುದು.

೨೯. ನೋ. ದ್ರಾವಿಡ ಸಂಬಂಧ-೩– ಸಂಕಲನ ೨೨.

೩೦. ಪದಿಟು. II-೨೦; ಕಲಿತ್ತೊಗೈ, II ೫, ೩೯೮, ಪುಜಿ. ೬, ೧೩೭; ಶಿಲಪ್ಪದಿಕಾರಂ-ವಸ್ಸಾ II, ೨೪೭-೨೫೫. ಅಲ್ಲದೆ ನೋ. ಪದಿಟ್ರು. II-ಪದಿಹಂ; ಪುರನಾ. ೧೧. ೧-೨, ೧೩೨. ಸಾ. ೭-೯ ಹೋಲಿಸಿ ನೋ. ಸುಬ್ರಹ್ಮಣಿಯನ್, ಎನ್., ಅದೇ. ಪು ೪೨, ೧೨೨

೩೧. ಶಿಲಪ್ಪದಿಕಾರಂ XXIII, ಕಟ್ಟುರೈಕಾದೈ-ಅಜ್ಜಿಡುಕದೈ; ಸುಬ್ರಹ್ಮಣಿಯನ್, ಎನ್., ಅದೇ., ಪು. ೨೦೨.

೩೨. ಪತ್ತು. ಮದುರೈಕಾಂಜ್ಞಿ, ಸಾ. ೭೦-೭೪; ಸುಬ್ರಹ್ಮಣಿಯನ್, ಎನ್., ಅದೇ., ಪು. ೧೬೯.

೩೩. ಪುಜಿ. ೫೧, ೧೦೯, ೧೨೯, ೧೬೭

೩೪. ಶಿಲಪ್ಪದಿಕಾರಂ, ಪು. ೧೬೨

೩೫. ಅದೇ., ನೂರ್‌ಕುಟ್ಟುರೈ ೧೧.೧,೨; ಸುಬ್ರಹ್ಮಣಿಯನ್, ಎನ್., ಅದೇ., ಪು. ೪೦೩

■ ಡಾ. ಷ. ಶೆಟ್ಟರ್ : ಡಾ. ಎಸ್. ರಾಧಾಕೃಷ್ಣನ್ ಸಂದರ್ಶಕ ಪ್ರಾಧ್ಯಾಪಕ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಐಐಎಸ್‌ಸಿ ಕ್ಯಾಂಪಸ್, ಬೆಂಗಳೂರು - ೫೬೦ ೦೧೨ ■

ವೈ. ಬಿ. ಹಾಲಬಾವಿ

೧. ಮನಃಶಾಂತಿ ಕದಡಿರುವಲ್ಲಿ

ಪ್ರೀತಿಯ ಒರತೆ ಬತ್ತಿ ಹೋಗಿದೆ ಗೆಳೆಯ ಇಲ್ಲಿ
ಭಯದ ಬೀಜಗಳೇ ನಮ್ಮ ಮಧ್ಯೆ ಬಿತ್ತಿರುವಲ್ಲಿ
ಶುದ್ಧ ಸ್ನೇಹ ಮಮತೆಗೀಗ ಬರ ಬಂದಿದೆಯಿಲ್ಲಿ
ಮಧುರ ಮಾತುಗಳೇ ಅರ್ಥ ಕಳೆದುಕೊಂಡಿರುವಲ್ಲಿ
ನಗೆ-ನಲಿವುಗಳೀಗ ನಿಂದು ಹೋಗಿವೆಯಿಲ್ಲಿ
ದ್ವೇಷ-ಅಸೂಯೆ ಹೊಗೆಯಾಡುತಿರುವಲ್ಲಿ
ಅಂತಃಕರಣವೇ ಮುರುಟಿ ಹೋಗಿದೆಯಿಲ್ಲಿ
ಹಿಂಸೆ, ಕ್ರೌರ್ಯಗಳೇ ನೆಲೆಯೂರಿರುವಲ್ಲಿ
ಸತ್ಯ ಈಗ ಸತ್ತು ಸಮಾಧಿಯಾಗಿದೆಯಿಲ್ಲಿ
ಸುಳ್ಳುಗಳೇ ತಮ್ಮ ಕಾರಸ್ಥಾನ ಮಾಡುತ್ತಿರುವಲ್ಲಿ
ನೆಮ್ಮದಿಯ ವಾತಾವರಣ ಈಗ ಇಲ್ಲವಾಗಿದೆಯಿಲ್ಲಿ
ಮೋಸ, ವಂಚನೆ, ದಗಾಕೋರರೇ ತುಂಬಿರುವಲ್ಲಿ
ಶಾಂತಿಯ ಬದುಕು ತಲ್ಲಣಗೊಂಡಿದೆಯಿಲ್ಲಿ
ಅಶಾಂತಿ, ಅರಾಜಕತೆಗಳೇ ತಾಂಡವವಾಡುತ್ತಿರುವಲ್ಲಿ
ಸಹನೆ, ಸಮಾಧಾನ ಕಳೆದು ಹೋಗಿವೆಯಿಲ್ಲಿ
ಗೋಜು ಗೊಂದಲಗಳೇ ಮನೆ ಮಾಡಿರುವಲ್ಲಿ
ಜ್ಞಾನ, ಧ್ಯಾನದ ಸೆಲೆಗಳು ಹಿಂಗಿ ಹೋಗಿವೆಯಿಲ್ಲಿ
ಅಜ್ಞಾನ, ಮೂಢನಂಬಿಕೆಗಳು ಇನ್ನೂ ಜೀವಂತವಾಗಿರುವಲ್ಲಿ
ಮಾನವೀಯತೆ ತನ್ನ ಮಹತ್ವ ಕಳೆದುಕೊಂಡಿದೆಯಿಲ್ಲಿ
ಜಗದೆದೆಯ ಬಗೆವ ಯುದ್ಧ ಕಾರ್ಮೋಡಗಳೆ ಕವಿದಿರುವಲ್ಲಿ
ಮೌನವೀಗ ಮಾಯವಾಗಿದೆ ಈ ಜನನಿಬಿಡ ಕಾಡಿನಲ್ಲಿ
ಸದಾ ಸದ್ದು ಗದ್ದಲದಿ ಮನಃಶಾಂತಿ ಕದಡಿರುವಲ್ಲಿ

೨. ಸರಹದ್ದಿನ ಜಾಡು ಹಿಡಿದು

ನೆತ್ತಿಯ ತುಂಬ ನೆತ್ತರು ಕಾರಿ
ಉದಯವಾಗುತ್ತಾನೆ ಸೂರ್ಯ
ಸದ್ದುಗದ್ದಲದ ಸರಹದ್ದಿನ ಜಾಡು ಹಿಡಿದು;
ಸಿಡಿಮದ್ದು ಸಿಡಿಯದ ದಿನಗಳಿಲ್ಲ
ಹಗಲುಗಳು ತುಂಬ ಕ್ರೂರ!
ಬೆಟ್ಟ, ಕಾಡು, ಕಂದಕ, ಕಣಿವೆಗಳಲ್ಲಿ
ಬರೀ ಶವಗಳ ಸುಟ್ಟ ವಾಸನೆ!

ಹಾಡೇ ಹಗಲು ಪಾತಕಿಗಳ ತುಪಾಕಿಗೆ
ಹತ್ಯಾಕಾಂಡ, ರಕ್ತಪಾತ ಅಮಾಯಕರ ಬಲಿ
ನಿತ್ಯ ಮಾರಣ ಹೋಮ ಮಾರಿ ಹಬ್ಬ!

ಸಂಜೆ, ಸೂತಕದ ಮನೆಯಿಂದ
ಸಾವಿನ ಸುಳಿವು ಹಿಡಿದು ಧಾವಿಸುತ್ತಾನೆ ಚಂದ್ರ
ಬೆಳದಿಂಗಳ ನಂಜು ಕಾರಿ!

ಇರುಳ ತೆರೆ-ಮರೆಯ ಹಿಂದೆ
ಪಾಪಿಗಳ ಪಾತಕೀತನ
ಬಂಡುಕೋರರು, ಭಯೋತ್ಪಾದಕರು
ಎಲ್ಲಾ ರಕ್ತ ಹೀರುವ ರಕ್ಕಸರು
ಬದುಕು ತತ್ತರಿಸಿದೆ!

ಹೀಗೆಯೇ..., ಜಾರಿದ ಹಗಲುಗಳಲ್ಲಿ
ಕಳೆದ ಇರುಳುಗಳಲ್ಲಿ ಇಟ್ಟವರ್ಯಾರು ಸತ್ತವರ ಲೆಕ್ಕ?
'ಬೇಲಿ' ತುಂಬೆಲ್ಲಾ ಈಗ ರಕ್ತದ ಕಲೆಗಳೇ!

ಸರಹದ್ದಿಗೂ ಸುಳಿಯಬಹುದೇನೋ ಹೊಸ ಗಾಳಿ
ನಿಲ್ಲಬಹುದೇ ಶತ್ರುಗಳ ದಾಳಿ
ಮೂಡಬಹುದೇ ಹೊಸ ಬೆಳಕ ಹಗಲು
ಕಾದು ನೋಡಬೇಕಾಗಿದೆ ಕದನಗಳಿಲ್ಲದ ದಿನಗಳನ್ನು!

■ ವೈ. ಬಿ. ಹಾಲಬಾವಿ, # ೫/೨೫೮, ರಾ. ಶಾ. ವಿ. ಕೇಂದ್ರ, ಶಕ್ತಿನಗರ-೫೮೪ ೧೭೦ (ರಾಯಚೂರು) ■

ದೇವತೆಗಳ ಪುಟ್ಟ ಗಂಟೊಳಗೆ — ಆರ್. ಪವಿತ್ರ ಪ್ರಿಯಭಾಷಿಣಿ

ಅಟ್ಟಂಬಟ್ಟೆ ಕೋಳಿ ಮೊಟ್ಟೆ
ಚಾಳಿ ಟೂಟೂಟೂ
ಸಂಗ ಕಟ್ಟೆ ಮಹರಾಯಿತಿ
ಗುಡುಗುಡು ಮಲ್ಲಜ್ಜ ಎಂದೊಡನೆ
ಓಡಿಹೋದೆ ಅಟ್ಟದ ಗುಂಟ.
ಅವ್ವ ಅಪ್ಪಚ್ಚಿ ಅಮ್ಮ ಅಪ್ಪಚ್ಚಿ
ಅಂತ ತೆಕ್ಕೆಯಲಿ ನಲಿದಾಡುತಿದ್ದೆ

ಹುಣುಸೆ ಪಿಕ್ಕದ ಅಳಿಗುಳಿ ಮಣೆ,
ಧೂಳೆಬ್ಬಿಸುತ ಕುಂಟೋ ಬಿಲ್ಲೆ,
ಮೂಗು ಚಿವುಟುವ ಆಟ.

ಮೂರು ಹೊತ್ತು ಆಗುವುದರೊಳಗೆ
ಏಳು ಮನೆ ಚೌಕಾಬಾರಾ
ಬಯ್ಯೋದಿಲ್ಲ ನಾ
ನೀ ಬೀಳಿಸಿದರೂ ಆರರ ಗರ.

"ಅಚ್ಚಚ್ಚು ಬೆಲದಚ್ಚು
ಅಲ್ಲಿ ನೋಡು ಇಲ್ಲಿ ನೋಡು
ಸಂಪಂಗಿ ಮರದಲಿ ಗುಂಪು ನೋಡು"
ಕಾಣೆ ಕಾಗೆ ಗುಂಪು
ಮಾತಿನ ಮಲ್ಲಿ ಚಿನಕುರುಳಿ ಆಲಿಸಿದ
ಬೆಂಕಿ ಪೊಟ್ಟಣದ ಜೀರುಂಡೆ ಗುಂಯ್
ಈಗ ಬರಿಯ ಗುನುಗು
ಚಟ್ಟ ಮಾಡಿ ನೊಣಕೆ ಪಟ್ಟ ಕಟ್ಟಿ
"ವೈದೇಹಿ ಏನಾದಳೋ...
ಎಂದು ದುಃಖಿಸಿದ ಒಡನಾಡಿ
ನನ್ನ ಅಮಟೆಗೆ ಓಗೊಡಲು
ಉಡುಗಿದೆಯಾ ದನಿ?

ಕಣ್ಣಾಮುಚ್ಚೆ ಕಾಡೆಗೂಡೆ
ಉರುಳೇ ಹೋಯ್ತು ಉದ್ದಿನ ಮೂಟೆ
ನಮ್ಮಯ ಹಕ್ಕಿ ನಿಮ್ಮಯ ಹಕ್ಕಿ
ಬಿಟ್ಟೆ ಬಿಟ್ಟೆ, ಎಲ್ಲರೂ ಬಚ್ಚಿಟ್ಟುಕೊಂಡಿರಾ?
ಇರಬೇಕು ಕಳ್ಳಿ ಇಲ್ಲೇ...
ಮಾವಿನ ತಳಿರಾಗಿ
ಮುಂಗಾರ ಮಳೆ ಮಣ್ಣ ವಾಸನೆಯಾಗಿ
ಕಾಡುವಳಿಗೆ ಪುರುಸೊತ್ತೆ ಇಲ್ಲಂತೆ

ಹೋಗಲಿ ಬಿಡಮ್ಮ
ಒಮ್ಮೆಯಾದರೂ ಆಗುವ
ನಾನು ತಿಪ್ಪಿನಗಟ್ಟಮ್ಮ
ನೀನು ಬರಗೇರಮ್ಮ.*

* ತಿಪ್ಪಿನಗಟ್ಟಮ್ಮ-ಬರಗೇರಮ್ಮ : ಚಿತ್ರದುರ್ಗದ ದೇವತೆಗಳು. ಒಬ್ಬರ ಮೇಲೊಬ್ಬರು ಮುನಿಸಿಕೊಂಡ ಅಕ್ಕ ತಂಗಿಯರು. ವರ್ಷಕ್ಕೊಮ್ಮೆ ಮಾತ್ರ ಭೇಟಿಯಾಗುತ್ತಾರೆ.

■ ಆರ್. ಪವಿತ್ರ ಪ್ರಿಯಭಾಷಿಣಿ, D/o. ಟಿ. ಆರ್. ರಾಧಾಕೃಷ್ಣ,
'ಆತ್ಮೀಯ', # ೨೭೦-ಎ, ಫಿಲ್ಟರ್ ಹೌಸ್ ರಸ್ತೆ, ಚಿತ್ರದುರ್ಗ-೫೭೭ ೫೦೧ ■

ಕೀರ್ತಿನಾಥ ಕುರ್ತಕೋಟಿ :
ಅಭಿಜಾತ ಪ್ರತಿಭೆ ಮತ್ತು ಸ್ವಂತಿಕೆಯ ಚಡಪಡಿಕೆ

ಸಿ. ಎನ್. ರಾಮಚಂದ್ರನ್

ಕುರ್ತಕೋಟಿಯವರನ್ನು ಕುರಿತ ನನ್ನ ಎರಡು ಅನುಭವಗಳನ್ನು ದಾಖಲಿಸಿ ಮುಂದುವರಿಯುತ್ತೇನೆ. ಮೊದಲನೆಯದು ಅಪರೂಪವಾಗಿ ಮೈಸೂರಿನ ಧ್ವನ್ಯಾಲೋಕದ ವಿಚಾರ ಸಂಕಿರಣದಲ್ಲಿ ಕುರ್ತಕೋಟಿಯವರು ಭಾಗವಹಿಸಿದಾಗಿನ ಅನುಭವ– ಪ್ರಾಯಃ, ಹತ್ತು ವರ್ಷಗಳ ಹಿಂದೆ. ಅಂದು (ಸಂಕಿರಣದ ಮುಖ್ಯ ವಿಷಯವು ಮರೆತುಹೋಗಿದೆ) ಸಿಡಿಎನ್ ಅವರ ಮುಖ್ಯ ಭಾಷಣದ ಧ್ವನಿಯನ್ನನುಸರಿಸಿ, ಒಂದಿಬ್ಬರು ಇಂಗ್ಲೀಷ್‌ನ ಡನ್ ಕವಿಯ ಬಗ್ಗೆ ತಮ್ಮ ಪ್ರಬಂಧವನ್ನು ಮಂಡಿಸುತ್ತಾ, ಡನ್ ಹೇಗೆ ಕವಿಯೇ ಅಲ್ಲ ಮತ್ತು ಅವನ ಪ್ರಸಿದ್ಧ 'ವಿಟ್' ಎಂದು ನಾವು ಕೊಂಡಾಡುವುದು ಕೇವಲ ಬಾಲಿಶ ಆಟ ಇತ್ಯಾದಿಯಾಗಿ ವಾದಿಸಿದ್ದರು. ಊಟದ ಸಮಯದಲ್ಲಿ, ಕುರ್ತಕೋಟಿಯವರೊಡನೆ ಮಾತನಾಡುತ್ತಾ, ಹಿರಿಯ ಕವಿಯನ್ನು ಕುರಿತ ಈ ಬಗೆಯ ಅವಹೇಳನ ಎಷ್ಟು ಅಸಹನೀಯ ಎಂಬ ಧಾಟಿಯಲ್ಲಿ ಅವರೊಡನೆ ಮಾತನಾಡಲು ಪ್ರಾರಂಭಿಸಿದೆ. ಕೂಡಲೇ ಅವರು ಅನಿರೀಕ್ಷಿತರಾಗಿ ಉದ್ವಿಗ್ನರಾಗಿ, "ಡನ್ ಕವಿಯ ಅವಹೇಳನ ನಿಮಗೆ ಇಷ್ಟು ನೋವನ್ನುಂಟು ಮಾಡಿದೆಯಲ್ಲ; ಅದೇ ಬಗೆಯ ಅವಹೇಳನ ಕುಮಾರವ್ಯಾಸನ ಬಗ್ಗೆ ಆದಾಗ ನಿಮಗೇಕೆ ಯಾವ ಬಗೆಯ ನೋವೂ ಉಂಟಾಗುವುದಿಲ್ಲ?" ಎಂದು ಪ್ರಶ್ನಿಸಿದರು. ನನಗೆ ಅವರ ಪ್ರತಿಕ್ರಿಯೆಯ ಹಿನ್ನೆಲೆ ಸ್ವಲ್ಪವೂ ಗೊತ್ತಾಗದೆ (ನಾನೇನೂ ಅಂದಿಗೆ ಕುಮಾರವ್ಯಾಸನ ಬಗ್ಗೆ ಏನೂ ಬರೆದಿರಲಿಲ್ಲ) ಸ್ವಲ್ಪ ಕಸಿವಿಸಿ ಉಂಟಾಯಿತು. ಅವರಿದ್ದ ಮನಃಸ್ಥಿತಿಯಲ್ಲಿ ಮುಂದೇನೂ ಚರ್ಚೆ ನಡೆಯಲಿಲ್ಲ ಎಂದು ನೆನಪು.

ಎರಡನೆಯ ಅನುಭವ ಇತ್ತೀಚೆಗೆ ಕೆಲವು ತಿಂಗಳ ಹಿಂದೆ ಕುಮಾರವ್ಯಾಸನ ಬಗ್ಗೆ ಶಿವಮೊಗ್ಗೆಯಲ್ಲಿ ನಡೆದ ವಿಚಾರ ಸಂಕಿರಣದ ಸಂದರ್ಭದಲ್ಲಿ ಆದದ್ದು. ಎರಡು ದಿನಗಳ ಆ ಕಾರ್ಯಕ್ರಮದಲ್ಲಿ ಕುರ್ತಕೋಟಿಯವರದು ಮುಖ್ಯ ಭಾಷಣ. ಕುಮಾರವ್ಯಾಸನ ಭಾಷೆಯ ಧ್ವನಿ ಸಾಮರ್ಥ್ಯ, ಅವನ ಕಾವ್ಯದಲ್ಲಿ ಕಂಡುಬರುವ ಶಬ್ದಾರ್ಥಗಳ ಅವಿಚ್ಛಿನ್ನತೆ, ಘಟನೆಗಳ ಸಾಂಕೇತಿಕತೆ ಇತ್ಯಾದಿಗಳನ್ನು ಕುರಿತು ಅವರು ಸುಮಾರು ೪೫ ನಿಮಿಷಗಳ ಕಾಲ ನಿರರ್ಗಳವಾಗಿ ಮಾತನಾಡಿದರು. ಅವರ ಅಸ್ಖಲಿತ ವಾಕ್ಪಟುತ್ವ, ಅಗಾಧ ಸ್ಮರಣಶಕ್ತಿ, ಕುಮಾರವ್ಯಾಸನ ಕಾವ್ಯದ ಬಗ್ಗೆ ಅವರಿಗಿದ್ದ ಪ್ರೀತಿ– ಇವುಗಳು ನಮ್ಮನ್ನು ಮಂತ್ರಮುಗ್ಧವಾಗಿಸಿದುವು. ಅವರ ಭಾಷಣವಾದ ಬಹಳಷ್ಟು ಸಮಯದ ನಂತರವೇ ಕುಮಾರವ್ಯಾಸನಲ್ಲಿ ಇಂದು ನಮಗೆ ಕಂಡುಬರಬಹುದಾದ ಸಾಂಸ್ಕೃತಿಕ ಘರ್ಷಣೆಗಳು, ವ್ಯವಸ್ಥೆಯನ್ನು ಕುರಿತ ಅವನ ಪಾರಂಪರಿಕ ಚಿಂತನೆ ಇತ್ಯಾದಿಗಳ ಬಗ್ಗೆ ಕುರ್ತಕೋಟಿಯವರು ಏನೂ ಹೇಳಲಿಲ್ಲವಲ್ಲ ಎಂದು ನಮಗೆ ಅರಿವಾದುದು. ಅನಂತರ ನಡೆದ ಪ್ರಶ್ನೋತ್ತರ ಸಂದರ್ಭದಲ್ಲಿ ಒಬ್ಬರು, ತುಸು ಉದ್ಧಟ ಧಾಟಿಯಲ್ಲಿ, 'ನೀವು ಎರಡು ದಶಕಗಳ ಹಿಂದೆ ಹೇಳಿದ್ದನ್ನೇ ಇಂದೂ ಹೇಳುತ್ತಿದ್ದೀರಿ;

ಇತರ ವಿಮರ್ಶಕರು ಇತ್ತೀಚೆಗೆ ಮಾಡಿರುವ ಚಿಂತನೆಯ ಹಿನ್ನೆಲೆಯಲ್ಲಿ ನೀವು ಕುಮಾರವ್ಯಾಸನ ಬಗ್ಗೆ ಮರುಚಿಂತನೆ ನಡೆಸುವುದೇ ಇಲ್ಲವೆ?' ಎಂದು ಪ್ರಶ್ನಿಸಿದರು. ಕೋಪಗೊಂಡ ಕುರ್ತಕೋಟಿಯವರು, 'ಇತರ ವಿಮರ್ಶಕರು ಏನು ಹೇಳುತ್ತಾರೆಂಬುದರಲ್ಲಿ ನನಗೆ ಆಸಕ್ತಿಯಿಲ್ಲ; ನಾನು ಹೇಳುವುದು ನಿಮಗೆ ಇಷ್ಟವಾದರೆ ಕೇಳಿ, ಇಲ್ಲದಿದ್ದರೆ ಬಿಡಿ' ಎಂದುತ್ತರಿಸಿದರು.

• • •

ಪ್ರಾಯಃ, ಈ ಲೇಖನದಲ್ಲಿ ನಾನು ಹೇಳಲು ಬಯಸಿರುವುದೆಲ್ಲವನ್ನೂ ಈ ಎರಡು ಅನುಭವಗಳು ಧ್ವನಿಸುತ್ತವೆಯೆಂದು ಭಾವಿಸಿದ್ದೇನೆ.

ಕೀರ್ತಿನಾಥ ಕುರ್ತಕೋಟಿಯವರು ಕನ್ನಡದ ಪ್ರಮುಖ ಚಿಂತಕ-ವಿಮರ್ಶಕರಲ್ಲಿ ಒಬ್ಬರು. ಪ್ರಾಚೀನ ಹಾಗೂ ಅರ್ವಾಚೀನ ಕನ್ನಡ ಸಾಹಿತ್ಯದ ಬಗ್ಗೆ ಅವರು ಬರೆದಿರುವ ವಿಮರ್ಶಾ ಕೃತಿಗಳ ಸಂಖ್ಯೆ ೧೪; ಒಟ್ಟು ಕೃತಿಗಳು ೨೧. ಕುರ್ತಕೋಟಿಯವರ ಪ್ರತಿಭೆಗೆ ಇತರ ಆಯಾಮಗಳೂ ಇವೆ : ಅವರು ಸೃಜನಶೀಲ ಲೇಖಕರು ಮತ್ತು ಒಂದು ಪ್ರಭಾವೀ ಗ್ರಂಥಮಾಲೆಯ ಮುಖ್ಯ ಸಲಹಾಕಾರರು. ಮನೋಹರ ಗ್ರಂಥಮಾಲೆಯ ಸಲಹಾಕಾರರಾಗಿ ಅವರು (ಇಂದು ಪ್ರಸಿದ್ಧರಾಗಿರುವ) ಅನೇಕ ಹೊಸ ಅಲೆಯ ಲೇಖಕರನ್ನು ಬೆಳಕಿಗೆ ತಂದರು; ಗ್ರಂಥಮಾಲೆಯಿಂದ ಹೊರಬಂದ ಎಲ್ಲಾ ಕೃತಿಗಳಿಗೂ ಅವರು ಅರ್ಥಪೂರ್ಣ ಮುನ್ನುಡಿ/ಬೆನ್ನುಡಿಗಳನ್ನು ಬರೆದು ಆ ಕೃತಿಗಳಿಗೆ ಗಂಭೀರ ಪ್ರವೇಶವನ್ನು ಕಲ್ಪಿಸಿಕೊಟ್ಟರು. ಕನ್ನಡ ಭಾಷಿಕರೆಲ್ಲರಿಗೂ ಗೊತ್ತಿರುವಂತೆ ಕುರ್ತಕೋಟಿ ಅಸಾಧಾರಣ ವಾಗ್ಮಿಗಳು ಮತ್ತು ಅವರ ಸ್ಮರಣಶಕ್ತಿ ದಂತಕಥೆಯ ಸ್ವರೂಪವನ್ನು ಪಡೆದಿತ್ತು. ಕುಮಾರವ್ಯಾಸನನ್ನು ಕುರಿತ ಅವರ ಭಾಷಣಗಳನ್ನು ಕೇಳದವರು ಅಪರೂಪ; ಕೇಳಿ ಸುಲಭದಲ್ಲಿ ಮರೆಯುವವರು ಇನ್ನೂ ಅಪರೂಪ. ಇಂತಹ ವ್ಯಕ್ತಿಯ ಒಟ್ಟಾರೆ ಸಾಧನೆಯ ಸಮಗ್ರ ವಿಶ್ಲೇಷಣೆ ಈ ಲೇಖನದ ವ್ಯಾಪ್ತಿಯಲ್ಲಿ ಅಸಾಧ್ಯ. ಕುರ್ತಕೋಟಿಯವರ ಎಲ್ಲಾ ಬರಹಗಳ ಆಳದಲ್ಲಿರುವ ಒಂದೆರಡು ಪ್ರಮುಖ ಕಾಳಜಿಗಳನ್ನು ಮಾತ್ರ ಈ ಲೇಖನದಲ್ಲಿ ಗುರುತಿಸಲು ಪ್ರಯತ್ನಿಸಿದ್ದೇನೆ.

ಪ್ರಾಯಃ, ಒಂದು ಕೃತಿಯು ಓದುಗರ/ಕೇಳುಗರ ಮೇಲೆ ಮಾಡುವ ಪ್ರಭಾವಕ್ಕೆ ಆ ಕೃತಿಯೊಂದೇ ಕಾರಣವಲ್ಲದೆ ಆ ಕೃತಿಯು ಹೊರಬಂದ ಕಾಲದ ವೈಚಾರಿಕ/ಸಾಹಿತ್ಯಕ ವಾತಾವರಣವೂ ಕಾರಣವಾಗುತ್ತದೆ. ನಾನು ನಡೆದು ಬಂದ ದಾರಿಯಲ್ಲಿ ಕುರ್ತಕೋಟಿಯವರು ಬರೆದ ಸಮೀಕ್ಷಾ ಲೇಖನಗಳನ್ನು ಮೊದಲು ಓದಿದ್ದು ೧೯೬೧-೬೨ ರಲ್ಲಿ– ಮಿತ್ರರಾದ ವಸಂತ ದಿವಾಣಜಿಯವರೊಡನೆ, ಸೊಲ್ಲಾಪುರದಲ್ಲಿ. ಅಂದು ಆ ಲೇಖನಗಳು, ಆ ಲೇಖನಗಳ ಚೌಕಟ್ಟು ಮತ್ತು ಗೃಹೀತಗಳು, ಮತ್ತು ಆ ಲೇಖನಗಳ ತೀರ್ಮಾನಗಳು ನನ್ನಲ್ಲಿ ಉಂಟು ಮಾಡಿದ ಒಂದು ಬಗೆಯ ರೋಮಾಂಚನ, ಉದ್ವೇಗ, ಸಂತೋಷ ಇತ್ಯಾದಿಗಳನ್ನು ಇಂದು ಮತ್ತೆ ಅನುಭವಿಸಲು ಸಾಧ್ಯವೇ ಇಲ್ಲ. ಅಂದು ನಮಗೆ ಮುಖ್ಯವಾಗಿ ಕಂಡದ್ದು ಕುರ್ತಕೋಟಿಯವರು ದಾಖಲಿಸಿದ ಕುವೆಂಪು-ಅನಕೃ ಇತ್ಯಾದಿ ಅತ್ಯಂತ ಪ್ರತಿಷ್ಠಿತ ಲೇಖಕರ ಮಿತಿಗಳು. (ವಿಗ್ರಹಾರಾಧನೆಗಿಂತ ವಿಗ್ರಹಭಂಜನೆ ಯಾವಾಗಲೂ ಹೆಚ್ಚು ರೋಚಕವಾಗಿರುತ್ತದೆಂದು ಕಾಣುತ್ತದೆ.) ಕುರ್ತಕೋಟಿಯವರ ವಿದ್ವತ್ತಿನ ಆಳ, ಅಧ್ಯಯನದ ಹರವು, ಮತ್ತು ಅವರ

'ನೈತಿಕ ಸ್ಥೈರ್ಯ' ಇವುಗಳು ಅಂದು ಅಸ್ವಾಭಾವಿಕವಾಗಿ ಕಂಡಿದ್ದುವು. [ಪ್ರಾಯಃ, ಈ ಬಗೆಯ ಪ್ರತಿಕ್ರಿಯೆಯ ಹಿಂದೆ ಮಹಾರಾಜಾಸ್ ಕಾಲೇಜಿನ ಇಂಗ್ಲೀಷ್ ವಿಭಾಗದಲ್ಲಿ– ಮುಖ್ಯವಾಗಿ ಪ್ರೊಫೆಸರ್ ಸಿ ಡಿ ಎನ್ ಅವರಲ್ಲಿ– ಅಂದು, ೫೦ ರ ದಶಕದಲ್ಲಿ, ಕನ್ನಡ ಸಾಹಿತ್ಯದ ಬಗ್ಗೆ ಇದ್ದ ಉಪೇಕ್ಷೆ, ಎಲಿಯಟ್-ಲೀವಿಸ್ ಮುಂತಾದವರ ಬಗ್ಗೆ ಇದ್ದ ಆರಾಧನಾ ಭಾವ, ನವ್ಯ ಸಾಹಿತ್ಯವನ್ನು ಕುರಿತು ಅನಂತಮೂರ್ತಿ-ಅಡಿಗ ಮುಂತಾದವರ ಉತ್ಸಾಹಪೂರ್ಣ ಭಾಷಣ-ಚರ್ಚೆಗಳು, ಲಿಟರರಿ ಕ್ಲಬ್‌ನಲ್ಲಿ ನಡೆಯುತ್ತಿದ್ದ ವಾರ್ಷಿಕ 'ಮಿಲ್ಟನ್ ವಿಚಾರಣೆ'; ಇತ್ಯಾದಿ ಇದ್ದುವೆಂದು ಕಾಣುತ್ತದೆ. ಎಲಿಯಟ್-ಲೀವಿಸ್-ಸಿ ಡಿ ಎನ್-ಅನಂತಮೂರ್ತಿ ಮಿಲ್ಟನ್ ಬಗ್ಗೆ ಮಾಡುತ್ತಿದ್ದ ವಿಮರ್ಶೆಯೆಲ್ಲವನ್ನೂ ನಾನು (ಮತ್ತು ಪ್ರಾಯಃ ನನ್ನ ಪೀಳಿಗೆಯವರು) ಕುವೆಂಪು ಬಗ್ಗೆ ಭಾಷಾಂತರಿಸುತ್ತಿದ್ದೆವು.]

ಆದರೆ ಇಂದು ಅದೇ ಲೇಖನಗಳನ್ನು **ಯುಗಧರ್ಮ ಹಾಗೂ ಸಾಹಿತ್ಯದರ್ಶನ** ಎಂಬ ಹೆಸರಿನ ಕೃತಿಯಲ್ಲಿ ಓದುವಾಗ ಹೆಜ್ಜೆಹೆಜ್ಜೆಗೂ ಅದರ ಮಿತಿಗಳೇ ಕಂಡುಬರುತ್ತವೆ. ಈ ಕೃತಿ ಇಡೀ ಒಂದು ಪೀಳಿಗೆಯನ್ನು ಹೇಗೆ ಪ್ರಭಾವಿಸಿತು ಎಂದು ಆಶ್ಚರ್ಯವಾಗುತ್ತದೆ.

ಐವತ್ತು-ಅರವತ್ತರ ದಶಕಗಳಲ್ಲಿ ಇಂಗ್ಲೀಷ್ ಸಾಹಿತ್ಯದ ವಿದ್ಯಾರ್ಥಿಗಳಿಗೆ ಫ್ಯಾಷನಬಲ್ ಆಗಿದ್ದ ಇಂಗ್ಲೀಷ್ ಸಾಹಿತ್ಯದ 'ಲೆಗ್ವಿ ಕಜೇಮಿಯಾ ಹಿಸ್ಟರಿ', 'ಕೇಂಬ್ರಿಜ್ ಹಿಸ್ಟರಿ' ಇವುಗಳ ಮಾದರಿಯಲ್ಲಿ ರಚಿಸಲ್ಪಟ್ಟಿರುವ **ಯುಗಧರ್ಮ ಹಾಗೂ ಸಾಹಿತ್ಯದರ್ಶನ** ೨೦ ನೆಯ ಶತಮಾನದ ಮೊದಲ ಭಾಗದ ಕನ್ನಡ ಸಾಹಿತ್ಯದ ವಿಮರ್ಶಾತ್ಮಕ ಸಮೀಕ್ಷೆಯನ್ನು ಮಾಡಲು ಪ್ರಯತ್ನಿಸುತ್ತದೆ. ಆದರೆ, ಮೊದಲಿಗೇ ಕೃತಿಯ ಶೀರ್ಷಿಕೆಯಲ್ಲಿರುವ 'ಯುಗಧರ್ಮ' ಶಬ್ದ ಗೊಂದಲಕ್ಕೀಡುಮಾಡುತ್ತದೆ. ಇದು ಮಾರ್ಕ್ಸಿಸ್ಟ್ ಚಿಂತಕರು ಮಂಡಿಸುವ 'ಐಡಿಯಾಲಜಿ' ಅಲ್ಲ. ೧೯ ನೆಯ ಶತಮಾನದ ಉತ್ತರಾರ್ಧದಲ್ಲಿ ಹಿಪ್ಪೊಲಿಟ ಟೇನ್ ಮಂಡಿಸಿದ ಚಾರಿತ್ರಿಕ ವಿಮರ್ಶೆಯ ಮೂರು ಮಾನದಂಡಗಳಲ್ಲಿ ಒಂದಾದ 'ಮೀಲ್ಯ' (milieu) ಪರಿಕಲ್ಪನೆಗೆ ಹತ್ತಿರ ಬರುತ್ತದೆ. ಆದರೆ ತನ್ನ 'ಮೀಲ್ಯ' ಪರಿಕಲ್ಪನೆಯಲ್ಲಿ ಟೇನ್ ಬದಲಾಗುವ ಧಾರ್ಮಿಕ ಮೌಲ್ಯಗಳೊಡನೆ ಆರ್ಥಿಕ-ಸಾಮಾಜಿಕ ಸಂಬಂಧಗಳನ್ನೂ ಪರಿಗಣಿಸುತ್ತಾನೆ. ಆದರೆ ಕುರ್ತಕೋಟಿಯವರು 'ಯುಗಧರ್ಮ' ಪದವನ್ನು ಅತ್ಯಂತ ಸೀಮಿತ ನೆಲೆಯಲ್ಲಿ 'ಧಾರ್ಮಿಕತೆಯ ಬಗ್ಗೆ ಜನರ ಶ್ರದ್ಧೆ ಬದಲಾದ ಯುಗ' ಎಂಬ ಅರ್ಥದಲ್ಲಿ ಉಪಯೋಗಿಸುತ್ತಾರೆ.

ಯುಗಧರ್ಮ ಹಾಗೂ ಸಾಹಿತ್ಯದರ್ಶನದ ಪ್ರತಿ ಪುಟದಲ್ಲಿಯೂ ಆಧುನಿಕ ಯುಗದಲ್ಲಿ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಆಗುತ್ತಿರುವ ಕ್ರಾಂತಿಕಾರಕ ಬದಲಾವಣೆಗಳ ಬಗ್ಗೆ ಸಂದೇಹ, ಒಂದು ಸಹಸ್ರಮಾನದುದ್ದಕ್ಕೂ ಕ್ರಿಯಾಶೀಲವಾಗಿದ್ದ (ಅವರ ಅಭಿಪ್ರಾಯದಲ್ಲಿ) ಕನ್ನಡ/ಭಾರತೀಯ ಪರಂಪರೆಯನ್ನು ಕಳೆದುಕೊಳ್ಳುತ್ತಿರುವ ಭೀತಿ, ಸ್ವಂತಿಕೆಗಾಗಿ– ಎಂದರೆ, 'ಪಶ್ಚಿಮದ್ದಲ್ಲದ'– ಮೌಲ್ಯ–ಸಂಪ್ರದಾಯಗಳಿಗಾಗಿ ಚಡಪಡಿಕೆ ಇತ್ಯಾದಿ ಎದ್ದುಕಾಣುತ್ತವೆ. ಕೃತಿಯುದ್ದಕ್ಕೂ ಸಕ್ರಿಯವಾಗಿರುವ ವೈಚಾರಿಕ ಚೌಕಟ್ಟನ್ನು, ಸ್ಥೂಲವಾಗಿ ಹೀಗೆ ಗುರುತಿಸಬಹುದು :

ವಸಾಹತುಶಾಹಿ ಪೂರ್ವದಲ್ಲಿ ಜೀವಂತವಾಗಿದ್ದ ಒಂದು ಧರ್ಮ ಭಾರತದಲ್ಲಿತ್ತು; ಅದರ ಆಧಾರದಲ್ಲಿ (ಪಂಪ-ಕುಮಾರವ್ಯಾಸರಂತಹ) ಕವಿಗಳು ತಮ್ಮ ಸುತ್ತುಮುತ್ತಲಿನ ಜೀವನದ

ಘನತೆ ಹಾಗೂ ಆದರ್ಶಗಳೊಂದಿಗೆ ಒಂದಾಗಿ, ತಮ್ಮ ಕಾವ್ಯಗಳಲ್ಲಿ ಜೀವನಾನುಭವವನ್ನು ಅಖಂಡವಾಗಿ ನೋಡಬಲ್ಲವರಾಗಿದ್ದರು. ಆದರೆ, ೧೯ ನೆಯ ಶತಮಾನದ ನಂತರ ಭಾರತದಲ್ಲಿ ಬೇರೂರಿದ ಪಾಶ್ಚಾತ್ಯ ಪದ್ಧತಿಯ ಶಿಕ್ಷಣ ಮತ್ತು ಇಂಗ್ಲೀಷ್ ಸಾಹಿತ್ಯದ ಅಧ್ಯಯನ ಇವುಗಳಿಂದಾಗಿ ರೂಪುಗೊಂಡ ಹೊಸ ಯುಗದಲ್ಲಿ ಪ್ರಾಚೀನ ಸಾಹಿತ್ಯಕ್ಕೆ ತೀವ್ರ ಪ್ರತಿಕ್ರಿಯೆಯುಂಟಾಗಿ, ಆ ಪರಂಪರೆಯಿಂದ "ಸಿಡಿದು ಬಂದ" ಹೊಸ ಸಾಹಿತ್ಯ ನಿರ್ಮಾಣವಾಯಿತು. ನಮ್ಮದೇ ಆದ ಪರಂಪರೆಯಿಂದ ದೂರವಾಗಿರುವ ಮತ್ತು "ಪಾಶ್ಚಾತ್ಯ ಜೀವನಕ್ರಮ ಹಾಗೂ ಸಾಹಿತ್ಯದೊಂದಿಗೆ ನಿಕಟ ಸಂಪರ್ಕ" ಹೊಂದಿರುವ ಕಾರಣದಿಂದ ಆಧುನಿಕ ಸಾಹಿತ್ಯ ಅಖಂಡ ಹಾಗೂ ಶುದ್ಧ ಜೀವನಾನುಭವವನ್ನು ಒಳಗೊಳ್ಳಲು ಅಶಕ್ತವಾಗಿದೆ. "ಇದು ಸಾಹಿತ್ಯಪ್ರಜ್ಞೆಯ ಅವ್ಯವಸ್ಥೆಯ ಬಗ್ಗೆ ಇರುವ ಚರ್ಚೆಯಾಗಿದೆ. ...ಇಂಗ್ಲೀಷ್ ವಿದ್ಯಾಭ್ಯಾಸದ ಫಲವಾಗಿ ಹೊಸ ಸಾಹಿತ್ಯವನ್ನು ಹೊಸ ಸಂಸ್ಕೃತಿಗೆ ಅನುಸಾರವಾಗಿ ನಿರ್ಮಿಸುತ್ತಿದ್ದರೆ ಅದು ನಿಜವಾಗಿಯೂ ಸ್ವಾಗತಾರ್ಹವಾಗಿದೆ. ಆದರೆ, ಈ ರಭಸದಲ್ಲಿ ಅದು ಪ್ರಾಚೀನ ಸಾಹಿತ್ಯದಲ್ಲಿ ಪರಂಪರೆಯನ್ನು ತಿರಸ್ಕರಿಸಬಾರದು ಎಂಬುದೇ ಈ ಲೇಖನದ ಉದ್ದೇಶವಾಗಿದೆ." (ಪು. ೪೩).

ಈ ಬಗೆಯ ವೈಚಾರಿಕ ಚೌಕಟ್ಟಿನಲ್ಲಿ ಕುರ್ತಕೋಟಿಯವರು ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳನ್ನು ಚರ್ಚಿಸುವಾಗ ಅವರು ನೀಡುವ ಅನೇಕ ತೀರ್ಮಾನಗಳು ನಿರೀಕ್ಷಿತವಾಗಿರುವಷ್ಟೇ ಚರ್ಚಾಸ್ಪದವಾಗುತ್ತವೆ. ಉದಾಹರಣೆಗೆ :

(ಅ) ಆಧುನಿಕ ಕನ್ನಡ ಕಾವ್ಯದ ಬಗ್ಗೆ :

೧) ಭಾವಗೀತೆ, ಸಣ್ಣಕಥೆ, ಹರಟೆ ಇವುಗಳಲ್ಲಿ "ಅನುಭವದ ಉತ್ಕಟ ಕ್ಷಣಗಳಷ್ಟನ್ನೇ ನಾವಿಲ್ಲಿ ಕಾಣುತ್ತೇವೆ. ಹೀಗಾಗಿ ಓದುಗನಿಗೆ ಒಂದು ಅನುಭವದ ದರ್ಶನವಾಗಬಹುದಲ್ಲದೆ ಜೀವನದ ದರ್ಶನವಾಗುವುದಿಲ್ಲ," ಪು. ೪೧. (ಜೀವನಕ್ಕಿಂತ ಹೊರತಾದ ಅನುಭವದ ದರ್ಶನ ಯಾವುದು?)

೨) "ಪಂಪನಿಂದ ಹರಿಹರನವರೆಗೆ ಸಾಗಿದ್ದ ಕಾವ್ಯ ಮುಂದೆ ಧರ್ಮಕ್ರಾಂತಿಯ ಮೂಲಕ ತನ್ನ ದಿಕ್ಕನ್ನು ಬದಲಾಯಿಸಿತು. ಸಾಹಿತ್ಯದಲ್ಲಿಯ ಕ್ರಾಂತಿ ಐತಿಹಾಸಿಕ ಆವಶ್ಯಕತೆಯಾಗಿತ್ತು. ...ಈಗ ವೈಯಕ್ತಿಕ ಕಾರಣಗಳನ್ನು ಮುಂದೆ ಮಾಡಿಕೊಂಡು ಒಂದುಸುರಿನಲ್ಲಿಯೇ ಸಾಹಿತ್ಯ ಸಂಪೂರ್ಣವಾಗಿ ಬದಲಾವಣೆಯನ್ನು ಪಡೆಯಲು ಹಾತೊರೆಯುತ್ತಿದೆ. ರಸಿಕರ ಅಭಿರುಚಿಯಲ್ಲಿ ಅಪಾಯಕರವಾದ ಗೊಂದಲವನ್ನು ಎಬ್ಬಿಸಿದೆ," ಪು. ೨೮. (ಯಾವುದು ಐತಿಹಾಸಿಕ ಆವಶ್ಯಕತೆ, ಯಾವುದು ವೈಯಕ್ತಿಕ ಕಾರಣ ಎಂದು ನಿರ್ಧರಿಸುವವರು ಯಾರು ಮತ್ತು ಯಾವ ವಸ್ತುನಿಷ್ಠ ಪ್ರಮಾಣಗಳ ಆಧಾರಗಳ ಮೇಲೆ? ಇನ್ನೂ ಮುಖ್ಯವಾಗಿ, ಸಾವಿರಾರು ವರ್ಷಗಳ ನಂತರ ಮೊದಲ ಬಾರಿಗೆ ಪ್ರಜಾಪ್ರಭುತ್ವವನ್ನು ಕಂಡ ಸಮಾಜದಲ್ಲಿ ಆಗುವ ಬದಲಾವಣೆ 'ಐತಿಹಾಸಿಕ ಆವಶ್ಯಕತೆ' ಅಲ್ಲದಿದ್ದರೆ, ಮತ್ಯಾವುದು ಆ ವರ್ಗದಲ್ಲಿ ಸೇರುತ್ತದೆ?)

೩) "ವಿಕೃತಿ ಕಾವ್ಯ ವಿಷಯವಾದರೆ ತಪ್ಪೇನಿಲ್ಲ, ಆದರೆ, ಅದನ್ನೇ ನವ್ಯಕಾವ್ಯದ ಮುಖ್ಯವಾದ ಅಂಗವನ್ನಾಗಿ ಮಾಡಿಕೊಂಡರೆ ಹೇಗೆ?" ಪು. ೧೨೬. (ವಿಕೃತಿ ಕಾವ್ಯದ ಮುಖ್ಯ ವಸ್ತುವಾಗ

ಬಾರದು ಎಂದರೆ ಜನ್ನನ ಯಶೋಧರ ಚರಿತೆ, ಎಲಿಯಟ್‌ನ ವೇಸ್ಟ್‌ಲ್ಯಾಂಡ್, ಶೇಕ್ಸ್‌ಪಿಯರ್‌ನ ಅಥೆಲೋ ಇತ್ಯಾದಿ ಕೃತಿಗಳಿಗೆ ಸ್ಪಂದಿಸುವುದು ಹೇಗೆ?)

(ಆ) ಕಾದಂಬರಿ ಪ್ರಕಾರದ ಬಗ್ಗೆ :

೧)"ಅನಕೃ... ಸಂಪ್ರದಾಯಕ್ಕೆ ಯಾವ ವೈಚಾರಿಕ ಹಿನ್ನೆಲೆಯೂ ಇಲ್ಲ. ಸಾಹಿತ್ಯದಲ್ಲಿಯ ಪ್ರಮುಖವಾದ ವಾದವೊಂದರ ಪ್ರಚಾರ ಕೂಡ ಅದಲ್ಲ," ಪು. ೨೬೫. (ಯಾವ ವೈಚಾರಿಕ ಹಿನ್ನೆಲೆಯೂ ಇಲ್ಲದೆ ಸಾಹಿತ್ಯಕೃತಿಯೊಂದು ಅಸ್ತಿತ್ವಕ್ಕೆ ಬರುವುದು ಸಾಧ್ಯವೇ ಇಲ್ಲ; ವೈಚಾರಿಕತೆ ಮಹತ್ವದ್ದಾಗಿರಬಹುದು ಅಥವಾ ದುರ್ಬಲವಾಗಿರಬಹುದು. ಹಾಗೆಯೇ, ಪ್ರಮುಖ ವಾದವೊಂದರ ಪ್ರಚಾರಕ್ಕಾಗಿ ಬರೆದ ಕಾದಂಬರಿ ಶ್ರೇಷ್ಠ ಎಂಬುದು ಸರಿಯೆ?)

೨)"ಮುಖ್ಯವಾದ ಕೊರತೆಯೆಂದರೆ ನಮ್ಮ ಕಾದಂಬರಿಗಳಿಗೆ ಸರಿಯಾದ ಸಾಂಸ್ಕೃತಿಕ ಹಿನ್ನೆಲೆಯಿಲ್ಲದಿರುವುದು," ಪು. ೩೫೮. (ಈ ಹೇಳಿಕೆ ಅರ್ಥವಾಗುವುದಿಲ್ಲ. 'ಸರಿಯಾದ ಸಾಂಸ್ಕೃತಿಕ ಹಿನ್ನೆಲೆ' ಎಂದರೇನು? ಈ ತೀರ್ಮಾನವನ್ನು ಕೊಡುವ ಮೊದಲು ಲೇಖಕರು ಮರಳಿ ಮಣ್ಣಿಗೆ, ಕಾನೂರು ಹೆಗ್ಗಡಿತಿ, ಚಿರಸ್ಮರಣೆ ಇತ್ಯಾದಿ ಕಾದಂಬರಿಗಳನ್ನು ಚರ್ಚಿಸಿದ್ದಾರೆ; ಆದರೂ ಈ ತೀರ್ಮಾನಕ್ಕೆ ಬರುತ್ತಾರೆ.)

೩)೧೮೯೯ ರಲ್ಲಿ ಪ್ರಕಟವಾದ ಕನ್ನಡದ ಪ್ರಥಮ ಹಾಗೂ ಪ್ರಮುಖ ಸಾಮಾಜಿಕ ಕಾದಂಬರಿಯಾದ ಗುಲ್ವಾಡಿಯವರ ಇಂದಿರಾಬಾಯಿಯ ಪ್ರಸ್ತಾಪವೇ ಈ ಸಮೀಕ್ಷೆಯಲ್ಲಿಲ್ಲ.

(ಇ) ಆಧುನಿಕ ನಾಟಕಗಳ ಬಗ್ಗೆ :

೧)"ನಮ್ಮಲ್ಲಿ ಶ್ರೀರಂಗರೊಬ್ಬರನ್ನು ಹೊರತುಪಡಿಸಿ ಸಂಪ್ರದಾಯ ನಿರ್ಮಾಣವಾಗದೇ ಶ್ರೇಷ್ಠ ನಾಟಕಗಳು ಹುಟ್ಟಿಬಿಟ್ಟಿವೆ," ಪು. ೧೮೨. (ಒಂದಲ್ಲಾ ಒಂದು ಸಂಪ್ರದಾಯದ ಹಿನ್ನೆಲೆಯಿಲ್ಲದೆ "ಶ್ರೇಷ್ಠ ನಾಟಕಗಳು" ಹುಟ್ಟುವುದು ಹೇಗೆ? ಅಥವಾ, ಅದು ಸಾಧ್ಯವೆಂದಾದರೆ ಸಂಪ್ರದಾಯಗಳ ಆವಶ್ಯಕತೆಗಳೇನು?)

(ಈ) ಆಧುನಿಕ ವಿಮರ್ಶೆಯ ಬಗ್ಗೆ :

೧)"ಪಾಶ್ಚಾತ್ಯ ಸಾಹಿತ್ಯ-ವಿಮರ್ಶೆಯ ಪ್ರಭಾವ ಅಪ್ರತ್ಯಕ್ಷ ರೀತಿಯಲ್ಲಿ ನಮ್ಮ ಮೇಲೆ ಆಗತೊಡಗಿದೆ. ಇದರ ಮುಂದೆ ಭಾರತೀಯರ ಲಕ್ಷಣಶಾಸ್ತ್ರವೇ ನಮಗೆ ನಮ್ಮದಲ್ಲವೆನ್ನುವಷ್ಟು ದೂರವಾಗಿದೆ. ...ಪ್ರಾಚೀನ ಸಾಹಿತ್ಯದ ಲಾಕ್ಷಣಿಕ ನಿಯಮಗಳಾಗಲೀ, ಕವಿಸಮಯಗಳಾಗಲೀ ಈಗ ಇಲ್ಲ. ನಿರಂಕುಶವಾಣಿಯೇ ಇಂದಿನ ಸಾಹಿತ್ಯದ ವೈಶಿಷ್ಟ್ಯವೆಂದು ಕೆಲವರು ಭ್ರಮಿಸಿದ್ದರೆ ಅವರಿಗೆ ಉತ್ತರ ಹೇಳುವಂತಿಲ್ಲ," ಪು. ೪೩೬, ೪೪೩. (ಇಡೀ ಈ ಭಾಗದಲ್ಲಿ ಕಂಡುಬರುವ ಭಾರತೀಯ ಕಾವ್ಯಮೀಮಾಂಸೆಯ ಬಗ್ಗೆ ಇರುವ ಆರಾಧನಾ ಭಾವವನ್ನು ಕುರಿತು ಹೆಚ್ಚಿನ ವಿವರಣೆ ಬೇಕಾಗುವುದಿಲ್ಲ.)

ಈ ಸಂದರ್ಭದಲ್ಲಿ ಢಾಳಾಗಿ ಕಾಣುವ ಒಂದು ಮೋಜಿನ– ಅಥವಾ ಖೇದದ– ಸಂಗತಿಯೆಂದರೆ, ಪಾಶ್ಚಾತ್ಯ ಚಿಂತನಾ ಪ್ರಭಾವದ ಅಪಾಯದ ಬಗ್ಗೆ ಮತ್ತೆ ಮತ್ತೆ ನಮ್ಮನ್ನು ಎಚ್ಚರಿಸುವ ಯುಗಧರ್ಮ ಹಾಗೂ ಸಾಹಿತ್ಯದರ್ಶನದ ವೈಚಾರಿಕ ಚೌಕಟ್ಟೇ ಆಧುನಿಕ

ಪಾಶ್ಚಿಮಾತ್ಯ ವಿಮರ್ಶೆಯಿಂದ ಪ್ರಭಾವಿತವಾದದ್ದು. ಎದ್ದು ಕಾಣುವ ಪ್ರಭಾವವೆಂದರೆ ಪರಂಪರೆಯನ್ನು ಕುರಿತ ೧೯೧೯ರಲ್ಲಿ ಪ್ರಕಟವಾದ ಎಲಿಯಟ್‌ನ "ಪರಂಪರೆ ಮತ್ತು ವ್ಯಕ್ತಿ ಪ್ರತಿಭೆ" ಎಂಬ ಲೇಖನದ್ದು. ಈ ಲೇಖನದಲ್ಲಿ, ಸ್ವಂತಿಕೆಯ ಮಹತ್ವವನ್ನು ಅಲ್ಲಗಳೆಯುತ್ತ, ಎಲಿಯಟ್ ಹೋಮರ್‌ನಿಂದ ಪ್ರಾರಂಭಿಸಿ ಆಧುನಿಕ ಕಾಲದ ವರೆಗೆ ನಿರಂತರವಾಗಿ ಹರಿದು ಬಂದಿರುವ (?) ಒಂದು ಮಹಾ ಯುರೋಪಿಯನ್ ಪರಂಪರೆಯನ್ನು ಕಟ್ಟಿ, ಪ್ರತಿಯೊಬ್ಬ ಆಧುನಿಕ ಲೇಖಕನೂ ಆ ಮಹಾ ಪರಂಪರೆಗೆ ತನ್ನನ್ನು ಒಪ್ಪಿಸಿಕೊಳ್ಳಬೇಕೆಂದು ವಾದಿಸುತ್ತಾನೆ. ಇದಕ್ಕೆ ಸಮಾನವಾಗಿ, ಕುರ್ತಕೋಟಿಯವರು ಪಂಪನಿಂದ ಪ್ರಾರಂಭಿಸಿ ಒಂದು ಸಾವಿರ ವರ್ಷಗಳ ಕಾಲ ಸತತವಾಗಿ ಕ್ರಿಯಾಶೀಲವಾಗಿದ್ದ ಒಂದು ಕನ್ನಡ ಪರಂಪರೆಯನ್ನು ಕಟ್ಟಿ, ಆಧುನಿಕ ಕನ್ನಡ ಸಾಹಿತ್ಯ ಆ ಪರಂಪರೆಯನ್ನು ತಿರಸ್ಕರಿಸುತ್ತಿದೆಯೆಂದು ವಿಷಾದಿಸುತ್ತಾರೆ. ಮತ್ತೆ, 'ಮಹಾ ಪರಂಪರೆ-ಕಿರು ಪರಂಪರೆ,' ಒಂದು ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಸಾವಯವ ಸಮಾಜ ಮತ್ತು ಅನಂತರ ಸಾಹಿತ್ಯದಲ್ಲಿ ಮೂಡಿದ ಛಿನ್ನ ಪ್ರಜ್ಞೆ, 'ಜನಪ್ರಿಯ' ಸಾಹಿತ್ಯದಿಂದ ಸಮಾಜದ ಮೇಲಾಗುವ ದುಷ್ಪರಿಣಾಮಗಳು– ಇತ್ಯಾದಿ ಆಶಯಗಳು ಲೀವಿಸ್‌ನ ಪ್ರಮುಖ ವಾದಗಳ ಪ್ರಭಾವವೆಂದು ಕಾಣುತ್ತದೆ. ಈ ಮಾತನ್ನು ನಿದರ್ಶಿಸಲು ಈ ಹೇಳಿಕೆಗಳನ್ನು ಗಮನಿಸಬಹುದು : "ಪ್ರಾಚೀನ ಕಾಲದ ಯುಗಧರ್ಮ ಈಗ ಬದಲಾಗಿ ಹೋಗಿದೆ. ಆಗಿನ ಸುಭದ್ರವಾದ ಸಾಮಾಜಿಕ ವ್ಯವಸ್ಥೆ, ಧರ್ಮದ ನಿರಂತರವಾದ ಸ್ಫೂರ್ತಿ, ತತ್ವ ಜಿಜ್ಞಾಸೆ. ಎಲ್ಲರಿಗೂ ಒಪ್ಪಿಗೆಯಾಗಿರುವ ನೀತಿ-ನಿಯಮಗಳು, ಮತ್ತು ಎಲ್ಲರಿಗೂ ಸಾಮಾನ್ಯವಾಗಿರುವ ಭಾವಪ್ರಪಂಚ ಈಗ ಉಳಿದಿಲ್ಲ. ತಾನು ನಿಂತ ನೆಲದ ಅಕ್ಷಾಂಶ ರೇಖಾಂಶಗಳಿಗೆ ಮಾತ್ರ ಪರಿಮಿತವಾಗಿರುವಷ್ಟು ಪ್ರತ್ಯೇಕತೆ ನಮ್ಮಲ್ಲಿ ಬಂದಿದೆ. ಆಗಿನಂತೆ ವ್ಯಕ್ತಿ ಈಗ ತನ್ನ ಜನಾಂಗ ಪ್ರಜ್ಞೆ ಹಾಗೂ ವಂಶ ಪ್ರಜ್ಞೆಗಳಲ್ಲಿ ಜೀವಿಸುವುದಿಲ್ಲ. ಆಗಿನಂತೆ ಅವಿಚ್ಛಿನ್ನವಾದ ಸಂಸ್ಕೃತಿಯ ಪ್ರವಾಹವೊಂದು ಈಗ ಹರಿದುಬರುವುದಿಲ್ಲ. ..." (ಪು. ೧೦೪-೧೦೫). ಈ ವಾಕ್ಯಗಳ ಪ್ರತಿಯೊಂದು ಹೇಳಿಕೆಯೂ ಪ್ರಶ್ನಾರ್ಹವಾಗಿದೆ.

ಯುಗಧರ್ಮ ಕುರ್ತಕೋಟಿಯವರ ಮೊದಲ ವಿಮರ್ಶಾ ಕೃತಿ; ಮತ್ತು ಇದಾದ ನಂತರ ಸುಮಾರು ನಾಲ್ಕು ದಶಕಗಳ ಕಾಲ ಅವರು ಹತ್ತಾರು ಇತರ ವಿಮರ್ಶಾ ಕೃತಿಗಳನ್ನು ರಚಿಸಿದ್ದಾರೆ. ಆದ್ದರಿಂದ ಅವರ ಪ್ರಥಮ ಕೃತಿಗಳ ಮಿತಿಗಳನ್ನೇ ಇಷ್ಟು ವಿಸ್ತಾರವಾಗಿ ಚರ್ಚಿಸುವುದರ ಔಚಿತ್ಯವೇನು? ಅಲ್ಲದೆ, ಕುರ್ತಕೋಟಿಯವರೇ "ನನ್ನ ವಿಮರ್ಶೆಯ ರೀತಿನೀತಿಗಳಲ್ಲಿಯೂ ಸಾಕಷ್ಟು ಪರಿವರ್ತನೆಯಾಗಿದೆ. ...ಆಗಿನ ಒಂದು ಹುಂಬ ಧೈರ್ಯ ಈಗ ನನ್ನಲ್ಲಿಲ್ಲ" ಎಂದು ಒಪ್ಪಿಕೊಳ್ಳುತ್ತಾರೆ ('ನನ್ನ ಮಾತು.' ನೂರು ಮರ ನೂರು ಸ್ವರ).

ಮೇಲಿನ ಪ್ರಶ್ನೆಗೆ ಎರಡು ಉತ್ತರಗಳನ್ನು ಕೊಡಬಹುದು : (೧) ಕೊನೆಯ ವರೆಗೂ ಕುರ್ತಕೋಟಿಯವರ 'ಪರಂಪರೆ–ಆಧುನಿಕತೆ' ಕುರಿತ ನಿಲುವು ಬದಲಾಗುವುದಿಲ್ಲ; ಮತ್ತು (೨) ಈ ಬಗೆಯ ಪರಂಪರೆಯ ವ್ಯಾಮೋಹಕ್ಕೂ ವಸಾಹತೀಕರಣಕ್ಕೂ ನಿಕಟ ಸಂಬಂಧವಿದೆ.

ಈಗ ಮೊದಲ ಉತ್ತರವನ್ನು ಸ್ವಲ್ಪ ವಿವರವಾಗಿ ನೋಡೋಣ. ೧೯೯೮ರಲ್ಲಿ ಪ್ರಕಟವಾದ ನೂರು ಮರ ನೂರು ಸ್ವರ ಆಧುನಿಕ ಕನ್ನಡ ಸಾಹಿತ್ಯದ ಬಗ್ಗೆ ಯುಗಧರ್ಮಕ್ಕಿಂತ ಭಿನ್ನವಾದ

ಒಮುಗಳನ್ನು ಹಾಗೂ ಮೌಲಿಕ ಒಳನೋಟಗಳನ್ನು ಕೊಡುತ್ತವೆ. ಆದರೆ ಅವರ ಮೂಲಭೂತ ನಿಲುವಿನಲ್ಲಿ ಅಷ್ಟೇನೂ ಬದಲಾವಣೆ ಕಾಣುವುದಿಲ್ಲ. ಇಲ್ಲಿಯೂ ವಾಸ್ತವತೆ ಎಂದರೆ ಕುರ್ತಕೋಟಿಯವರಿಗೆ ಅಲರ್ಜಿ : "ರವಿವರ್ಮನ ಚಿತ್ರಗಳಿಂದ ಇಂದಿನ ಸಿನೆಮಾಗಳ ವರೆಗೆ ನಮ್ಮ ಪುರಾಣಗಳೆಲ್ಲಾ ವಾಸ್ತವ ಪ್ರದರ್ಶನಗಳಾಗಿ ತಮ್ಮ ಸಾಂಕೇತಿಕತೆಯನ್ನು ಕಳೆದುಕೊಂಡುಬಿಟ್ಟಿವೆ" (ಪು. ೩೭); ಸಂಸ್ಕಾರದಲ್ಲಿ "ನಾರಣಪ್ಪನ ವಿದ್ರೋಹ, ದಾಸಾಚಾರ್ಯನ ಹಸಿವು ಇವುಗಳಂತೆ ಪ್ರಾಣೇಶಾಚಾರ್ಯರ ಸಮಾಜಸೇವೆಯೂ ಒಂದು ಚಟವಾಗಿರಬಹುದೆ ಎಂದು ಸಂಶಯ ಮೂಡಿದರೆ ಉತ್ತರ ಹೇಳುವುದು ಕಷ್ಟ" (ಪು. ೩೩೧-೩೩೨); ಇತ್ಯಾದಿ. ಹಾಗೆಯೇ, ಐತಿಹಾಸಿಕತೆಯ ಪರಿಕಲ್ಪನೆಯೂ ಅವರ ದೃಷ್ಟಿಯಲ್ಲಿ ಅಪಾಯಕಾರಿ : "ಒಂದು ದಿಕ್ಕಿನಿಂದ ಪ್ರಕೃತಿಯನ್ನು ಇನ್ನೊಂದು ದಿಕ್ಕಿನಿಂದ ಧಾರ್ಮಿಕತೆಯನ್ನು ಮನುಷ್ಯ ಕಳೆದುಕೊಂಡದ್ದಕ್ಕೆ ಕಾರಣವೆಂದರೆ ಈ ಐತಿಹಾಸಿಕತೆಯ ತತ್ತ್ವ. ...ಇತಿಹಾಸ ಎಲ್ಲವನ್ನೂ ಕಬಳಿಸುತ್ತದೆ, ಒಳಗೊಳ್ಳುತ್ತದೆ. ಭಿನ್ನಭಿನ್ನ ತತ್ತ್ವಗಳನ್ನು ಒಂದು ಕಡೆಗೆ ತಂದು, ಅವುಗಳನ್ನೆಲ್ಲ ಎಲ್ಲಿಡಬೇಕೋ ಅಲ್ಲಿ ಇಟ್ಟು, ಒಂದು ವ್ಯವಸ್ಥೆಯನ್ನು ನಿರ್ಮಿಸುತ್ತದೆ" (ಪು. ೨೦-೨೧). ಇನ್ನೂ ಮುಖ್ಯವಾಗಿ, (ಅವರು ಕಟ್ಟುವ) ಪರಂಪರೆಯ ಬಗ್ಗೆ ಆರಾಧನಾ ಭಾವ ಮತ್ತು ಅದರಿಂದ ದೂರ ಸರಿಯುತ್ತಿರುವುದರ ಬಗ್ಗೆ ಗಾಢ ವಿಷಾದ ಎದ್ದು ಕಾಣುತ್ತವೆ. ಬಿಎಂಶ್ರೀ ಅವರ ಇಂಗ್ಲಿಷ್ ಗೀತಗಳು ಸಂಕಲನದ ಪ್ರಭಾವದ ಬಗ್ಗೆ ಚರ್ಚಿಸುತ್ತಾ ಅವರು ಹೀಗೆ ತೀರ್ಮಾನಿಸುತ್ತಾರೆ : "ಈ ಭಾಷಾಂತರದಿಂದ ಹಳೆ ಮತ್ತು ಹೊಸತು ಬೇರೆಯಾಗಿ ಹೋದುವು. ಹೊಸದು ಹಳೆಯದರ ಮುಂದುವರಿಕೆಯಾಗಲಿಲ್ಲ. ಹಳಗನ್ನಡದ ಸಾಹಿತ್ಯದಲ್ಲಿ ಕೂಡಾ ಅನೇಕ ಬದಲಾವಣೆಗಳು ಬಂದು ಹೋಗಿವೆ. ಆದರೂ ಹೊಸದು ಹಳೆಯದರ ಮುಂದುವರಿಕೆಯಾಗುತ್ತಿತ್ತು. ಈಗ ಆ ಸಂದರ್ಭ ಉಳಿಯಲಿಲ್ಲ. ಇತಿಹಾಸವನ್ನು ಕಟ್ಟುವ ಮತ್ತು ಇತಿಹಾಸವನ್ನು ಮುಂದುವರಿಸುವ ಕೆಲಸದಲ್ಲಿ ನಾವೀಗ ತೊಡಗಿದ್ದೇವೆ." (ಪು. ೫೫). ಆಧುನಿಕ ಕಾಲದಲ್ಲಿ ಸಾಹಿತ್ಯ ತನ್ನ 'ಸಾತತ್ಯ'ವನ್ನು ಕಡಿದುಕೊಂಡಿರುವುದನ್ನು ಮತ್ತೆ ಮತ್ತೆ ಪ್ರಸ್ತಾಪಿಸುತ್ತಾರೆ— ಖೇದದಿಂದ : "ಸಾತತ್ಯದ ಅನೇಕ ಸಂರಚನೆಗಳಲ್ಲಿ ಕಥನಕಾವ್ಯವೂ ಒಂದಾಗಿದೆ. ಕಾವ್ಯಾರ್ಥ ಒಂದಾದ ಮೇಲೊಂದರಂತೆ ಹರಿಯುವ ವಾಕ್ಯಗಳ ಗುಂಟ ಹರಡುತ್ತ ಕೊನೆಯಲ್ಲಿ ಸ್ಫೋಟವಾಗುವಂತಹುದು. ... ಆಧುನಿಕ ಭಾವಗೀತಕ್ಕೆ ಕತೆ ಮತ್ತು ಗದ್ಯ ಇವೆರಡರ ಹಂಗೂ ಇಲ್ಲ. ... ಕಥನಕಾವ್ಯಗಳಲ್ಲಿ ಕಾವ್ಯ ಕಥೆಯ ಮೂಲಕವಾಗಿ ಪ್ರಕಟವಾಗುತ್ತದೆ. ಕಾವ್ಯದ ಸಂಗತಿಯಲ್ಲಿ ಕಥೆಯೂ ಕಾವ್ಯವಾಗುತ್ತದೆಂಬ ಮಾತು ಬೇರೆ. ಆದರೆ ಸನ್ನಿವೇಶದಿಂದ ವಿಚ್ಛೇದನವನ್ನು ಪಡೆದ ಭಾವ ಸನ್ನಿವೇಶಗಳಿಂದ ತುಂಬಿದ ಕಥೆಯಲ್ಲಿ ಪ್ರವೇಶಿಸುವುದು ಹೇಗೆ?" (ಪು. ೧೭೬-೧೭೮).

ಪರಂಪರೆ-ಸಾತತ್ಯಗಳನ್ನು ಸಾಹಿತ್ಯದ ಜೀವನಾಡಿಗಳೆಂದು ಪರಿಗಣಿಸಿ, ವಾಸ್ತವತೆ ಮತ್ತು ಚಾರಿತ್ರಿಕತೆಗಳನ್ನು ದೂರವಿಟ್ಟು, ಸಾಹಿತ್ಯಲೋಕವನ್ನು ಪ್ರವೇಶಿಸಿದರೆ ನಮಗೆ ದೊರಕುವ ಲಾಭವೆಷ್ಟು ನಷ್ಟವೆಷ್ಟು ಎಂಬುದರ ಅಂದಾಜು ಕುರ್ತಕೋಟಿಯವರ ಕೊನೆಯ (ಪ್ರಕಟಿತ) ಕೃತಿ ಪ್ರತ್ಯಭಿಜ್ಞಾನದಲ್ಲಿ ದೊರಕುತ್ತದೆ.

ಪ್ರತ್ಯಭಿಜ್ಞಾನ ಕುರ್ತಕೋಟಿಯವರ ವಿಮರ್ಶಾ ಮಾರ್ಗದ ಸ್ವೋಪಜ್ಞ ವಿಶ್ಲೇಷಣೆ ಮತ್ತು ತೀವ್ರ ಮಿತಿಗಳು ಇವೆರಡನ್ನೂ ದಾಖಲಿಸುತ್ತದೆ. ಈ ಕೃತಿ ಆಯ್ದ ಆರು ಸಂಸ್ಕೃತ ನಾಟಕಗಳನ್ನು ಮೌಲಿಕವಾದ ದೀರ್ಘ ಪ್ರಸ್ತಾವನೆಯೊಡನೆ ಚರ್ಚಿಸುತ್ತದೆ. ಈ ವಿಮರ್ಶಾ ಕೃತಿಯಲ್ಲಿ ಕುರ್ತಕೋಟಿಯವರ ಕೃತಿ-ವಿಶ್ಲೇಷಣೆ ಎಷ್ಟು ಸೂಕ್ಷ್ಮವಾಗಿದೆಯೋ ಅವರ ಭಾಷೆಯೂ ಅಷ್ಟೇ ಸಂವೇದನಾಶೀಲವಾಗಿದೆ. ಶಾಕುಂತಲ, ಮೃಚ್ಛಕಟಿಕ ಇತ್ಯಾದಿ ನಾಟಕಗಳಲ್ಲಿ ಕಂಡುಬರುವ ಅದ್ಭುತ ಶಿಲ್ಪ, ನಾಟಕ-ವಿದೂಷಕ ಇತ್ಯಾದಿ ಪಾತ್ರಗಳ ನಿರ್ವಹಣೆ, ಕತೆ ಹಾಗೂ ರಂಗಭೂಮಿ ಇವುಗಳ ಸಂಬಂಧ, ಈ ನಾಟಕಗಳ ಅವಿಭಾಜ್ಯ ಅಂಗಗಳಾದ 'ದೃಶ್ಯತೆ' ಮತ್ತು 'ಅದೃಶ್ಯತೆ', ಆಶಯಗಳ ವಿನ್ಯಾಸ, ರಸಾನುಭೂತಿಯ ಸ್ವರೂಪ, ಮತ್ತು ಎಲ್ಲಾ ನಾಟಕಗಳಲ್ಲಿಯೂ ಹಾಸುಹೊಕ್ಕಾಗಿರುವ ಪ್ರತ್ಯಭಿಜ್ಞಾನದ ಮೂಲಾಶಯ– ಇವೇ ಮುಂತಾದ ಆಶಯಗಳನ್ನು ವಿದ್ವತ್ಪೂರ್ಣವಾಗಿ, ವಿವರವಾಗಿ, ಆಪ್ತವಾಗಿ ಕುರ್ತಕೋಟಿ ಈ ಕೃತಿಯಲ್ಲಿ ಚರ್ಚಿಸುತ್ತಾರೆ.

ಆದರೆ, ಇಡೀ ಕೃತಿಯನ್ನು ಓದಿಯಾದ ನಂತರ ಸಂಸ್ಕೃತ ನಾಟಕಗಳು ಯಾವ ಕಾಲಘಟ್ಟಕ್ಕೂ ಸಂಬಂಧಿಸದೆ ನಿರ್ವಾತ ಪ್ರದೇಶದಲ್ಲಿ ತೇಲಾಡುವ ಅದ್ಭುತಗಳಂತೆ ನಮಗೆ ಕಾಣುತ್ತವೆ. (ಪ್ರಾಯಃ, ಸಂಸ್ಕೃತ ನಾಟಕಗಳ ಸ್ವರೂಪ ಹೀಗೆಯೇ ಇರಬಹುದು– ಒಂದು ಪ್ರಮುಖ ಸಾಹಿತ್ಯ ಪ್ರಭೇದ ಹೊರಗಿನ ಜಗತ್ತಿನೊಡನೆ ಯಾವ ಬಗೆಯ ಸಂಬಂಧವೂ ಇಲ್ಲದೆ ಸಾವಿರ ವರ್ಷಗಳಷ್ಟು ದೀರ್ಘ ಕಾಲ ಜೀವಂತವಾಗಿರಬಹುದಾದರೆ!) ನಿಜ, ನಾಗಾನಂದ ನಾಟಕದ ನಾಯಕನ ರೂಪಣೆಯಲ್ಲಿ ಜೈನ-ಬೌದ್ಧ ಮತಗಳ ಪ್ರಭಾವ, ಮೃಚ್ಛಕಟಿಕ ಮತ್ತು ಮುದ್ರಾರಾಕ್ಷಸ ನಾಟಕಗಳಲ್ಲಿ ಚಿತ್ರಿಸಲ್ಪಟ್ಟಿರುವ ಅರಾಜಕತೆಯ ಆತಂಕ-ತಲ್ಲಣಗಳು ಇವುಗಳನ್ನೂ ಕುರ್ತಕೋಟಿ ಗುರುತಿಸುತ್ತಾರೆ. ಆದರೆ, ಈ ಅಂಶಗಳು ಅಂಚಿಗೆ ಸರಿದು, ಪ್ರತಿಯೊಂದು ಲೇಖನದಲ್ಲಿಯೂ ವಿವರಣೆ-ವ್ಯಾಖ್ಯಾನ-ಭಾಷ್ಯ ಇವುಗಳು ವಿಜೃಂಭಿಸುತ್ತವೆ. ('ಭಾಷ್ಯ' ಎಂಬುದು ಕುರ್ತಕೋಟಿ ತಮ್ಮ ಅನೇಕ ಕೃತಿಗಳಲ್ಲಿ ಮೆಚ್ಚುಗೆಯಿಂದ ಬಳಸುವ ಪದ.) ಅವರ ದೃಷ್ಟಿಯಲ್ಲಿ ಸಂಸ್ಕೃತ ನಾಟಕಗಳಿಗೂ ನಿಜ ಜೀವನಕ್ಕೂ ಯಾವುದೇ ಸಂಬಂಧವಿಲ್ಲ. ಭಾಸನ ಅವಿಮಾರಕ ನಾಟಕದಲ್ಲಿ ನಾಯಕ ಒಂದು ವರ್ಷ ಕಾಲ ಗುಪ್ತವಾಗಿ ತನ್ನ ಪ್ರೇಯಸಿಯ ಅಂತಃಪುರದಲ್ಲಿ ಇರುವುದರ ಔಚಿತ್ಯವನ್ನು ಕುರಿತು ಕುರ್ತಕೋಟಿ ಹೀಗೆ ವ್ಯಾಖ್ಯಾನಿಸುತ್ತಾರೆ : "ಸಾಮಾಜಿಕ ನೀತಿಗೆ ವಿರುದ್ಧವಾದ ಅವನ ವರ್ತನೆಯನ್ನು ನಾಯಕ ಪಾತ್ರದಲ್ಲಿ ಸಹಿಸುವುದು ಹೇಗೆ? ಇದು ಮನುಷ್ಯನಿಗೆ ಅಸಂಗತವಾದ ವರ್ತನೆ. ಆದರೆ ನಾಯಕನಾದ ಅವಿಮಾರಕ ನಾಟಕದ ಒಂದು ಪಾತ್ರವೇ ಹೊರತು ಮನುಷ್ಯನಲ್ಲ. ನಟನಾಗಲೀ ಪಾತ್ರವಾಗಲೀ ನಮ್ಮ ಲಾಕ್ಷಣಿಕರ ಪ್ರಕಾರ ಆಸ್ವಾದನದ ಒಂದು ಉಪಾಯವೇ ಹೊರತು ಸ್ವತಂತ್ರವಲ್ಲ" (ಪು. ೨೩).

ಪ್ರತ್ಯಭಿಜ್ಞಾನ ಕುರ್ತಕೋಟಿಯವರ ವಿಮರ್ಶಾಮಾರ್ಗದ ಬಗ್ಗೆ ಮತ್ತೂ ಒಂದು ಅಂಶವನ್ನು ಮನಗಾಣಿಸುತ್ತದೆ. ಶಾಕುಂತಲ, ವಿಕ್ರಮಾರ್ಜುನ ವಿಜಯ ಇತ್ಯಾದಿ ಕೃತಿಗಳ ಬಗ್ಗೆ ಕಾಲಕಾಲಕ್ಕೆ ಸಾಕಷ್ಟು ಚಿಂತನೆ ನಡೆದಿದೆ. ಕಳೆದೆರಡು ದಶಕಗಳಲ್ಲಿಯೇ ಶಾಕುಂತಲದ ಬಗ್ಗೆ ಮೌಲಿಕ ವಿಮರ್ಶಾ ಕೃತಿಗಳು ಬಂದಿವೆ. ಕೂಡಲೇ ನೆನಪಿಗೆ ಬರುವ ಒಂದು ಪ್ರಮುಖ

ಅಧ್ಯಯನವೆಂದರೆ ರೊಮಿಲಾ ಥಾಪರ್ ಅವರ ಕೃತಿ. ಇದರಲ್ಲಿ ಥಾಪರ್ ಪುರಾಣ ಕಾಲದಿಂದ ಗುಪ್ತರ ಕಾಲದ ವರೆಗಿನ ಅವಧಿಯಲ್ಲಿ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನಗಳು ಹೇಗೆ ತೀವ್ರವಾಗಿ ಬದಲಾದುವು ಎಂಬುದನ್ನು ಮಹಾಭಾರತ ಮತ್ತು ಶಾಕುಂತಲ ಇವುಗಳ ವಿಶ್ಲೇಷಣೆಯ ಆಧಾರದ ಮೇಲೆ ದಾಖಲಿಸುತ್ತಾರೆ. ಸುಬ್ಬಣ್ಣನವರ ಲೋಕ ಶಾಕುಂತಲ ಕಾಲಿದಾಸನ ನಾಟಕದ ಒಂದು ಬಗೆಯ ಗಂಭೀರ ವಿಮರ್ಶೆಯೇ. ಆದರೆ ಕುರ್ತಕೋಟಿಯವರು ತಮ್ಮ ವಿಮರ್ಶೆ–ವ್ಯಾಖ್ಯಾನಗಳಲ್ಲಿ ಇತರರ ವಿಮರ್ಶೆಯನ್ನು ಮರೆತೂ ಪರಿಗಣಿಸುವುದಿಲ್ಲ. ಈ ನೆಲೆಯಲ್ಲಿ, ಕುರ್ತಕೋಟಿಯವರ ವಿಮರ್ಶೆಯನ್ನು 'ವೈಯಕ್ತಿಕ ಪ್ರತಿಕ್ರಿಯೆ' ('Impressionistic Criticism') ಎಂದು ಕರೆಯಬಹುದು. ಈ ಬಗೆಯ ವಿಮರ್ಶೆ ಅನೇಕ ಸಂದರ್ಭಗಳಲ್ಲಿ ಮಹತ್ವದ ಹಾಗೂ ಅರ್ಥಪೂರ್ಣ ಒಳನೋಟಗಳನ್ನು ಕೊಡಬಲ್ಲದು. ಆದರೆ ಇದು ವಿಮರ್ಶಾ ಜ್ಞಾನವನ್ನು ಬೆಳೆಸಲಾರದು; ಮತ್ತು ಹೆಚ್ಚಿನ ಸಂದರ್ಭಗಳಲ್ಲಿ ಪುನರುಕ್ತಿಗೆ ಅವಕಾಶವನ್ನು ಕಲ್ಪಿಸಿಕೊಡುತ್ತದೆ. ಕುರ್ತಕೋಟಿಯವರು ಅತೀವ ಮೆಚ್ಚುವ ಪ್ರಾಚೀನ ಲಾಕ್ಷಣಿಕ ಪರಂಪರೆಯ ಧ್ರುವತಾರೆ ಅಭಿನವ ಗುಪ್ತ; ಅವನಾದರೋ ಪ್ರಾರಂಭದಲ್ಲಿ ಒಂದು ವಿಷಯವನ್ನು ಕುರಿತು ತನ್ನ ವರೆಗೆ ಬಂದ ಎಲ್ಲಾ ವಿಮರ್ಶೆಯ ಅಂಶಗಳನ್ನೂ ಪರಿಗಣಿಸಿ, ಅವುಗಳಲ್ಲಿ ಸ್ವೀಕಾರಾರ್ಹವಾದವುಗಳನ್ನು ಸ್ವೀಕರಿಸಿ, ಇತರ ಅಂಶಗಳನ್ನು ಆಧಾರಪೂರ್ವಕ ಖಂಡಿಸಿ, ಅನಂತರ ತನ್ನ ವಾದವನ್ನು ಕಟ್ಟುತ್ತಾನೆ. ಪ್ರಾಯಃ, ಅಭಿನವ ಗುಪ್ತನ ಮಾರ್ಗ ವಿಮರ್ಶೆ-ವ್ಯಾಖ್ಯಾನ-ವಾಗ್ವಾದಗಳಲ್ಲಿ ಅನುಕರಣೀಯ.

ಕುರ್ತಕೋಟಿಯವರಲ್ಲಿ ಕಂಡುಬರುವ ಪರಂಪರೆಯನ್ನು ಕುರಿತ ತೀವ್ರ ಕಾಳಜಿ ಮತ್ತು ಸಾತತ್ಯವನ್ನು ಕುರಿತ ತೀವ್ರ ವ್ಯಾಮೋಹ ಇವುಗಳಿಗೂ ವಸಾಹತೋತ್ತರ ಕಾಲದಲ್ಲಿ ಪೂರ್ವ ವಸಾಹತುಗಳಾಗಿದ್ದು ಸದ್ಯ ಸ್ವತಂತ್ರವಾಗಿರುವ ರಾಷ್ಟ್ರಗಳಲ್ಲಿ ಕಂಡುಬರುವ ಸ್ವಂತಿಕೆಯ ಹಂಬಲಕ್ಕೂ ನೇರ ಸಂಬಂಧವಿದೆ. ಫ್ಯಾನನ್, ಸೈದ್ ಮುಂತಾದವರು ಪರಿಣಾಮಕಾರಿಯಾಗಿ ವಿಶ್ಲೇಷಿಸಿರುವಂತೆ ವಸಾಹತುಶಾಹಿಯು ಅಧೀನ ರಾಷ್ಟ್ರಗಳ ಮೇಲೆ ತನ್ನ ಅಧಿಕಾರವನ್ನು ಬಲಪಡಿಸಲು ಉಪಯೋಗಿಸುವ ಒಂದು ಮುಖ್ಯ ತಂತ್ರವೆಂದರೆ ಸಾಂಸ್ಕೃತಿಕ ಯಾಜಮಾನ್ಯ. ಈ ಯಾಜಮಾನ್ಯದ ಒಂದು ಆಯಾಮವೆಂದರೆ ಅಧೀನ ರಾಷ್ಟ್ರಗಳಲ್ಲಿ ಹಿಂದೆ ಸಂಸ್ಕೃತಿಯೇ ಇರಲಿಲ್ಲವೆಂದು ಮತ್ತು ಆಧುನಿಕತೆ ಹಾಗೂ ಪ್ರಗತಿ ವಸಾಹತುಶಾಹಿಯ ಆಗಮನದಿಂದಲೇ ಸಾಧ್ಯವಾಯಿತೆಂದು ಅಧೀನ ರಾಷ್ಟ್ರಗಳೇ ನಂಬುವಂತೆ ಶಿಸ್ತುಬದ್ಧವಾಗಿ ಶ್ರಮಿಸುವುದು. ಯಾಜಮಾನ್ಯದ ಇನ್ನೊಂದು ಆಯಾಮವೆಂದರೆ ತನ್ನ ಭಾಷೆ, ಸಾಹಿತ್ಯ, ಸಂಸ್ಕೃತಿ ಇವುಗಳನ್ನು ಶ್ರೇಷ್ಠವೆಂದು ಎತ್ತಿ ಹಿಡಿದು, ಅವುಗಳ ಅನುಕರಣೆಯಿಂದ ಮಾತ್ರ ಅಧೀನ ರಾಷ್ಟ್ರಗಳಲ್ಲಿ ಪ್ರಗತಿ ಸಾಧ್ಯವೆಂದು ಬಿಂಬಿಸುವುದು. ಆದ್ದರಿಂದ, ವಸಾಹತೋತ್ತರ ಕಾಲದಲ್ಲಿ ಸ್ವತಂತ್ರ ಸಮಾಜಗಳ ಮೊಟ್ಟ ಮೊದಲ ಕರ್ತವ್ಯವೆಂದರೆ ಈ ಬಗೆಯ ಯಾಜಮಾನ್ಯದ ವಿರುದ್ಧ ಹೋರಾಡುವುದು ಮತ್ತು ತನ್ನ ಗತವನ್ನು ಮರಳಿ ಪಡೆಯುವುದು. ಈ ಬಗೆಯ ಸಾಂಸ್ಕೃತಿಕ ಯಾಜಮಾನ್ಯದ ಭೀತಿ ಮತ್ತು ಪ್ರತಿರೋಧ ಕುರ್ತಕೋಟಿಯವರ ಚಿಂತನೆಯ ಆಳದಲ್ಲಿವೆಯೆಂಬುದು ಸ್ಪಷ್ಟ. ಉದಾ : "ಇಂಗ್ಲೀಷ್ ಸಾಹಿತ್ಯದ ಆಳವಾದ ಅಭ್ಯಾಸವೇ

ನಮ್ಮ ಸಾಹಿತಿಗಳ ಮನೋಧರ್ಮವನ್ನು ತಿದ್ದಿತು," ಯುಗಧರ್ಮ, ಪು. ೨೪; "...ಇಲ್ಲದಿದ್ದರೆ ಪಾಶ್ಚಾತ್ಯರಲ್ಲಿ ಹೇರಳವಾಗಿರುವ ವಿಮರ್ಶೆಯ ಪದ್ಧತಿಗಳು ನಮ್ಮ ವಿಮರ್ಶೆಯ ವಿವೇಕವನ್ನು ಕದಡುವ ಭಯವಿದೆ," ಯುಗಧರ್ಮ, ಪು. ೪೦; "ಬುದ್ಧಿಯ ಅತಿ ಸೂಕ್ಷ್ಮತೆ ಅವರ ನಿಶ್ಚಯಾತ್ಮಕತೆಯನ್ನೇ ಹಾಳುಮಾಡುತ್ತದೆ. ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಇಂಗ್ಲೀಷ್ ಸಾಹಿತ್ಯ ಈ ವಿಷಮತೆಯನ್ನು ಅನುಭವಿಸಿತು. ನಾವು ಅದಷ್ಟು ಅದರಿಂದ ದೂರವಿರುವುದು ಒಳ್ಳೆಯದು," ಯುಗಧರ್ಮ, ಪು. ೧೨೭; "ಭಾರತದ ಸಂಸ್ಕೃತಿಯನ್ನು ತಿಳಿದುಕೊಳ್ಳುವುದೆಂದರೆ ಭಾರತವನ್ನು ಗೆದ್ದಂತೆಯೇ ಎಂಬ ನಂಬಿಕೆ ಆಗಂತೂ ಇತ್ತು." ನೂರು ಮರ ನೂರು ಸ್ವರ, ಪು. ೩; "(ವಸಾಹತುಕಾಲದಲ್ಲಿ) ಪ್ರತಿಯೊಂದು ಪಾಠದ ವಸ್ತುವಿನ ಮುಖಾಂತರ ಸಾಮ್ರಾಜ್ಯದ ಸರ್ವವ್ಯಾಪಿ ಇತಿಹಾಸವನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕಲಿಸಲಾಗುತ್ತಿತ್ತು. ...ಬ್ರಿಟಿಷ್ ಸಮ್ರಾಟ ದೇವರಂತೆ ಕಣ್ಣಳತೆಯ ಆಚೆಗೆ ದೂರದ ಇಂಗ್ಲಂಡ್‌ನಲ್ಲಿದ್ದರೂ ಅವನ ಅಧಿಕಾರದ ಮಂತ್ರದಂಡದಿಂದಾಗಿ ಭಾರತದ ಹಳ್ಳಿಹಳ್ಳಿಗಳಲ್ಲಿ ವ್ಯವಸ್ಥೆ ಹುಟ್ಟಿಕೊಂಡಿತ್ತು," ನೂರು ಮರ, ಪು. ೧೨; "ಒಂದು ಜನಾಂಗ ತನಗೆ ಪ್ರತಿಯಾದ ಇನ್ನೊಂದು ಜನಾಂಗದ ಮೇಲೆ ಸರ್ವಸಮ್ಮತವಾದ ನೀತಿಯನ್ನು ಅನುಸರಿಸಿ ಯಾವುದೇ ದೋಷಾರೋಪಣವನ್ನೂ ಮಾಡಬಹುದು. ಇದು ಸಾಂಸ್ಕೃತಿಕ ಸಂಘರ್ಷದ ಪ್ರಶ್ನೆಯಿರುವುದರಿಂದ...," ಪ್ರತ್ಯಭಿಜ್ಞಾನ, ಪು. ೨೯; ಇತ್ಯಾದಿ.

ಈ ಸಂದರ್ಭದಲ್ಲಿ ಕುರ್ತಕೋಟಿಯವರು ಮತ್ತೆ ಮತ್ತೆ ಉಪಯೋಗಿಸುವ 'ಪ್ರತ್ಯಭಿಜ್ಞಾನ'ದ ಪರಿಕಲ್ಪನೆ ತುಂಬಾ ಅರ್ಥಪೂರ್ಣವಾಗಿದೆ. 'ಪ್ರತ್ಯಭಿಜ್ಞಾನ' ಎಂದರೆ ನಾವು ಮರೆತಿರುವುದನ್ನು ಮತ್ತೆ ಅರಿತುಕೊಳ್ಳುವುದು. ಈ ನೆಲೆಯಲ್ಲಿ ಕುರ್ತಕೋಟಿಯವರ 'ಪ್ರತ್ಯಭಿಜ್ಞಾನ' ಪರಿಕಲ್ಪನೆಗೂ ಡಿ. ಆರ್. ನಾಗರಾಜ್ ಹಾಗೂ ಗಣೇಶ್ ದೇವಿ ಮಂಡಿಸುವ 'ವಿಸ್ಮೃತಿ'ಯ ಪರಿಕಲ್ಪನೆ ಮತ್ತು ಆಶೀಶ್ ನಂದಿ ಮಂಡಿಸುವ 'ಆತ್ಮೀಯ ಶತ್ರು' ಪರಿಕಲ್ಪನೆಗಳಿಗೂ ನಿಕಟ ಸಂಬಂಧವಿದೆ. ಆದರೆ, ಗಮನಿಸಬೇಕಾದ ವ್ಯತ್ಯಾಸವೆಂದರೆ 'ಪ್ರತ್ಯಭಿಜ್ಞಾನ'ದ ಉದ್ದೇಶದಿಂದ ಡಿ. ಆರ್. ಅವೈದಿಕ ಚಿಂತನೆಯನ್ನು ಗಮನಿಸಿದರೆ ದೇವಿ ಬುಡಕಟ್ಟು ಜನಾಂಗಗಳ ಸಂಸ್ಕೃತಿಗೆ ಮಹತ್ವವನ್ನು ಕೊಟ್ಟರು; ನಂದಿಯವರು ಅಂತರಂಗೀಕರಿಸಿಕೊಂಡ ಶತ್ರುವನ್ನು ದೂರವಿಡಲು ಗಾಂಧೀ ಚಿಂತನೆಗೆ ಮೊರೆಹೋದರು. ಕುರ್ತಕೋಟಿಯವರಾದರೋ ಪ್ರಾಚೀನ ವೈದಿಕ ಚಿಂತನೆಗೆ ಒತ್ತು ಕೊಟ್ಟರು.

ಕುರ್ತಕೋಟಿಯವರದು ಅಭಿಜಾತ ಸಂವೇದನೆ. ಪರಿಣಾಮತಃ, ನವ್ಯ ಹಾಗೂ ನವ್ಯೋತ್ತರ ಕನ್ನಡ ಸಾಹಿತ್ಯವಿರಲಿ, ಬೇಂದ್ರೆ ಕಾವ್ಯವನ್ನು ಹೊರತುಪಡಿಸಿ ನವೋದಯ ಸಾಹಿತ್ಯಕ್ಕೂ ಅವರು ಆಪ್ತವಾಗಿ, ಆಳವಾಗಿ ಸ್ಪಂದಿಸಲು ಸಾಧ್ಯವಾಗಲೇ ಇಲ್ಲ. ಅವರ ವಿಶ್ಲೇಷಣಾ-ವ್ಯಾಖ್ಯಾನ ಪ್ರತಿಭೆ ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಳ್ಳುವುದು ಕುಮಾರವ್ಯಾಸನ, ಕಾಳಿದಾಸನ, ಭವಭೂತಿಯ ಸಂದರ್ಭದಲ್ಲಿ.

ಈ ಲೇಖನವನ್ನು ಮುಗಿಸುವ ಮೊದಲು ಒಂದು ಮಾತನ್ನು ಒತ್ತಿ ಹೇಳಬೇಕು. ಲೇಖಕನೊಬ್ಬನು ರಚಿಸಿರುವ ವಿಪುಲ ವಾಙ್ಮಯದಲ್ಲಿ ಒಂದು ಆಶಯವನ್ನು/ಕಾಳಜಿಯನ್ನು/

ಅಂಶವನ್ನು ದೀರ್ಘವಾಗಿ ವಿಶ್ಲೇಷಿಸುವ ಕ್ರಮದಲ್ಲಿ ಆ ವಾಙ್ಮಯದ ಇತರ ಆಶಯ-ಅಂಶಗಳು ಬದಿಗೆ ಸರಿಸಲ್ಪಟ್ಟು, ಆ ವಿಶ್ಲೇಷಣೆ ಒಂದು ಪಾರ್ಶ್ವಿಕ ಅಥವಾ ಪೂರ್ವಾಗ್ರಹದ ನೋಟವಾಗಿ ಬಿಡಬಹುದು. ಈ ನನ್ನ ಲೇಖನವೂ ನಾನು ಚರ್ಚೆಗೆ ಎತ್ತಿಕೊಂಡಿರುವ ವಿಷಯದಿಂದಾಗಿ ಕುರ್ತಕೋಟಿಯವರ ಬಗ್ಗೆ ಇಂತಹ ಋಣಾತ್ಮಕ ಚಿತ್ರವನ್ನು ಕೊಡುವ ಅಪಾಯವಿದೆ. ಅವರ ಒಟ್ಟಾರೆ ಸಾಧನೆಯನ್ನು ಮರೆಸುವ ಸಾಧ್ಯತೆಯಿದೆ. ಆದರೆ ನನ್ನ ಉದ್ದೇಶ ಆ ಬಗೆಯದಲ್ಲ. ಹಾಗೆ ನೋಡಿದರೆ, ಕನ್ನಡ ಸಾಹಿತ್ಯದ ಒಂದು ಸಂಪೂರ್ಣ ನಕಾಶೆ ಅಥವಾ ಚಿತ್ರ ನಮಗೆ ದೊರಕುವುದು ಕುರ್ತಕೋಟಿಯವರಲ್ಲಿಯೇ. ಮುಗಳಿಯವರ ಕೃತಿ ಆಧುನಿಕ ಕಾಲದ ವರೆಗೆ ಮಾತ್ರ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಕಟ್ಟಿಕೊಟ್ಟರೆ, ಶೇಷಗಿರಿರಾವ್ ಅವರ ಚರಿತ್ರೆ ಆಧುನಿಕ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿದೆ. ಮೊದಲ ಬಾರಿಗೆ, ಕುರ್ತಕೋಟಿಯವರು **ಕನ್ನಡ ಸಾಹಿತ್ಯ ಸಂಗಾತಿ** ಮತ್ತು **ನೂರು ಮರ ನೂರು ಸ್ವರ** ಈ ಎರಡು ಕೃತಿಗಳ ಮೂಲಕ ಹಲ್ಮಿಡಿ ಶಾಸನದಿಂದ ಪ್ರಾರಂಭಿಸಿ, ದೇವನೂರರ **ಕುಸುಮಬಾಲೆ**ಯ ವರೆಗೆ ಬೆಳೆದುಬಂದಿರುವ ಒಂದು ಸಹಸ್ರಮಾನದ ಕನ್ನಡ ಸಾಹಿತ್ಯದ ಒಂದು ಚರಿತ್ರೆಯನ್ನು ಕಟ್ಟಿಕೊಡುತ್ತಾರೆ. ಇನ್ನೂ ಮುಖ್ಯವಾಗಿ, ಪ್ರಾಚೀನ ಹಾಗೂ ಅರ್ವಾಚೀನ ಕನ್ನಡ ಸಾಹಿತ್ಯದುದ್ದಕ್ಕೂ ಕ್ರಿಯಾಶೀಲವಾಗಿರುವ 'ಐತಿಹಾಸಿಕ ಸತ್ಯ–ಕಾವ್ಯ ಸತ್ಯ', 'ಪಾರಮಾರ್ಥಿಕತೆ–ಲೌಕಿಕತೆ', 'ದೇಹ–ಆತ್ಮ', 'ಪ್ರತಿಮೆ–ಪ್ರತಿಮಾನ', 'ಸಾತತ್ಯ–ಕ್ರಮಭಂಗ' ಇತ್ಯಾದಿ ಆಶಯಗಳು ವಿವಿಧ ಕಾಲಘಟ್ಟಗಳಲ್ಲಿ ಪಡೆಯುವ ಸಂಕೀರ್ಣ ರೂಪವಿನ್ಯಾಸಗಳನ್ನು ದಾಖಲಿಸುತ್ತಾರೆ. ಕನ್ನಡ ಸಾಹಿತ್ಯದ ಗ್ರಹಿಕೆಗೆ ಅವರ ಕೊಡುಗೆ ಅಪಾರ ಎಂಬ ಅರಿವು ನನಗಿದೆ.

ಈ ಲೇಖನದಲ್ಲಿ ನಾನು ಮಂಡಿಸಲೆತ್ನಿಸಿರುವ ವಾದದ ಮುಖ್ಯಾಂಶ ಇಷ್ಟೇ: ಇತರ ರಾಷ್ಟ್ರಗಳಂತೆ ಭಾರತದಲ್ಲಿಯೂ ಪಶ್ಚಿಮದ ಸಾಂಸ್ಕೃತಿಕ ಯಾಜಮಾನ್ಯದ ವಿರುದ್ಧ ಪ್ರತಿರೋಧ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಎರಡು ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ನಡೆದಿದೆ. ಮೊದಲನೆಯ ದಿಕ್ಕು ಪ್ರಾಚೀನ ಪರಂಪರೆಯನ್ನು ಅವರ ಅಮಾನವೀಯತೆಗಾಗಿ ಸಂಪೂರ್ಣವಾಗಿ ತಿರಸ್ಕರಿಸುವ ದಿಕ್ಕು– ನೀರದ್ ಚೌಧುರಿ, ಅರುಂಧತಿ ರಾಯ್, ಶಿವರಾಮ ಕಾರಂತ ಮುಂತಾದವರು ಆರಿಸಿದ ದಿಕ್ಕು. ಎರಡನೆಯ ದಿಕ್ಕೆಂದರೆ, ಪ್ರಾಚೀನ ಪರಂಪರೆಯ ಜ್ಞಾನ-ಅನುಭವಗಳನ್ನು ಮತ್ತೆ ಪ್ರಸ್ತುತಗೊಳಿಸುವ ದಿಕ್ಕು– ಕೆ. ಎಂ. ಮುನ್ಶಿ, ಪುತಿನ, ದೇವುಡು ಮುಂತಾದವರು ಆಯ್ಕೆ ಮಾಡಿಕೊಂಡ ದಿಕ್ಕು.

ಕುರ್ತಕೋಟಿಯವರು ಎರಡನೆಯ ಮಾರ್ಗವನ್ನು ಆರಿಸಿಕೊಂಡವರು. ಈ ಎರಡು ದಾರಿಗಳೂ ಪರಸ್ಪರ ಸಂಧಿಸುವುದೇ ಇಲ್ಲ ಎಂದಲ್ಲ; ಎರಡರ ನಡುವೆ ಅನೇಕ ಕಿರುದಾರಿಗಳು ಇವೆರಡನ್ನೂ ಜೋಡಿಸುತ್ತವೆ. ಆದರೆ, ಯಾವ ಜೋಡಣೆಯ ಕಿರುದಾರಿಯನ್ನೂ ಪರಿಗಣಿಸದೆ, ನೇರವಾಗಿ ಕುರ್ತಕೋಟಿಯವರು ತಾವು ಆಯ್ಕೆ ಮಾಡಿಕೊಂಡ ದಾರಿಯಲ್ಲೇ ನಡೆದರು– ಪ್ರಾಯಃ, ಆವಶ್ಯಕತೆಗಿಂತ ಹೆಚ್ಚು ದೂರ.

■ ಡಾ. ಸಿ. ಎನ್. ರಾಮಚಂದ್ರನ್ : # ೮೯, ೩ ಮೇನ್, ಜೆ. ಪಿ. ನಗರ ೪ನೇ ಫೇಸ್
ಬೆಂಗಳೂರು-೫೬೦ ೦೭೮ ■

ಚಿತ್ರಬ್ರಹ್ಮ ಎಚ್. ಎಲ್. ಎನ್. ಸಿಂಹ

ಹೆಚ್. ಎ. ಪಾರ್ಶ್ವನಾಥ್

ಎಚ್. ಲಕ್ಷ್ಮೀನರಸಿಂಹ ಅವರು ಕನ್ನಡ ಚಲನಚಿತ್ರರಂಗದ ಅಧ್ವರ್ಯುಗಳಲ್ಲಿ ಒಬ್ಬರು. ಅತ್ಯಂತ ಜನಪ್ರಿಯ ಹಾಗೂ ಶಕ್ತಿಶಾಲಿ ಕಲಾಮಾಧ್ಯಮವಾದ ಸಿನಿಮಾವನ್ನು ಮನೋರಂಜನೆ ಮತ್ತು ಬೋಧನಾ ವಿಧಾನವಾಗಿ ಸಮಗ್ರವಾಗಿ ಬಳಸಿಕೊಂಡ ಪ್ರಕಾಂಡ ಪ್ರತಿಭಾಶಾಲಿ. ಸ್ವತಃ ಸತ್ವಯುತ ನಟ, ನಾಟಕಕಾರ, ಸಾಹಿತಿ. ನಿರ್ಮಾಪಕ ಮತ್ತು ನಿರ್ದೇಶಕನಾಗಿ ಅವರು ಏರಿದ ಎತ್ತರ ಬೆರಗುಗೊಳಿಸುವಂತಹುದು. ದಕ್ಷಿಣಕಾಶಿ ಮೈಸೂರು ಜಿಲ್ಲೆ ನಂಜನಗೂಡಿನ ಕಲಿಯಾಗಿ ಇಂಗ್ಲಿಷ್-ಕನ್ನಡ ಎರಡೂ ಭಾಷೆಗಳಲ್ಲಿ ಅವರು ಹೊಂದಿದ್ದ ಪ್ರಭುತ್ವ ನಿಜಕ್ಕೂ ಅಚ್ಚರಿ ಮೂಡಿಸುವಂತಹುದು. ತಮ್ಮ ಸನಿಹಕ್ಕೆ ಬಂದ ಎಲ್ಲರೊಡನೊಂದಾಗಿ ಸ್ನೇಹದ ಬಾಳ್ವೆ ನಡೆಸಿದವರು.

ಅವರು ಹುಟ್ಟಿದ್ದು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಮಾರಹಳ್ಳಿಯಲ್ಲಿ (೨೫ ಜುಲೈ ೧೯೦೪). ತಂದೆ ಶೇಕ್‌ದಾರ್‌ರಾಗಿದ್ದ ಎಚ್. ನರಸಿಂಹಯ್ಯನವರು ಮತ್ತು ತಾಯಿ ತಂಗಮ್ಮ(ಲಕ್ಷ್ಮಮ್ಮ)ನವರು. ಅವರ ಪೂರ್ವಜರು ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಹನಗೋಡು ಗ್ರಾಮದವರಾದುದರಿಂದ ಅದನ್ನೇ ಹೆಸರಿನ ಹಿಂದೆ ಸಂಕೇತವನ್ನಾಗಿ ಉಳಿಸಿಕೊಳ್ಳಲಾಯಿತು. ಸಿಂಹ ಅವರ ವಿದ್ಯಾಭ್ಯಾಸ ಅಂದಿನ ಮೆಥಾಡಿಸ್ಟ್ ಮಿಶನ್ ಶಾಲೆ, ಅಂದರೆ ಈಗಿನ ಹಾರ್ಡ್‌ವಿಕ್ ಹೈಸ್ಕೂಲ್‌ನಲ್ಲಿ ಜರುಗಿತು.

ಸಿಂಹ ಅವರು ತಮ್ಮ ಚಿಕ್ಕಂದಿನಿಂದಲೇ ರಂಗಭೂಮಿಯ ಸೆಳೆತಕ್ಕೆ ಸಿಲುಕಿದವರು. ಅಂದು ನಾಟಕ ಶಿರೋಮಣಿ ಎ. ವಿ. ವರದಾಚಾರ್ಯರು ತಮ್ಮ ರತ್ನಾವಳಿ ಥಿಯೇಟ್ರಿಕಲ್ ಕಂಪನಿಯಿಂದ ಅಭಿನಯಿಸುತ್ತಿದ್ದ ‘ಲಂಕಾದಹನ’ ಹಾಗೂ ‘ಸಂಗೀತ ಸುಭದ್ರ’ (ಸುಭದ್ರಾ ಪರಿಣಯ) ನಾಟಕಗಳು ಸಿಂಹ ಅವರ ಮನದಾಳದಲ್ಲಿ ಗಾಢವಾದ ಪರಿಣಾಮವನ್ನುಂಟು ಮಾಡಿದವು. ಅದರಲ್ಲಿಯೂ ಈ ಕಂಪನಿಯಲ್ಲಿದ್ದ ಜಿ. ನಾಗೇಶರಾಯರು ಮತ್ತು ಅಭಿನೇತ್ರಿ ಮಳವಳ್ಳಿ ಸುಂದರಮ್ಮನವರ ಶ್ರೇಷ್ಠ ಅಭಿನಯ ವಿಶೇಷವಾಗಿ ಮನ ಸೂರೆಗೊಂಡವು. ನಟಶ್ರೇಷ್ಠ ಮಹಮ್ಮದ್ ಪೀರ್‌ರವರ ಚಂದ್ರಕಲಾ ನಾಟಕ ಮಂಡಳಿಯ ‘ಷಾಜಹಾನ್’ ಮತ್ತು ‘ಗೌತಮ ಬುದ್ಧ’ ನಾಟಕಗಳು ಹಾಗೂ ನಟಭಯಂಕರ ಗಂಗಾಧರರಾಯರು ಮತ್ತು ಟಿ. ಎಸ್. ಗುರಿಕಾರ್ ಅವರು ನಡೆಸುತ್ತಿದ್ದ ಭಾರತ ಮನೋಲ್ಲಾಸಿನಿ ಕಂಪನಿಯ ಪ್ರದರ್ಶನಗಳು ಸಿಂಹ ಅವರ ಜೀವನಪಥವನ್ನು ನಿರ್ಧರಿಸಿದವು. ಕಳೆದ ಶತಮಾನದ ಐವತ್ತರ ದಶಕದಲ್ಲಿ ಹೊನ್ನಪ್ಪ ಭಾಗವತರ್, ಆರ್. ನಾಗೇಂದ್ರರಾವ್, ಗುಬ್ಬಿ ವೀರಣ್ಣ, ಸಿ. ಬಿ. ಮಲ್ಲಪ್ಪ, ಎಂ. ವಿ. ಸುಬ್ಬಯ್ಯ ನಾಯ್ಡು ಮತ್ತು ಕೆ. ಹಿರಣ್ಣಯ್ಯ ಮೊದಲಾದ ವೃತ್ತಿ ರಂಗ ದಿಗ್ಗಜರು ತಮ್ಮ ನಿತ್ಯನಿರಂತರ ರಂಗಕಾಯಕದೊಂದಿಗೆ ಸಿನಿಮಾಗಳನ್ನು ತೆಗೆಯುತ್ತಾ ಇಲ್ಲವೇ ಪಾತ್ರ ನಿರ್ವಹಿಸುತ್ತಾ ಕೈಸುಟ್ಟುಕೊಳ್ಳುತ್ತಾ ಛಲಬಿಡದ ತ್ರಿವಿಕ್ರಮರಂತೆ ಮತ್ತೆಮತ್ತೆ ಸಿನಿಮಾಗಳನ್ನು ನಿರ್ಮಿಸುತ್ತಾ ಮುಂದುವರಿದು ಆಗೊಮ್ಮೆ ಈಗೊಮ್ಮೆಯೆಂಬಂತೆ ಜಯ ಗಳಿಸುತ್ತಿದ್ದ ಕಾಲ.

ಅಂತಹ ಸಂದರ್ಭದಲ್ಲಿಯೇ ಸಿಂಹರವರು ಚಲನಚಿತ್ರರಂಗದ ಮಹತ್ವವನ್ನು ಮನಗಂಡರು. ರಂಗಭೂಮಿಯಲ್ಲಿ ತಾವು ಕಟ್ಟಿ ಬೆಳೆಸಿದ 'ಸಿಂಹ ಸೆಲೆಕ್ಟ್ ಆರ್ಟಿಸ್ಟ್ಸ್' ಸಂಸ್ಥೆಯಡಿಯಲ್ಲಿ 'ಸಂಸಾರನೌಕೆ', 'ಅಬ್ಬಾ! ಆ ಹುಡುಗಿ', 'ಬಂಗಾಳದ ಬರ' ಮತ್ತು 'ಗಂಡ್ಸರಾಜ್' ಮುಂತಾದ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸುತ್ತಲೇ ಚಿತ್ರರಂಗದತ್ತ ದಿಟ್ಟ ಹೆಜ್ಜೆಗಳನ್ನಿಟ್ಟವರು.

ಮೂಕಿ ಚಿತ್ರಗಳು

ಭಾರತದಲ್ಲಿ ಚಲನಚಿತ್ರಯುಗ ಪ್ರಾರಂಭವಾದದ್ದು ೧೮೯೬ರಲ್ಲಿ ಫ್ರಾನ್ಸಿನ ಲ್ಯೂಮಿಯೇರ್ ಸೋದರರ ಚಿತ್ರಗಳು ಮುಂಬಯಿಯಲ್ಲಿ ಪ್ರದರ್ಶಿತವಾದ ದಿನಗಳಿಂದ. ಕನ್ನಡ ನಾಡಿನ ಮಟ್ಟಿಗೆ ೧೯೩೪ ರಂದು ತಯಾರಾಗಿ ಬಿಡುಗಡೆಗೊಂಡ 'ಮೃಚ್ಛಕಟಿಕ' (ವಸಂತಸೇನೆ) ಮೂಕಿಚಿತ್ರ ಮಹತ್ತ್ವದ ಸಾಧನೆ. ಈ ಪರಿಧಿಯಲ್ಲಿ ವಿಹರಿಸಿದ ಎಚ್. ಎಲ್. ಎನ್. ಸಿಂಹ ಅವರಿಗೆ ರಂಗಭೂಮಿ ಮತ್ತು ಚಲನಚಿತ್ರ ರಂಗದ ನಂಟು ಹುಟ್ಟಿನಿಂದಲೇ ಉಂಟು. ಇದಕ್ಕೆ ಒತ್ತಾಸೆಯಾಗಿ ಕನ್ನಡ ರಂಗಭೂಮಿಯ ಪಿತಾಮಹ ಗುಬ್ಬಿ ವೀರಣ್ಣನವರು ವೃತ್ತಿರಂಗಭೂಮಿಯ ಅಭ್ಯುದಯಕ್ಕೆ ಶ್ರಮಿಸಿದಂತೆಯೇ ಕನ್ನಡ ಚಲನಚಿತ್ರ ಕ್ಷೇತ್ರದಲ್ಲಿಯೂ ಹಲವಾರು ಸಾಧನೆ-ಸಾಹಸಗಳನ್ನು ಮಾಡಿದರು. ೧೯೩೦ರಲ್ಲಿ ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್ ಹೆಸರಿನ ಸ್ಟುಡಿಯೋವನ್ನು ಬೆಂಗಳೂರು ಮಲ್ಲೇಶ್ವರಂ ಬಡಾವಣೆಯ ೧೩ ನೆಯ ಅಡ್ಡರಸ್ತೆಯ ಎಚ್. ವಿ. ನಂಜುಂಡಯ್ಯ ಅವರ ಬಂಗಲೆ ಆವರಣದ ವಿಶಾಲ ನಿವೇಶನದಲ್ಲಿ ಸ್ಥಾಪಿಸಲಾಯಿತು. ಇದು ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದ ದೇವುಡು ನರಸಿಂಹಶಾಸ್ತ್ರೀ, ಓರಿಯಂಟಲ್ ಬ್ಯಾಂಕ್ ಶ್ರೀನಿವಾಸಮೂರ್ತಿ, ಗುಬ್ಬಿ ವೀರಣ್ಣ ಮತ್ತು ಮುಮ್ಮಿ ಮುರಿಗೆಪ್ಪ ಇವರು ಷೇರುಗಳ ಮೂಲಕ ಸಂಗ್ರಹಿಸಿದ ೪೦,೦೦೦ ರೂಪಾಯಿಗಳ ಮೊತ್ತದಲ್ಲಿ ರೂಪುಗೊಂಡಿದ್ದು ಸ್ಟುಡಿಯೋ ಲ್ಯಾಬೋರೇಟರಿಯನ್ನೂ ಹೊಂದಿದ್ದಿತು. ಈ ಭವನವು ಮೈಸೂರು ವಿಶ್ವವಿದ್ಯಾನಿಲಯದ ಪ್ರಥಮ ಉಪಕುಲಪತಿ ಎಚ್. ವಿ. ನಂಜುಂಡಯ್ಯನವರದಾಗಿದ್ದಿತು. ಬೆಲ್ಜಿಯಂ ಎಜ್ಯುಕೇಶನಲ್ ಫಿಲ್ಮ್ ಸೊಸೈಟಿಯ ನಿರ್ದೇಶಕರಾಗಿದ್ದ ಆಲ್‌ಗುಡ್ ಅವರು ಸಂಸ್ಥೆಯ ತಾಂತ್ರಿಕ ಸಲಹೆಗಾರರಾಗಿದ್ದರು. ೧೯೩೧ ರಂದು ೨೫,೦೦೦ ರೂಪಾಯಿಗಳ ವೆಚ್ಚದಲ್ಲಿ ದೇವುಡು ನರಸಿಂಹಶಾಸ್ತ್ರೀಗಳ 'ಕಳ್ಳರ ಕೂಟ' ಕಾದಂಬರಿಯನ್ನಾಧರಿಸಿ His Love Affairs ಚಿತ್ರವನ್ನು ತಯಾರಿಸಲಾಯಿತು. ಇವರಲ್ಲಿ ನಾಯಕನಟನಾಗಿ ಎಂ. ವಿ. ಸುಬ್ಬಯ್ಯ ನಾಯ್ಡು, ಗುಬ್ಬಿ ವೀರಣ್ಣ, ಎಚ್. ಎಲ್. ಎನ್. ಸಿಂಹ, ಲಲಿತಾ ಪವಾರ್, ಜೆ. ಸಿ. ಪವಾರ್ ಹಾಗೂ ಕಥಾನಾಯಕಿಯಾಗಿ ಬಿ. ಜಯಮ್ಮ ಮತ್ತು ಜಿ. ಸುಂದರಮ್ಮ, ಚಂದ್ರಮ್ಮ ಮುಂತಾದವರು ಅಭಿನಯಿಸಿದ್ದರು. ಆಲ್‌ಗುಡ್ ಅವರು ನಿರ್ದೇಶಿಸಿದ್ದರು. ಸಿಂಹ ಅವರು ಈ ಬ್ಯಾನರಿನ ಇನ್ನೊಂದು ಚಿತ್ರ Song of Life (೧೯೩೪)ನಲ್ಲಿಯೂ ಅಭಿನಯಿಸಿದ್ದರು. ಅಲ್ಲದೆ ಈ ಎರಡೂ ಚಿತ್ರಗಳ ಸಹಾಯಕ ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸಿದ್ದರು. ಅಚ್ಚ ಕನ್ನಡಿಗರೇ ಈ ಚಿತ್ರಗಳನ್ನು ತಯಾರಿಸಿದ್ದರೂ ಇಂಗ್ಲಿಷ್ ಹೆಸರುಗಳನ್ನು ಇಟ್ಟಿದುದು ವಿಶೇಷವೆನಿಸಿದರೂ ಈ ಕುರಿತು ಬಿ. ಜಯಮ್ಮನವರು, 'ಜನ ನಮ್ಮ ಚಿತ್ರವನ್ನು ನೋಡಲು ಬರುವಂತೆ ಮಾಡಲು ಇಂಗ್ಲಿಷ್

ಹೆಸರನ್ನಿಡುತ್ತಿದ್ದೆವು. ಆ ಹೊತ್ತು ಚಿತ್ರಕ್ಕೆ ಇಂಗ್ಲಿಷ್ ಹೆಸರಿಟ್ಟರೇ ಒಂದು ದೊಡ್ಡಸ್ತಿಕೆಯಾಗುತ್ತಿತ್ತು' ಎಂದು ಹಲವು ಬಾರಿ ಹೇಳಿದ್ದುಂಟು. ಗುಬ್ಬಿ ವೀರಣ್ಣನವರು ನೀಡಿದ ಪ್ರೋತ್ಸಾಹದಿಂದ ಉತ್ಸಾಹ ತುಂಬಿಕೊಂಡ ಸಿಂಹ ಅವರು ಮೂಕಿ ಚಿತ್ರಗಳ ಕಾಲದಲ್ಲಿಯೇ ಕನ್ನಡ ಜನರ ಲಕ್ಷ್ಯವನ್ನು ತಮ್ಮತ್ತ ಸೆಳೆದುಕೊಂಡರು. ಚಿತ್ರಗಳಲ್ಲಿ ಯಾವುದೇ ಭಾಷೆ ಒಳಗೊಂಡಿರದಿದ್ದರೂ ಅವು ಕನ್ನಡತನವನ್ನು ಪಡೆದಿದ್ದವು. ಮುಂದೆ ಮೈತಳೆದ ಕನ್ನಡ ಟಾಕಿ ಚಿತ್ರಗಳ ರೂಪರೇಷೆಗಳು ಇಲ್ಲಿಯೇ ಅಂಕುರಿಸಿದ್ದವು ಎನ್ನಬಹುದು.

ಟಾಕಿ ಚಿತ್ರಗಳು

ಒಮ್ಮೆ ಬೆಂಗಳೂರಿನ ಸಿಟಿ ಮಾರ್ಕೆಟ್ ಸಮೀಪದಲ್ಲಿದ್ದ ಲೋಕೋಪಕಾರಿ ದೊಡ್ಡಣ್ಣ ಶೆಟ್ಟರ ನಾಟಕಮಂದಿರವಾಗಿದ್ದು, ತದನಂತರ ಅಲ್ಲಿಯೇ ಪ್ಯಾರಾಮೌಂಟ್ ಚಿತ್ರಮಂದಿರವಾಗಿ ರೂಪುಗೊಂಡಲ್ಲಿ (ಈಗ ಅದೇ ಸ್ಥಳದಲ್ಲಿ ಪರಿಮಳ-ಪ್ರದೀಪ್ ಚಿತ್ರಮಂದಿರಗಳಿವೆ) ತೆರೆಕಂಡ ಸೌತ್ ಇಂಡಿಯಾ ಮೂವಿಟೋನ್‌ರವರ 'ಸತೀ ಸುಲೋಚನಾ' ಅರ್ಥಾತ್ 'ಇಂದ್ರಜಿತ್ ವಧೆ' ಕನ್ನಡದ ಪ್ರಪ್ರಥಮ ವಾಕ್ಚಿತ್ರವಾಗಿದೆ (ನಿರ್ದೇಶನ : ವೈ. ವಿ. ರಾವ್). ಇದು ಆರು ವಾರಗಳ ಪರ್ಯಂತ ಪ್ರದರ್ಶಿತಗೊಂಡಿದ್ದಿತು.

೩ ಮಾರ್ಚ್ ೧೯೩೪ ರಂದು ಬೆಂಗಳೂರಿನಲ್ಲಿ ಬೆಳ್ಳಿತೆರೆಯನ್ನು ಅಲಂಕರಿಸಿದ ಚಿತ್ರ 'ಸತೀ ಸುಲೋಚನಾ'ವಾಗಿದ್ದರೂ ಅದಕ್ಕಿಂತ ಮೊದಲು ಜಯವಾಣಿ ಟಾಕೀಸ್‌ರವರ ವೈ. ಪಾರ್ಶ್ವನಾಥ ಆಲ್ಟೇಕರ್ ನಿರ್ದೇಶಿತ 'ಭಕ್ತ ಧ್ರುವ' ೧೯೩೪ ರ ಆರಂಭದಲ್ಲಿಯೇ ತಯಾರಾಗಿದ್ದಿತು. ಆದರೆ ಅದು ತೆರೆ ಕಾಣುವಲ್ಲಿ ವಿಳಂಬವಾದುದರಿಂದ ಆ ಕೀರ್ತಿ 'ಸತೀ ಸುಲೋಚನಾ' ಚಿತ್ರಕ್ಕೆ ಸಂದಿತು. ಇದರ ಪಾತ್ರವರ್ಗದಲ್ಲಿ ಆರ್. ನಾಗೇಂದ್ರರಾವ್, ಎಂ. ವಿ. ಸುಬ್ಬಯ್ಯ ನಾಯ್ಡು (ನಾಯಕ), ಲಕ್ಷ್ಮೀಬಾಯಿ, ತ್ರಿಪುರಾಂಬ ಮತ್ತು ಸಿ. ಟಿ. ಶೇಷಾಚಲಂ ಮತ್ತಿತರರು ಇದ್ದರು. ಅಲ್ಲದೆ ಇದಕ್ಕೆ ಆರ್. ನಾಗೇಂದ್ರರಾಯರ ಸಂಗೀತವಿದ್ದಿತು. ಎಚ್. ಆರ್. ಪದ್ಮನಾಭಶಾಸ್ತ್ರೀಯವರು ಇದರ ಸಹಾಯಕ ಸಂಗೀತ ನಿರ್ದೇಶಕರಾಗಿದ್ದರು. ಅಂದು ಇದರ ತಯಾರಿಕೆಗೆ ತಗುಲಿದ್ದ ವೆಚ್ಚ ೫೦,೦೦೦ ರೂಪಾಯಿಗಳು.

ಎಚ್. ಎಲ್. ಎನ್. ಸಿಂಹ ಅವರು 'ಸಂಸಾರ ನೌಕೆ' ಎಂಬ ಜನಪ್ರಿಯ ಕೌಟುಂಬಿಕ ನಾಟಕವನ್ನು ರಚಿಸಿದ್ದರು. ಸಮಾಜದಲ್ಲಿ ಎಡೆಬಿಡದೆ ಕಂಡುಬಂದ ಅನ್ಯಾಯ, ಅತ್ಯಾಚಾರ, ಅನಾಚಾರ, ನಿರುದ್ಯೋಗ ಹಾಗೂ ಗಂಡು-ಹೆಣ್ಣಿನ ಸಮಸ್ಯೆಗಳು ಮುಂತಾದ ಸಮಕಾಲೀನ ವ್ಯತ್ಯಯಗಳನ್ನು ಚರ್ಚಿಸಿ ಬಯಲಿಗೆಳೆಯುವ ಈ ನಾಟಕದ ಕಥಾವಸ್ತು ಅಂದಿನ ದಿನಗಳಲ್ಲಿ ಕನ್ನಡ ರಂಗಭೂಮಿಯಲ್ಲಿ ಕ್ರಾಂತಿಯನ್ನುಂಟುಮಾಡಿತು. ಅಂದು ಪ್ರದರ್ಶನಗೊಳ್ಳುತ್ತಿದ್ದ ಪೌರಾಣಿಕ ಮತ್ತು ಜಾನಪದ ನಾಟಕಗಳ ಹೊರತಾಗಿ ಸಾಮಾಜಿಕ ನಾಟಕಗಳತ್ತ ತಮ್ಮ ಗಮನ ಹರಿಸಿದ ಸಿಂಹ ಅವರದು ರಚನಾತ್ಮಕ ಹಾಗೂ ಪ್ರಗತಿಪರ ದೃಷ್ಟಿಕೋನ. ಒಮ್ಮೆ ಮದರಾಸಿನ ಸೌಂದರ್ಯ ಮಹಲ್‌ನಲ್ಲಿ ಈ ನಾಟಕದ ಪ್ರದರ್ಶನವಾಗುತ್ತಿದ್ದಾಗ ನೋಡಿದ 'ಆನಂದ ವಿಕಟನ್' ಪತ್ರಿಕೆಯ ಸಂಪಾದಕರಾಗಿದ್ದ ಕನ್ನಡಿಗ ಹಾಗೂ ನಗೆಬರಹಗಾರ ನಾರದರ್ ಶ್ರೀನಿವಾಸರಾವ್ ಎಂಬುವರು ಸೇಲಂ ಕನ್ನಡವನ್ನು ತಮ್ಮ ಮನೆಮಾತಾಗಿರಿಸಿಕೊಂಡಿದ್ದ ನಂಜಪ್ಪ ಚೆಟ್ಟಿಯಾರ್ ಮತ್ತು ಅವರ ಸೋದರ ಸೇಲಂನ ಕೆ. ರಾಜಗೋಪಾಲ್ ಚೆಟ್ಟಿಯಾರ್

ಅವರಿಗೆ ಈ ನಾಟಕವನ್ನು ನೋಡಲು ಸಲಹೆ ಮಾಡಿದರು. ಇದನ್ನು ನೋಡಿ ಮೆಚ್ಚಿಕೊಂಡ ರಾಜಗೋಪಾಲ್ ಚೆಟ್ಟಿಯಾರ್‌ರವರು ಚಲನಚಿತ್ರವಾಗಿ ತಯಾರಿಸಲು ಮುಂದೆ ಬಂದರು. ತತ್ಪರಿಣಾಮವಾಗಿ ಇದು ಮದರಾಸಿನ ವೇಲ್ ಪಿಕ್ಚರ್ಸ್ ಸ್ಟುಡಿಯೋದಲ್ಲಿ ಚಿತ್ರೀಕರಣಗೊಂಡಿತು. ನಾಟಕದಲ್ಲಿ ಪಾತ್ರ ವಹಿಸುತ್ತಿದ್ದ ಕಲಾವಿದರನ್ನೇ ಹಾಗೂ ಆಯಾಯಾ ಪಾತ್ರಗಳನ್ನು ನಿರ್ವಹಿಸಲು ಆಯ್ದುಕೊಳ್ಳಲಾಯಿತು. ಬಿ. ಆರ್. ಪಂತುಲು ಸುಂದರನಾಗಿ, ಎಂ. ವಿ. ರಾಜಮ್ಮ ಸರಳೆಯಾಗಿ, ಎಸ್. ಕೆ. ಪದ್ಮಾದೇವಿ ಸುಶೀಲೆಯಾಗಿ, ವಿ. ಸರೋಜಮ್ಮ ಗಿರಿಜೆಯಾಗಿ, ಎಂ. ಮಾಧವರಾವ್ ಡಿಕ್ಕಿಯಾಗಿ, ಎಂ. ಎಸ್. ಮಾಧವರಾವ್ (ತಮಾಷಾ) ಮಾಧುವಾಗಿ ಮತ್ತು ಎಚ್. ಎನ್. ರಾಮಕೃಷ್ಣ ಭಟ್ ದೊಡ್ಡಮ್ಮನಾಗಿ ಅಭಿನಯಿಸಿದರು. ಇದರ ಇತರ ಪಾತ್ರಧಾರಿಗಳೆಂದರೆ ಬಿ. ವಿ. ಕೃಷ್ಣಮೂರ್ತಿ, ಜಿ. ಟಿ. ಬಾಲಕೃಷ್ಣರಾವ್ (ಆಚಾರ್) ಮತ್ತು ಹೆಚ್. ಆರ್. ಹನುಮಂತರಾವ್ (ಬ್ಯಾರಿಸ್ಟರ್ ಪುರುಷೋತ್ತಮ್) ಅವರು. ಎಂ. ವಿ. ರಾಜಮ್ಮ ಅವರು ಸರಳೆಯ ಪಾತ್ರಧಾರೆಯಾಗಿ ಪ್ರೇಕ್ಷಕರ ಹೃದಯ ಕಲಕಿ ಕಣ್ಣೀರು ತಂದಂತಹ ಅಭಿನಯವನ್ನು ನೀಡಿದ್ದರು. ಡಿಕ್ಕಿ ಮಾಧವರಾಯರು ಪಾತ್ರ ನಿರ್ವಹಿಸುವುದರೊಂದಿಗೆ ಸಂಗೀತ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದರು. ಎಚ್. ಎಲ್. ಎನ್. ಸಿಂಹ ಅವರು ಚಿತ್ರವನ್ನು ನಿರ್ದೇಶಿಸುವುದರೊಂದಿಗೆ ಸಂಭಾಷಣೆ ಮತ್ತು ಚಿತ್ರಕಥೆಯನ್ನೂ ಬರೆದಿದ್ದರು ಹಾಗೂ ಒಂದು ಪಾತ್ರದಲ್ಲಿ ಕೂಡ ಕಾಣಿಸಿಕೊಂಡಿದ್ದರು. ನಿರ್ದೇಶನದಲ್ಲಿ ಕೆ. ನಂಜಪ್ಪ ಚೆಟ್ಟಿಯಾರ್ ಅವರು ನೆರವಾಗಿದ್ದರು. ಚಿತ್ರದಲ್ಲಿ ೧೭ ಹಾಡುಗಳಿದ್ದು ಒಂದು ಹಾಡು ತಮಿಳು ಭಾಷೆಯಲ್ಲಿದ್ದುದು ಗಮನಾರ್ಹ. ಸಂತ ಪಟ್ಟನಾಥರ್ ಅವರ ಈ ರಚನೆಯನ್ನು ಎಂ. ದಂಡಪಾಣಿ ದೇಶಿಕರ್ ಅವರು ಕಲ್ಯಾಣಿ ರಾಗದಲ್ಲಿ ಹಾಡಿದ್ದು ಕಥಾನಾಯಕನ ಸಂಕಷ್ಟವನ್ನು ಚಿತ್ರಿಸಲು ಹಿನ್ನೆಲೆ ಗೀತೆಯನ್ನಾಗಿ ಬಳಸಲಾಗಿದ್ದಿತೆಂದು ದಾಖಲೆಗಳು ತಿಳಿಸುತ್ತವೆ. ೧೯೩೬ ರಲ್ಲಿ ತೆರೆಕಂಡ ಈ ಚಿತ್ರ ಅತ್ಯಂತ ಯಶಸ್ವಿಯಾಯಿತು; ನೂರು ದಿನಗಳು ಓಡಿ ಜಯಭೇರಿ ಬಾರಿಸಿತು. ಇದನ್ನು ತಯಾರಿಸಲು ಹಿಡಿದ ಅವಧಿ ಸುಮಾರು ಆರು ತಿಂಗಳುಗಳು. ಚಿತ್ರವು ಸುಮಾರು ೨೨,೦೦೦ ರೂಪಾಯಿಗಳ ವೆಚ್ಚದಲ್ಲಿ ತಯಾರಾಗಿ ೨.೫ ಲಕ್ಷ ರೂಪಾಯಿಗಳನ್ನು ಗಳಿಸಿದ್ದು ಒಂದು ದಾಖಲೆ. ಅಲ್ಲದೆ ಮದ್ರಾಸ್ ಚಿತ್ರೋದ್ಯಮಿಗಳೆಲ್ಲ 'ಸಂಸಾರ ನೌಕೆ' ಕನ್ನಡ ಚಿತ್ರವನ್ನು ವೀಕ್ಷಿಸುವಂತೆ ಮಾಡಿದುದು ಒಂದು ವಿಶೇಷ. ಚಿತ್ರವು ಕನ್ನಡ ನಾಡಿನೆಲ್ಲೆಡೆಯಲ್ಲದೆ ತಮಿಳುನಾಡು ಮತ್ತು ಆಂಧ್ರಪ್ರದೇಶ ಗಳೆಡೆಗಳಲ್ಲೂ ಪ್ರದರ್ಶನಗೊಂಡಿತು. ಕನ್ನಡ ಚಿತ್ರರಂಗಕ್ಕೆ ಹೊಸ ತಿರುವನ್ನು ನೀಡಿದ ಈ ಚಿತ್ರವು ಕನ್ನಡದ ಮೊದಲ ಸಾಮಾಜಿಕ ಚಿತ್ರ ಹಾಗೂ ದಕ್ಷಿಣ ಭಾರತದಲ್ಲಿ ತಯಾರಾದ ಎರಡನೆಯ ಸಾಮಾಜಿಕ ಚಿತ್ರವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಮೊದಲನೆಯದು ತಮಿಳಿನ 'ಮೇನಕಾ'. ಪಂತುಲು ಅವರನ್ನೇ ಕಥಾನಾಯಕನನ್ನಾಗಿ ಹಾಗೂ ನಾಯಕಿಯಾಗಿ ನೃತ್ಯನಟಿ ತ್ರಿಚೂರ್ ಪ್ರೇಮಾವತಿಯವರು ಅಭಿನಯಿಸಿದ 'ಸಂಸಾರ ನೌಕ'ವನ್ನು ಎಚ್. ಎಲ್. ಎನ್. ಸಿಂಹ ಅವರು ದಿಗ್ದರ್ಶಿಸಿದರೂ ಕನ್ನಡ ಚಿತ್ರದ ಮಾಂತ್ರಿಕ ಶಕ್ತಿ ಅದಕ್ಕಿರದಿದ್ದ ಕಾರಣ ಚಿತ್ರ ಭಾರೀ ನಷ್ಟವನ್ನನುಭವಿಸಿತು.

೧೬-೧-೧೯೫೩ ರಲ್ಲಿ ತೆರೆಕಂಡ ಎಚ್. ಎಲ್. ಎನ್. ಸಿಂಹ ಅವರು ನಿರ್ದೇಶಿಸಿದ ಗುಬ್ಬಿ ಕರ್ನಾಟಕ ಫಿಲ್ಮ್ಸ್‌ನ ಮೊದಲ ಚಿತ್ರ 'ಗುಣಸಾಗರಿ' ಭಾರಿ ಯಶಸ್ಸು ಗಳಿಸಿದ ಜಾನಪದ ಚಿತ್ರ. ನಟಿ ಪಂಡರಿಬಾಯಿ ಮತ್ತು ನಟ ಸಿ. ಹೊನ್ನಪ್ಪ ಭಾಗವತರ್ ಅವರು ಇದರ ಪ್ರಧಾನ ಭೂಮಿಕೆಯಲ್ಲಿದ್ದರು. ಅಲ್ಲದೆ ಬಿ. ಜಯಮ್ಮ, ಬಿ. ಕಮಲಮ್ಮ, ಟಿ. ಕೃಷ್ಣಾಕುಮಾರಿ, ರಾಜಾ ಸುಲೋಚನ, ಸಿ. ಆರ್. ಬಸವರಾಜ್, ಗಣಪತಿ ಭಟ್, ಟಿ. ಎಸ್. ಕರಿಬಸವಯ್ಯ, ಹನುಮಂತಾಚಾರ್, ಜಿ. ಹೆಚ್. ವೀರಣ್ಣ ಮತ್ತು ಬಳ್ಳಾರಿ ಲಕ್ಷ್ಮೀಕಾಂತಂ ಮುಂತಾದವರು ತಾರಾಗಣದಲ್ಲಿದ್ದರು. ತಮಿಳು ನಟ ಟಿ. ಎಸ್. ಬಾಲಯ್ಯನವರು ಕೂಡ ಅಭಿನಯಿಸಿದ್ದರು. ಮೊದಲು ಸಾಧ್ವಿ ಗುಣಸಾಗರಿ ಪಾತ್ರಕ್ಕೆ ಬಿ. ಜಯಮ್ಮನವರು ಆಯ್ಕೆಯಾಗಿದ್ದರು ಕೂಡ, 'ಆ ಪಾತ್ರವನ್ನು ನನಗಿಂತಲೂ ಸಣ್ಣ ವಯಸ್ಸಿನವರು ವಹಿಸಿದರೆ ಚೆನ್ನಾಗಿರುತ್ತದೆ' ಎಂದು ಹೇಳಿದುದರಿಂದ ಪಂಡರಿಬಾಯಿಯವರು ನಿರ್ವಹಿಸಬೇಕಾಯಿತು. ಪಂಡರಿಬಾಯಿಯವರ ಮಾತುಗಳಲ್ಲೇ ಹೇಳುವುದಾದರೆ, 'ಕನ್ನಡ ರಂಗಭೂಮಿ, ಚಿತ್ರರಂಗದ ಹಿರಿಯ ಅಭಿನೇತ್ರಿ ಬಿ. ಜಯಮ್ಮನವರು ಆ ಪಾತ್ರಕ್ಕೆ ಆಯ್ಕೆಯಾಗಿದ್ದರು. ಆದರೆ ಅವರು ತಮ್ಮ ಪಾತ್ರವನ್ನು ನನಗೆ ಬಿಟ್ಟುಕೊಟ್ಟರು. ಅವರ ಈ ತ್ಯಾಗವನ್ನು ನಾನು ಆಜೀವಪರ್ಯಂತ ಮರೆಯಲಾರೆ.' ಈ ಚಿತ್ರವು ರಾಜಾ ಸುಲೋಚನ, ಗಣಪತಿ ಭಟ್ ಮತ್ತು ಯೂನಿವಾಕ್ಸ್ ವಾದ್ಯ ಖ್ಯಾತಿ ಬಿ. ಹನುಮಂತಾಚಾರ್‌ರಂಥ ಮಹಾನ್ ಕಲಾವಿದರನ್ನು ಚಿತ್ರರಂಗಕ್ಕೆ ಪರಿಚಯಿಸಿತು. ಟಿ. ಎಸ್. ಭಗವತಿ, ಎಂ. ಎಸ್. ರಾಜೇಶ್ವರಿ, ವಿ. ಜಿ. ಶರ್ಮಾ ಅವರು ಗಾಯಕ-ಗಾಯಕಿಯರಾಗಿದ್ದರು, ಆರ್. ಸುದರ್ಶನಂ ಸಂಗೀತ ನಿರ್ದೇಶಕರಾಗಿದ್ದರು. ಇದನ್ನು ತಯಾರಿಸಲು ೩ ವರ್ಷಗಳು ಹಿಡಿಯಿತು. ಗುಬ್ಬಿ ವೀರಣ್ಣನವರು 'ಗುಣಸಾಗರಿ'ಯಿಂದ ಕೀರ್ತಿ ಮತ್ತು ಹಣವನ್ನು ಗಳಿಸಿದರು. ಅವರ ತಾಯಿ ರುದ್ರಮ್ಮನವರು ಹಾಡುತ್ತಿದ್ದ ಜಾನಪದ ಗೀತೆಗಳು ಹಾಗೂ ಹೇಳುತ್ತಿದ್ದ ಜಾನಪದ ಕಥೆಗಳು ಈ ಚಿತ್ರದ ಯಶಸ್ಸಿಗೆ ಕಾರಣೀಭೂತವಾಗಿದ್ದವು ಎಂಬುದು ಗಮನಾರ್ಹ ಸಂಗತಿ. ಇದನ್ನು 'ಸತ್ಯ ಶೋಧನೈ' ಎಂದು ತಮಿಳು ಭಾಷೆಯಲ್ಲಿ ನಿರ್ಮಿಸಲಾಗಿದ್ದಿತು.

೧೯೫೪ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಮಹತ್ವದ ವರುಷ. ಕಾರಣ ಕನ್ನಡ ಚಿತ್ರರಂಗಕ್ಕೆ ಸತ್ವಶಾಲಿ ನಟ ರಾಜಕುಮಾರ್ ಅವರನ್ನು ಕಥಾನಾಯಕನನ್ನಾಗಿ ಎಚ್. ಎಲ್. ಎನ್. ಸಿಂಹ ಅವರು ಪರಿಚಯಿಸಿದ ವರ್ಷ. ಗುಬ್ಬಿ ಕರ್ನಾಟಕ ಫಿಲ್ಮ್ಸ್‌ನ 'ಬೇಡರ ಕಣ್ಣಪ್ಪ' ಚಿತ್ರವು ಶಿವರಾತ್ರಿಯಾದ ಕೆಲವೇ ದಿನಗಳಲ್ಲಿ ಅಂದರೆ ೫-೫-೧೯೫೪ ರಂದು ಬಿಡುಗಡೆಯಾಯಿತು. ಸುಬ್ಬಯ್ಯ ನಾಯ್ಡು ಅವರ ಕಂಪನಿಯಲ್ಲಿದ್ದ ರಂಗಭೂಮಿಯ ಎಸ್. ಪಿ. ಮುತ್ತುರಾಜುಗೆ ಸಿಂಹ ಅವರು ರಾಜಕುಮಾರ್ ಎಂದು ನಾಮಕರಣ ಮಾಡಿದರು. ಚಿತ್ರಕ್ಕೆ ರಾಜಕುಮಾರ್ ಅವರನ್ನು ಆಯ್ಕೆ ಮಾಡಿದಾಗ ಅನೇಕರು ಅವರ ಉದ್ದ ಮೂಗನ್ನು ನೋಡಿ ಮೂಗು ಮುರಿದರು, ನಿರ್ಮಾಪಕರೂ ಹಿಂಜರಿದರು. ಆದರೆ ಸಿಂಹ ಅವರು ಪಟ್ಟುಬಿಡದೆ ಅವರನ್ನೇ ನಾಯಕನ ಪಾತ್ರಕ್ಕೆ ಆಯ್ಕೆ ಮಾಡಿದರು. ನಾಸ್ತಿಕ ಬೇಡ ದಿಣ್ಣ ಆಸ್ತಿಕನಾದ ಕಣ್ಣಪ್ಪನ ಪತ್ನಿ ನೀಲಾ ಪಾತ್ರವನ್ನು ಪಂಡರಿಬಾಯಿಯವರು ಬಹಳ ಶ್ರದ್ಧೆ ಹಾಗೂ ತಾದಾತ್ಮ್ಯ ಭಾವದಿಂದ ಅಭಿನಯಿಸಿದರು. ಅವರು, 'ಚಿತ್ರದ ನಿರ್ದೇಶಕ ಎಚ್. ಎಲ್. ಎನ್. ಸಿಂಹ

ಅವರ ಪ್ರೋತ್ಸಾಹ, ಬೆಂಬಲದಿಂದ ಈ ಪಾತ್ರ ನನಗೆ ದೊರೆಯಿತು. ಸಿಂಹ ಅವರ ಸಹಕಾರವನ್ನು ನಾನು ಎಂದಿಗೂ ಮರೆಯಲು ಸಾಧ್ಯವೇ ಇಲ್ಲ' ಎನ್ನುತ್ತಿದ್ದರು. ಈ ಚಿತ್ರದ ಕಾಶಿ ಪಾತ್ರದಲ್ಲಿ ನರಸಿಂಹರಾಜು ಅವರು ಕಾಣಿಸಿಕೊಳ್ಳುವುದರ ಮೂಲಕ ಚಿತ್ರರಂಗವನ್ನು ಪ್ರವೇಶಿಸಿದರು. ಕೈಲಾಸ ಶಾಸ್ತ್ರೀಯಾಗಿ ಜಿ. ವಿ. ಅಯ್ಯರ್ ಅವರು ಹೆಚ್ಚು ಬೆಳಕಿಗೆ ಬಂದರು. ಹೆಚ್. ರಾಮಚಂದ್ರ ಶಾಸ್ತ್ರೀಯವರು ಪರಮೇಶ್ವರನಾಗಿ ಅಭಿನಯಿಸಿದರು. ತೆಲುಗಿನ ಮೋಹಕ ತಾರೆ ರಾಜಾ ಸುಲೋಚನ ಅವರಲ್ಲದೇ ಸಂಧ್ಯಾ, ಬಿ. ಶಾರದಮ್ಮ, ಎಸ್. ಆರ್. ರಾಜು, ಎಂ. ಆರ್. ದಾಸಪ್ಪ ಮತ್ತು ಟಿ. ಕೆ. ಉಪೇಂದ್ರ ನಾರಾಯಣ ಮುಂತಾದವರು ತಾರಾಗಣದಲ್ಲಿದ್ದರು. ಆರ್. ಸುದರ್ಶನಂ ಸಂಗೀತ ನೀಡಿದ್ದರೆ ಗೀತೆಗಳನ್ನು ಎಸ್. ಎನ್. ನಂಜಪ್ಪನವರು ಬರೆದಿದ್ದರು. ಚಿತ್ರದಲ್ಲಿ ಜಯರಾಂ ಹಾಡಿರುವ 'ಶಿವಪ್ಪ ಕಾಯೋ ತಂದೆ ಮೂರು ಲೋಕ ಸ್ವಾಮಿ ದೇವ, ಹಸಿವೆಯನ್ನು ತಾಳಲಾರೆ ಕಾಪಾಡೆಯಾ...' ಎಂಬ ಹಾಡು ಕನ್ನಡಿಗರ ನಾಲಿಗೆಯ ಮೇಲೆ ನಲಿದಾಡಿ ಜನಪ್ರಿಯತೆಯ ತುಟ್ಟತುದಿಗೇರಿತು. ಈ ಹಾಡಿನ ಮೋಡಿಗೆ ಮತ್ತು ಅದಕ್ಕೆ ತಕ್ಕಂತೆ ರಾಜಕುಮಾರ್ ಅವರು ನೀಡಿದ ಭಕ್ತಿಭಾವಪರವಶತೆಯ ಅಭಿನಯಕ್ಕೆ ಎಲ್ಲರೂ ಹರ್ಷಗೈದರು. ಅದೊಂದು ಅವಿಸ್ಮರಣೀಯ ಘಳಿಗೆ: "ಚಿತ್ರ ಬಿಡುಗಡೆಯ ಮೊದಲ ದಿನ ಬೆಂಗಳೂರು ಸಾಗರ್ ಟಾಕೀಸ್‌ನಲ್ಲಿ ಬೆಂಚ್‌ಕ್ಲಾಸ್ ಪ್ರೇಕ್ಷಕರ ನಡುವೆ ಮಫ್ಲರ್ ತೊಟ್ಟು ಎ. ವಿ. ಮೇಯಪ್ಪ ಚೆಟ್ಟಿಯಾರ್ ಸದ್ದಿಲ್ಲದೆ ಚಿತ್ರ ನೋಡುತ್ತಿದ್ದರು. 'ಶಿವಪ್ಪ ಕಾಯೋ ತಂದೆ...' ಹಾಡನ್ನು ತೆರೆಯಲ್ಲಿ ಕಂಡ ಪ್ರೇಕ್ಷಕರು ಉದ್ವೇಗದಿಂದ ಹಣದ ಮಳೆಯನ್ನೇ ಪರದೆಯ ಮೇಲೆ ಹರಿಸಿದರು. ಇದನ್ನು ಕಂಡ ಚೆಟ್ಟಿಯಾರ್ ಸಂತಸದಿಂದ ನನ್ನ ತಂದೆ ಎಚ್. ಎಲ್. ಎನ್. ಸಿಂಹ ಅವರನ್ನು 'Your imagination is Marvellous' ಎಂದು ಅಪ್ಪಿಕೊಂಡರಂತೆ." (ಎಚ್. ಎಲ್. ಶೇಷಚಂದ್ರ: ತರಂಗ, ಜೂನ್ ೧೯೯೧.) ಚಿತ್ರವು ತಾಂತ್ರಿಕವಾಗಿಯೂ ಗಮನ ಸೆಳೆಯಿತು. ಚಿತ್ರದ ಇತರ ಗಾಯಕ-ಗಾಯಕಿಯರೆಂದರೆ ಚಿದಂಬರಂ, ಎಂ. ಎಲ್. ವಸಂತಕುಮಾರಿ, ಭಗವತಿ ಮುಂತಾದವರು. ಎಸ್. ಎನ್. ನಂಜಪ್ಪನವರು ಗೀತರಚನಕಾರರಾಗಿದ್ದುದಲ್ಲದೆ ಗಾಯಕರೂ ಆಗಿದ್ದರು. ಈ ಸೂಪರ್‌ಹಿಟ್ ಭಕ್ತಿಪ್ರಧಾನ ಚಿತ್ರವು ಪ್ರಪ್ರಥಮವಾಗಿ ರಾಷ್ಟ್ರಪ್ರಶಸ್ತಿ ಪುರಸ್ಕಾರ ಪತ್ರವನ್ನು ಪಡೆದ ಹೆಗ್ಗಳಿಕೆಯನ್ನು ತನ್ನದಾಗಿಸಿಕೊಂಡಿತು.

ಕನ್ನಡದ 'ಬೇಡರ ಕಣ್ಣಪ್ಪ' ಬಾರಿಸಿದ ವಿಜಯಭೇರಿಯಿಂದಾಗಿ ತೆಲುಗಿನಲ್ಲಿ ರಾಜಕುಮಾರ್ ಅವರ ಕಥಾನಾಯಕತ್ವದಲ್ಲೇ ಹಾಗೂ ಮಾಲತಿಯವರು ನಾಯಕಿಯಾಗಿದ್ದ 'ಕಾಳಹಸ್ತಿ ಮಹಾತ್ಮ್ಯಂ' ನಿರ್ಮಾಣಗೊಂಡಿತು. ತಮಿಳಿನಲ್ಲಿ 'ಪೇಡನ್ ಕಣ್ಣಪ್ಪ' ಆಗಿ ತೆರೆಕಂಡಿದ್ದಿತು. ಎ. ವಿ. ಎಂ. ಲಾಂಛನದಲ್ಲಿ ಹಿಂದಿಯಲ್ಲಿ ತಯಾರಾದ 'ಶಿವಭಕ್ತ್' ಚಿತ್ರದಲ್ಲಿ ನರಸಿಂಹರಾಜು ಅವರ ಕಾಶಿ ಪಾತ್ರವನ್ನು ಅನಂತ ಮರಾಠೆಯವರು ನಿರ್ವಹಿಸಿದ್ದರು. ಸಾಹು ಮೋಡಕ್‌ರೊಂದಿಗೆ ನೀಲಾ ಪಾತ್ರವನ್ನು ಪಂಡರಿಬಾಯಿಯವರೇ ನಿರ್ವಹಿಸಿದ್ದರು. ಎಚ್. ಎಲ್. ಎನ್. ಸಿಂಹ ಅವರು ನಿರ್ದೇಶಿಸಿದ ಈ ಹಿಂದೀ ಚಿತ್ರವನ್ನು ವೀಕ್ಷಿಸಿದ ಪೂನಾದ ವಿಷ್ಣು ಭಟ್ ಎಂಬುವರು ೧೯-೬-೧೯೫೫ ರಂದು ಬರೆದ ಪತ್ರದಲ್ಲಿ ಈ ಚಿತ್ರದಿಂದ 'ಭಾರತೀಯ ಸೌಂದರ್ಯದರ್ಶನ'ವಾಯಿತೆಂದು ತಿಳಿಸಿದ್ದಾರೆ.

ಕನ್ನಡ-ತೆಲುಗು-ತಮಿಳು-ಹಿಂದೀ ಭಾಷೆಗಳ ಅವತರಣಿಕೆಗಳಲ್ಲಿ ಹೆಚ್ಚು ವಿಜೃಂಭಿಸಿದುದು ಕನ್ನಡದ 'ಬೇಡರ ಕಣ್ಣಪ್ಪ'ನೇ. ಉತ್ತಮ ಅಭಿನಯ, ಸಂಭಾಷಣೆ, ಚಿತ್ರಕಥೆ ಹಾಗೂ ಕ್ಯಾಮರಾ ಕೈಚಳಕಗಳು ಚಿತ್ರವನ್ನು ಗೆಲ್ಲಿಸಿದ್ದವು. 'ವಸ್ತ್ರ ತಾನಾಗಿ ಹಾರಿಬಂದು ಶಿವಲಿಂಗವನ್ನು ಸುತ್ತುವರಿಯುವುದು ಮತ್ತು ತಾನಾಗಿಯೇ ಕಳಚಿಕೊಂಡು ಹೋಗುವುದು' ಮುಂತಾದ ಚಮತ್ಕೃತಿಗಳು ಪ್ರೇಕ್ಷಕರ ಮನಸೂರೆಗೊಂಡಿದ್ದವು. ಎಲ್ಲಕ್ಕೂ ಮಿಗಿಲಾಗಿ ರಾಜಕುಮಾರ್ ಅವರ ನಾಯಕ ಪಾತ್ರ ಪ್ರವೇಶದಿಂದಾಗಿ ಕನ್ನಡ ಚಿತ್ರರಂಗಕ್ಕೆ ರಾಜಯೋಗ ಪ್ರಾಪ್ತಿಯಾಯಿತು.

ಸಿಂಹ ಅವರು ೧೯೫೫ರಲ್ಲಿ ಶ್ರೀ ಜಮುನಾ ಪ್ರೊಡಕ್ಷನ್ಸ್‌ರವರ 'ಅಬ್ಬಾ! ಆ ಹುಡುಗಿ' ಚಿತ್ರವನ್ನು ಚಿತ್ರಕಥೆ, ಹಾಡುಗಳನ್ನು ರಚಿಸುವುದರೊಂದಿಗೆ ನಿರ್ದೇಶಿಸಿದರು. ಇದು ವಿಲಿಯಂ ಶೇಕ್ಸ್‌ಪಿಯರ್‌ನ 'ದಿ ಟೇಮಿಂಗ್ ಆಫ್ ದಿ ಶ್ರೂ' ನಾಟಕವನ್ನು ಆಧರಿಸಿತ್ತು. ತಮ್ಮ ಕಂಪನಿಯಲ್ಲಿ ಪ್ರದರ್ಶಿಸುತ್ತಿದ್ದ ಈ ನಾಟಕದಲ್ಲಿ ಸಿಂಹ ಅವರೂ ಪಾತ್ರ ನಿರ್ವಹಿಸುತ್ತಿದ್ದರು. ಈ ಚಿತ್ರದ ಮೂಲಕ ರಾಜಾ ಶಂಕರ್ ಅವರು ನಾಯಕನಟನಾಗಿ ಬೆಳಕಿಗೆ ಬಂದರು. ರಾಜಕುಮಾರ್ ಅವರು ಚಿತ್ರದ ಎರಡನೆಯ ನಾಯಕನಾಗಿ ಅಭಿನಯಿಸಿದ್ದರು. ಬಿ. ಆರ್. ಪಂತುಲು, ನರಸಿಂಹರಾಜು, ಡಿಕ್ಕಿ ಮಾಧವರಾವ್, ಎಂ. ವಿ. ನಾರಾಯಣರಾವ್, ಪಂಡರಿಬಾಯಿ, ಮೈನಾವತಿ, ಲೀಲಾವತಿ, ಲೀಲಾಂಜಲಿ, ಎಂ. ವಿ. ರಾಜಮ್ಮ, ಮೈಸೂರು ಲಕ್ಷ್ಮಿ, ಆದವಾನಿ ಲಕ್ಷ್ಮೀದೇವಿ, ರಮಾದೇವಿ ಮುಂತಾದ ಕಲಾವಿದರು ಅಭಿನಯಿಸಿದ್ದರು. ಪಂಡರಿಬಾಯಿಯವರ ಸೋದರಿ ಮೈನಾವತಿಯವರು ಬಜಾರಿ ಹೆಣ್ಣಿನ ಮುಖ್ಯ ಪಾತ್ರದಲ್ಲಿ ಸೊಗಸಾಗಿ ನಟಿಸಿದ್ದರು. ಪಿ. ಕಾಳಿಂಗರಾಯರು 'ಬಾ ಚಿನ್ನ ನೋಡೆನ್ನ ಮೋಜನ್ನ' ಎಂಬ ಹಾಡಿನಿಂದ ಮೋಡಿ ಮಾಡಿದ್ದರು. ಇದರ ಸಹನಿರ್ದೇಶಕರಾಗಿ ಎಂ. ಎಸ್. ಬಾಲಸುಬ್ರಹ್ಮಣ್ಯಂ, ಎಂ. ವೇಣುಗೋಪಾಲ್ ಮತ್ತು ಎಂ. ಎ. ವಿ. ರಾಜರತ್ನಂ ಅವರು ಕಾರ್ಯ ನಿರ್ವಹಿಸಿದ್ದರು. ಚಿತ್ರದ ಗಾಯನವೃಂದದಲ್ಲಿ ಪಿ. ಬಿ. ಶ್ರೀನಿವಾಸ್, ಎಸ್. ಜಾನಕಿ, ಮೋಹನಕುಮಾರಿ, ಟಿ. ಎಸ್. ಭಾಗವತಿ, ಸ್ವರ್ಣಲತಾ ಮುಂತಾದವರಿದ್ದರು. ಬಿ. ದೊರೈರಾಜ್ ಅವರು ಕ್ಯಾಮರಾಮನ್ ಆಗಿ ಕಾರ್ಯ ನಿರ್ವಹಿಸಿದ್ದರು. ಇಷ್ಟಾದರೂ ಚಿತ್ರವು ವ್ಯಾಪಾರಿ ದೃಷ್ಟಿಯಿಂದ ಸೋತಿತಾದರೂ ಎಚ್. ಎಲ್. ಎನ್. ಸಿಂಹ ಅವರ ಹೊಸ ಹಾಗೂ ಹಳೆಯ ಶಿಷ್ಯ ಪೀಳಿಗೆಗಳವರೆಲ್ಲ ಭಾಗವಹಿಸಿದ್ದುದು ಒಂದು ವಿಶೇಷ.

ಪಂಡರಿಬಾಯಿಯವರು ತಮ್ಮ ಶ್ರೀ ಪಾಂಡುರಂಗ ಪ್ರೊಡಕ್ಷನ್ಸ್ ಲಾಂಛನದಡಿಯಲ್ಲಿ ೧೯೬೨ರಂದು ರಾಜಕುಮಾರ್‌ರೊಡನೆಯ ತಮ್ಮ ಅಭಿನಯದೊಂದಿಗೆ 'ತೇಜಸ್ವಿನಿ' ಚಿತ್ರವನ್ನು ನಿರ್ಮಿಸಿದರು. 'ಕರ್ಮವೀರ' ವಾರಪತ್ರಿಕೆಯಲ್ಲಿ ಪ್ರಕಟಗೊಂಡಿದ್ದ ಗೋವಿಂದಮೂರ್ತಿ ದೇಸಾಯಿಯವರ 'ಹೊಲತಿಕೋಟೆ' ಎಂಬ ಕಿರುಜಾನಪದ ಕಥೆಯಾಧಾರಿತ ಚಿತ್ರವಿದು. ರಾಜಕುಮಾರ್ ಅವರು ಶಿವಪ್ಪ ನಾಯಕನಾಗಿ, ಪಂಡರಿಬಾಯಿಯವರು ರಂಗನಾಯಕಿಯಾಗಿ, ಹಾಗೂ ರಾಜಾಶಂಕರ್ ಅವರು ರಾಮನಾಯಕನಾಗಿ ಅಭಿನಯಿಸಿದರು. ಇತರ ಪಾತ್ರಗಳಲ್ಲಿ ನರಸಿಂಹರಾಜು, ಡಿಕ್ಕಿ ಮಾಧವರಾವ್, ಬಾಲಕೃಷ್ಣ, ಅಶ್ವಥ್, ರಾಮಚಂದ್ರ ಶಾಸ್ತ್ರೀ, ವಿಮಲಾನಂದ ದಾಸ್, ಆದವಾನಿ ಲಕ್ಷ್ಮೀದೇವಿ, ರಾಜಶ್ರೀ ಮತ್ತು ಚಿಂದೋಡಿ ಲೀಲಾ ಮುಂತಾದವರು ನಟಿಸಿದ್ದರು. ಎಚ್. ಎಲ್. ಎನ್. ಸಿಂಹ ಅವರು ಚಿತ್ರವನ್ನು ನಿರ್ದೇಶಿಸುವುದ

ರೊಂದಿಗೆ ಸಣ್ಣ ಪಾತ್ರವೊಂದರಲ್ಲಿಯೂ ಕಾಣಿಸಿಕೊಂಡಿದ್ದರು. ಎಂ. ಎಸ್. ಬಾಲು ಅವರ ಸಂಗೀತ ನಿರ್ದೇಶನ, ಕು. ರಾ. ಸೀತಾರಾಮಶಾಸ್ತ್ರೀಯವರ ಗೀತೆಗಳು ಹಾಗೂ ಪಿ. ಬಿ. ಶ್ರೀನಿವಾಸ್, ಪೀಠಾಪುರಂ ನಾಗೇಶ್ವರರಾವ್, ಪಿ. ಲೀಲಾ ಮತ್ತು ಸ್ವರ್ಣಲತಾ ಅವರ ಹಿನ್ನೆಲೆ ಗಾಯನ ಈ ಚಿತ್ರಕ್ಕಿದ್ದಿತು.

'ತೇಜಸ್ವಿನಿ' ಚಿತ್ರದ ನಿರ್ದೇಶನದ ಅನಂತರ ಸಿಂಹ ಅವರು ಕೆಲವು ವರ್ಷಗಳ ಕಾಲ ಚಿತ್ರರಂಗದಿಂದ ದೂರವಿದ್ದರು. ೧೯೭೧ ರಲ್ಲಿ ಅವರ ನಿರ್ದೇಶಿತ 'ಅನುಗ್ರಹ' ಸಾಮಾಜಿಕ ಚಿತ್ರ ಬಿಡುಗಡೆಯಾಯಿತು. ಮೈಸೂರಿನ ಕೆ. ಎಂ. ಸೋಮಸುಂದರಪ್ಪನವರು ಮಲ್ಲೇಶ್ವರಿ ಪ್ರೊಡಕ್ಷನ್ಸ್ ಲಾಂಛನದಲ್ಲಿ ನಿರ್ಮಿಸಿದ ಈ ಚಿತ್ರಕ್ಕೆ ರತ್ನಾಕರ್ ಮತ್ತು ಗಿರಿಯವರು ಸಹನಿರ್ದೇಶಕರಾಗಿದ್ದರು. ಇದರ ತಾರಾಗಣದಲ್ಲಿ ಶ್ರೀನಾಥ್, ಪಂಡರಿಬಾಯಿ, ಅಶ್ವಥ್, ನರಸಿಂಹರಾಜು, ಬಾಲಕೃಷ್ಣ, ಡಿಕ್ಕಿ ಮಾಧವರಾವ್, ರಾಜಾನಂದ ಮತ್ತು ಬಿ. ವಿ. ರಾಧಾ ಮುಂತಾದವರಿದ್ದರು. ನಟಿ ಆರತಿಯವರು ಈ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ್ದೊಂದು ವಿಶೇಷ. ಸಿಂಹ ಅವರು ತಮ್ಮ ಮಗ ಎಚ್. ಎಲ್. ಶೇಷಚಂದ್ರ ಅವರಿಂದ 'ಮಧುರನಾದ ಹರಿದು ಹರಿದು ಮುದದಿ ಹೃದಯ ಅರಳಲಿ, ತೆರೆದ ನಲಿವ ಬಾನಿನಲ್ಲಿ ಭಾವಕಿರಣ ಸೂಸಲಿ' ಎಂಬ ಗೀತೆಯೊಂದನ್ನು ಬರೆಸಿ ಗಾಯಕಿ ಎಸ್. ಜಾನಕಿಯವರಿಂದ ಹಾಡಿಸಿದ್ದರು. ಪಿ. ಸುಶೀಲ, ಎಲ್. ಆರ್. ಈಶ್ವರಿ ಮತ್ತು ನಾಗೇಂದ್ರ ಚಿತ್ರದ ಇತರ ಗಾಯಕಿ-ಗಾಯಕರಾಗಿದ್ದರು. ಚಿ. ಉದಯಶಂಕರ್ ಮತ್ತು ಸೋರಟ್ ಅಶ್ವಥ್ ಅವರು ಗೀತೆಗಳನ್ನು ರಚಿಸಿದ್ದರು. 'ಅನುಗ್ರಹ' ಹೆಚ್. ಎಲ್. ಎನ್. ಸಿಂಹ ಅವರ ಕೊನೆಯ ನಿರ್ದೇಶಿತ ಚಿತ್ರ.

ಸಿಂಹ ಅವರು ನಿರ್ದೇಶಿಸಿದ ಕನ್ನಡ ಚಿತ್ರಗಳು ಸಂಖ್ಯೆಯಲ್ಲಿ ಆರಾದರೂ ಅವು ಉಂಟುಮಾಡಿದ ಪರಿಣಾಮ ನೂರರಷ್ಟಿದ್ದಿತು. 'ರತ್ನಹಾರ'ವೆಂಬ ತಮ್ಮ ಸ್ವಂತ ನಿರ್ಮಾಣಕ್ಕೂ ಸಿದ್ಧತೆ ನಡೆಸಿದ್ದರಾದರೂ ಅದು ಕೈಗೂಡಲಿಲ್ಲ.

ಆ ದಿನಗಳಲ್ಲಿ ವರ್ಷಕ್ಕೆ ನಾಲ್ಕೈದು ಕನ್ನಡ ಚಿತ್ರಗಳು ಮಾತ್ರ ಹೊರಬರುತ್ತಿದ್ದವು; ಕೆಲವು ವರುಷಗಳಲ್ಲಿ ಅವೂ ಇರುತ್ತಿರಲಿಲ್ಲ. ಅಲ್ಲದೆ ಈಗಿನಷ್ಟು ತಾಂತ್ರಿಕ ಸಲಕರಣೆ, ಅನುಕೂಲ ಮತ್ತು ಪರಿಣತಿಯೂ ಇದ್ದಿರಲಿಲ್ಲ. ಅಂತಹ ಕಷ್ಟದ ದಿನಗಳಲ್ಲಿ ಸಿಂಹ ಅವರು ಕನ್ನಡ ಚಿತ್ರರಂಗಕ್ಕೆ ಬುನಾದಿಯನ್ನು ಹಾಕಿದರು. ತಾವೂ ರಂಗಭೂಮಿಯಿಂದಲೇ ಬಂದವರಾಗಿ ಮಹಾನ್ ಕಲಾವಿದರುಗಳಾದ, ಬಿ. ಆರ್. ಪಂತುಲು, ಡಿಕ್ಕಿ ಮಾಧವರಾವ್, ಎಂ. ಎಸ್. ಮಾಧವರಾವ್, ನರಸಿಂಹರಾಜು, ರಾಜಾ ಶಂಕರ್, ರಾಜಕುಮಾರ್, ರಾಮಚಂದ್ರ ಶಾಸ್ತ್ರೀ ಮತ್ತು ಸೋರಟ್ ಅಶ್ವಥ್ ಮುಂತಾದವರನ್ನು ಬೆಳಕಿಗೆ ತಂದ ಹಿರಿಮೆ ಸಿಂಹ ಅವರದು. ಯಾವ ಕಲಾವಿದನೇ ಆಗಲಿ, 'ಸರ್, ನನಗೊಂದು ಪಾತ್ರ ಕೊಡಿ' ಎಂದು ಕೇಳಿಕೊಂಡಾಗ ಒಡನೆಯೇ ಕಥೆಯಲ್ಲಿ ಪಾತ್ರ ಇರಲಿ ಅಥವಾ ಇಲ್ಲದಿರಲಿ ಒಂದು ಪಾತ್ರವನ್ನು ಸೃಷ್ಟಿಸಿ ಕೊಡುವ ಮನೋಭಾವವನ್ನು ಹೊಂದಿದವರಾಗಿದ್ದ ಸಿಂಹ ಅವರು ಯಾರನ್ನೂ ನಿರಾಶೆಗೊಳಿಸಲಿಚ್ಛಿಸುತ್ತಿರಲಿಲ್ಲ. ಸಿಂಹ ಅವರು ತಮ್ಮ ಚಿತ್ರಗಳಲ್ಲಿ ಉತ್ಕೃಷ್ಟ ಮಟ್ಟದ ಸಾಹಿತ್ಯ ಮತ್ತು ಸುಶ್ರಾವ್ಯ ಚಿತ್ರಗೀತೆಗಳನ್ನು ರಚಿಸಿದರು. ಅಗಾಧ ಕನ್ನಡಾಭಿಮಾನಿಯಾಗಿದ್ದ ಸಿಂಹ ಅವರು ಮುಗ್ಧ ಮನಸ್ಸಿನ ಹಿರಿಯ ಜೀವಿಯಾಗಿದ್ದರು. ಒಮ್ಮೆ ಎ. ವಿ. ಎಂ.

ಚೆಟ್ಟಿಯಾರ್ ಅವರು ಸಿಂಹರವರ ಹೆಸರನ್ನು ಪೂನಾ ಫಿಲ್ಮ್ ಇನ್ಸ್‌ಟಿಟ್ಯೂಟ್‌ನಲ್ಲಿ ಆಕ್ಟಿಂಗ್ ಸಹಾಯಕ ಪ್ರೊಫೆಸರ್ ಹುದ್ದೆಗೆ ಸೂಚಿಸಿದ್ದರಾದರೂ ಅವರು ಅಲ್ಲಿಗೆ ಹೋಗಲು ಇಷ್ಟಪಡಲಿಲ್ಲ.

ಸಿಂಹ ಅವರು ಇತರ ಭಾಷಾಚಿತ್ರಗಳಿಗಾಗಿ ಕಾರ್ಯವೆಸಗಿ ಮೆಚ್ಚುಗೆ ಗಳಿಸಿದ್ದುದನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆಯಷ್ಟೆ. ಟಿ. ಆರ್. ರಾಜಕುಮಾರಿ ಅಭಿನಯದ 'ವಾಳ ಪಿರಂದವಳ್'ನ ಚಿತ್ರಕಥೆಯನ್ನು ರಚಿಸಿದ್ದರು (೧೯೫೭); 'ಚೋರಿ ಚೋರಿ' ಹಿಂದೀ ಚಿತ್ರದಲ್ಲಿ ಸಣ್ಣ ಪಾತ್ರವೊಂದನ್ನು ನಿರ್ವಹಿಸಿದ್ದರು. ಅವರು ಎಲ್ಲಾದರು ಎಂತಾದರು ಇದ್ದರೂ ಕನ್ನಡ ಚಿತ್ರರಂಗದ ಪ್ರಗತಿಗೆ ಮಂಗಳದ ಮುಂಬೆಳಕನ್ನು ಹಾರೈಸಿ, ಸಿಂಹಗರ್ಜನೆಯಿಂದ ಕ್ರಮಿಸಿದರು. ಅವರ ಚಿತ್ರರಂಗದ ಜೀವನ ಹಾಗೂ ಸಾಧನೆ ಒಂದು ಚಾರಿತ್ರಿಕ ಘಟನೆ. ಸಮೂಹರಂಜನೆ ಮತ್ತು ಅಂತಾರಾಷ್ಟ್ರೀಯ ಕಲಾಮಾಧ್ಯಮವಾದ ನೆಳಲು ಬೆಳಕಿನ ನಾಟಕ ಸಿನಿಮಾ ಕಲೆಯೂ ಹೌದು, ಕೈಗಾರಿಕೋದ್ಯಮವೂ ಹೌದು. ಅವರಲ್ಲಿ ಸಿಂಹ ಅವರು ಹೊಯ್ ಕಯ್ ಆಗಿ ದುಡಿದು 'ಜೈ' ಮತ್ತು 'ಸೈ' ಎನಿಸಿಕೊಂಡರು. ಅವರು ಕನ್ನಡ ಪ್ರಹಸನಪಿತಾಮಹ ಟಿ. ಪಿ. ಕೈಲಾಸಂರಿಂದ ಪ್ರಶಂಸಿತರಾಗಿದ್ದರು; ರಾಷ್ಟ್ರಕವಿ ಕುವೆಂಪು ಅವರ ಸಹಪಾಠಿಯಾಗಿದ್ದರು.

ಸಿಂಹ ಅವರು ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಕೆಲವು ಕಾಲ ನರಳಿ ಅನಂತರ ಬೆಂಗಳೂರಿನ ಜರ್ನಲಿಸ್ಟ್ ಕಾಲೋನಿಯ ತಮ್ಮ ಬಂಧುಗಳೊಬ್ಬರ ಮನೆಯಲ್ಲಿ ಯಾವುದೇ ಸದ್ದುಗದ್ದಲವಿಲ್ಲದೆ ೨-೭-೧೯೭೨ ರಂದು ವಿಧಿವಶರಾದರು. ಕನ್ನಡ ಚಿತ್ರರಂಗದ ಅಮರಜೀವಿಯಾದರು.

■ ಡಾ. ಹೆಚ್. ಎ. ಪಾರ್ಶ್ವನಾಥ್ : 'ಸೋನಿಯಾ', # ೬೨, ಃನೇ ಕ್ರಾಸ್ ಕುರುಬರಹಳ್ಳಿ
ಸಿದ್ಧಾರ್ಥನಗರದ ಹತ್ತಿರ, ಮೈಸೂರು-೫೭೦ ೦೧೧ ■

ಇಪ್ಪತ್ತನೆ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು : ಒಂದು ವಿಮರ್ಶೆ

ಟಿ. ಸಿ. ಪೂರ್ಣಿಮಾ

ವಿವಿಧ ಅವಸ್ಥೆಗಳಲ್ಲಿ ಬೆಳೆದು ಬಂದ ಕನ್ನಡ ಸಾಹಿತ್ಯ ೨೦ ನೇ ಶತಮಾನದ ಆರಂಭದ ವೇಳೆಗೆ ಹೊಸ ಅರುಣೋದಯದ ಹೊಸ್ತಿಲಿಗೆ ಬಂದು ನಿಂತಿತ್ತು. ೨೦ ನೇ ಶತಮಾನವಂತೂ ಸಾಹಿತ್ಯ ಫಸಲು ಸಮೃದ್ಧವಾಗಿ ಬೆಳೆದ ಕಾಲ. ಜೊತೆಗೆ ಸಾಕಷ್ಟು ವೈವಿಧ್ಯವನ್ನೂ ಸಂಪಾದಿಸಿಕೊಂಡ ಕಾಲ. ಅನೇಕ ಪ್ರಮುಖ ಸಾಹಿತ್ಯಕ ತಿರುವುಗಳ ಕಾರಣದಿಂದಾಗಿಯೂ ಈ ಸಾಹಿತ್ಯಯುಗ ಮುಖ್ಯ ಎನಿಸುವ ಕಾಲಘಟ್ಟ. ಹಿಂದಿನ ಯಾವೊಂದು ಶತಮಾನದಲ್ಲೂ ಕಂಡರಿಯದಷ್ಟು ರೂಪದಲ್ಲಿ, ಪ್ರಮಾಣದಲ್ಲಿ, ವಿಚಾರದಲ್ಲಿ ಈ ಶತಮಾನದ ಕನ್ನಡ ಸಾಹಿತ್ಯ ಮೈದಳೆದಿದೆ. ೧೮ ನೇ ಶತಮಾನ ಮತ್ತು ೧೯ ನೇ ಶತಮಾನದ ಕಡೆಕಡೆಯ ವರೆಗೂ ಗೌಣ ಎನ್ನುವ ಪ್ರಮಾಣದಲ್ಲಿ ಕನ್ನಡ ಸಾಹಿತ್ಯ ಸೃಷ್ಟಿಗೊಂಡದ್ದೂ, ಅಂಥ ಶ್ರೇಷ್ಠ ಮಟ್ಟದ ಸಾಹಿತ್ಯ ಕಾಣಸಿಕೊಳ್ಳದೇ ಹೋದದ್ದೂ ಎದ್ದು ಕಾಣುವಂತಿದ್ದ ಸಂದರ್ಭದಲ್ಲೇ, ೨೦ ನೇ ಶತಮಾನ

ಅರಳುವ ಹೊತ್ತಿಗೆ ಆಧುನಿಕ ಚಿಂತನೆಗಳಿಂದೊಡಗೂಡಿದ ಕನ್ನಡ ಸಾಹಿತ್ಯ ಸೃಷ್ಟಿಯಾದದ್ದು ಹೆಚ್ಚಿನ ಮೆರಗಿನಿಂದ ಕೂಡಿದಂತಿತ್ತು. ಈ ಆಧುನಿಕ ಶತಮಾನದ ಸಾಹಿತ್ಯವನ್ನು ಅಧ್ಯಯನದ ದೃಷ್ಟಿಯಿಂದಲೂ ಸಮೀಕ್ಷೆಯ ದೃಷ್ಟಿಯಿಂದಲೂ ಕಾಲಾಧಾರಿತವಾಗಿ, ಪ್ರಕಾರಾಧಾರಿತವಾಗಿ, ವಿಚಾರಾಧಾರಿತವಾಗಿ ವಿಧವಿಧವಾಗಿ ವಿಂಗಡಿಸಿಕೊಳ್ಳುವ ಸಾಧ್ಯತೆಯೂ ಇವೆ, ಅಗತ್ಯವೂ ಇದೆ.

೨೦ ನೇ ಶತಮಾನದ ಕನ್ನಡ ಸಾಹಿತ್ಯವನ್ನು ಸಾಮಾಜಿಕ ದೃಷ್ಟಿ-ಧೋರಣೆಯ ಆಧಾರದ ಮೇಲೆ ವಿಭಜಿಸಿಕೊಂಡು ವಿಶ್ಲೇಷಣೆಗೆ ಒಳಪಡಿಸಿರುವ ಒಂದು ಪ್ರಯತ್ನವೂ ನಡೆದಿದೆ. ಆಕಾಶವಾಣಿ ಒಂದು ಮಾಧ್ಯಮವಾಗಿ ತನ್ನ ಹೊಣೆಗಾರಿಕೆಯನ್ನರಿತು ಏಳು ಭಿನ್ನ ಧೋರಣೆಗಳಲ್ಲಿ ಮೈದಳೆದ ಕನ್ನಡ ಸಾಹಿತ್ಯ ಭಾಗಗಳನ್ನು ತನ್ನ ಗುಲ್ಬರ್ಗಾ ಕೇಂದ್ರದಿಂದ ಪ್ರಸಾರ ಮಾಡಿದೆ. ಆಕಾಶವಾಣಿಯ ಹಿರಿಯ ಅಧಿಕಾರಿಯಾದ ಡಾ. ಬಸವರಾಜ ಸಾದರ ಅದನ್ನು ಸಂಪಾದಿಸಿ, "ಇಪ್ಪತ್ತನೆ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು" ಎನ್ನುವ ಕೃತಿಯನ್ನು ಓದುಗರ ಕೈಗಿರಿಸಿದ್ದಾರೆ.

ನವೋದಯ ಪೂರ್ವದಿಂದ ಮೊದಲ್ಗೊಂಡು ಬಂಡಾಯೋತ್ತರದ ವರೆಗೆ ೨೦ ನೇ ಶತಮಾನದಲ್ಲಿ ಒಡಮೂಡಿದ ವಿಭಿನ್ನ ಪಂಥಗಳ ಸಾಹಿತ್ಯಕ ಚರ್ಚೆ ಈ ಕೃತಿಯಲ್ಲಾಗಿದೆ. ಇಲ್ಲಿ ೨೦ ನೇ ಶತಮಾನದ ಇಡೀ ಕನ್ನಡ ಸಾಹಿತ್ಯವನ್ನು ನವೋದಯಪೂರ್ವ, ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಹಾಗೂ ಬಂಡಾಯೋತ್ತರ ಘಟ್ಟಗಳಾಗಿ ಪ್ರತ್ಯೇಕಿಸಿಕೊಂಡು ವಿವಿಧ ವಿದ್ವಾಂಸರ ಚಿಂತನ-ಮಂಥನಗಳಿಗೆ ಒಳಪಡಿಸಲಾಗಿದೆ. ಆದರೆ ಇದೇ ಶತಮಾನದ ಗಮನಾರ್ಹ ಧೋರಣೆಯಾಗಿ, ಧ್ವನಿಯಾಗಿ ಹೊರಹೊಮ್ಮಿದ ಸ್ತ್ರೀವಾದಿ ಚಿಂತನೆಯನ್ನು ಬಂಡಾಯ ಹಾಗೂ ಬಂಡಾಯೋತ್ತರ ಸಾಹಿತ್ಯಕ ಘಟ್ಟದೊಳಗೇ ಸೇರಿಸಿಬಿಟ್ಟಿರುವುದು ಇದಕ್ಕೆ ಮಾತ್ರ ಕಾಲದ ಚೌಕಟ್ಟನ್ನು ಹಾಕಿದಂತೆ ತೋರುತ್ತದೆ. ಅಥವಾ ಬಂಡಾಯ, ಬಂಡಾಯೋತ್ತರ ಸಾಹಿತ್ಯಘಟ್ಟದ ಉಪ-ಉತ್ಪನ್ನವಾಗಿ ಮಾತ್ರ ತೋರುತ್ತಿದೆ. ಆದರೆ 'ಸ್ತ್ರೀವಾದಿ' ಚಿಂತನೆ ಕೂಡ ಇತರ ಸಾಹಿತ್ಯ ಘಟ್ಟಗಳ ಸಾಲಿನಲ್ಲಿ ನಿಲ್ಲಬಲ್ಲ ಒಂದು ಪ್ರಮುಖ ಧೋರಣೆಯೇ ಎಂದು ಗಮನಿಸಬಹುದಿತ್ತು.

ನವೋದಯಪೂರ್ವ ಸಾಹಿತ್ಯಘಟ್ಟವನ್ನು ಕುರಿತು ಮೊದಲಿಗೆ ಬರೆದಿರುವ ಪ್ರೊ. ಎಲ್. ಎಸ್. ಶೇಷಗಿರಿರಾಯರು ೧೮೦೦ ರ ಕಡೆಯ ದಶಕದಿಂದಲೇ ಆಧುನಿಕ ಕನ್ನಡ ಸಾಹಿತ್ಯ ರೂಪುಗೊಳ್ಳತೊಡಗಿದ್ದರಿಂದ ಹಿಡಿದು ೧೯೨೦ ರ ವರೆಗೆ, ರಮ್ಯ ಪಂಥದ ಸಾಹಿತ್ಯ ಮೊಳಕೆಯೊಡೆಯುವ ವರೆಗೆ ಹಂತಗಳಲ್ಲಿ ಆಧುನಿಕ ಸಾಹಿತ್ಯ ಬೆಳೆದುದನ್ನು ಸಮೀಕ್ಷಿಸಿರುವುದೇ ಅಲ್ಲದೆ, ಈ ಸಾಹಿತ್ಯ ಸಂದರ್ಭಕ್ಕಿದ್ದ ಬಾಹ್ಯ ಹಾಗೂ ಆಂತರಿಕ ಪ್ರೇರಣೆಗಳನ್ನೂ ಗುರುತಿಸಿದ್ದಾರೆ. ತಾಂತ್ರಿಕ, ವೈಜ್ಞಾನಿಕ, ವ್ಯಾವಹಾರಿಕ, ಶೈಕ್ಷಣಿಕ, ಸಾಂಪಹಿಕ, ಉನ್ನತಿ ಸಾಧ್ಯವಾದಂತೆಲ್ಲ ವೈಚಾರಿಕ, ಭಾವುಕ, ಬೌದ್ಧಿಕ, ಆಧುನಿಕ, ಸೈದ್ಧಾಂತಿಕ ಚಿಂತನೆಗಳ ನೆಲಗಟ್ಟು ಭದ್ರಗೊಂಡದನ್ನು ಇಲ್ಲಿ ತಿಳಿಸಿ, ಅದಕ್ಕೊಂದು ಕ್ರಾಂತಿಯೋಪಾದಿಯ ಚಿತ್ರ ನೀಡಲಾಗಿದೆ. ಅದರಲ್ಲೂ ಮುಖ್ಯವಾಗಿ ಪತ್ರಿಕಾರಂಗ ಹಾಗೂ ಮುದ್ರಣರಂಗ ಕೈಗಾರಿಕಾ ಕ್ರಾಂತಿಯ ನೆರವನ್ನು ಪಡೆದುಕೊಂಡ ಬಗೆಯನ್ನೂ ವಿವರಿಸಲಾಗಿದೆ. ನಾಟಕ, ಗದ್ಯ, ಪದ್ಯ, ವಿಮರ್ಶೆ, ಪತ್ರಿಕಾಸಾಹಿತ್ಯ, ಕಾದಂಬರಿ, ಸಣ್ಣಕಥೆಗಳು ಮುಂತಾದ ವಿವಿಧ ಪ್ರಕಾರಗಳನ್ನು ಪ್ರಾತಿನಿಧಿಕ ಕೃತಿಗಳೊಂದಿಗೆ

ಬಣ್ಣಿಸಿರುವುದೇ ಅಲ್ಲದೆ, ಕನ್ನಡದ ಮೇಲೆ ವಿದೇಶೀ ಭಾಷಾ ಕೃತಿಗಳ ಪ್ರಭಾವ ಹಾಗೂ ಅವುಗಳ ತರ್ಜುಮೆಯ ಮೂಲಕ ಕನ್ನಡ ಸಾಹಿತ್ಯರಂಗ ಹೊಸ ಜಗತ್ತಿಗೆ ಮೈದೆರೆದುಕೊಂಡ ಬಗೆಯನ್ನೂ ವಿವರಿಸಲಾಗಿದೆ.

ನವೋದಯಪೂರ್ವ ಸಾಹಿತ್ಯ ಕಾಲದಲ್ಲಿನ ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳ ಇತಿಹಾಸವೂ ಅಲ್ಲಲ್ಲಿ ಇಣುಕುತ್ತದೆ. ಒಟ್ಟಾರೆಯಾಗಿ ಇಡೀ ಕನ್ನಡ ಸಮುದಾಯವೇ ಆಧುನಿಕತೆಯ ಪ್ರಭಾವಕ್ಕೆ ಮಣಿದು ಸ್ವಾತ್ಯಂತರದ ಹೊರಳು ಹಾದಿಯಲ್ಲಿದ್ದಾಗ ಕನ್ನಡ ಸಾಹಿತ್ಯವೂ ಹೊಸ ಹಾದಿಗೆ ಹೊರಳಿದ್ದನ್ನು ಶೇಷಗಿರಿರಾಯರು, ತಮಗಿದ್ದ ಪ್ರಸಾರ ಭಾಷಣದ ಕಾಲಾವಧಿಯಲ್ಲಿಯೇ ಸಮರ್ಥವಾಗಿ ತೋರಿಸಿದ್ದಾರೆ.

ಡಾ. ಗುರುಲಿಂಗ ಕಾಪಸೆಯವರು ಬರೆದಿರುವ ಕನ್ನಡ ನವೋದಯ ಸಾಹಿತ್ಯ ಘಟ್ಟ ರಮ್ಯಯುಗದ ಉತ್ಪನ್ನ ಎಂದು ಹೇಳುವುದರೊಂದಿಗೆ ಈ ಸಾಹಿತ್ಯ ಘಟ್ಟದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಎಳೆಎಳೆಯಾಗಿ ಬಿಡಿಸಿದ್ದಾರೆ. ನವೋದಯ ಸಾಹಿತ್ಯ ಘಟ್ಟವೇ ಹೊಸಗನ್ನಡ ಸಾಹಿತ್ಯ ಚರಿತ್ರೆಯ ಆರಂಭ ಎಂಬ ಅಭಿಮತವಿರುವುದನ್ನೂ ಇದು ೧೯೨೧ ರಿಂದ ಆರಂಭವಾದುದೆಂಬುದನ್ನು ಅನಾವರಣಗೊಳಿಸುವ ಡಾ. ಕಾಪಸೆ ಭಾಷಾಭಿನ್ನತೆ, ಪ್ರಾದೇಶಿಕ ಭಿನ್ನತೆಗಳನ್ನೂ ಮೀರಿ ನವೋದಯದ ಒಲವು ಎಲ್ಲೆಡೆ ಹರಿದದ್ದನ್ನು ತಮ್ಮ ಲೇಖನದ ಆರಂಭದಲ್ಲೇ ನೆನಪಿಸಿಕೊಳ್ಳುತ್ತಾರೆ.

ನವೋದಯದ ಪ್ರಭಾವಕ್ಕೆ ವ್ಯಾಪಕವಾಗಿ ಒಳಪಟ್ಟ ಕಾವ್ಯಕ್ಷೇತ್ರವನ್ನೇ ಇಲ್ಲಿ ಹೆಚ್ಚಾಗಿ ಗಮನಿಸಲಾಗಿದೆಯಾದರೂ ಈ ಸಾಹಿತ್ಯ ಸಂದರ್ಭದಲ್ಲಿ ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯ ಮಾದರಿಗಳೆರಡೂ ಯುಗದ ಪ್ರಭಾವಕ್ಕೆ ಒಳಗಾದುದನ್ನು ಪ್ರತಿಬಿಂಬಿಸಲಾಗಿದೆ. ಸೃಜನ ಶೀಲ ಸಾಹಿತ್ಯವಿಧದಲ್ಲಿ ಕಾವ್ಯವಷ್ಟೇ ಅಲ್ಲದೆ, ಕತೆ,ಕಾದಂಬರಿ,ನಾಟಕ,ಲಲಿತಪ್ರಬಂಧ, ಜೀವನಚರಿತ್ರೆ, ಸೃಜನೇತರವಾಗಿ ಸಾಹಿತ್ಯವಿಮರ್ಶೆ, ವೈಚಾರಿಕಚಿಂತನೆ, ವೈಚಾರಿಕ ಆಲೋಚನೆಗಳು ನವೋದಯದ ಸಾಹಿತ್ಯಘಟ್ಟದಲ್ಲಿ ಹೇರಳವಾಗಿ ಸೃಷ್ಟಿಗೊಂಡಿರುವುದನ್ನು ಗುರುತಿಸಲಾಗಿದೆ.

ಈ ಸಾಹಿತ್ಯಘಟ್ಟದ ಕಾವ್ಯವನ್ನು ಸಮೀಕ್ಷೆಗೆ ಹಚ್ಚುವಾಗ ಡಾ. ಕಾಪಸೆಯವರು, ಕನ್ನಡದ ರಮ್ಯಪಂಥ ಇಂಗ್ಲಿಷ್ ಕಾವ್ಯದ ಪ್ರಭಾವ-ಪ್ರೇರಣೆಯಿಂದ ಹುಟ್ಟಿದ್ದು ಎಂಬುದನ್ನು ಸಾರ್ವತ್ರೀಕರಣಗೊಳಿಸದೆ, ಅದಕ್ಕಿದ್ದ ಅಂತಃಪ್ರೇರಣೆಗಳನ್ನೂ ಗುರುತಿಸಿ ಅತ್ಯಂತ ಸಮರ್ಪಕವಾಗಿ ಅದಕ್ಕೆ ದೇಸೀ ಲೇಪವನ್ನು ಹಚ್ಚಿದ್ದಾರೆ. ಮೈಸೂರು ಕಡೆಯ, ಇಂಗ್ಲಿಷ್ ವಿದ್ಯಾಭ್ಯಾಸದ ಹಿನ್ನೆಲೆಯಿದ್ದ, ಬಿ.ಎಂ.ಶ್ರೀ. ಅವರ ಪ್ರಭಾವ ವಲಯದಲ್ಲಿದ್ದವರ ಭಾವಗೀತಗಳ ಮೇಲೆ ಅಂತಹ ವಿದೇಶೀ ಪ್ರಭಾವ ಹಬ್ಬಿರಬಹುದಾದರೂ, ಉತ್ತರಕರ್ನಾಟಕ ಭಾಗದ ಕವಿಗಳಿಗೆ, ಜಾನಪದೀಯವಾಗಿ ಮೂಡಿಬಂದ ಹಾಡು ಹಸೆಗಳೇ ಭಾವಗೀತಾತ್ಮಕ ಅಭಿವ್ಯಕ್ತಿಗೆ ದಾರಿ ಮಾಡಿಕೊಟ್ಟಿರುವ ಸತ್ಯವನ್ನು ಬಿಚ್ಚಿದ್ದಾರೆ. ಆದರೆ ಇಂಗ್ಲಿಷ್ ಹೊಸಗನ್ನಡ ಸಾಹಿತ್ಯದ ಮೇಲೆ ಇಂಗ್ಲಿಷಿನ ರೊಮ್ಯಾಂಟಿಕ್ ಕವಿಗಳ ಪ್ರೇರಣೆಯಿತ್ತೆಂಬ ಐತಿಹಾಸಿಕ ಸತ್ಯವನ್ನೂ ಅಲ್ಲಗಳೆಯುವುದಿಲ್ಲ.

ನವೋದಯಪೂರ್ವ ಸಾಹಿತ್ಯಯುಗಕ್ಕಿಂತ ನವೋದಯ ಸಾಹಿತ್ಯಯುಗ ಹೇಗೆ ಭಿನ್ನವಾಗಿ ನಿಂತಿದೆ ಎನ್ನುವುದನ್ನು ಇಲ್ಲಿ ವಿಚಾರ ವಿಕಸನದ ಆಧಾರದ ಮೇಲೆ ಬಣ್ಣಿಸಲಾಗಿದೆ. ಜೊತೆಗೆ ಈ ವೈಚಾರಿಕತೆಗೆ ಪ್ರೋತ್ಸಾಹಕವಾಗಿ ಒದಗಿ ಬಂದ, ಇಂದಿಗೆ ಐತಿಹಾಸಿಕ ಎನಿಸುವ ಒತ್ತಡ-

ಒತ್ತಾಸೆಗಳನ್ನೂ ಸೋದಾಹರಣವಾಗಿ ಪ್ರಸ್ತುತಪಡಿಸಲಾಗಿದೆ. ಗುರುಲಿಂಗ ಕಾಪಸೆಯವರೇ ಇಲ್ಲಿ ತಿಳಿಸಿರುವಂತೆ "ದೀರ್ಘ ಕಾಲದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೧೦, ೧೨, ೧೫ ಹಾಗೂ ೧೭ ನೇ ಶತಮಾನ ಮಹತ್ವದ ಯುಗಗಳಾಗಿರುವಂತೆ ಈ ೨೦ ನೇ ಶತಮಾನವೂ ವೈಶಿಷ್ಟ್ಯ, ಮೌಲಿಕತೆ ಮೊದಲಾದ ದೃಷ್ಟಿಯಿಂದ ಅಸಾಧಾರಣ ಯುಗವೇ ಆಗಿದೆ. ಅದರಲ್ಲಿ ನವೋದಯ ಸಾಹಿತ್ಯ ಈ ಶತಮಾನದ ಶಿರೋರತ್ನದಂತಿದೆ."

ಪ್ರಸ್ತುತ ಕೃತಿಯ ಮೂರನೆ ಲೇಖನ ಪ್ರಗತಿಶೀಲ ಸಾಹಿತ್ಯ ಘಟ್ಟ. ಡಾ. ಎಚ್. ಎಸ್. ರಾಘವೇಂದ್ರರಾವ್ ಅವರ ಈ ಲೇಖನ ಅತ್ಯಂತ ಶಿಸ್ತಿನ ಅಧ್ಯಯನದ ಫಲ. ಭಾರತದ ಸ್ವಾತಂತ್ರ್ಯ ಸಮರ ಹಾಗೂ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಇಡೀ ರಾಷ್ಟ್ರಾದ್ಯಂತ ಉಪಕ್ರಮಿಸಿದ ವೈಚಾರಿಕ, ಚಿಂತನಶೀಲ ಧೋರಣೆಗಳೇ ಪ್ರಗತಿಶೀಲ ಸಾಹಿತ್ಯದ ಹುಟ್ಟಿಗೆ ಬುನಾದಿಯಾದವು. ಸಮತಾವಾದ, ಸಮಾಜವಾದ, ಗಾಂಧೀವಾದ, ಅಂಬೇಡ್ಕರ್‌ವಾದ ಹೀಗೆ ಅನೇಕ ನೆಲೆಯ ತಾತ್ವಿಕ ಚಿಂತನೆಗಳು, ಅಭಿಪ್ರಾಯ ಭೇದಗಳೂ ವ್ಯಕ್ತವಾದವು. ಕ್ರಾಂತಿಯ ಟಿಸಿಲೊಡೆದಿದ್ದ ಸೋವಿಯತ್ ರಷ್ಯಾದ ಪ್ರಚೋದನಕಾರಿ ಕೃತಿಗಳಿಂದಲೂ ಭಾರತೀಯ ಸಮಾಜಕ್ಕೆ ಪ್ರೇರಣೆ ಒದಗಿದ್ದು ಕಾಣಬರುತ್ತದೆ. ಅಖಿಲ ಭಾರತವೇ ಸಮಾಜ ಸುಧಾರಣೆಯ ನಿಟ್ಟಿನಲ್ಲಿ, ಹೊಸ ಹೆಜ್ಜೆ ಇರಿಸಿದಾಗ ಸಹಜವಾಗಿಯೇ ಕನ್ನಡ ನಾಡು ಅದರಲ್ಲಿ ಪಾಲ್ದಾರನಾದದ್ದು, ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಅದು ಅಭಿವ್ಯಕ್ತವಾಗಲು ಕಾರಣವಾಯಿತು. ಈ ಪ್ರಗತಿಶೀಲ ಚಿಂತನೆ ಪ್ರತಿಭಟನಾತ್ಮಕ ಧೋರಣೆಯಿಂದ ಮೈದಳೆದರೂ ಮುಖ್ಯವಾಗಿ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸುಧಾರಣೆಗೆ ಯತ್ನಿಸಿತು. ಈ ಕಾಲ ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯಗಳೆರಡರಲ್ಲೂ ಸುಲಭ ಸಂವಹನೆಗೆ ನಿರ್ಭಯ ಅಭಿವ್ಯಕ್ತಿಗೆ ಆ ಮೂಲಕ ಕನ್ನಡ ಸಾಹಿತ್ಯದ ಪುನರುತ್ಥಾನಕ್ಕೆ ಅನುವು ಮಾಡಿಕೊಟ್ಟಿದ್ದನ್ನು ರಾಘವೇಂದ್ರರಾವ್ ಇಲ್ಲಿ ಗುರುತಿಸಿದ್ದಾರೆ.

ಕಾವ್ಯ, ನಾಟಕ, ಸಣ್ಣಕಥೆ, ಕಾದಂಬರಿ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಪ್ರಗತಿಶೀಲತೆಯ ಹೆಜ್ಜೆ ಗುರುತುಗಳನ್ನು ಹುಡುಕಿರುವ ಲೇಖಕರು ಈ ಸಾಹಿತ್ಯ ಸಂದರ್ಭ ಕಲ್ಪನಾಲೋಕದ ವಿಹಾರವನ್ನು ಬಹುತೇಕ ತಿರಸ್ಕರಿಸಿ, ವಾಸ್ತವದ ನೋವುಗಳಿಗೆ ಭೂತಗನ್ನಡಿ ಹಿಡಿಯುವುದನ್ನೂ ಗುರುತಿಸಿದ್ದಾರೆ. ಸಾಮಾಜಿಕ ಪುನರುಜ್ಜೀವನದ ಒಂದು ಪ್ರಬಲ ಅಸ್ತ್ರವಾಗಿ ಪ್ರಗತಿಶೀಲ ಘಟ್ಟದ ಕನ್ನಡ ಸಾಹಿತ್ಯ ವರ್ತಿಸಿರುವುದನ್ನೂ, ಈ ಮೂಲಕವೇ ದಲಿತ, ಬಂಡಾಯ ಮುಂತಾದ ಇತರ ಧೋರಣೆಗಳಿಗೆ ಧ್ವನಿ ಎತ್ತಿರುವುದನ್ನೂ ಲೇಖಕರು ಸಮರ್ಥಿಸಿಕೊಂಡಿದ್ದಾರೆ.

ಕಾಲಮಾನದ ದೃಷ್ಟಿಯಿಂದ ಪ್ರಗತಿಶೀಲ ಯುಗಕ್ಕೆ ಅತೀ ಸನಿಹದಲ್ಲೇ ಅಥವಾ ಆ ಅವಧಿಯಲ್ಲೇ ನವ್ಯ ಸಾಹಿತ್ಯ ಘಟ್ಟವೂ ಮೊಳೆತಿರುವುದು ಗಮನಾರ್ಹ. ಧೋರಣೆಯ ದೃಷ್ಟಿಯಿಂದಲೂ ಪ್ರಗತಿಶೀಲದ ಕವಲಂತೇ ನವ್ಯವೂ ಇದೆ. ಹಾಗಾಗಿ ಧೋರಣೆ ಹಾಗೂ ಕಾಲಮಾನದ ದೃಷ್ಟಿಯಿಂದ ಪ್ರಗತಿಶೀಲ ಸಾಹಿತ್ಯ ಘಟ್ಟದ ಜೊತೆಯೇ ನಿಲ್ಲಬಹುದಾದ ನವ್ಯ ಸಾಹಿತ್ಯ ಭಿನ್ನವೆನಿಸುವುದು ನವೋದಯ ಸಾಹಿತ್ಯದ ಜೊತೆ ಮಾತ್ರ. ರಮ್ಯ ಪಂಥದ ಎಲ್ಲ ಸಾಧ್ಯತೆಗಳೂ ಮುಗಿದು ಕವಿ ಮನಸ್ಸು, ಹೊಸ ಬಗೆಯ ಅಭಿವ್ಯಕ್ತಿ ಮಾರ್ಗಕ್ಕಾಗಿ ಶೋಧನೆ ನಡೆಸಿದ್ದಾಗ, ಪ್ರಗತಿಶೀಲ ಚಿಂತನೆಗಳಿಗೆ ಹೊಂದುವ ಮುಕ್ತ ಛಂದದ ಪಥ ನವ್ಯಕ್ಕೆ

ತೆರೆಮುಕೊಂಡಿತು. ಈ ನವ್ಯ ಸಾಹಿತ್ಯ ಘಟ್ಟದ ಬಗ್ಗೆ ಡಾ. ಎಚ್. ಎಸ್. ವೆಂಕಟೇಶಮೂರ್ತಿ ಬರೆಯುತ್ತಾ ನವ್ಯಕಾವ್ಯ ಪ್ರವರ್ತಕರೆನಿಸಿದಾಗ ಅಡಿಗರ ನವ್ಯದ ಬಗೆಗಿನ ನಂಬಿಕೆಗಳನ್ನು, ಕಾವ್ಯಸಿದ್ಧಾಂತವನ್ನು ಅಡಿಗರ ಸೂತ್ರದಂತೆಯೇ ಇಲ್ಲಿ ಮಂಡಿಸಿದ್ದಾರೆ. ಈ ಲೇಖನದಲ್ಲಿ ಉದಾಹರಣೆ ಸಹಿತವಾಗಿ ನವ್ಯ ಸಾಹಿತ್ಯ ಘಟ್ಟದ ಸಮೀಕ್ಷೆ ಹಾಗೂ ವಿಶ್ಲೇಷಣೆ ನಡೆಯುವುದಕ್ಕಿಂತ ಹೆಚ್ಚಾಗಿ, ಆ ಕಾಲದ ಸಾಹಿತಿಗಳ ಹೆಸರಿಸುವಿಕೆಗೇ ಪ್ರಾಶಸ್ತ್ಯ ಕೊಟ್ಟಂತಿದೆ. ಕಾವ್ಯದಂತೆಯೇ, ಕಥೆ, ಕಾದಂಬರಿ, ನಾಟಕಗಳಲ್ಲಿಯ ನವ್ಯತೆಯನ್ನು ಮೇಲ್ನವರದಲ್ಲಿಯೇ ಸವರಿರುವುದಕ್ಕೆ ಈ ಸಾಹಿತ್ಯ ಘಟ್ಟದ ಬಹು ವ್ಯಾಪಕತೆ ಹಾಗೂ ಅದನ್ನು ಹಿಡಿದಿಡಲು ಒದಗಿಸಿರುವ ಸಮಯಮಿತಿಯೇ ಕಾರಣವೆಂದು ಭಾವಿಸಬೇಕಾಗಿದೆ.

ಸಾಮಾಜಿಕ ಪುನರುಜ್ಜೀವನದ ನೆರಳಿನಲ್ಲಿ ಪ್ರತಿಭಟನೆಯ ಧ್ವನಿ ಹೊರಡಿಸಿದ ಕನ್ನಡ ಸಾಹಿತ್ಯ, ಸ್ವಾತಂತ್ರ್ಯಾನಂತರದ ಕಾಲದಲ್ಲಿ ಗಣತಂತ್ರ ಭಾರತ, ಜಾತ್ಯತೀತ ಭಾರತವೂ ಆಗಿ ವ್ಯಕ್ತಿ ಸ್ವಾತಂತ್ರ್ಯ, ಸಮಾನತೆಯ ಪ್ರಜ್ಞೆ ಜಾಗ್ರತವಾಯಿತು. ಈ ಪ್ರಜ್ಞೆಯ ನಿರ್ಮಿತಿಯೇ ದಲಿತ ಸಾಹಿತ್ಯದ ಉಗಮಕ್ಕೆ ಮೂಲ. ಡಾ. ಜಿ. ಆರ್. ತಿಪ್ಪೇಸ್ವಾಮಿ ಕನ್ನಡ ದಲಿತ ಸಾಹಿತ್ಯ ಘಟ್ಟದ ಬಗ್ಗೆ ಪರಾಮರ್ಶೆ ನಡೆಸುತ್ತಾ, ಪ್ರಗತಿಶೀಲ ಸಾಹಿತಿಗಳು ದಲಿತಪರ ಚಿಂತನೆಗೆ ತೊಡಗುವುದಕ್ಕೆ ಸಹಾನುಭೂತಿ ಕಾರಣವೇ ಹೊರತು, ದಲಿತರೇ ಆಲೋಚಿಸುವಂಥ ಸಹಾನುಭೂತಿ ಅಲ್ಲ ಎಂಬ ಅಂಶ ಎತ್ತಿಹಿಡಿದಿದ್ದಾರೆ. ಸಂಪೂರ್ಣವಾಗಿ ಸಾಮಾಜಿಕ ಶೋಷಣೆಯೇ ಕಾರಣವಾಗಿ ದಲಿತ ಧ್ವನಿ ಬಲಿಯಿತು. ಅಂಬೇಡ್ಕರ್ ವಾದ ಸ್ಫೋಟಗೊಂಡು 'ನ್ಯಾಯ ಬೇಕು ಭಿಕ್ಷೆಯಲ್ಲ' ಎಂದು ಕೂಗುವ ಮೂಲಕ ಪರಂಪರಾಗತವಾಗಿ ಸ್ಥಾಪಿತವಾಗಿದ್ದ ಶ್ರೇಣೀಕರಣ ವ್ಯವಸ್ಥೆಯನ್ನು ಪ್ರಶ್ನಿಸಲಾಯಿತು.

ಈ ದಲಿತಪರ ಧೋರಣೆ ಕರ್ನಾಟಕದಲ್ಲಿ ಮಾತ್ರವಲ್ಲದೇ ಮಹಾರಾಷ್ಟ್ರ, ತಮಿಳುನಾಡು, ಕೇರಳ, ಬಂಗಾಲದಲ್ಲೂ ಹಿಂದೀ, ಉರ್ದೂ ಭಾಷೆಗಳಲ್ಲೂ ಹೊರಬಂದಿತು. ಹಾಗೆ ನೋಡಿದರೆ, ದಲಿತ ಧೋರಣೆ ಕನ್ನಡದಲ್ಲಿ ೨೦ ನೇ ಶತಮಾನದ ಮಧ್ಯಭಾಗದಲ್ಲಿ ದಟ್ಟವಾಗಿ ಸಾಂದ್ರವಾಗಿ ಮೂಡಿಬಂದರೂ, ಇದರ ಬೇರುಗಳು ೧೨ ನೇ ಶತಮಾನದ ವಚನಸಾಹಿತ್ಯದ ಸಂದರ್ಭದಲ್ಲೇ ಲಭ್ಯವಾಗಿರುವುದನ್ನೂ ಲೇಖಕರು ಗುರುತಿಸಿದ್ದಾರೆ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ದಲಿತಪರ ಪ್ರಜ್ಞೆ ಹರಿದಿರುವುದನ್ನು ಪ್ರಸ್ತಾಪಿಸಿರುವ ತಿಪ್ಪೇಸ್ವಾಮಿ ಅವರು ದಲಿತ ಸಾಹಿತ್ಯದ ಪ್ರೇರಣೆ, ಲಕ್ಷಣಗಳನ್ನೂ ಸಮೀಕ್ಷೆಗೊಳಪಡಿಸಿರುವುದು ಸೂಕ್ತವಾಗಿದೆ.

ಇನ್ನು ಬಂಡಾಯ ಸಾಹಿತ್ಯಘಟ್ಟ. ಡಾ. ಬಸವರಾಜ ಸಬರದ ಈ ಲೇಖನವನ್ನು ಸಿದ್ಧಪಡಿಸಿದ್ದಾರೆ. ಸಾಮಾಜಿಕ ಕಟ್ಟುಪಾಡುಗಳಿಗೆ ಕನ್ನಡದ ಕವಿಗಳು ತಮಗಿದ್ದ ಮಿತಿಯೊಳಗೇ ಪ್ರತಿರೋಧವನ್ನು ವ್ಯಕ್ತಪಡಿಸುವ ಬಂಡಾಯಧರ್ಮವನ್ನು ಇಲ್ಲಿ ಪಂಪನ ಕಾಲದಿಂದಲೇ ಗುರುತಿಸಲಾಗಿದೆ. ಅದರಲ್ಲೂ ೧೨ನೇ ಶತಮಾನವೇ ಬಂಡಾಯ ಮನೋಭಾವವನ್ನು ಘಂಟಾಘೋಷವಾಗಿ ಸಾರಿ ಹೇಳಿದ ಕಾಲ ಎಂಬುದನ್ನೂ, ದಾಸ ಸಾಹಿತ್ಯ ಪರಂಪರೆಯಲ್ಲೂ ಸಮಾಜ ವಿಡಂಬನೆಯ ಮೊನಚು ದೃಷ್ಟಿ ವ್ಯಕ್ತವಾಗಿರುವುದನ್ನೂ ಹಂತಹಂತವಾಗಿ ಲೆಕ್ಕಿಸಲಾಗಿದೆ. ಆಧುನಿಕ ಸಾಹಿತ್ಯದಲ್ಲೂ ಬಂಡಾಯದ ಪ್ರವೃತ್ತಿಯನ್ನು ನವೋದಯಪೂರ್ವ ಕಾಲದಿಂದಲೂ ಕಾಣಬಹುದಾಗಿದೆ ಎಂದೂ ಲೇಖಕರು ಅಭಿಪ್ರಾಯಪಟ್ಟಿದ್ದಾರೆ. ದಲಿತ

ಸಾಹಿತ್ಯವೂ ಬಂಡೆದ್ದ್ವರ ಫಲವೇ. ಪ್ರಗತಿಶೀಲ ಚಿಂತನೆಗಳೂ ಪ್ರತಿಭಟನೆಯ ಸೂಚನೆಯೇ. ಸ್ತ್ರೀಪರ ಕೂಗೂ ಸಹನೆಯ ಪರಾಕಾಷ್ಠೆಯೇ. ನವ್ಯಮಾರ್ಗವೂ ಹೊಸತು ಬೇಕೆನ್ನುವ ಹಂಬಲವೇ. ಹಾಗಾಗಿ ಕನ್ನಡ ಸಾಹಿತ್ಯದ ಎಲ್ಲ ಅವಸ್ಥಾ ಘಟ್ಟಗಳಲ್ಲೂ, ೨೦ ನೇ ಶತಮಾನದ ಕನ್ನಡ ಸಾಹಿತ್ಯದ ಎಲ್ಲ ಧೋರಣಾ ಘಟ್ಟಗಳಲ್ಲೂ ಬಂಡಾಯ ಎನ್ನುವುದು ಅಂತರ್ಗಾಮಿಯಾಗಿ ಸಂವಹಿಸುತ್ತಲೇ ಬಂದಿದೆ. ಒಂದು ಚಳವಳಿಯ ಸ್ವರೂಪವನ್ನೇ ಪಡೆದ ಬಂಡಾಯ ಸಾಹಿತ್ಯ ದಟ್ಟವಾದದ್ದೂ, ದಿಟ್ಟವಾದದ್ದೂ, ದೃಢವಾದದ್ದೂ ೨೦ ನೇ ಶತಮಾನದ ಮುಕ್ಕಾಲು ಭಾಗ ಕಳೆವ ವೇಳೆಗೇ. ಇದಕ್ಕಿದ್ದ ಸಾಹಿತ್ಯೇತರ ಹಾಗೂ ಸಾಹಿತ್ಯಕ ಪ್ರೇರಣೆಗಳನ್ನೂ ಸಬರದ ಅವರು ಯಶಸ್ವಿಯಾಗಿ ಬಿಡಿಸಿದ್ದಾರೆ. ಸ್ತ್ರೀವಾದಿ ಸಂವೇದನೆ ಹಾಗೂ ಬಂಡಾಯದ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ.

೨೦ ನೇ ಶತಮಾನದ ಕೊನೆಯ ದಶಕವನ್ನು ಬಂಡಾಯೋತ್ತರ ಕನ್ನಡ ಸಾಹಿತ್ಯ ಘಟ್ಟ ಎಂದು ಗುರುತಿಸಿ ಸಮೀಕ್ಷೆಗೊಳಪಡಿಸಿದ ಡಾ. ಶ್ಯಾಮಸುಂದರ ಬಿದರಕುಂದಿ, ಇದಿನ್ನೂ ಪ್ರಸ್ತುತ ಘಟಿಸುತ್ತಿರುವ ಸಾಹಿತ್ಯ ಘಟ್ಟವಾದ್ದರಿಂದ ಇದರ ಆಶಯ ಧೋರಣೆಗಳ ಬಗ್ಗೆ ಈಗಲೇ ಏನಾದರೂ ಹೇಳುವುದು ತೀರಾ ಬೇಗವೆನಿಸುತ್ತದೆ ಎಂದು ಒಪ್ಪಿದ್ದಾರೆ, ನಿಜ. ಬಂಡಾಯೋತ್ತರ ಸಾಹಿತ್ಯ ಘಟ್ಟ ಇನ್ನೂ ನಡೆಯುತ್ತಿದೆ. ಎಲ್ಲ ಪ್ರಕಾರಗಳಲ್ಲೂ ಸಾಹಿತ್ಯ ರಚನೆಯಾಗುತ್ತಲೇ ಇದೆ. ಇವುಗಳಲ್ಲಿ ಎಂದಿನಂತೆ ರಮ್ಯತೆ ಇದೆ, ಪ್ರಗತಿಪರ ಚಿಂತನೆ, ದಲಿತ-ಬಂಡಾಯ ಧೋರಣೆ, ಸ್ತ್ರೀವಾದಿ ಸಂವೇದನೆ, ಐತಿಹಾಸಿಕ ಉದ್ಗ್ರಂಥಗಳನ್ನಾಧರಿಸಿದ ಹೊಸ ದೃಷ್ಟಿಕೋನದ ಮಹಾಕಾವ್ಯಗಳು ಎಲ್ಲಾ ಇವೆ, ರಚನೆಯೂ ಆಗುತ್ತಿವೆ. ಸ್ಥೂಲವಾಗಿ ಇಲ್ಲೂ ಪ್ರತಿಭಟನಾತ್ಮಕ ಧ್ವನಿ ಇರುವುದನ್ನೂ ಲೇಖಕರು ಗುರುತಿಸುವ ಯತ್ನ ಮಾಡಿದ್ದಾರಾದರೂ ಇಂಥದೇ ಎಂಬ ಆಶಯವಿದೆ ಎಂದು ಹೇಳುವುದು ಸಾಧ್ಯವಾಗಿಲ್ಲ.

ಆದರೆ, ಮಹಿಳಾ ಸಾಹಿತ್ಯದ ಬಗ್ಗೆ ಇಲ್ಲಿ ಸಮೀಕ್ಷೆ ನಡೆದಿದೆ. ಅದರ ಬಗ್ಗೆ ಚರ್ಚಿಸುವುದಕ್ಕೂ ಸಾಕಷ್ಟು ಸಾಧ್ಯತೆಯಿದೆ. ಹಾಗಾಗಿ ಈ ೭ನೇ ಲೇಖನವನ್ನು ಬಂಡಾಯೋತ್ತರ ಎನ್ನುವುದಕ್ಕೆ ಬದಲಾಗಿ ಸ್ತ್ರೀಪರ ಸಾಹಿತ್ಯ ಘಟ್ಟವಾಗಿ ಗುರುತಿಸಬಹುದಿತ್ತು. ಬಂಡಾಯೋತ್ತರವನ್ನು ನಂತರ ಚರ್ಚಿಸಬಹುದಿತ್ತು. ಏಕೆಂದರೆ ಬಂಡಾಯ ಸಾಹಿತ್ಯದಂತೆಯೇ ಸ್ತ್ರೀಪರ ಚಿಂತನೆಗಳು ಶತಮಾನಗಳ ಹಿಂದೆಯೇ ಮೂಡಿರುವುದೂ ಗಮನಾರ್ಹ. ವಚನಕಾರರ ಸಂದರ್ಭದಲ್ಲೇ ಇದರ ಆಳವಾದ ಬೇರುಗಳನ್ನೂ ಕಾಣುತ್ತೇವೆ. ೨೦ ನೇ ಶತಮಾನದ ಆರಂಭಕ್ಕೆ ಮುಂಚೆಯೇ ಆಧುನಿಕ ಕನ್ನಡ ಸಾಹಿತ್ಯ ಪ್ರಾರಂಭವಾಗಿರುವಾಗಲೇ, ಸಂಚಿಯ ಹೊನ್ನಮ್ಮ, ಮನೋರಮೆಯ ಮೂಲಕ ಮುದ್ದಣ, ನಂಜನಗೂಡು ತಿರುಮಲಾಂಬ, ನಂತರ ಕಲ್ಯಾಣಮ್ಮ ಇವರೆಲ್ಲರ ಸ್ತ್ರೀಪರ ನಿಲುವು ತೋರಿಬಂದಿರುವುದರಿಂದಲೂ ಈ ಕೃತಿಯಲ್ಲಿ ಈ ಧ್ವನಿಗೊಂದು ಪ್ರತ್ಯೇಕ ಸ್ಥಾನ ಬೇಕಿತ್ತು ಎನಿಸುತ್ತದೆ.

ಒಟ್ಟಾರೆ ೨೦ ನೇ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳ ಈ ಕೃತಿ ಸಾಹಿತ್ಯ ಶೋಧಕರಿಗೆ ಉಪಯುಕ್ತವೆನಿಸುವ ಗ್ರಂಥವೆನ್ನಬಹುದು.

■ ಡಾ. ಟಿ. ಸಿ. ಪೂರ್ಣಿಮಾ : ಮುಖ್ಯಮಂತ್ರಿಯವರ ವಿಶೇಷಾಧಿಕಾರಿ, # ೨೪೪, ೨೩ ನೇ ಬ್ಲಾಕ್, ಸಿಪಿಡಬ್ಲ್ಯುಡಿ ಕಾಲನಿ, ಕೋರಮಂಗಲ ೨ ನೇ ಬ್ಲಾಕ್, ಬೆಂಗಳೂರು-೫೬೦ ೦೩೪ ■

ಪುಸ್ತಕ ಪರಿಶೀಲನೆ

೧. ಉತ್ತರದ ಸಂತ ಪರಂಪರೆ : ಪ್ರೊ. ಮ. ಸು. ಕೃಷ್ಣಮೂರ್ತಿ

ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೬. ಪ್ರ.ಮು. ೨೦೦೩. ಪು. ೪೫೦. ರೂ. ೨೦೦/-

ತುಂಬ ಉಪಯುಕ್ತವಾದ ಪುಸ್ತಕವೊಂದನ್ನು ಬರೆದಿದ್ದಾರೆ ಮ. ಸು. ಕೃಷ್ಣಮೂರ್ತಿಯವರು. ಇಂತಹ ಪುಸ್ತಕಗಳು ಸಾಮಾನ್ಯವಾಗಿ ಕಬ್ಬಿಣದ ಕಡಲೆಯಂತಿರುವುದೇ ಹೆಚ್ಚು. ಆದರೆ 'ಉತ್ತರದ ಸಂತ ಪರಂಪರೆ' ಪುಸ್ತಕದ ಕನ್ನಡವು ಸರಳವಾಗಿ ಓದಿಸಿಕೊಂಡು ಹೋಗುವುದರ ಜೊತೆಗೇ ಕ್ಲಿಷ್ಟವಾದ ವಿಚಾರಗಳನ್ನು ಮನದಟ್ಟು ಮಾಡುತ್ತದೆ ಕೂಡ. ಪುಸ್ತಕದ ಮೊದಲ ಅರ್ಧ ಭಾಗದಲ್ಲಿ ಪರಂಪರೆಯನ್ನು ಕುರಿತಾದ ತಾತ್ವಿಕ ಚರಿತ್ರೆಯಿದೆ. ಮಧ್ಯಕಾಲೀನ ಭಕ್ತಿ ಪರಂಪರೆಗಿದ್ದ ಹಿನ್ನೆಲೆ, ನಿರ್ಗುಣ ಹಾಗೂ ಸಗುಣಗಳ ಪರಿಕಲ್ಪನೆ, ವೈದಿಕ ಪರಂಪರೆಗೆ ಪರ್ಯಾಯವಾಗಿ ಬಂದ ಸೆಲೆಗಳು ಜೈನರು ಹಾಗೂ ಬೌದ್ಧ ದರ್ಶನಗಳ ಪ್ರಭಾವ ನಾಸ್ತಿಕವೆಂಬ ಅಪವಾದಕ್ಕೆ ಗುರಿಯಾದ ಧಾರ್ಮಿಕ ಪರಂಪರೆ ಬಗ್ಗೆ ಮೊದಲಲ್ಲಿ ಚರ್ಚೆಯಿದೆ. ಅನಂತರದಲ್ಲಿ ಬಂದ ಇಸ್ಲಾಮಿನ ಪ್ರಭಾವ ಸೂಫೀ ಸಂತರುಗಳು ನಾಥರು ಸಿದ್ಧರು ಯೋಗಿಗಳನ್ನು ಕುರಿತಾದ ಚರ್ಚೆಯೂ ವಿಸ್ತಾರವಾಗಿದೆ.

ನಾನು ಕಣ್ಣು ಮುಚ್ಚಿಡುವುದಿಲ್ಲ ಕಿವಿ ಮುಚ್ಚಿಡುವುದಿಲ್ಲ ಕಾಯಕ್ಲೇಷ ಮಾಡುವುದಿಲ್ಲ... ಕಣ್ಣು ತೆರೆದಂತೆಯೇ ಹಂಸವನ್ನು ಕಂಡೇನು ಎನ್ನುವ ಕಬೀರನ ಮಾತುಗಳು ಭಕ್ತಿ ಪರಂಪರೆ ಇತರ ಮಾರ್ಗಗಳಿಗಿಂತ ಅದು ಹೇಗೆ ಭಿನ್ನವಾದದ್ದು ಹಾಗೂ ಸಮಕಾಲೀನ ಮಹತ್ವವುಳ್ಳದ್ದು ಎಂಬುದನ್ನು ತಿಳಿಸುತ್ತದೆ. ಸತ್ಯದರ್ಶನ ಅಥವಾ ಸತ್‌ನಾಮದ ಹಾದಿಯಲ್ಲಿ ವ್ರತ ಉಪವಾಸ ಯಜ್ಞ ಯಾಗಗಳು ಬ್ರಹ್ಮಚರ್ಯೆ ತಪಸ್ಸು ಇತ್ಯಾದಿಗಳ ಆವಶ್ಯಕತೆಯಿಲ್ಲ, ತನ್ನ ದೈನಂದಿನ ಬದುಕನ್ನು ಅದಿರುವಂತೆಯೇ ಒಪ್ಪಿಕೊಂಡು, ಇಡಿಯಾಗಿ ಸತ್‌ನಾಮದ ಹಾದಿಗೆ ಕೊಂಡೊಯ್ಯುವ ರೀತಿ ಮಧ್ಯಕಾಲೀನ ಭಕ್ತ ಸಂತರುಗಳ ರೀತಿ ಎಂಬುದನ್ನು ಲೇಖಕರು, ಸಂತರುಗಳ ವಚನಗಳ ವಿಪುಲ ಉದಾಹರಣೆ ಸಹಿತವಾಗಿ ಮನದಟ್ಟು ಮಾಡಿಕೊಡುತ್ತಾರೆ.

ಕಬೀರ ರವಿದಾಸ ರಾಮದಾಸರು... ಇತ್ಯಾದಿಯಾಗಿ ಹಲವು ಹತ್ತು ಸಂತರ ದೋಹಾಗಳು ಚೌಪದಿಗಳು ಅಷ್ಟಪದಿಗಳು ಗುರುಬಾನಿ ಇತ್ಯಾದಿ ಪದ್ಯಭಾಗಗಳನ್ನು ತಾವೇ ಅನುವಾದ ಮಾಡಿ ಪುಸ್ತಕದ ತುಂಬ ಬಳಸಿಕೊಂಡಿದ್ದಾರೆ ಕೃಷ್ಣಮೂರ್ತಿಯವರು. ಹಲವಾರು ಕಡೆಗಳಲ್ಲಿ ಹಿಂದೀ ಗುರುಮುಖೀ ಇತ್ಯಾದಿ ಮೂಲಭಾಷೆಯ ಪದ್ಯಗಳನ್ನೂ ನೀಡಿ ಕನ್ನಡ ಅನುವಾದವನ್ನು ಅದರ ಪಕ್ಕಕ್ಕಿಟ್ಟಿದ್ದಾರೆ. ಭಕ್ತಿ ರಚನೆಗಳು ಮೌಖಿಕ ಪರಂಪರೆಯಲ್ಲಿ ಹುಟ್ಟಿದ ಅಸಾಧಾರಣ ಕಾವ್ಯ. ಅವುಗಳನ್ನು ಅನುವಾದಿಸುವುದೆಂದರೆ ಸುಲಭದ ಕೆಲಸವಲ್ಲ. ನೀರಿನಿಂದ ಹೊರಕ್ಕೆಳೆದ ಮೀನು ಹೇಗೆ ಕೆಲವೇ ಕ್ಷಣಗಳಲ್ಲಿ ಬಣ್ಣ ಕಳೆದುಕೊಂಡು ನಿಸ್ತೇಜವಾಗಿ ಬಿಡುತ್ತದೆಯೋ ಹಾಗೆ ಭಕ್ತಿ ಕಾವ್ಯ ಕೂಡ ಮೂಲಭಾಷೆಯಿಂದ ಬೇರ್ಪಟ್ಟದ್ದೇ ನೀರಸವಾಗಿ ಬಿಡುತ್ತದೆ, ಅರ್ಥ ಮಾತ್ರವೇ ಕೈಯಲ್ಲುಳಿದು ಮೂಲದ ಅಸಾಧಾರಣ ಶಬ್ದ ಲಯಗಳು ಕೈ ಜಾರಿಬಿಡುತ್ತದೆ. ಭಾರತದ ಎಲ್ಲ ಭಾಷೆಯ ಭಕ್ತಿ ಕವಿಗಳು ಹೇಳಿದ್ದೂ ಅದೇ ಮಾತುಗಳನ್ನೇ. ಆದರೂ ಆಯಾ ಭಾಷೆಯಲ್ಲಿ ಅದು ನೀಡುವ ಆನಂದ ಅಸಾಮಾನ್ಯವಾದದ್ದು. ಕೃಷ್ಣಮೂರ್ತಿಯವರ ಅನುವಾದ ಕೆಲವು ಕಡೆಗಳಲ್ಲಾದರೂ, ಅವರ ಭಾಷೆಯ ಕಸುವಿನಿಂದಾಗಿ ನಮ್ಮ ಗಮನ ಸೆಳೆಯುತ್ತದೆ.

'ಭಕ್ತಿ ದ್ರಾವಿಡ ಊಪಜೀ ಲಾಯೇ ರಾಮಾನಂದ್!
ಪರಗಟ ಕಿಯೇ ಕಬೀರ್‌ನೇ ಸಾತ್ ದ್ವೀಪ ನವ ಖಂಡ್!'

ಭಕ್ತಿ ಚಳವಳಿಯು ದ್ರಾವಿಡ (ದಕ್ಷಿಣ) ಭಾರತದಲ್ಲಿ ಜನಿಸಿತು. ರಾಮಾನಂದರು ಅದನ್ನು ಉತ್ತರಕ್ಕೆ ತಂದರು. ಅದನ್ನು ತಾನು ಸಪ್ತದ್ವೀಪಗಳಲ್ಲಿ ಹಾಗೂ ನವಖಂಡಗಳಲ್ಲಿ ಕೊಂಡೊಯ್ದೆ ಎಂದು ಕಬೀರ ಹೇಳುತ್ತಾನೆ. ಕೃಷ್ಣಮೂರ್ತಿಯವರಿಗೆ ದಕ್ಷಿಣದ ಭಕ್ತಿ ಪರಂಪರೆ ಹಾಗೂ ಉತ್ತರದ ಸಂತ ಪರಂಪರೆ

ಎರಡರ ಜ್ಞಾನವೂ ಇದೆ. ಇವೆರಡೂ ಪರಂಪರೆಗಳ ತೌಲನಿಕ ಅಧ್ಯಯನವನ್ನವರು ಇಲ್ಲಿ ಸಾಧ್ಯವಾಗಿಸಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಲೇಖಕರು ವೈದಿಕೇತರ ಭಕ್ತಿ ಚಳುವಳಿಗೆ ಮನಸೋತವರು. ಶೂದ್ರ ಸಂತರು, ಸೂಫಿಗಳು, ಶೈವ ವೈಷ್ಣವ ಸಂತರು, ಮಚ್ಛೇಂದ್ರನಾಥ, ಗೋರಕ್ಷನಾಥ ಇತ್ಯಾದಿಯಾಗಿ ಹಲವು ಹತ್ತು ಸಂತರುಗಳ ಪರಿಚಯವನ್ನು ಕನ್ನಡಿಗರಿಗೆ ಮೂಡಿಸುವಲ್ಲಿ ಕೃಷ್ಣಮೂರ್ತಿಯವರು ಯಶಸ್ವಿಯಾಗಿದ್ದಾರೆ.

– ಪ್ರಸನ್ನ, ಕವಿಕಾವ್ಯ ಟ್ರಸ್ಟ್, ಹೊನ್ನೇಸರ, ಹೆಗ್ಗೋಡು - ೫೭೭ ೪೧೭ ತಾ.ಸಾಗರ, ಜಿ.ಶಿವಮೊಗ್ಗ

೨. ಜಡ ಮತ್ತು ಚೇತನ : ಸುಮತೀಂದ್ರ ನಾಡಿಗ

ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು-೯, ಪ್ರ.ಮು. ೨೦೦೫, ಪು. ೯೫, ರೂ. ೬೦/-

ಪ್ರಜ್ಞೆಗೆ ನಿಲುಕಬಹುದಾದ ಎಲ್ಲ ಎತ್ತರ ಬಿತ್ತರಗಳ ನೆಲೆಗಳನ್ನು ಶೋಧಿಸುತ್ತ ಸಾಗುವ ಸುಮತೀಂದ್ರ ನಾಡಿಗರದು ಪ್ರಖರ ಚಿಕಿತ್ಸಕ ಮನೋಭಾವದ ಕಾವ್ಯ. ಹೀಗಾಗಿ ಆಧುನಿಕ ಕನ್ನಡ ಕಾವ್ಯ ಸಂದರ್ಭದಲ್ಲಿ ಇವರು ತಮ್ಮದೇ ವಿಶಿಷ್ಟ ಛಾಪುಳ್ಳ ಮಾದರಿಯೊಂದನ್ನು ಮೂಡಿಸಿದ ಪ್ರಾತಿನಿಧಿಕ ಕವಿ. ಪರವಶತೆಯಲ್ಲಿ ಮೈಮರೆಯದ ತಾತ್ತ್ವಿಕತೆಯಲ್ಲಿ ಜಡಗೊಳ್ಳದ ಎಚ್ಚರ ನಾಡಿಗರ ಒಟ್ಟು ಕಾವ್ಯವನ್ನು ನಿಯಂತ್ರಿಸುವ, ಮುನ್ನಡೆಸುವ ಬಹು ಮುಖ್ಯ ಶಕ್ತಿ. ಎಂತಹ ಗಹನವಾದ ತತ್ತ್ವ, ಕೃತಿ, ಅನುಭವ, ವಿಚಾರಗಳಿದ್ದರೂ ಅದನ್ನು ಮಂಡಿಸಿದ ವ್ಯಕ್ತಿ ಎಷ್ಟೇ ಎತ್ತರದ ಸಾಧಕನಾಗಿದ್ದರೂ ನಾಡಿಗರು ಜಿಜ್ಞಾಸುವಾಗಿ, ಮಹತ್ವಾಕಾಂಕ್ಷಿಯಾಗಿ ಸಂವಾದಕ್ಕೆ, ಪರೀಕ್ಷೆಗೆ ಪಡಿನುಡಿಗೆ ಹರಿಹಾಯುವ ಛಲದವರು. ಇವರ ಚಿಂತನೆಯ ಡೈಯಲೆಕ್ಟಿಕಲ್ ಸ್ವರೂಪ ಬುದ್ಧ-ಬಸವರ ಪ್ರತಿರೋಧಾತ್ಮಕ ಮಾದರಿಯದಲ್ಲ. ಮಾರ್ಕ್ಸ್‌ನ ಚಾರಿತ್ರಿಕ ಭೌತಿಕ ನೆಲೆಯ ಹೊಳವುಗಳು ಇವರಲ್ಲಿದ್ದರೂ ವ್ಯವಸ್ಥೆಯಿಂದ ಸಿಡಿದು ನಿಂತು ಸಂಘರ್ಷಕ್ಕಿಳಿಯುವ ಧಾರ್ಷ್ಟ್ಯದ್ದಲ್ಲ. ಒಳಗಿನಿಂದಲೇ ಸ್ಫೋಟಗೊಂಡು ಸತ್ವವನ್ನು ಉಳಿಸಿಕೊಂಡು ಜಳ್ಳನ್ನು ಝಾಡಿಸುವ, ತೋರುವ, ಕೇರುವ ಮಾದರಿಯದು. `ಕೊಟ್ಟಣವ ಕುಟ್ಟಿದ ಸುಚ್ಚು ತೌಡು ಕಾಣಿರೋ` ಎಂಬ ನಿರಾಕರಣೆಗಿಂತ ``ಪೂರ್ವಮೀಮಾಂಸೆ ಕರ್ಮಕಾಂಡಗಳ ಬಗೆಯಬೇಕು....... ದೊರೆತೀತು ಗೆರೆಮೀರಿದ ಚಿನ್ನದದಿರು'' (ಅಡಿಗ) ಎಂಬುದಕ್ಕೆ ಹತ್ತಿರದ್ದು. ಈ ದಾರಿ ವಿವೇಕಾನಂದ, ಅರವಿಂದರಂತಹ ಓರಿಯಂಟಲಿಷ್ಟರಿಂದ ಪ್ರಭಾವಿತವಾಗಿದ್ದರೂ ಅನುಭಾವ, ಅಧ್ಯಾತ್ಮ, ಯೋಗಗಳ ಇಂದ್ರಿಯಾತೀತ ಅನುಭೂತಿಗಳಿಂದ ಉದ್ದೇಶಪೂರ್ವಕ ಅಂತರವನ್ನು ಕಾಯ್ದುಕೊಳ್ಳುವಂತಹದು. ಎಂ. ಎನ್. ರಾಯ್ ಅವರ ನವಮಾನವತಾವಾದಿ ಚಿಂತನೆಗಳ ಪ್ರಭಾವದಲ್ಲಿಯೂ ಇವರ ತಾತ್ತ್ವಿಕತೆ ರೂಪುಗೊಂಡಿರುವುದು ಸ್ಪಷ್ಟವಿದೆ. ಇಂಥ ನೆಲೆಗಳಲ್ಲಿಯೇ ನಾಡಿಗರು ಬೇಂದ್ರೆ, ಕುವೆಂಪು ಮೊದಲಾದವರ ನವೋದಯ ಕಾವ್ಯದ ತಾತ್ತ್ವಿಕತೆಗಿಂತ ಖಚಿತವಾಗಿ ಭಿನ್ನರಾಗುತ್ತಾರೆ.

ಈ ಹಿನ್ನೆಲೆಯೊಂದಿಗೆ ಅವರ ಇತ್ತೀಚಿನ `ಜಡ ಮತ್ತು ಚೇತನ` ಸಂಕಲನದ ಪ್ರವೇಶ, ಓದು ನನ್ನ ಗುರಿ.

ಪದರಪದರ ಈರುಳ್ಳಿಯೊ ಮಗು ಬೇಕಾದದ್ದೇನು?
ಅದರ ಆತ್ಮವನು ಎಷ್ಟು ಹುಡುಕಿದರು ಪಡೆಯಲಾರೆ ನೀನು.
ಪದರ ಎಸೆಯುತ್ತ ಆತ್ಮವ ಹುಡುಕುವ ನಿನಗೆ ತಿಳಿಯಲಿಲ್ಲ,
ಈರುಳ್ಳಿಯತನ ಅದರಲ್ಲೇ ಇದೆ ಇನ್ನೆಲ್ಲೂ ಇಲ್ಲ.

`ಜಡ, ಚೇತನ ಮತ್ತು ಕಾಲ` ಕವಿತೆಯ ಸಾಲುಗಳಿವು. ನಾನು ಮೇಲೆ ಹೇಳಿದ ತಾತ್ತ್ವಿಕ ಆಶಯಗಳನ್ನು ಆ ಮೂಲಕ ಏರ್ಪಡುವ ಸಂಘರ್ಷಾತ್ಮಕ ಧ್ವನಿಗಳನ್ನು ಈ ಕವಿತೆಯಲ್ಲಿ ಗುರುತಿಸಬಹುದು. ವೈದಿಕ ಪರಂಪರೆಯಲ್ಲಿ ಬೇರುಳ್ಳ ನಾಡಿಗರ ಈ ಕವಿತೆ ಅಥವಾ ಅವರ ಒಟ್ಟು ಗ್ರಹಿಕೆ ಆತ್ಮದ ಹುಡುಕಾಟದ ಅಗತ್ಯವನ್ನು ಮನಗಂಡಿದೆ. ಅದು ಚೈತನ್ಯದ ಹುಡುಕಾಟವೂ ಹೌದು.

ಆದರೆ ಶೂನ್ಯವಾದಿಗಳಾದ ಬೌದ್ಧರಿಗೆ ಆತ್ಮದ ಹುಡುಕಾಟ ಒಪ್ಪಿಗೆ, ನಿರಾಕರಣೆಗಳೆಲ್ಲ ನಗಣ್ಯ. ಪದರು ಪದರಿನ ವಸ್ತು ಸತ್ಯವೇ ಅವರಿಗೂ ಮುಖ್ಯ. ಈ ಹಿನ್ನೆಲೆಯಲ್ಲಿ ಶೂನ್ಯವಾದವನ್ನು ಅಲ್ಲಗಳೆಯುವಂತೆ ಬೌದ್ಧ ತಾತ್ತ್ವಿಕತೆಗೆ ಪ್ರತಿರೋಧವಂತೆ ಇಲ್ಲಿನ ಸಾಲುಗಳು ಮೇಲುನೋಟಕ್ಕೆ ಕಂಡುಬಂದರೂ ಅದನ್ನು ತೀರ್ಮಾನವಾಗಿ ಕವಿತೆ ಎಲ್ಲೂ ಹೇಳುವುದಿಲ್ಲ. ಬೌದ್ಧರ ವಿಕಲ್ಪಗಳು, ಅದ್ವೈತಿಗಳ ಮಾಯೆಯ ಮಿಥ್ಯೆಗಳು ಕೇವಲ ತೋರಿಕೆಯುವಲ್ಲ ಎಂಬ ಸಮಗ್ರ ದೃಷ್ಟಿಯನ್ನು ಪ್ರತಿಪಾದಿಸುವ ಹವಣಿಕೆ ಕವಿಗಿರುವಂತಿದೆ. ಇಂದಿನ ವರ್ಗೀಕೃತ ಅಧ್ಯಯನದ ಶಿಸ್ತುಗಳು, ಸಮಾಜೋ-ರಾಜಕೀಯ ವಿಘಟನೆಗಳು ನಮಗೆ ಪರಿಹಾರಗಳಾಗಿ ಒದಗುತ್ತಿಲ್ಲ ಎಂಬುದು ಕವಿಯ ಮುಖ್ಯ ಆಶಯವಾಗಿರುವಂತಿದೆ. ಕವಿ ಅನೇಕ ಸಿದ್ಧಾಂತಗಳ ವಿರುದ್ಧ ಮಾತ್ರವಲ್ಲ ತನ್ನ ವಿರುದ್ಧ ತಾನೇ ಮಾತಾಡುವ ಸಂಗತಿಗಳು ಈ ಕವಿತೆಯಲ್ಲಿವೆ.

ಭಾಷೆಯ ಬಿಟ್ಟು ಬದುಕಲಸಾಧ್ಯ ಎನ್ನುವ ನಮ್ಮೀ ಸ್ಥಿತಿಗೆ
ಕಾರಣ ಹುಡುಕಿದರೆಲ್ಲೂ ಸಿಕ್ಕದು ಇಂತಹ ದುರ್ಗತಿಗೆ.

ಇಲ್ಲಿ ಮಾತು ಹುಟ್ಟು ಹಾಕಿದ ಗೊಂದಲಗಳು, ಅದರ ಮಿತಿ ಮತ್ತು ಅದನ್ನು ಮೀರುವ ಅಗತ್ಯವನ್ನು ಕವಿ ಹೇಳಬಯಸುತ್ತಾರೆ. ಇದು ಮತ್ತೆ ಬುದ್ಧನಿಗೆ ಹತ್ತಿರವಾದ ಚಿಂತನೆಯೇ. ಆದರೆ ಕವಿತೆಯ ಆರಂಭದ ಸಾಲುಗಳಲ್ಲಿ ಮಾತೇ ಸರ್ವಸ್ವವಾಗಿರುವ ಅವಸ್ಥೆಯನ್ನೂ ಕವಿ ಚಿತ್ರಿಸಿದ್ದಾರೆ.

ಭಾಷೆಯ ಮರವಿದೆ ನೆನಪಿನ ಬೇರಿದೆ ಅನುಭವವೇ ರೆಂಬೆ,
ಶಬ್ದಗಳೇ ಎಲೆ, ಅರ್ಥವೆ ಫಲಗಳು ಉಳಿದೇನನು ನಂಬೆ

ಇಲ್ಲಿ ಮಾತು ಜ್ಯೋತಿರ್ಲಿಂಗವಾಗುವ ದಾರಿಯಲ್ಲಿದೆ. ಈ ವಾಗ್ವಾದಗಳನ್ನು ಸಾಪೇಕ್ಷವಾಗಿ ಗ್ರಹಿಸಿದಾಗ ಮಾತ್ರ ಅವು ವಿರುದ್ಧವಲ್ಲ ಪೂರಕ ಎಂಬ ತಿಳಿವಿಗೆ ನಿಲುಕಬಹುದು. ಕಾಲ-ದೇಶಗಳ ನಿರಂತರತೆಯನ್ನು (Time and space continuum) ಪ್ರತಿಪಾದಿಸುವ ಐನ್‌ಸ್ಟೀನರ ಸಾಪೇಕ್ಷತಾವಾದದ ಆಧುನಿಕ ವೈಜ್ಞಾನಿಕ ಗ್ರಹಿಕೆಗಳ ಅರಿವೂ ಕವಿಗಿದೆ. ಅದನ್ನು ಕೆಳಗಿನ ಸಾಲುಗಳಲ್ಲಿ ಗುರುತಿಸಬಹುದು :

ಚೈತನ್ಯಕು ಒಂದು ಕಾಲವಿದೆ, ಜಡಕ್ಕು ಒಂದು ಕಾಲ,
ಅವುಗಳು ಒಂದು ಇನ್ನೊಂದಾಗುವ ಕಾಲವೇ ಅನಂತ ಕಾಲ.

ಜಡ ಚೇತನವಾಗಿ, ಚೇತನ ಜಡವಾಗಿ ಪರಿವರ್ತನೆಯಾಗುವುದು ಕಾಲಬದ್ಧ ಸ್ಥಿತಿಯೇ ಹೊರತು ಜಡ ಚೇತನವೆಂಬ ವರ್ಗೀಕರಣವೇ ತಾತ್ಕಾಲಿಕ ಸಾಪೇಕ್ಷ ಎಂಬ ಭೌತವಾದಿ ಚಿಂತನೆ ಆಧ್ಯಾತ್ಮಿಕ ಚಿಂತನೆಯಷ್ಟೇ ಮಹತ್ವದ್ದೆಂಬುದನ್ನು ಕವಿ ಅನಾವರಣಗೊಳಿಸಲು ಯತ್ನಿಸುತ್ತಾರೆ. ಇದೇ ಚಿಂತನೆಗೆ ತಾತ್ತ್ವಿಕ ರೂಪ ನೀಡಿದಾಗ,

ಭಾಷೆಯ ಮರವನು ಬುಡಮೇಲಾಗಿಸಿ ಮೌನದಲ್ಲಿ ಉಳಿವೆ
ಅರ್ಥ ನನಗೇಕೆ ಪದ ನನಗೇಕೆ ಪದಾರ್ಥವಾಗಿಬಿಡುವೆ.

ಬೌದ್ಧರು, ಅದ್ವೈತಿಗಳು, ವಚನಕಾರರು ಒಂದಾಗುವ ಸ್ಥಿತಿಯಿದು. ಅನುಭವವೊಂದು ಭಾಷೆಯಲ್ಲಿ ಅನಾವರಣಗೊಂಡು ಆ ಅನುಭವವನ್ನು ಇನ್ನೊಬ್ಬರಿಗೆ ಸಂವಹನಗೊಳಿಸಿ ಭಾಷೆ ಹಿಂದೆ ಸರಿದು ನಿಲ್ಲುತ್ತದೆ ಅಥವಾ ಶೂನ್ಯಗೊಳ್ಳುತ್ತದೆ. ಇದನ್ನೇ ನಾಗಾರ್ಜುನನಂತಹ ಬೌದ್ಧ ಮಾಧ್ಯಮಿಕರು ವಿಕಲ್ಪ ಎಂದು ಕರೆದದ್ದು, ಅದ್ವೈತಿಗಳು ಮಾಯೆ, ಮಿಥ್ಯೆ ಎಂದದ್ದು. ಇಂದ್ರಿಯಾನುಭವಗಳೇ ಅಂತಿಮ ಎನ್ನುವ ನಾಡಿಗರು ಮತ್ತೊಮ್ಮೆ,

ಮಾಸುವ ಅನುಭವದಿಂದ್ರಿಯತೃಪ್ತಿಗೆ ಏಕೆ ಹಲುಬುತಿರುವೆ!

ಎಂದು ಪ್ರಶ್ನಿಸಿ ಗೊಂದಲಗೊಳಿಸುವುದುಂಟು. ಸೋಹಂ, ಕೋಹಂಗಳ ವೈದಿಕ ಪರಿಭಾಷೆ ಬಳಸಿ ಸನಾತನಿ ಎನಿಸುವುದುಂಟು. ಅನೇಕ ವೈರುಧ್ಯಗಳನ್ನು ಮುಖಾಮುಖಿಗೊಳಿಸಿ ದ್ವಂದ್ವಿ ಎನಿಸುವುದುಂಟು. ಆದರೆ ಕವಿತೆಯ ಮುಖ್ಯ ಜೀವಾಳವನ್ನು, ಕೇಂದ್ರ ಆಶಯ, ಧ್ವನಿಗಳನ್ನು ಸಮಗ್ರವಾಗಿ ಗ್ರಹಿಸಲು ಯತ್ನಿಸಿದಾಗ ಮಾತ್ರ ತಾತ್ತ್ವಿಕತೆ ಮೀರಿದ ನಾಡಿಗರೊಳಗಿನ ನಿಜವಾದ ಕವಿ ನಮಗೆ ದಕ್ಕುತ್ತಾನೆ.

ಈ ಎಲ್ಲ ಅಪಾಯಗಳ ರಿಸ್ಕನ್ನು ಕವಿ ತೆಗೆದುಕೊಳ್ಳುವುದು ಅವರ ಜೀವನ ಪ್ರೀತಿಯ ಪ್ರತೀಕವೇ ಆಗಿದೆ. ಅವರ ಅನುಭವ, ಪ್ರವೃತ್ತಿಯ ಜತೆಗೆ ವರ್ತಮಾನಕ್ಕೆ ತೆರೆದುಕೊಳ್ಳುವ ಚಿತ್ತಸ್ಥಿತಿ ಮೆಚ್ಚುವಂತಹದು. ಈ ಇಳಿವಯಸ್ಸಿನಲ್ಲಿಯೂ ಕವಿತೆಯನ್ನವರು, '....ಬದುಕಿಗೊಂದರ್ಥಕ್ಕೆ ಹುಡುಕಾಟ' ಎಂದು ಪರಿಭಾವಿಸಿರುವುದು, ಅವರು ತಮ್ಮ ಜೀವ ವೃಕ್ಷವನ್ನು ಹಸಿರಾಗಿಟ್ಟುಕೊಂಡಿರುವುದರಿಂದ,

'ನನ್ನ ಜೀವ ವೃಕ್ಷಕ್ಕೆ ಬರುತ್ತಾವೆ ಬಾವಲಿ, ಗಿಳಿ, ಕೋಗಿಲೆ ಮತ್ತು ಭ್ರಮರ'

(ಬ್ಯಾಡ್ಮಿಂಟನ್ ಚೆಂಡು ಹೂ)

ಎಂದು ಬರೆಯುವುದು ಸಾಧ್ಯವಾಗಿದೆ.

ನೋವಿಲ್ಲದೆ ಬದುಕಲಿಕ್ಕೆ ಸಾಧ್ಯವಿಲ್ಲ ಯಾರಿಗೂ,
ನೋವು ಮರೆವ ಸುಖ ಕೊಡುವುದು ಕಲೆಯು ಬಾರಿ ಬಾರಿಗೂ

(ನಟರಾಜನ ಚಿತ್ರಗಳು...)

ಕಲೆಯ ಉದ್ದೇಶದ ಬಗ್ಗೆ ಮಿಡಿಯುವ ಕವಿ ಮನುಷ್ಯನ ಸ್ವಾರ್ಥ ದೈವ್ವವಾಗಿ ಬೆಳೆಯುವ ರೀತಿ ಮತ್ತು ಅಂಥ ಸ್ವಾರ್ಥದಿಂದ ಮನುಷ್ಯ ತನ್ನನ್ನು ತಾನು ಪಾರು ಮಾಡಿಕೊಳ್ಳಬೇಕಾದ ತುರ್ತು 'ಘಾಟಿ ಮುದುಕಿ'ಯಲ್ಲಿ ನಿತ್ಯದ ಪ್ರಸಂಗವೊಂದರ ಮೂಲಕ ನವ್ಯದ ಪಳೆಯುಳಿಕೆಯಂತಿರುವ ಸಾಂಕೇತಿಕ ಆವರಣದಲ್ಲಿ ಮೂಡಿದೆ. ಕಾವ್ಯವಸ್ತು ಯಾವುದೇ ಆದರೂ ನಾಡಿಗರು ಅದಕ್ಕೆ ಚರಿತ್ರೆ ಮತ್ತು ವರ್ತಮಾನಗಳ ಭೂಮಿಕೆಯನ್ನು ಹಿನ್ನೆಲೆಯಾಗಿಟ್ಟುಕೊಂಡೇ ತಮ್ಮ ಕವಿತೆಗೆ ಸಮಕಾಲೀನ ಪ್ರಸ್ತುತತೆಯನ್ನು ಸಹಜವಾಗಿ ದಕ್ಕಿಸಿಕೊಳ್ಳುತ್ತಾರೆ.

'ನಡೆದು ಬಂದ ದಾರಿ', 'ಪ್ರಕೃತಿ', 'ಏನೆಂದು ಕರೆಯಲೇ ನಿನ್ನ?', 'ಪಾಕಿಸ್ತಾನದ ಕವಯಿತ್ರಿ ಹೇಳಿದ್ದು', 'ವಿದೇಶಿನಿ', 'ಆತಂಕ', 'ಯಮುನ ದೂತರು', 'ಸಹಸ್ರ-ಮಾನ', 'ಭಾರತಾಂಬೆ' ಮುಂತಾದ ಕವಿತೆಗಳಲ್ಲಿ ಎಲ್ಲ ಆಭಾಸ, ವೈರುಧ್ಯಗಳೊಂದಿಗೆ ಜೀವಂತವಾದುದರ, ಆರೋಗ್ಯಪೂರ್ಣವಾದುದರ ಶೋಧಕ್ಕೆ ತೊಡಗಿರುವ ಕವಿ ವಿಡಂಬನೆಯನ್ನು ಎಂದಿನಂತೆ ಇಲ್ಲಿಯೂ ಉಳಿಸಿಕೊಂಡಿದ್ದಾರೆ. ಲಂಕೇಶ್, ಅನಂತಮೂರ್ತಿ, ಕಿ. ರಂ., ಡಿ.ಆರ್.ಎನ್., ಎಚ್.ಎಸ್.ವಿ., ...ಇವರೇ ಮೊದಲಾದ ಹತ್ತಾರು ವ್ಯಕ್ತಿಗಳನ್ನು ಕುರಿತಾದ ರಚನೆಗಳು ಆಪ್ತವಾಗಿವೆ. ಪ್ರೇಮ, ದಾಂಪತ್ಯ ಕುರಿತ ವಾಸ್ತವವಾದಿ ನೆಲೆಯ ಹಲವು ಕವಿತೆಗಳೂ ಮನ ಸೆಳೆಯುತ್ತವೆ.

ಒಟ್ಟು ೫೪ ಕವಿತೆಗಳ ಈ ಸಂಕಲನದಲ್ಲಿ ಇತ್ತೀಚಿನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಂದರ್ಭಗಳ ವೈವಿಧ್ಯಪೂರ್ಣ, ಜೀವಂತ ಮಿಡಿತಗಳಿವೆ. ಎಲ್ಲ ಕವಿತೆಗಳಿಂದ ಒಂದೇ ಮಟ್ಟದ ಯಶಸ್ಸು ನಿರೀಕ್ಷಿಸುವುದು ಸಾಧ್ಯವಿಲ್ಲ. ಅದು ಸಾಧುವೂ ಅಲ್ಲ. ಕೆಲವು ತೆಳು ರಚನೆಗಳಿವೆ, ಲಘು ರಚನೆಗಳಿವೆ. ಆದರೆ ಎಲ್ಲೋ ಒಂದು ಕಡೆ ತಟ್ಟನೆ ಇಡೀ ಸಂದರ್ಭವನ್ನು ಭಿನ್ನ ನೆಲೆಗೆ ಎತ್ತರಿಸುವ, ಬೆಳಗುವ ನಾಡಿಗತನದ ಮಿಂಚು, ಎಳೆಯೊಂದು ಇದ್ದೇ ಇರುತ್ತದೆ.

– ಬಸವರಾಜ ವಕ್ಕುಂದ, ೧೭/೩, ವಸ್ತ್ರದ ಬಿಲ್ಡಿಂಗ್, ಪಿ.ಬಿ. ರಸ್ತೆ, ಮಾಳಮಡ್ಡಿ, ಧಾರವಾಡ - ೧

೩. ಮುಗಿಲಿಲ್ಲದ ಜಗದಲ್ಲಿ : ಡಾ. ದ್ವಾರಕಾನಾಥ ಹೆಚ್. ಕಬಾಡಿ

ಗೊರೂರು ಪ್ರತಿಷ್ಠಾನ, ೨೭, ಕಾಟನ್‌ಪೇಟೆ ಮುಖ್ಯರಸ್ತೆ, ಬೆಂಗಳೂರು-೫೩, ಪ್ರ.ಮು.೨೦೦೪, ಪು.೨೮೦. ರೂ.೧೫೦/-

ಕಾವ್ಯಕ್ಕೆ ತನ್ನದೇ ಆದ ವಿಶಿಷ್ಟ ವಾಕ್ಯರಚನೆ ಇದೆ. ಪ್ರತಿ ಶಬ್ದಕ್ಕೆ ಒಂದು ಅರ್ಥ ಕೊಡುವುದು ಎಲ್ಲರಿಗೂ ಸಾಧ್ಯ. ಆದರೆ ಪ್ರತಿ ಅರ್ಥಕ್ಕೆ ಸರಿಯಾದ ಶಬ್ದ ಕೊಡುವದು ಕವಿಗೆ ಮಾತ್ರ ಸಾಧ್ಯ ಅನ್ನುವದು ೨೫೨ ಮಧುರ ಭಾವಗೀತಗಳ 'ಮುಗಿಲಿಲ್ಲದ ಜಗದಲ್ಲಿ' ಕಾಣುವ ಸತ್ಯ. ಭಾವುಕ ಕವಿಯ ಭಾವಗಳೆಲ್ಲ ಶಬ್ದಗಳಾಗಿ, ಶಬ್ದಗಳೆಲ್ಲ ಹೊಸ-ಹೊಸ ಆಕರ್ಷಕ ರೂಪ ತಾಳಿ ಇಲ್ಲಿ ಕವನಗಳಾಗಿ ಹೊಮ್ಮಿವೆ. ದ್ವಾರಕಾನಾಥರ ಕವನಗಳಲ್ಲಿ ಏನಿಲ್ಲ ಎಂದು ಹುಡುಕಹೊರಟರೆ ಉತ್ತರ ಕಠಿಣ. ಎಲ್ಲವೂ ಇವೆ. ಅಳಲು, ದುಃಖ, ನೋವು, ವಿಷಾದ, ಭ್ರಾಂತಿ, ಭಯ, ರಸಿಕತೆ, ಆಶೆ, ನಿರಾಶೆ, ಕೋಪ, ತಾಪ, ಸ್ನೇಹ,

ದ್ವೇಷ, ಕರುಣೆ, ಪ್ರೀತಿ, ಹತಾಶೆ, ನಿಟ್ಟುಸಿರು, ಔದಾರ್ಯ, ವಿರಹ, ಎಚ್ಚರ, ಅಳು-ನಗು, ವೇದಾಂತ ಕೊನೆಯಲ್ಲಿ ಶಾಂತಿ. ಹೀಗೆ ರಸಪಾಕವನ್ನು ಸಿದ್ಧಪಡಿಸಿದ್ದಾರೆ ಕವಿ.

"ಏಕೋ ಬಂದೆವು ಇಲ್ಲಿಗೆ ನಾವು / ಸರಿಸಮವಿರುವದು ಬದುಕು ಸಾವು"

ಬಂದ ಕಾರಣ ತಿಳಿಯದಿದ್ದರೂ ಬದುಕಿನ ಇತಿ ಮಿತಿಯ ಅರಿವು ಕವಿಗೆ ಇದೆ. "ಸೃಷ್ಟಿಯ ಅರ್ಥವು ಅರಿವಿಗೆ ದೂರ..." ಅನ್ನುವಲ್ಲಿ ಹುಡುಕಾಟದ ಬುದ್ಧಿಗೆ ಪ್ರಕೃತಿಯ ರಹಸ್ಯ ತಿಳಿಯದ ಒದ್ದಾಟದ ಜೊತೆ ಕುತೂಹಲ ಅಡಗಿದೆ. "ಹಾಡನು ಕೇಳಿದ ಮೋಡವು ಕರಗಿತು / ಎಲ್ಲೆಡೆ ಮಳೆಯನು ಸುರಿದಿತ್ತು / ಬೆಂಗಾಡಿನ ನೆಲದಲ್ಲಿ ಬಂಗಾರದ ಹೂಗಳ / ಒಲುಮೆಯ ವರದಿಂ ಬೆಳೆಸಿತ್ತು."

ಆಶಾವಾದ ಹೊತ್ತು ತರುವ ಭವಿಷ್ಯದ ಸುಂದರ ಕನಸು, ಪ್ರೀತಿಯಿಂದ ಅಸಾಧ್ಯವನ್ನು ಸಾಧ್ಯವಾಗಿಸುವ ಭಾವವಿದೆ. 'ನನ್ನದೇನಿದೆ ಇಲ್ಲಿ ಎಲ್ಲವೂ ನಿನ್ನದೆ' ದೊರೆತದ್ದೆಲ್ಲವೂ ಆ ಸರ್ವಶಕ್ತ ಜಗನ್ನಿಯಾಮಕನ ಕರುಣೆಯ ಕೊಡುಗೆ, ತಾನೇನಿದ್ದರೂ ದೀನ ಎಂಬುದು 'ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ' ಎಂಬ ಬಸವಣ್ಣನ ಮಾತನ್ನು ನೆನಪಿಗೆ ತರುತ್ತದೆ.

'ಮುಗಿಲಿಲ್ಲದ ಜಗದಲ್ಲಿ' ತುಂಬಾ ಆಕರ್ಷಕವಾದ ಹೆಸರು. ಈ ಕವನದಲ್ಲಿ ಕವಿ ಸ್ವಲ್ಪ ಗೊಂದಲಕ್ಕೊಳಗಾದಂತೆನಿಸುತ್ತದೆ. ಪಂಚಮಹಾಭೂತಗಳಲ್ಲೊಂದಾದ ಆಕಾಶವೇ ಇಲ್ಲವಾದರೆ ಈ ಜಗತ್ತಿನ ಸೃಷ್ಟಿಯ ಕಲ್ಪನೆಯೇ ಸಾಧ್ಯವಿಲ್ಲ. ಅಂದಾಗ ಇದರ ಜೊತೆ ಜೊತೆಗಿರುವ ವಾಯು-ಸ್ಪರ್ಶವಿಲ್ಲ, ಅಗ್ನಿ-ರೂಪವಿಲ್ಲ, ನೀರು-ರಸವಿಲ್ಲ, ಪೃಥ್ವಿ-ಗಂಧವಿಲ್ಲ. ಹೀಗೆ ಏನೇನೂ ಇಲ್ಲವಾದ ಮೇಲೆ..... 'ದೇವನಿಲ್ಲದ ಗುಡಿಯಲ್ಲಿ ಆತ್ಮದನುಭೂತಿ ಎಲ್ಲಿ?' ಎನ್ನುವಲ್ಲಿ ಆತ್ಮದನುಭೂತಿಗೂ–ಗುಡಿಯಲ್ಲಿರುವ ದೇವರಿಗೂ ಕವಿ ಸಂಬಂಧ ಕಲ್ಪಿಸಿರುವದು ಒಂದು ರೀತಿಯಲ್ಲಿ ವಿಚಿತ್ರವೆನಿಸುತ್ತದೆ. ಕಾರಣ ಆತ್ಮದ ಅನುಭೂತಿಗೆ ಈ ಭೌತಿಕ ವಿಷಯಗಳ ಅಂದರೆ ಗುಡಿ-ಗುಂಡಾರ, ದೇವರು, ಮೂರ್ತಿ ಇವುಗಳ ಆವಶ್ಯಕತೆಯೇ ಇಲ್ಲ. ಆತ್ಮ ತನ್ನೊಳಗೇ ಇರುವ ವಸ್ತುವಾಗಿದೆಯೇ ವಿನಃ ದೃಷ್ಟಿಗೋಚರವಾದ ಈ ಬಾಹ್ಯ ಪ್ರಪಂಚ, ಜಡಜಗತ್ತಿಗೆ ಸಂಬಂಧವಿಲ್ಲ. ಅದು ಚೇತನ.

'ಆನೆ ನಡೆದದ್ದೇ ದಾರಿ' ಎಂಬ ಹಾಗೆ ಕಾವ್ಯಕಾನನದಲ್ಲಿ ಕಬಾಡಿಯವರದು ಬೇರೆಯವರದಾಗಿರದ ಅವರದೇ ದಾರಿಯಾಗಿದೆ. "ನನ್ನದೇ ಒಂದು ದಾರಿ / ಭಾವದರ್ಥಗಳು ಮೀರಿ / ಮನ ಮನದ ಸಾಗರವ ಸೇರಿ / ಗಗನದಂಚಿನ ದೂರ ಹಾರಿ – ನನ್ನದೇ ಒಂದು ದಾರಿ"– ಹೀಗೆ ಒಬ್ಬ ಪೂರ್ಣ ಮನುಷ್ಯನಿಗಿರಬೇಕಾದ, ತೀರ ಸೀದಾ ಸಾದಾ ಭಾವಗಳನ್ನು ಸಂಪೂರ್ಣ ತುಂಬಿಕೊಂಡ ಕವಿ ಒಬ್ಬ ದುಃಖಿಯಾಗಿ, ಪ್ರೇಮಿ, ವಿರಹಿ, ಕ್ರಾಂತಿಕಾರಿ, ಮಿತ್ರ, ಶತ್ರು, ಹಟಮಾರಿ, ಆಶಾವಾದಿ, ನಿರಾಶಾವಾದಿ, ಭಕ್ತ, ಮುಗ್ಧ, ಶಾಂತಿದೂತನಾಗಿ ಪ್ರಶ್ನಾತೀತನಾಗಿ ವೇದಾಂತಿಯಾಗುವ ವರೆಗಿನ ಎಲ್ಲ ಹಂತಗಳನ್ನೂ ದಾಟಿ ಹೋಗುವ ಕವಿತೆಗಳನ್ನು ಕೊಟ್ಟಿರುವ ಕಬಾಡಿಯವರು 'ಜಾಣಕವಿ'ಯೂ ಹೌದು.

"ನೋವಿನಲೆಗಳ ನರಕದಳಲಲು / ಬೆಳಕಿನಾಟದ ಬೀಡಿಗೆ / ನಮ್ಮನಮ್ಮಲೆ ನಮ್ಮನಮ್ಮನು / ಹುಡುಕುವಾಟದ ಆಟಕೆ..."

ನಮ್ಮನಮ್ಮನ್ನೆ ಹುಡುಕುವ ಆತ್ಮಾನ್ವೇಷಣೆಗೆ ತೊಡಗಿಸಿ ಪರಮಜ್ಞಾನದ ಬೆಳಕಿನಾಟಕ್ಕೆ ಕೊಂಡೊಯ್ಯುವ ಈ ಕೃತಿ ಕನ್ನಡ ಕಾವ್ಯ ಪ್ರಪಂಚಕ್ಕೆ ಅಮೂಲ್ಯ ಕೊಡುಗೆ.

– ಸುಮಿತ್ರಾ ಹಲವಾಯಿ, 'ವಿಶಾಲ', ೨ ನೇ ಕ್ರಾಸ್, ಶಕ್ತಿನಗರ, ಧಾರವಾಡ - ೫೮೦ ೦೦೪

೪. ಅನ್ವಯ : ಅರವಿಂದ ಚೊಕ್ಕಾಡಿ

ಮೌಲ್ಯ ಪ್ರಕಾಶನ, ಕಾರ್ಕಳ, ನಲ್ಲೂರು-೫೭೪ ೫೦೨ (ಉಡುಪಿ), ಪ್ರ.ಮು. ೨೦೦೪, ಪು. ೧೬೮, ರೂ. ೯೨/-

ಗಂಭೀರ ಚಿಂತಕರಾದ ಅರವಿಂದ ಚೊಕ್ಕಾಡಿಯವರು ಪತ್ರಿಕೆಗಳಿಗೆ ಬರೆದ ಲೇಖನಗಳನ್ನೆಲ್ಲ ಸಂಗ್ರಹಿಸಿ ಪ್ರಕಟಿಸಿದ ಈ 'ಅನ್ವಯ' ಅವರ ವೈಚಾರಿಕತೆಗೆ ಹಿಡಿದ ಕನ್ನಡಿಯಾಗಿದೆ. ನಮ್ಮ ದೇಶ ಎದುರಿಸುತ್ತಿರುವ

ಜ್ವಲಂತ ಸಮಸ್ಯೆಗಳನ್ನು ವಾಸ್ತವಿಕ ನೆಲೆಯಲ್ಲಿ ಚಿಂತನೆಗೆ ಒಳಮಾಡಿಕೊಂಡು ಅದಕ್ಕೆ ಪರಿಹಾರ ಸೂಚಿಸಿದ್ದಾರೆ.

ಅರವಿಂದ ಚೊಕ್ಕಾಡಿಯವರು ಮಾರ್ಕ್ಸ್ ಸಿದ್ಧಾಂತ ಒಪ್ಪಿರುವುದಕ್ಕೆ ಇಲ್ಲಿಯ ಲೇಖನಗಳೇ ನಿದರ್ಶನ. ಜಾಗತೀಕರಣ, ಆಧುನೀಕರಣ, ಜಾಗತೀಕರಣಕ್ಕೆ ಸಾಂಸ್ಕೃತಿಕ ಪರ್ಯಾಯ, ಭಾರತದ ಪ್ರಜಾಸತ್ತೆ, ಉದ್ಯೋಗ ಮೀಸಲಾತಿ, ಆರ್ಥಿಕ ಬಡತನ ಮತ್ತು ಸಾಮರ್ಥ್ಯದ ಬಡತನ, ಜಾಗತೀಕರಣ ಅನಿವಾರ್ಯವೆ? ನೆಹರೂ ಮತ್ತು ಕೈಗಾರಿಕೀಕರಣ ಮುಂತಾದ ವಿಷಯಗಳು ವಾಸ್ತವಲೋಕದ ಪರಿಸ್ಥಿತಿಯನ್ನು ಭಿನ್ನಭಿನ್ನ ಆಯಾಮಗಳಲ್ಲಿ ವಿಮರ್ಶೆ ಮಾಡುತ್ತ ನಡೆಯುವಾಗ ಕೆಲ ಸಲ ಮಧ್ಯೆ-ಮಧ್ಯೆ ಪ್ರಶ್ನೆಗಳಿಗೆ ಆಹ್ವಾನವೀಯುತ್ತ ಆ ಪ್ರಶ್ನೆಗಳಿಗೆ ತಮ್ಮ ಉತ್ತರ ಕಂಡುಕೊಂಡಿದ್ದಾರೆ. ಹೀಗೆ ವೈಚಾರಿಕವಾಗಿ, ಸೈದ್ಧಾಂತಿಕವಾಗಿ ಒಳ-ಹೊರಗೆ ತಿರುಗಿ, ಮೇಲೆ-ಕೆಳಗೆ ಏರಿ-ಇಳಿದು, ತೂಗಿ ಜಾಲಾಡಿಸಿ ನೋಡುತ್ತಾರೆ.

'ಅನ್ವಯ'ದಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಪ್ರಮುಖ ಚಿಂತಕರ ಚಿಂತನೆಗಳಿಗೆ ವಿಶೇಷವಾಗಿ ಚಿಂತಿಸಿ-ದೃಷ್ಟಿಸಿ ಈಗ ದೇಶಕ್ಕೆ ಎದುರಾಗುತ್ತಿರುವ, ಎದುರಾಗುವ ಗಂಡಾಂತರಕಾರಿ ಸಮಸ್ಯೆಗಳಿಗೆ ಚಿಕಿತ್ಸಕ ಮನೋಧರ್ಮ, ಸೂಕ್ಷ್ಮ ಸಂವೇದನೆಗಳ ಮೂಲಕ ಪರಿಹಾರ ಹುಡುಕಿದ್ದಾರೆ. ಅರವಿಂದರ 'ಅನ್ವಯ' ಪ್ರಖರ ವೈಚಾರಿಕತೆಯಿಂದೊಡಗೂಡಿದ ಮಹತ್ವಪೂರ್ಣ ಕೃತಿಯಾಗಿದೆ.

– ಡಾ. ಪಿ. ಕೆ. ರಾಠೋಡ, ಶ್ರೀ ಜಗದ್ಗುರು ತೋಂಟದಾರ್ಯ ವಿದ್ಯಾಪೀಠ, ಗದಗ - ೫೮೨ ೦೦೪

೫. ಆಯ್ದ ಕೀರ್ತನೆಗಳು : ಸಂ. ಡಾ. ಬಸವರಾಜ ಸಬರದ, ಡಾ. ಸಿ. ನಾಗಭೂಷಣ

ಪ್ರಸಾರಾಂಗ, ಗುಲಬರ್ಗಾ ವಿ.ವಿ., ಗುಲಬರ್ಗಾ-೫೮೫ ೧೦೬, ಪ್ರ.ಮು. ೨೦೦೪, ಪು. ೧೧೦, ರೂ. ೫೦/-

ಗುಲಬರ್ಗಾ ವಿಶ್ವವಿದ್ಯಾಲಯದ ರಜತ ಮಹೋತ್ಸವ ವರ್ಷದ ಸ್ಮರಣಾರ್ಥ ಪ್ರಕಟವಾಗಿರುವ 'ಸಾಹಿತ್ಯ ಸಂಕಲನ ಮಾಲೆ'ಯಲ್ಲಿ ಪ್ರಕಟವಾದ ಪುಸ್ತಕ. ಸಂಪಾದಕರ ನುಡಿಯಲ್ಲಿ, 'ನಮ್ಮ ವಿಶ್ವವಿದ್ಯಾಲಯದ ವಿವಿಧ ತರಗತಿಗಳಿಗೆ ನಿಗದಿಗೊಳಿಸಲು... ಬೇರೆ ಬೇರೆ ಸಾಹಿತ್ಯ ಪ್ರಕಾರಗಳಲ್ಲಿ ಒಟ್ಟು ಹತ್ತು ಪ್ರಾತಿನಿಧಿಕ ಪಠ್ಯ ಸಂಕಲನಗಳನ್ನು' ಸಂಪಾದಿಸಲಾಗಿದೆ, ಎಂದಿರುವ ಅಧ್ಯಯನ ಮಂಡಳಿಯ ಅಧ್ಯಕ್ಷರು ಈ ಪುಸ್ತಕಗಳು ನಿರ್ದಿಷ್ಟವಾಗಿ ಇಂಥ ತರಗತಿಗಳಿಗಾಗಿ ರಚಿತವಾಗಿವೆ ಎಂದೂ ಸೂಚಿಸಿದ್ದರೆ ಸಂಪಾದನೆಯ ಉದ್ದೇಶ ಇನ್ನೂ ಸ್ಪಷ್ಟವಾಗುತ್ತಿತ್ತು.

ಇಬ್ಬರು ಮಹಿಳೆಯರನ್ನು ಒಳಗೊಂಡಂತೆ ಒಟ್ಟು ೩೧ ದಾಸರ ಆಯ್ದ ೬೪ ಕೀರ್ತನೆಗಳನ್ನು ಇಲ್ಲಿ ಸಂಪಾದಿಸಿದ್ದಾರೆ. ಸಹಜವಾಗಿ ಗ್ರಂಥಗಳೆಲ್ಲವಕ್ಕೂ ಇರುವ ಪ್ರಸ್ತಾವನೆ ಈ ಗ್ರಂಥಕ್ಕೂ ಇದೆ. ಈ ಪ್ರಸ್ತಾವನೆ ಓದುಗನಿಗೆ ಭಾರವಾಗದಂತೆ ಅಥವಾ ದಿಕ್ಕು ತಪ್ಪಿಸದಂತೆ ಸೂಚ್ಯವಾಗಿ ದಾಸ ಸಾಹಿತ್ಯ ಬೆಳೆದು ಬಂದ ಪಕ್ಷಿನೋಟವನ್ನು ನೀಡಿದ್ದು ಸೂಕ್ತವಾಗಿದೆ. ಪ್ರಸ್ತಾವನೆಯಲ್ಲಿ 'ಈ ಕೃತಿಯನ್ನು ಗಮನಿಸಿದಾಗ ದಾಸರ ಸಮಗ್ರ ಚಿತ್ರಣ ಇಲ್ಲಿ ವ್ಯಕ್ತವಾಗುವುದಿಲ್ಲ' ಎನ್ನುವ ಸಂಪಾದಕರ ಮಾತು ಸತ್ಯ.

ಎಲ್ಲ ಚಳವಳಿಗಳಂತೆ ದಾಸ ಚಳವಳಿಯೂ ಜನಪರವಾದುದು. ೧೨ ರಿಂದ ೧೬ ನೇ ಶತಮಾನದಲ್ಲಿ ದೇಶದಾದ್ಯಂತ ಕಂಡುಬಂದ ಭಕ್ತಿ ಚಳವಳಿ ಕರ್ನಾಟಕದ ವಚನ ಮತ್ತು ದಾಸ ಚಳವಳಿಯ ಸ್ಥಾಯಿ. ವಚನ ಚಳವಳಿ ಪಡೆದುಕೊಂಡ ಸಾಮಾಜಿಕ ಮುಕ್ತತೆ ಮತ್ತು ವಿಸ್ತಾರವನ್ನು ದಾಸ ಚಳವಳಿ ಪಡೆಯದಿದ್ದರೂ ತಾನು ಆಯ್ಕೆ ಮಾಡಿಕೊಂಡ ಪರಿಧಿಯಲ್ಲಿ ಅದು ಪ್ರಾಮಾಣಿಕವೆನ್ನಬಹುದು. ಈ ಕೀರ್ತನೆಗಳ ಸಂಪಾದನೆಗೆ ಮುಖ್ಯವಾದ ಕಾರಣವನ್ನು ವಿವರಿಸುತ್ತ, 'ತಾಳ್ಮೆ-ಸಹನೆ-ಪ್ರೀತಿ-ವಾತ್ಸಲ್ಯ-ಪರೋಪಕಾರ ತ್ಯಾಗದಂತಹ ಮೌಲ್ಯಗಳನ್ನು ಸ್ಥಾಪಿಸಿದ ಭಕ್ತಿಪಂಥಗಳು, ಜಾಗತೀಕರಣಕ್ಕೆ ಹಾಗೂ ಪಾಶ್ಚಾತ್ಯ ಸಂಸ್ಕೃತಿಗೆ ಪರ್ಯಾಯ ಶಕ್ತಿಗಳಾಗಿ ಬೆಳೆಯುವ ಸಾಧ್ಯತೆಗಳನ್ನೊಳಗೊಂಡಿವೆ ಎನ್ನುವ ಸಂಪಾದಕರ ಆಶಯವನ್ನು ಅಂದು ಕೀರ್ತನೆಗಳನ್ನು ರಚಿಸಿದ ದಾಸರು ಮತ್ತು ಅವರ ಕೀರ್ತನೆಗಳು ಇಂದು ಜಾತಿವಾರು ಹಂಚಿಕೆಯಾಗಿ ಕ್ರಮೇಣ ಸಾಮಾನ್ಯ ಜನರಿಂದ ದೂರವಾಗುತ್ತ ಮತ್ತೆ

`ವ್ಯಾಸ`ಪೀಠವನ್ನೇರುವ ಹುನ್ನಾರದಲ್ಲಿರುವ ಸಂದರ್ಭದಲ್ಲಿ ಕೂಲಂಕಷವಾಗಿ ಪರಿಶೀಲಿಸದೆ ಒಪ್ಪಿಕೊಳ್ಳುವಂತಿಲ್ಲ.

ಪುಸ್ತಕದ ಕೊನೆಯಲ್ಲಿರುವ ಅನುಬಂಧ ಮತ್ತು ಅರ್ಥಕೋಶ ಸೂಕ್ತ ಮಾಹಿತಿ ಮತ್ತು ವಿವರಣೆಗಳನ್ನು ಒಳಗೊಂಡಿವೆ.

೬. ಆಯ್ದ ವಚನಗಳು : ಸಂ. ಡಾ.ಸಂಗಮೇಶ ಸವದತ್ತಿಮಠ, ಡಾ.ಎಸ್.ಎಂ. ಹಿರೇಮಠ

ಪ್ರಸಾರಾಂಗ, ಗುಲಬರ್ಗಾ ವಿ.ವಿ., ಗುಲಬರ್ಗಾ-೫೮೫ ೧೦೬. ಪ್ರ.ಮು. ೨೦೦೪, ಪು. ೧೪೪, ರೂ. ೫೦/-

ಕಾಲ ಮತ್ತು ಕೀರ್ತಿಯ `ಹಂಗು` ಸಾಹಿತ್ಯಕ್ಕೆ ಇರುವುದೇ ಇಲ್ಲ. ಇವುಗಳನ್ನು ಮೀರಲಾರದ್ದು `ಸಾಹಿತ್ಯ` ಎನಿಸುವುದೂ ಇಲ್ಲ. ಆದರೆ ಇದೇ ಮಾತನ್ನು ಸಾಹಿತಿಗಳ ವಿಷಯದಲ್ಲಿ ಹೇಳುವಂತಿಲ್ಲ. ಈ ಮಾತಿಗೆ ಅಪವಾದ ವಚನಗಳು ಮತ್ತು `ವಚನಕಾರರು`. ವಚನಗಳಲ್ಲೇ ಉಕ್ತವಾದಂತೆ ವಚನಕಾರರ ಸಂಖ್ಯೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ. ಇದು ನಿಜವೇ ಎಂಬುದನ್ನು ಸಂಶೋಧಕರು ನಿರ್ಧರಿಸಬೇಕು. ಸದ್ಯಕ್ಕೆ ಇವರ ಸಂಖ್ಯೆ ಮೂರು ನೂರರಷ್ಟು, ಇವರಿಂದ ರಚಿತವಾದ ವಚನಗಳು ೨೦,೦೦೦ ಕ್ಕೂ ಹೆಚ್ಚು. ಅವರಲ್ಲಿ ೨೦ ಜನ ವಚನಕಾರರ ೩೩೩ ವಚನಗಳನ್ನು ಆಯ್ದು ಸಂಕಲಿಸುವುದು ಕಷ್ಟದ ಕೆಲಸ. ಪ್ರಸ್ತುತ ಸಂಕಲನದ ಸಂಪಾದಕರು ಅದನ್ನು ಜವಾಬ್ದಾರಿಯಿಂದ ನಿಭಾಯಿಸಿದ್ದಾರೆ.

ವಚನಕಾರರು `ಅನುಕೂಲ ಸಿಂಧು` ಪ್ರವೃತ್ತಿಯವರಾಗಿರಲಿಲ್ಲ. ಮನುಷ್ಯ ಮತ್ತು ಮನುಷ್ಯತ್ವವನ್ನು ಪೋಷಿಸಬೇಕಾದ ಮೌಲ್ಯಗಳ ಪ್ರಸಾರ ಮತ್ತು ಆಚರಣೆ ಅವರ ಮುಖ್ಯ ಗುರಿಯಾಗಿದ್ದಿತು. ಇದರ ನಿರ್ದೇಶನದಲ್ಲಿಯೇ ಅವರ ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಧೋರಣೆಗಳೆಲ್ಲವೂ ರೂಪಗೊಂಡವು. ಶೋಷಣೆಯನ್ನೇ ಜೀವನದ ಪ್ರಮುಖ ಮಾರ್ಗವನ್ನಾಗಿ ಮಾಡಿಕೊಂಡವರು ಹೆಣೆದ ಕಲ್ಪನಾ ಸಿದ್ಧಾಂತದ ಬೇಲಿಗಳನ್ನು ನಿರ್ಮೂಲನೆಗೊಳಿಸುವಲ್ಲಿ ವಚನಕಾರರು ರೂಪಿಸಿದ ವಚನಗಳೇ ಅಸ್ತ್ರಗಳಾಗಿ ಬಳಕೆಗೊಂಡದ್ದು ವಿನೂತನ ಮಾದರಿ. ಸ್ವರವಚನಗಳು ಅನುಭಾವದ ಅರಣ್ಯವಾದರೆ, ವಚನಗಳು ಅನುಭಾವದ ಉದ್ಯಾನ.

ಅನುಬಂಧದಲ್ಲಿ ೨೦ ಜನ ವಚನಕಾರರ ಸಂಕ್ಷಿಪ್ತ ವಿವರ, ಪರಿಭಾಷಾ ಕೋಶ, ಶಬ್ದಕೋಶ ಸಂಕಲಿತ ವಚನಗಳ ಓದಿಗೆ ಅನುಕೂಲಕರವಾಗಿದೆ.

೭. ಆಯ್ದ ಸ್ವರವಚನಗಳು : ಸಂ. ಡಾ. ವ್ಹಿ. ಜಿ. ಪೂಜಾರ, ಡಾ. ಈಶ್ವರಯ್ಯ ಮಠ

ಪ್ರಸಾರಾಂಗ, ಗುಲಬರ್ಗಾ ವಿ.ವಿ., ಗುಲಬರ್ಗಾ-೫೮೫ ೧೦೬, ಪ್ರ.ಮು. ೨೦೦೪, ಪು. ೧೩೪, ರೂ. ೫೦/-

ಅನುಭಾವದ ವಿಶಿಷ್ಟ ಆವೃತ್ತಿ ಅಥವಾ ಅಭಿವ್ಯಕ್ತಿ ವಚನವಾದರೆ ಅದರ ಜನಪ್ರಿಯ ಆವೃತ್ತಿ ಅಥವಾ ಅಭಿವ್ಯಕ್ತಿ ಸ್ವರವಚನವೆನ್ನಬಹುದು. ವಚನ ಸಾಹಿತ್ಯವನ್ನು ಸಂಕಲಿಸಲು ಪಟ್ಟ ಪ್ರಯತ್ನ ಮತ್ತು ಪರಿಶ್ರಮವನ್ನು ಸ್ವರವಚನ ಸಾಹಿತ್ಯವನ್ನು ಸಂಕಲಿಸಲು ಹಾಕಿದ್ದರೆ, ವಚನ ಸಾಹಿತ್ಯದ 'Local Tradition' ಸತ್ಯದ ಬೇರೆ ಮುಖಗಳನ್ನು ಪರಿಚಯಿಸುತ್ತಿತ್ತೇನೊ!

೨೬ ಜನ ಸ್ವರವಚನಕಾರರ ೭೪ ಸ್ವರವಚನಗಳನ್ನು ಆಯ್ದು ಸಂಪಾದಕರು, ಪುಸ್ತಕಕ್ಕೆ ಸ್ವಲ್ಪ ದೀರ್ಘವಾದರೂ (೧೯ ಪುಟ) ಸ್ವರವಚನಗಳ ಸಾಹಿತ್ಯದ ಇತಿಹಾಸ ರಚನೆಗೆ ಗಟ್ಟಿ ಅಡಿಗಲ್ಲಾಗಬಹುದಾದ ಪ್ರಸ್ತಾವನೆ ನೀಡಿದ್ದಾರೆ. ವಚನಗಳು ಸಂಪೂರ್ಣವಾಗಿ ಪ್ರಜ್ಞಾನಿಷ್ಠವಾದರೆ, ಸ್ವರವಚನಗಳು ರಾಗಭಾವ ನಿಷ್ಠವಾಗಿವೆ. ಇವು ಅಂತರ್‌ನಿರೀಕ್ಷಣೆಯ ಆಳಕ್ಕಿಳಿದಂತೆಲ್ಲಾ ದೇವ-ಪ್ರೀತಿ ಉಕ್ಕುತ್ತಲೇ ಹರಿಯುವುದು ಇವುಗಳ ವಿಶಿಷ್ಟತೆಯಾಗಿದೆ.

೧೯೬೩ ರಲ್ಲಿ `ಶಿವದಾಸ ಗೀತಾಂಜಲಿ` ಬರುವ ವರೆಗೆ ಸ್ವರವಚನ ಸಾಹಿತ್ಯಕ್ಕೆ ಇರುವ ಹರವು ನಮ್ಮ ಅಕೆಡೆಮಿಕ್ ವಲಯದ ವಿಸ್ಮೃತಿಯಲ್ಲಿತ್ತು. ನಂತರದ ದಿನಗಳಲ್ಲಿ ಈ ಅಲಕ್ಷಿತ ಕ್ಷೇತ್ರದ

ಅಧ್ಯಯನ ನಡೆಯುತ್ತಿರುವುದು ಸ್ವಾಗತಾರ್ಹ. ಸ್ವರವಚನ ಕರ್ತೃಗಳ ಬಗ್ಗೆ ತಿಳಿಸುತ್ತ ಸಂಪಾದಕರು, 'ವೀರಶೈವಾನುಭಾವಿಗಳು ರಚಿಸಿದ ಹಾಡುಗಳಿಗೆ ಮಾತ್ರ 'ಸ್ವರವಚನ'ವೆಂಬುದು ಸ್ಪಷ್ಟವಾಗಿದೆ. ಇನ್ನಿತರ ಧರ್ಮದವರು ಇಲ್ಲವೆ ಅಪಾಂಥಿಕರು ಬರೆದ ಹಾಡುಗಳನ್ನು ಸ್ವರವಚನವೆಂದು ಕರೆಯುವುದು ಉಚಿತ ವೆನಿಸುವುದಿಲ್ಲ' ಎಂದಾಗ ಆಗುವ ದಿಗ್ಭ್ರಮೆ ಮೇಲಿನ ಮಾತುಗಳನ್ನು ಜೀರ್ಣಿಸಿಕೊಳ್ಳುವಲ್ಲಿ ಆತಂಕವುಂಟು ಮಾಡುತ್ತದೆ. ಅದೇ ಸಂಪಾದಕರು ಪ್ರಸ್ತಾವನೆಯ ಕೊನೆಯಲ್ಲಿ 'ಸ್ವರವಚನಗಳು, ಕೇವಲ ವೀರಶೈವ ತತ್ತ್ವವನ್ನು ಮಾತ್ರ ಪ್ರತಿಪಾದಿಸುವ ರಚನೆಗಳೆಂದು ಪರಿಭಾವಿಸಬಾರದು, ಇಡೀ ಕರ್ನಾಟಕದ ಜನ-ಜೀವನಕ್ಕೆ; ಅವರ ಸಾಮಾಜಿಕ-ಸಾಂಸ್ಕೃತಿಕ-ಐತಿಹಾಸಿಕ-ರಾಜಕೀಯ ಚಿತ್ರಣಕ್ಕೆ ಮಹತ್ವದ ಆಕರವಾಗಬಲ್ಲ ವ್ಯಾಪಕತೆ ಇವುಗಳಿಗಿದೆ,' ಎಂದಾಗ ಆಗುವ ಸಮಾಧಾನ ಸ್ವರವೆಂಬುದು ಪರತತ್ವ ಎಂಬ ಮಾತಿಗೆ ಧ್ವನಿ.

ಪುಸ್ತಕದ ಕೊನೆಯಲ್ಲಿ ಪದಕೋಶ, ಸ್ವರವಚನಕಾರರ ಪಟ್ಟಿ ಮತ್ತು ಆಕರಗ್ರಂಥಗಳ ಉಚಿತ ಮಾಹಿತಿಯಿದೆ.

೮. *ಆಯ್ದ ಸಣ್ಣ ಕತೆಗಳು* : ಸಂ. ಡಾ.ನಾಗಾಬಾಯಿ ಬುಳ್ಳಾ, ಗೀತಾ ನಾಗಭೂಷಣ

ಪ್ರಸಾರಾಂಗ, ಗುಲಬರ್ಗಾ ವಿ.ವಿ., ಗುಲಬರ್ಗಾ-೫೮೫ ೧೦೬, ಪ್ರ.ಮು. ೨೦೦೪, ಪು. ೧೬೪, ರೂ. ೫೦/-

ಪ್ರಸ್ತುತ ಸಂಗ್ರಹದಲ್ಲಿ ಒಟ್ಟು ೧೫ ಕತೆಗಳಿವೆ. ಪ್ರಸ್ತಾವನೆಯಲ್ಲಿ ಸಣ್ಣ ಕತೆ ಬೆಳೆದು ಬಂದ ಸ್ಥೂಲ ಚಿತ್ರಣವನ್ನು ನೀಡಲಾಗಿದೆ. ಕತೆ ಹೇಳುವ ಕಲೆ ಮನುಷ್ಯನ ನಾಗರಿಕತೆಯಷ್ಟೆ ಹಳೆಯದಾದರೂ ಅದು ಬೆಳೆದು ಬಂದ ರೀತಿ ಸಾಂಸ್ಕೃತಿಕ ಆವರಣಗಳ ಹಿನ್ನೆಲೆಯಲ್ಲಿ ಭಿನ್ನವಾಗುತ್ತದೆ. ಉದಾಹರಣೆಗೆ ಪ್ರಸ್ತುತ ಸಂಕಲನದಲ್ಲಿ ಸಂಗ್ರಹಿತವಾದ ಕತೆಗಳನ್ನೆ ಗಮನಿಸಬಹುದು. ಇಲ್ಲಿ ನವೋದಯದ ಆಶಯವುಳ್ಳ ಮಾಸ್ತಿಯವರಿಂದ ಹಿಡಿದು ಪ್ರಗತಿಶೀಲ, ನವ್ಯ, ದಲಿತ-ಬಂಡಾಯದ ಧೋರಣೆಯುಳ್ಳ ಕತೆಗಳಿವೆ.

ಪ್ರಕೃತಿ ಮನುಷ್ಯನ ಮೇಲೆ ಹಿಡಿತ ಸಾಧಿಸಿದರೆ, ಮನುಷ್ಯ ಪ್ರಕೃತಿಯ ಮೇಲೆ ಹಿಡಿತ ಸಾಧಿಸಬಲ್ಲ ಎನ್ನುವ ಸಂರಕ್ಷಣಾ ತಂತ್ರ 'ಮೊಸರಿನ ಮಂಗಮ್ಮ'ನಿಗೆ ಸ್ವಭಾವಗತವಾಗಿದೆ. 'ಯಾವ ಹೋರಾಟ'ದ ಕೃಷ್ಣ ವ್ಯವಸ್ಥೆಯ ಬಲಿಪಶು. 'ಒಂಬತ್ತು ಕಾಸು' ಕತೆಯ ನಾಯಕ ಆದರ್ಶ ಮತ್ತು ವಾಸ್ತವಗಳ ಬಿರುಕಿನಲ್ಲಿ ಕುಸಿಯುತ್ತಿದ್ದಾನೆ. 'ಸಾವು ಸತ್ತಾಗ' ಕತೆಯಲ್ಲಿ ರಾಜಕಾರಣದ ವಿಪರ್ಯಾಸ, 'ಚಪ್ಪಲಿಗಳು' ಕತೆಯಲ್ಲಿ ಮುಸ್ಲಿಂ ಸಂಸ್ಕೃತಿಯಲ್ಲಿ ಹೆಣ್ಣಿನ ಸ್ಥಾನವೇನು? ಅವಳು ಭೋಗಸಾಧನವೆ?, 'ದೇವರ ಹೆಣ'ದ ಗೌಡ ಮತ್ತು ಡೊಣ್ಣೆ ವ್ಯವಸ್ಥೆಯ ಎರಡು ವಿಪರೀತಗಳು, 'ತಾಯಿ ಸಾಕೀಬಾಯಿ'ಯ ಕೊಲೆ ಮುಂತಾದ ಕತೆಗಳು ಮಾನವತೆಯ ಮುಖಕ್ಕೆ ಹಿಡಿದ ಕನ್ನಡಿಗಳು. ಇಂಥ ಕತೆಗಳ ಕನ್ನಡಿಯಲ್ಲಿ ನಮ್ಮ ರೂಪ-ಕುರೂಪವನ್ನು ನಾವೇ ನೋಡಿಕೊಳ್ಳಬೇಕು.

ಇಲ್ಲಿನ ಪ್ರತಿ ಕತೆಯೂ ವಿಭಿನ್ನ ಆಶಯ ಮತ್ತು ಅದಕ್ಕೆ ತಕ್ಕ ತಂತ್ರವನ್ನು ಅತ್ಯಂತ ಅರ್ಥಪೂರ್ಣವಾಗಿ ಪಡೆದುಕೊಂಡಿವೆ.

೯. *ಆಯ್ದ ವೈಚಾರಿಕ ಪ್ರಬಂಧಗಳು* : ಸಂ. ಡಾ. ಎಂ. ಎಸ್. ಪಾಟೀಲ, ಡಾ. ಸ್ವಾಮಿರಾವ್ ಕುಲಕರ್ಣಿ

ಪ್ರಸಾರಾಂಗ, ಗುಲಬರ್ಗಾ ವಿ.ವಿ., ಗುಲಬರ್ಗಾ-೫೮೫ ೧೦೬, ಪ್ರ.ಮು. ೨೦೦೪, ಪು. ೧೨೩. ರೂ. ೫೦/-

ಪ್ರಸ್ತುತ ಸಂಕಲನದಲ್ಲಿ ಒಟ್ಟು ೧೨ ಪ್ರಬಂಧಗಳಿವೆ. ಹಿರಿಯ ತಲೆಮಾರಿನ ಡಾ. ಎಚ್. ನರಸಿಂಹಯ್ಯ ಮತ್ತು ಕೆ. ವಿ. ಸುಬ್ಬಣ್ಣ ಅವರಿಂದ ಇತ್ತೀಚಿನ ಡಾ. ನಿಂಗಪ್ಪ ಮುದೇನೂರು ಅವರ ವರೆಗಿನ ಪ್ರಬಂಧಗಳು ಇಲ್ಲಿವೆ.

ಪ್ರಬಂಧ ಎಂಬ ಪದವನ್ನು ಪಂಪ, ನಾಗವರ್ಮ ಮುಂತಾದವರೆಲ್ಲ ಬಳಸಿದ್ದಾರೆ. ಅಂದರೆ ಪ್ರಬಂಧ ಪದದ ಇತಿಹಾಸ ಸಾವಿರ ವರ್ಷದಷ್ಟು ಹಳೆಯದಾದರೂ ಇಂದಿನ ಅದರ ಸ್ವರೂಪ ಅಂದಿಗಿಂತ ತುಂಬಾ ಭಿನ್ನವಾದುದು. ಪ್ರಬಂಧಕ್ಕೆ ವಸ್ತು-ವಿಷಯ ಯಾವುದೂ ಆಗಬಹುದು ಎನ್ನುವುದಕ್ಕೆ ಪ್ರಸ್ತುತ ಸಂಕಲನದ

ಪ್ರಬಂಧಗಳೇ ಸಾಕ್ಷಿ. ಇತ್ತೀಚೆಗೆ ಬಹುರಾಷ್ಟ್ರೀಯ ಕಂಪನಿಗಳು ಒಡ್ಡಿರುವ ಸವಾಲುಗಳು, ಗಾಂಧೀಚಿಂತನೆಯಲ್ಲಿ ಸ್ತ್ರೀ, ಕನ್ನಡ ಭಾಷೆಯ ಧೀಮಂತಿಕೆ, ಮಾನವ ಪ್ರಜ್ಞೆಗೆ ಸವಾಲಾಗಿರುವ ದೇವರು ಮತ್ತು ಪುನರ್ಜನ್ಮ, ಭಾರತದ ಸಾಂಸ್ಕೃತಿಕ ಸಮಸ್ಯೆ, ಭಾರತದಲ್ಲಿ ಕೈಗಾರಿಕಾ ಕ್ರಾಂತಿ ಆಗದಿರುವುದರ ಕಾರಣಗಳು, ಕಲೆ ಮತ್ತು ಸಾಮಾಜಿಕ ಪ್ರಜ್ಞೆ, ಮಧ್ಯಮ ವರ್ಗದ ಬವಣೆಗಳು ಹೀಗೆ ಇಲ್ಲಿನ ಪ್ರಬಂಧಗಳು ಸಮಕಾಲೀನ, ಐತಿಹಾಸಿಕ, ಧಾರ್ಮಿಕ, ಸಾಮಾಜಿಕವಾಗಿ ಕಾಡುತ್ತಿರುವ ಅನೇಕ ಸಮಸ್ಯೆಗಳನ್ನು ಚಿಂತನೆಗೆ ಒಳಪಡಿಸಿವೆ. ಸಂಕಲನದ ತಲೆಬರಹವೇ ಹೇಳುವಂತೆ ಇಲ್ಲಿನ ಎಲ್ಲ ಪ್ರಬಂಧಗಳು ವೈಚಾರಿಕ ಪ್ರಬಂಧಗಳು. ೨೦ ನೇ ಶತಮಾನದಲ್ಲಿ ಸಾಹಿತ್ಯಕೃಷಿ ಮಾಡಿದ ಅನೇಕ ಖ್ಯಾತನಾಮರು ಪ್ರಬಂಧಗಳನ್ನೂ ರಚಿಸಿದ್ದಾರೆ. ಪ್ರಬಂಧಗಳಲ್ಲಿ ಇಂದು ಅನೇಕ ಪ್ರಕಾರಗಳು ಕುಡಿಯೊಡೆದಿವೆ.

– ಶಶಿಧರ ತೋಡಕರ, ಪ್ರಾಚಾರ್ಯರು, ಹಿರೇಮಲ್ಲೂರ ಈಶ್ವರನ್ ವಿಜ್ಞಾನ ಕಾಲೇಜು,
೮ ನೇ ಕ್ರಾಸ್, ಕಲ್ಯಾಣನಗರ, ಧಾರವಾಡ-೫೮೦ ೦೦೮

೧೦. *ಪೂರ್ಣಿಮಾ* : ಸಂ. ಪೂರ್ಣಿಮಾಭಿವಂದನ ಸಮಿತಿ

ಅನಿಶ, ೨೫ನೇ ಕ್ರಾಸ್, ಎಸ್.ಪಿ.ಟಿ. ಬಡಾವಣೆ, ತುಮಕೂರು-೩, ಪ್ರ.ಮು. ೨೦೦೪, ಪು. ೮೮, ರೂ. ೫೦/-

ಬೆಳಕಿನ ಸಿರಿಯಾಗಿದ್ದ ಪೂರ್ಣಿಮಾ ರಾಮಣ್ಣ ತಮ್ಮ ತಂದೆ ಹಾಸನದ 'ಜನಮಿತ್ರ' ಪತ್ರಿಕೆಯ ಸಂಪಾದಕರಾಗಿದ್ದ ಕೃ. ನ. ಮೂರ್ತಿಯವರಿಂದ ಪತ್ರಿಕೋದ್ಯಮವನ್ನು ಬಳುವಳಿಯಾಗಿ ಪಡೆದವರು. ಇದೇ ಪತ್ರಿಕೆಯ ಚಿಕ್ಕಮಗಳೂರು ಆವೃತ್ತಿಯ ಸ್ಥಾನಿಕ ಸಂಪಾದಕರಾದ ಹೆಚ್. ಎಸ್. ರಾಮಣ್ಣ ಅವರನ್ನು ವಿವಾಹವಾಗಿ, ಅವರ ಪ್ರೋತ್ಸಾಹದಿಂದ ವಿಶಿಷ್ಟ ಮಹಿಳಾ ಪತ್ರಿಕೋದ್ಯಮಿಯೆನಿಸಿದ್ದರು. ಇಂದಿನ ಯಾಂತ್ರಿಕ ಬದುಕು ಹಾಸ್ಯ ಪರಿಹಾಸ್ಯ ಕಳೆದುಕೊಂಡು ಬರಡುಗೊಂಡು ಜಂಜರವಾದ ಸಂದರ್ಭದಲ್ಲಿ 'ನಗೆಮುಗುಳು' ಹಾಸ್ಯಪತ್ರಿಕೆ ಹೊರತರುವ ಎದೆಗಾರಿಕೆ ತೋರಿದರು. ಇಂದಿನ ಬಾಡಿದ ಮುಖಕ್ಕೆ ತಿಳಿಹಾಸ್ಯದ ಲೇಪನದೊಂದಿಗೆ ಬದುಕಿಗೆ ಚೈತನ್ಯ ನೀಡಿದ್ದಾರೆ. ಪತ್ರಿಕೆ ನಡೆಸುವ ನಷ್ಟ-ಕಷ್ಟಗಳಿಗೆ ಜಗ್ಗದೆ ತಗ್ಗದೆ ಧೈರ್ಯ-ಸ್ಥೈರ್ಯ ಸಂಯಮದಿಂದ ಹಾಸ್ಯಸಾಹಿತ್ಯ ಕಾಯಕದಲ್ಲಿಯೇ ಧನ್ಯತೆ ಕಂಡುಕೊಳ್ಳುತ್ತಿದ್ದ ಪೂರ್ಣಿಮಾ ೫೮ನೆಯ ವಯಸ್ಸಿನಲ್ಲಿ ನಿಧನರಾದರು. ಅವರನ್ನು ಕುರಿತು ಅವರ ಪ್ರತಿಭೆಯನ್ನು ಹತ್ತಿರದಿಂದ ಕಂಡಿದ್ದ ಅನೇಕ ಗಣ್ಯರು, ಆತ್ಮೀಯರು ಬರೆದ ಸ್ಮರಣೀಯ ಲೇಖನಗಳ ಈ ಕಿರುಸಂಗ್ರಹ ಹಿರಿಯ ಚೇತನವೊಂದಕ್ಕೆ ತೋರಿದ ಬೆಳಕಿನ ಕೃತಿಯಾಗಿದೆ.

೧೧. *ನನ್ನ ಮಗುವಿಗೆ ನಾ ಕಲಿಸಿದ್ದು ಹೀಗೆ* : ಡಾ. ಎಸ್. ಪಿ. ಪದ್ಮಪ್ರಸಾದ್

ಸುಮುಖ ಪ್ರಕಾಶನ, ೧೭೪, ೯/೨೮, ೧ನೇ ಮೇನ್, ವಿದ್ಯಾರಣ್ಯನಗರ, ಬೆಂಗಳೂರು-೨೩, ಪ್ರ.ಮು. ೨೦೦೪, ಪು. ೮೮, ರೂ. ೨೫/-

ಪಂಡಿತ ಜವಾಹರಲಾಲ ನೆಹರೂ ತಾವು ಜೇಲಿನಲ್ಲಿರುವಾಗ ಅಲ್ಲಿಂದಲೇ ತಮ್ಮ ಪ್ರಬುದ್ಧ ಮಗಳಿಗೆ ಭಾರತೀಯ ಸಾಹಿತ್ಯ, ಸಂಸ್ಕೃತಿ, ಪ್ರಪಂಚದ ನಾನಾ ಸಂಗತಿಗಳನ್ನು ಕುರಿತು ಬರೆದ ಓಲೆಗಳನ್ನೊಳಗೊಂಡ ಗ್ರಂಥ 'ತಂದೆ ಮಗಳಿಗೆ ಬರೆದ ಓಲೆಗಳು'. ಅದು ಪ್ರಬುದ್ಧ ಮನಸ್ಸನ್ನೂ, ಎಳೆಮನಸ್ಸಿನ ಕುತೂಹಲವನ್ನು ಕತ್ತಲೆ ಮೂಲೆಗೆ ತಳ್ಳದೆ, ಅದರ ಮುಂದೆ ಬೆಳಕಿನ ವಿಸ್ತಾರವಾದ ಕ್ಷಿತಿಜವನ್ನು ತೆರೆದಿಡುವಂಥ ಪ್ರಯತ್ನ. ಅಂಥ ದಾರಿಯಲ್ಲಿ ಬೇರೊಂದು ರೀತಿಯಲ್ಲಿ ನಡೆದಿದ್ದಾರೆ ಡಾ. ಎಸ್. ಪಿ. ಪದ್ಮಪ್ರಸಾದರು. ತಮ್ಮ ಹಾಗೂ ಮಗ ಅಕ್ಷರನ ನಡುವೆ ಅನೇಕ ಕುತೂಹಲಗಳನ್ನೊಳಗೊಂಡ ಪ್ರಶ್ನೆಗಳ ಹಾಗೂ ಅವಕ್ಕೆ ನೀಡಿದ ಉತ್ತರಗಳ ಸಂಭಾಷಣೆಗಳನ್ನೇ ಲಿಪಿಗಿಳಿಸುವ ಉತ್ಕಟತೆಯಲ್ಲಿ ಕನ್ನಡಕ್ಕೆ ನೀಡಿದ ಒಂದು ಹೊಸ ಕೃತಿ ಇದು. ತಾಳ್ಮೆಗೆ ಇನ್ನೊಂದು ಹೆಸರು ತಾಯಿಯೆನ್ನುವುದನ್ನು ಹುಸಿಗೊಳಿಸುವಷ್ಟು ಸಹನೆ ತಂದೆಯೂ ತೋರಬಲ್ಲ. ಮನಸ್ಸು ಮಾಡಿದರೆ ಒಬ್ಬ ಮನೋವಿಜ್ಞಾನಿಯಾಗಿ ಮಗುವಿನ ಮನಸ್ಸನ್ನು ಹೇಗೆ

ಪಡಗೊಳಿಸಬಲ್ಲನೆನ್ನುವದಕ್ಕೆ ಈ ಕಿರುಹೊತ್ತಿಗೆ ನಿದರ್ಶನ. ಒಟ್ಟು ನಲವತ್ತೆರಡು ಪ್ರಸಂಗಗಳನ್ನು ಇಲ್ಲಿ ಸಂಗ್ರಹಿಸಿ ತನ್ಮೂಲಕ ತಮ್ಮ ಮಗನ ಚಿತ್ರ-ವಿಚಿತ್ರ ಪ್ರಶ್ನೆಗಳಿಗೆ ತಾಳ್ಮೆಗೆಡದೆ ಪರಿಹಾರಗಳನ್ನು ಸೂಚಿಸುತ್ತ ಹೋದುದು– ಎಂಥ ಮುಗ್ಧ ಮನವನ್ನೂ ಮೋಡಿಗೊಳಿಸುವಂತಿದೆ. ಸನ್ನಿವೇಶಕ್ಕೆ ತಕ್ಕಂತೆ ಅಲ್ಲಲ್ಲಿ ನೀಡಿರುವ ರೇಖಾಚಿತ್ರಗಳು ವಿಷಯಗಳನ್ನು ಅರಿತುಕೊಳ್ಳಲು ಸಹಕಾರಿಯಾಗಿವೆ. ತಂದೆ-ತಾಯಂದಿರು, ಪೋಷಕರು, ಶಿಕ್ಷಕರಾದಿಯಾಗಿ ಎಲ್ಲರಿಗೂ ಉಪಯುಕ್ತವೆನಿಸಬಲ್ಲ ಕೃತಿಯಿದು.

– ಡಾ. ಮೋತಿಲಾಲ ಹಲವಾಯಿ, 'ವಿಶಾಲ', ೨ ನೇ ಮೇನ್, ಶಕ್ತಿನಗರ, ಧಾರವಾಡ-೫೮೦ ೦೦೪

೧೨. ಸಂವಹನ ಕಲೆ : ಎಚ್. ಜಿ. ಸೋಮಶೇಖರ ರಾವ್

ಪ್ರಿಸಮ್ ಬುಕ್ಸ್ ಪ್ರೈ. ಲಿ., ೩೨ ನೇ ಕ್ರಾಸ್, ಬನಶಂಕರಿ ೨ ನೇ ಹಂತ, ಬೆಂಗಳೂರು-೭೦, ಪ್ರ.ಮು. ೨೦೦೩, ಪು. ೧೬೪, ರೂ. ೮೫/-

ಇಂದು ಸಂವಹನ ಶಾಸ್ತ್ರವಾಗಿ ಕಲೆಯಾಗಿ ಒಂದು ಅಧ್ಯಯನ ವಿಷಯವಾಗಿ ರೂಪುಗೊಳ್ಳುತ್ತಿದೆ. ಮಕ್ಕಳಿಂದ ಮುದುಕರ ವರೆಗೆ ಎಲ್ಲರೂ ಬೆಳಗಿನಿಂದ ಮಲಗುವ ತನಕ ಸಂವಹನ ಕ್ರಿಯೆಯಲ್ಲಿ ನಿರತರಾಗಿರುತ್ತಾರೆ. ನಟ, ವಿದ್ವಾಂಸ, ಅಧಿಕಾರಿ ಮತ್ತು ಲೇಖಕರಾಗಿ ಜನಮನವನ್ನು ಕಟ್ಟಿದ ಸೋಮಶೇಖರ ರಾವ್ ಸಂವಹನ ಕಲೆಯ ನಿರೂಪಕರಾಗಿ ಪ್ರಸ್ತುತ ಪುಸ್ತಕದುದ್ದಕ್ಕೂ ಓದುಗರಿಗೆ ಜ್ಞಾನರಂಜನೆಯನ್ನು ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಸಂವಹನದ ವ್ಯಾಪ್ತಿ ಹಾಗೂ ವ್ಯಾಪಕ ಬಳಕೆ ಮತ್ತು ಪ್ರಯೋಜನಗಳಿಂದಾಗಿ ಈ ಯುಗವನ್ನು 'ಸಂವಹನ ಯುಗ' ಎಂದೇ ಕರೆಯಲಾಗುತ್ತಿರುವದರಿಂದ ಈ ಕುರಿತಾದ ಪರಿಚಯ ಪುಸ್ತಕಗಳ ಅಗತ್ಯತೆ ಇದೆ. ಸಂಕೇತ, ಧ್ವನಿ, ಭಾಷೆ, ಬರಹ, ಓದು, ಧ್ಯಾನ, ಚಿಂತನೆ ಮುಂತಾದ ವಿವಿಧ ಸ್ತರಗಳಲ್ಲಿ ಸಂವಹನ ಕ್ರಿಯೆ ನಡೆಯುತ್ತಲೇ ಇರುತ್ತದೆ. ಸಂವಹನ ಮುಟ್ಟಬೇಕಾದರೆ, ತಟ್ಟಬೇಕಾದರೆ ಅದು ಸ್ಪಷ್ಟವಾಗಿರಬೇಕು, ಸ್ಫುಟವಾಗಿರಬೇಕು. ಸಂಹವನದ ಯಶಸ್ಸಿನ ರೂಪರೇಷೆಗಳನ್ನು ಲೇಖಕರು ಇಲ್ಲಿ ಎಳೆಎಳೆಯಾಗಿ ಬಿಡಿಸಿ ತೋರಿಸಿದ್ದಾರೆ. ೩೨ ಅಧ್ಯಾಯಗಳಲ್ಲಿ ಸಂವಹನದ ಆಕಾರ, ಆಕೃತಿಗಳನ್ನು ತರ್ಕಬದ್ಧವಾಗಿ ಚಿತ್ತಾಕರ್ಷಕವಾಗುವಂತೆ ಚಿತ್ರಿಸಿದ್ದಾರೆ. ಕನ್ನಡ ಭಾಷೆಯಲ್ಲಿ ಸಿದ್ಧಾಂತವೊಂದನ್ನು ಅಭ್ಯಾಸಿಗಳಿಗೆ ಶಾಸ್ತ್ರೀಯವಾಗಿಯೂ, ಸಾಮಾನ್ಯ ಓದುಗನಿಗೆ ಸರಳವಾಗಿಯೂ ವಿವರಿಸುವ ಪುಸ್ತಕಗಳ ಕೊರತೆ ಇದೆ. ಸೋಮಶೇಖರ ರಾವ್ ತಮ್ಮ ಲಲಿತ ಬರಹದ ಮೂಲಕ ಈ ತೆರನಾದ ಸಮಾಜೋ-ಮಾನಸಿಕ ಚಿಂತನೆಗಳನ್ನು ಧ್ವನಿಪೂರ್ಣವಾಗಿ ಮಂಡಿಸಬಲ್ಲರೆನ್ನುವುದಕ್ಕೆ ಈ ಗ್ರಂಥ ಒಂದು ಅತ್ಯುತ್ತಮ ಉದಾಹರಣೆ. ಜ್ಞಾನವನ್ನು ತಿಳಿಸಿ ಹೇಳುವ, ಹಂಚಿಕೊಳ್ಳುವ ಕಲೆಯನ್ನು ಅರಿತವನಿಗೆ ಜೀವನ ಸುಲಭವಾಗುತ್ತದೆ. ಜ್ಞಾನಪೋಷಕ ಮನೋವೃತ್ತಿ ಮತ್ತು ಜ್ಞಾನವರ್ಧಕ ವರ್ತನಗಳ ಅಭಿವೃದ್ಧಿಯಲ್ಲಿ ಸಂವಹನ ಕ್ರಿಯೆ ಮಹತ್ವದ ಪಾತ್ರ ವಹಿಸುತ್ತದೆ.

ವ್ಯಕ್ತಿಗತ ಹಂತದಲ್ಲಿ, ಸಾಂಸ್ಥಿಕ ಸಂದರ್ಭಗಳಲ್ಲಿ ಮಾನವ ಸಂಬಂಧಗಳ ಏಳಿಗೆಯಲ್ಲಿ ಸಂವಹನದ ಪ್ರಾಮುಖ್ಯತೆಯನ್ನು ಪರಿಗಣಿಸಿ ಸಂವಹನದ ಬಗೆಗೆ ವಿಶೇಷಾಧ್ಯಯನ ಸಾಧ್ಯತೆಗಳನ್ನು ದೇಶ ವಿದೇಶಗಳ ಉಚ್ಚ ವಿದ್ಯಾಕೇಂದ್ರಗಳಲ್ಲಿ, ವಾಣಿಜ್ಯೋದ್ಯಮ ಕೈಗಾರಿಕೆಗಳಲ್ಲಿ ವಿಸ್ತರಿಸಲಾಗುತ್ತಿದೆ. ಜ್ಞಾನ-ಶಿಕ್ಷಣಗಳು ತಮ್ಮ ಪೂರ್ವಾಶ್ರಮದ ಅರ್ಥವನ್ನು ವೃದ್ಧಿಸಿಕೊಂಡು ಮಾನವ ಸಂಪನ್ಮೂಲ ವಿಕಾಸ ಕ್ಷೇತ್ರಗಳೆಂದು ಪರಿಗಣಿತವಾಗಿವೆ. ಇಲ್ಲಿ ವಿಶಿಷ್ಟ ಅಧ್ಯಯನ ವಿಭಾಗಗಳೇ ನಿರ್ಮಾಣಗೊಂಡಿವೆ. ಸಂವಹನ ಕ್ಷೇತ್ರದ ವಿಸ್ತಾರಗಳನ್ನೆಲ್ಲ ಒಂದು ಚೌಕಟ್ಟಿನಲ್ಲಿ ಸೆರೆಹಿಡಿಯುವುದು ಸಾಧ್ಯವಿಲ್ಲವೆಂದು ಲೇಖಕರೇ ಒಪ್ಪಿಕೊಂಡು ಸಂವಹನ ಸಾಗರದ ಮರಳ ರಾಶಿಯಲ್ಲಿಯ ಕೆಲ ಮುತ್ತು ರತ್ನಗಳ ಪ್ರದರ್ಶನವನ್ನು ಓದುಗರಿಗೆ ನೀಡುವ ಪ್ರಾಮಾಣಿಕ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ. ಓದಿ ಸ್ವಸಾಧನೆಯಿಂದ ಸಂವಹನ ಕಲಾ ಪ್ರವೇಶ ಮಾಡುವವರಿಗೆ ಈ ಪುಸ್ತಕ ಮಾರ್ಗದರ್ಶಕ ಕೃತಿಯಾಗಿದೆ. ಸಂವಹನದ ಅರ್ಥ-ವ್ಯಾಪ್ತಿ ಸಾಧನಾ ವಲಯದ ಇತಿ-ಮಿತಿಗಳ ಹಿತವಾದ ನಿರೂಪಣೆ ಇಲ್ಲಿದೆ.

– ಶಿವಶಂಕರ ಹಿರೇಮಠ, ವಿಮುಕ್ತ, ೧೩, ೨ನೇ ಮೇನ್, ಮಂಜುನಾಥ ಕಾಲನಿ, ಶಿವಗಿರಿ, ಧಾರವಾಡ-೭

ಸಂಕಲನ : ಅನಿಸಿಕೆ

೧. ಸಂಕಲನ ಯಾರ ಕೈಬೊಗಸೆಗೂ ಕೆಸರಾಗಿ ಸಿಕ್ಕದೆ, ತಾನೂ ಕೆಸರಾಗದೆ ಶುದ್ಧವಾಗಿದೆ. ಚುಚ್ಚು ಇಲ್ಲ. ಹಾಗಾಗಿ ಶುದ್ಧವಷ್ಟೆ ಅಲ್ಲ, ತಿಳಿಯಾಗಿಯೂ ಆರೋಗ್ಯವಂತವಾಗಿಯೂ ಇದೆ. ಪಟ್ಟಣಶೆಟ್ಟರ ಶ್ರಮ, ಆಶಯ ಸಾರ್ಥಕವಾಗಿವೆ. — ಸ. ರಘುನಾಥ, ಶ್ರೀನಿವಾಸಪುರ

೨. ಸೃಜನಶೀಲ ಕನ್ನಡ ಮನಸ್ಸುಗಳನ್ನು ಗುರುತಿಸಿ ಪ್ರೋತ್ಸಾಹಿಸುತ್ತಿರುವ ಸದಭಿರುಚಿಯ ಸಂಕಲನ ಅಭಿನಂದನೀಯ. — ಡಾ. ಮಂದಾಕಿನಿ ಪುರೋಹಿತ, ಧಾರವಾಡ

೩. ಸಂಕಲನ-೧೯ ರಲ್ಲಿ ಎಸ್. ಎಸ್. ಹಿರೇಮಠರ ಪುಸ್ತಕವನ್ನು ವಿಮರ್ಶಿಸುತ್ತಾ ವಸ್ತ್ರದರು 'ಅವೈದಿಕ ಎಂದರೆ ದ್ರಾವಿಡ' ಎಂದಾಗಿ ಪದಪ್ರಯೋಗ ಮಾಡಿದ್ದಾರೆ. ಇಲ್ಲಿಯ ವರೆಗೆ ನಡೆದ ಅಭ್ಯಾಸದಂತೆ ಅವೈದಿಕ ಎಂದರೆ ದ್ರಾವಿಡವಲ್ಲ ಎಂಬುವುದು ಸಿದ್ಧವಾಗಿದೆ. ವೇದದಲ್ಲಿಯ ಯಜ್ಞಸಂಸ್ಥೆ (ತದನುಷಂಗಿಕ ಪ್ರಾಣಿಹತ್ಯೆ) ಹಾಗೂ ಚಾತುರ್ವರ್ಣ್ಯ ಸಮಾಜ ವ್ಯವಸ್ಥೆಯನ್ನು ಧಿಕ್ಕರಿಸಿ ಒಂದು ಆರ್ಯಘಟಕವೇ ಹೊರಬಿದ್ದಿತು. ಅದನ್ನು ವೈದಿಕರು 'ವ್ರಾತ್ಯ' ಎಂದರು. ಈ ವ್ರಾತ್ಯರಿಂದಲೇ ಜೈನ, ಬೌದ್ಧ ಧರ್ಮಗಳು ಹುಟ್ಟಿಕೊಂಡವು. ಜ್ಯೋತಿಷ-ಆಯುರ್ವೇದದಂತಹ ವಿಜ್ಞಾನಗಳು ಜನಿಸಿದವು. ಸಾಂಖ್ಯ-ಯೋಗಗಳೂ ಅವರ ಕೊಡುಗೆಗಳೇ. ಈ ಕುರಿತಾಗಿ ಡಾ. ಎಸ್. ಕೆ. ರಾಮಚಂದ್ರರಾವ್ ಅವರ (Indian Thought [೧೯೭೨]) ಪುಸ್ತಕವೊಂದನ್ನು ಬೆಂಗಳೂರು ವಿ.ವಿ. ಹೊರತಂದಿದೆ. Vratyas In Ancient India ಎನ್ನುವ ಡಾ. ಠಾಕೂರ್ ಅವರ ಗ್ರಂಥವೂ ಅಭ್ಯಸನೀಯ. — ರಂ. ಶಾ. ಲೋಕಾಪುರ, ಬೆಳಗಾವಿ

೪. ಸಂಕಲನದಲ್ಲಿ ಪ್ರಕಟವಾಗುತ್ತಿರುವ ಅವ್ವ, ಅಪ್ಪ, ಹಾಗೂ ಶಾಲಾಗುರುಗಳ ಕುರಿತ ಲೇಖನಗಳು ನೆಲದೊಳಗಿಂದ ಉಕ್ಕಿಬರುವ ಸಿಹಿನೀರಿನ ಬುಗ್ಗೆಗಳು. — ಡಾ. ಅ. ರಾ. ಯಾರ್ದಿ, ಧಾರವಾಡ

೫. ಸಂಕಲನ ಬಹಳ ಸೊಗಸಾಗಿ ಮೂಡಿಬರುತ್ತಿದೆ. ಇಲ್ಲಿ ಪ್ರಕಟಿತ ವಿಮರ್ಶಾ ಲೇಖನಗಳು ನಮ್ಮ ಜ್ಞಾನದ ಕ್ಷಿತಿಜವನ್ನು ವಿಸ್ತೃತಗೊಳಿಸುತ್ತವೆ. ಸಂಕಲನ ನನ್ನ ಎಲ್ಲ ಸ್ನೇಹಿತರಿಗೆ ಇಷ್ಟವಾಗುತ್ತಿದೆ. ನಾವೆಲ್ಲ ನಿಮ್ಮ ಕಡೇಪುಟವನ್ನೇ ಮೊದಲು ಓದುತ್ತೇವೆ. ಭಾಷೆಯ ದೃಷ್ಟಿಯಿಂದ ಈ ಅಂಕಣ ವಿಶಿಷ್ಟವಾದದ್ದು. — ಡಾ. ಬಸವರಾಜ ಡೋಣೂರ, ವಿಜಾಪುರ

೬. ಸಂಕಲನ ಬಂದ ಕೂಡಲೆ ಎಲ್ಲ ಕೆಲಸ ಬದಿಗಿಟ್ಟು ಮೊದಲು ಇಡೀ ಸಂಚಿಕೆಯನ್ನು ಓದಿ ಮುಗಿಸುತ್ತೇನೆ. ಒಂದು ಪತ್ರಿಕೆ ಓದುವಾಗ ಓದುಗನಿಗೆ ಆತ್ಮೀಯ ಪ್ರೀತಿಯ ಭಾವನೆ ಮೂಡಿಸಿ ಓದಿನ ಲಾಭ ಮಾಡಿಕೊಡುವುದು ಆ ಪತ್ರಿಕೆಯ ಕೆಲಸ. ಅಂಥ ಕೆಲಸವನ್ನು ಸಂಕಲನ ಮನಃಪೂರ್ವಕವಾಗಿ ಮಾಡುತ್ತಿದೆ. — ಟಿ. ಆರ್. ರಾಧಾಕೃಷ್ಣ, ಚಿತ್ರದುರ್ಗ

೭. ಸಂಕಲನದಲ್ಲಿ ಪ್ರಕಟವಾಗುತ್ತಿರುವ ಕವಿರಾಜಮಾರ್ಗಮಂಥನ ಲೇಖನಮಾಲೆಯ ಮೂಲಕ ಅದನ್ನು ಅತ್ಯಂತ ಆಳವಾದ ಮತ್ತು ವ್ಯಾಪ್ತವಾದ ಅಧ್ಯಯನಕ್ಕೆ ಒಳಪಡಿಸಿರುವ ಡಾ. ಷ. ಶೆಟ್ಟರ್ ಅವರು ಅಭಿನಂದನೀಯರು. — ಎಲ್. ವಿ. ಶಾಂತಕುಮಾರಿ, ಬೆಂಗಳೂರು

೮. ಸಂಕಲನ ಬಹಳ ಚೆನ್ನಾಗಿ ಬರುತ್ತಿದೆ. ಲೇಖನಗಳು ಸಂಗ್ರಹಯೋಗ್ಯವಾಗಿವೆ. ಶಿವಶಂಕರ ಹಿರೇಮಠರ ಶಾಲಾಗುರುಗಳ ಕುರಿತ ವಸ್ತುನಿಷ್ಠ ಲೇಖನ ಬಹಳ ಹಿಡಿಸಿತು. ನಮ್ಮ ಜನ ಗುಣಮೌನಿಗಳು. ಸಂಕಲನ ಚೆನ್ನಾಗಿದೆ. ಆದರೆ ಕೊಂಡು ಓದುವವರಿಲ್ಲ. ಬೂಟಿಗೆ ೨-೩೦೦೦ ರೂ. ಇದ್ದರೂ ನಾವು ಕೊಳ್ಳುತ್ತೇವೆ. ಕನ್ನಡಕ್ಕೆ ಒಳ್ಳೆಯ ಕಾಲ ಎಂದು ಬಂದೀತೊ.... — ವೆಂಕಟೇಶ ಕುಲಕರಣಿ, ಧಾರವಾಡ

ಕಡೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ಸಿಕ್ಕ ಸಿಕ್ಕ ಮಣ್ಣಿನಿಂದ ಮೂರ್ತಿ ಮಾಡಾಕ ಬರೂದುಲ್ಲ. ಅದರ ಸಲುವಾಗಿ ವಿಶಿಷ್ಟ ಮಣ್ಣಿನ ಆಯ್ಕೆ ಮಾಡಿಕೊಳ್ಳೂದು ಕಲಾವಿದಗ ಗೊತ್ತಿರತಯ್ತಿ ಅಥವಾ ಗೊತ್ತಿರಬೇಕಾಕ್ಕತಿ. ಅಂಥಾ ಜ್ಞಾನ ಮತ್ತು ಅನುಭವಗಳು ಮಾತ್ರ ಸೃಷ್ಟಿಶೀಲವಾದ ನಿರ್ಮಾಣದ ದಾರಿಯನ್ನ ತೋರಿಸಬಲ್ಲುವು.

ಹದವಾದ ಮಣ್ಣನ್ನ ಆರಿಸಿ ತರೂದು, ಅದನ್ನ ಸಾಣಿಸೂದು, ಸ್ವೊಚ್ಚ ಮಾಡೂದು, ಅದಕ್ಕ ತಕ್ಕಷ್ಟು ನೀರ ಕೂಡಿಸಿ ಮಿದ್ದಿ, ಮುದ್ದೀ ಮಾಡಿ ಇಟಗೊಳ್ಳೂದು ಭಾಳ ಮುಖ್ಯ. ಆಗ ಮಾತ್ರ ಅವನಿಗೆ ಬೇಕಾದಂಥ ಮೂರ್ತಿ ಮಾಡಾಕ ಸಾಧ್ಯ. ಕಲಾವಿದನ ಮನಸಿನ್ಯಾಗ ಒಂದ ಕಲ್ಪನಾ ಮೂಡಬೇಕು, ಅದಕ್ಕ ಆಕಾರ ಕೊಡುವ ಕೆಲಸ ಸುರು ಆಗಬೇಕು. ಆಗ ಅವ್ನನ ಕಯ್ಯ ಬಿಗಿ ಹಿಡಿತ, ಬಟ್ಟಿನ ಮಿದು ಬಡಿತ ಕೂಡಿ ಒಂದು ಮೂರ್ತಿ ತಯಾರ ಆಕ್ಕತಿ. ಮಾಡಾವ್ನನ ಮಾಟಕ್ಕ ಮಾಡಿದ್ದು ಸಮಾಧಾನ ಅನಿಸಿದರ ಅದು ಗೊಂಬಿಯ ಹಂತ ದಾಟಿ ಮೂರ್ತಿ ಆಕ್ಕತಿ, ಗಣಪತಿ ಆಕ್ಕತಿ, ಮತ್ತೇನೊ ಆಕ್ಕತಿ. ಬಣ್ಣಾ ಸವರಿಸಿಕೊಂಡು ಪೂಜಾನೂ ಮಾಡಿಸಿಗೋತಯ್ತಿ.

ಕಟಗಿ ಸಯ್ತ ಹಂಗ್ಅ. ಉಳಿ ಮೆಳಿ ಕೊಡತಿ ಉಚಗೊಡ್ನ ಹಿಡಕೊಂಡ ಕಲಾವಿದ ಮೊದಲು ಕಟಗಿಯ ಆಯ್ಕೆ ಮಾಡಕೋತಾನ. ತೇಗು ಸೀಸಮ್ಮು ಗಂಧ ಅಂತ ಕಾಡಿನಿಂದ ಆರಿಸಿ ತರುವ ಕಟಗಿ ನಾಡಿನಾಗ ಉಳಿಯೂ ಹಂಗ ನೋಡಕೋಬೇಕು ಅನ್ನೂದರ ಕಡೆ ಲಕ್ಷ್ಯ ಹರಿಸತಾನ. ಕಿಮ್ಮತ್ತಿನ ಕಟಗಿ ಇದ್ದಷ್ಟು ಕಿಮ್ಮತ್ತಿನ ಕುಸುರಿ ಕೆಲಸಾ ಮಾಡಬೇಕಾಕ್ಕತಿ. ಕಿಮ್ಮತ್ತಿನ ಗಣಪ್ಪ ತಯಾರಾಕ್ಕಾನ. ಆಗ ಕಲಾವಿದ ಕಳಕೊಂಡ ವ್ಯಾಳ್ಯೇಕ, ಬಳಸಿಕೊಂಡ ಬಾಳೇಕ ತಕ್ಕಂಗ ಅವ್ನಗೂ ಕಿಮ್ಮತ್ತ ಬರತಯ್ತಿ.

ಕಲ್ಲ ಕಟ್ಯಾವ್ನನೂ ಏನ್ ಸಾಮಾನ್ಯ ಅಲ್ಲ. ತನ್ನ ಕಲಾತ್ಮಕ ಹೊಡೆತವನ್ನ ತಾಳುವ ಕಲ್ಲಿಗಾಗಿ ಎಷ್ಟೆಲ್ಲಾ ಹುಡಕ್ಯಾಡತಾನ. ಆಮ್ಯಾಲ ಸುತಗಿ ಚಾಣಾ ಮೆಳಿ ಸುಳಿ ಅಂತ ಹಿಡಕೊಂಡು ಕಟೆದು ಕಡಿದು, ತಿಕ್ಕಿ ತಿವ್ವಿದು ಕಲ್ಲನ್ನ ಶಿಲಾ ಆಗಿ, ಶಿಲೆಯನ್ನ ಶಿಲ್ಪವಾಗಿ, ಶಿಲ್ಪವನ್ನ ಮೂರ್ತಿಯಾಗಿ, ಮೂರ್ತಿಯನ್ನ ಗಣೇಶನಾಗಿ ಒಂದೊಂದ್ಅ ಒಂದೊಂದ್ಅ ಮೆಟ್ಟಲಾ ಏರಿಸಿ ಕುಂಡರಸತಾನ.

ಲೇಖಕರ ಬರವಣಿಗೆ ಸಯ್ತ ಇಂಥಾ ಆಯ್ಕೆಯನ್ನ ತಯಾರಿಯನ್ನ ಸಿದ್ಧತೆಯನ್ನ ಅಪೇಕ್ಷಿಸತಯ್ತಿ. ಏನ ಬರೀಬೇಕು, ಹ್ಯಾಂಗ ಬರೀಬೇಕು, ತನ್ನ ಭಾವವನ್ನ ವಿಚಾರವನ್ನ ಯಾವ ಆಕಾರಕ್ಕ ಪ್ರಕಾರಕ್ಕ ಹೊಂದಿಸಬೇಕು ಅನ್ನೂದನ್ನ ಲೇಖಕ ಅನಿಸಿಕೊಳ್ಳಾವ್ನ ಮೊದಲ್ಅ ಸ್ಪಷ್ಟವಾಗಿ ಯೋಚಿಸಬೇಕಾಕ್ಕತಿ. ಆಗ ಮಾತ್ರ ಅವ್ನನ ಬರವಣಿಗೆ ಕಾವ್ಯ ಕಲಾ ಸಾಹಿತ್ಯ ಇತ್ಯಾದಿ ಆಕ್ಕತಿ. ಮೌಲ್ಯ ಅಂತಾರಲ್ಲ ಅದನ್ನ ಪಡಕೋತಯ್ತಿ.

ನಮ್ಮ ಬದುಕೂ ಇದಕ್ಕ ಹೊರತಾಗಿಲ್ಲ. ಅದು ಎಲ್ಲಾ ಥರದ ಕಲಾತ್ಮಕತೆಗೆ ಮೂಲವಾದ ಉತ್ಸ ಆಗಿದ್ದರಿಂದ ಅದನ್ನ ಬದುಕುವ ರೀತಿಗೂ ಒಂದು ಬಗೆಯ ಆಯ್ಕೆ ಇರಬೇಕಾಕ್ಕತಿ. ಮಣ್ಣಿನ ಮೆತ್ತುವಿಕೆ, ಕಾಷ್ಠದ ಕೆತ್ತುವಿಕೆ, ಕಲ್ಲಿನ ಕಿತ್ತುವಿಕೆ, ಲೇಖನದ ತಿದ್ದುವಿಕೆಯಂಥ ಚತುರ್ಮುಖ ಮಿಶ್ರ ಪರಿಣಾಮವನ್ನ ಸಂಯೋಜಿಸಿ ರೂಪಿಸಿಕೊಂಡಾಗ ಮಾತ್ರ ವ್ಯಕ್ತಿತ್ವದ ಪರಿಪೂರ್ಣತೆಗೆ ಹತ್ತಿರ ಹತ್ತಿರ ಹೋಗಿ ಜೀವಿಸುವುದು ಸಾಧ್ಯ ಆಕ್ಕತಿ. ಆಗ ಅದು ಬದುಕ ಆಕ್ಕತಿ, ಜೀವನ ಆಕ್ಕತಿ.

ಸಂರಕ್ಷಣೆ, ಸುರಕ್ಷತೆ ಮತ್ತು ವಿಶ್ವಾಸಾರ್ಹತೆಯ ವೈಶಿಷ್ಟ್ಯತೆಯುಳ್ಳ ಉಗ್ರಾಣ ಸೌಲಭ್ಯಗಳು

ಶಾಂತಿ ಮತ್ತು ಸೌಹಾರ್ದತೆಯ ಸಹಬಾಳ್ವೆಯೊಂದಿಗೆ ಸಮೃದ್ಧಿ ಸಾಧನೆಯನ್ನು ಗುರಿಯಾಗಿಸಿಕೊಂಡು ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದ ಸನ್ಮಾನ್ಯ ಶ್ರೀ ಎನ್. ಧರ್ಮಸಿಂಗ್ ರವರ ನೇತೃತ್ವದ ಸರ್ಕಾರ ತನ್ನ ಗುರಿ ಸಾಧನೆಗೆ ಶ್ರಮಿಸಿದೆ ಹಾಗೂ ಪರಿಶ್ರಮಿಸುತ್ತಿದೆ. ಅದರ ಫಲವಾಗಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮವು (ಕ.ರಾ.ಉ.ನಿ.) ಇವರ ಕ್ರಿಯಾಶೀಲ ನಾಯಕತ್ವದಲ್ಲಿ ರಾಜ್ಯದಾದ್ಯಂತ ಅತ್ಯಾಧುನಿಕ ಉಗ್ರಾಣ ಸೌಲಭ್ಯಗಳನ್ನು ಒದಗಿಸಿ ರೈತರುಗಳಿಗೆ ಉಗ್ರಾಣ ಸೌಲಭ್ಯಗಳ ಆವಶ್ಯಕತೆಗಳನ್ನು ಪೂರೈಸುತ್ತಿದೆ. ನಿಗಮವು ಅಗತ್ಯಕ್ಕೆ ಅನುಗುಣವಾಗಿ 24 X 7 ರ ಮಾದರಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ರೀತಿಯಾಗಿರುವ ಏಕೈಕ ಸಾರ್ವಜನಿಕ ವಲಯದ ಉಗ್ರಾಣ ಎಂಬ ಪ್ರಖ್ಯಾತಿಗೆ ಪಾತ್ರವಾಗಿದೆ. ಅತ್ಯಾಧುನಿಕ ತಂತ್ರಜ್ಞಾನ ಬಳಕೆ, ನಿಯತಕಾಲಿಕವಾಗಿ ದಂಶಕಗಳು ಮತ್ತು ಕೀಟಗಳ ನಿಯಂತ್ರಣ ಕಾರ್ಯ ನಿರ್ವಹಣೆ, ಅತ್ಯಂತ ಉತ್ಸಾಹಿ, ಸ್ವಪ್ರೇರಣೆ ಮತ್ತು ಸಮರ್ಪಣಾ ಮನೋಭಾವನೆಯುಳ್ಳ ಆಡಳಿತ ವರ್ಗ ಮತ್ತು ನುರಿತ ಸಿಬ್ಬಂದಿ ವರ್ಗದ ಸಹಕಾರದಿಂದ ಕಳೆದ 46 ವರ್ಷಗಳಿಂದ ಉಗ್ರಾಣ ವ್ಯವಸ್ಥೆ ಅತ್ಯಂತ ದಕ್ಷತೆಯಿಂದ ಕೂಡಿದೆ, ವ್ಯವಸ್ಥಿತವಾಗಿದೆ ಮತ್ತು ಅಪಘಾತ ಮುಕ್ತವಾಗಿದೆ. ಕ.ರಾ.ಉ.ನಿ.- ಉಗ್ರಾಣ ಸೌಲಭ್ಯ ಒದಗಿಸುವಲ್ಲಿ ವಿಶ್ವಾಸಾರ್ಹತೆಗೆ ಆದರ್ಶಪ್ರಾಯವಾಗಿದೆ. ದಕ್ಷತೆಯಲ್ಲಿ ಸರಿಸಾಟಿ ಇಲ್ಲದ ದಾಖಲೆಗೆ ಹೆಸರಾಗಿದೆ.

ಮೈಲಿಗಲ್ಲುಗಳು :

ಕರ್ನಾಟಕ ರಾಜ್ಯ ಉಗ್ರಾಣ ನಿಗಮವು 1957 ರಲ್ಲಿ ಸ್ಥಾಪಿಸಲ್ಪಟ್ಟು, ಮೈಸೂರು, ಹುಬ್ಬಳ್ಳಿ ಮತ್ತು ರಾಯಚೂರಿನಲ್ಲಿ ಮೂರು ಉಗ್ರಾಣಗಳೊಡನೆ ತನ್ನ ವಾಣಿಜ್ಯ ಚಟುವಟಿಕೆ ಪ್ರಾರಂಭಿಸಿತು. ಪ್ರಸ್ತುತ ನಿಗಮವು ಕರ್ನಾಟಕದಲ್ಲಿ 109 ಉಗ್ರಾಣ ಜಾಲ ಹೊಂದಿದೆ. ಉಗ್ರಾಣಗಳ ಒಟ್ಟು ಸಂಗ್ರಹಣಾ ಸಾಮರ್ಥ್ಯ 7.03 ಲಕ್ಷ ಮೆ.ಟನ್‌ಗಳು. 2003-04 ನೇ ಸಾಲಿನಲ್ಲಿ ನಿಗಮವು ರಾಜ್ಯದ ವಿವಿಧ ಭಾಗಗಳಲ್ಲಿ 25 ಅತ್ಯಾಧುನಿಕ ತಂತ್ರಜ್ಞಾನವನ್ನೊಳಗೊಂಡ ಉಗ್ರಾಣ ಮಳಿಗೆಗಳನ್ನು ರೂ. 44.00 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದ್ದು, ಇದರಿಂದ ಒಟ್ಟು ಸಂಗ್ರಹಣಾ ಸಾಮರ್ಥ್ಯವು 1.50 ಲಕ್ಷ ಮೆ.ಟನ್‌ಗಳಷ್ಟು ಹೆಚ್ಚಾಗಲಿದೆ.

ವಾಣಿಜ್ಯ ದಕ್ಷತೆ

(ಲಕ್ಷ ಮೆ. ಟನ್‌ಗಳಲ್ಲಿ)

ವರ್ಷ	ಸಂಗ್ರಹಣಾ ಸಾಮರ್ಥ್ಯ			ಶೇಕಡಾವಾರು
	ಸ್ವಂತ	ಬಾಡಿಗೆ	ಒಟ್ಟು	ಬಳಕೆ
2000	2.88	2.56	5.44	86
2001	3.24	5.59	8.83	91
2002	3.29	3.73	7.02	86
2003	3.82	3.21	7.03	82
2004	4.05	2.41	6.47	66

ಆರ್ಥಿಕ ದಕ್ಷತೆ

(ರೂ. ಲಕ್ಷಗಳಲ್ಲಿ)

ವರ್ಷ	ಆದಾಯ	ಖರ್ಚು	ಲಾಭ
2000	1351.51	917.93	433.58
2001	1799.60	1088.85	710.25
2002	2443.89	1553.21	890.68
2003	2870.00	1951.74	918.26

ಕ.ರಾ.ಉ.ನಿ. - ರೈತರ ಹಿತ ಕಾಪಾಡುವ ಹಿತೈಷಿ :

- ಉಗ್ರಾಣದಲ್ಲಿ ದಾಸ್ತಾನು ಮಾಡಿರುವ ಸರಕುಗಳಿಗೆ ಬೆಂಕಿ, ಕಳವು ಮತ್ತು ಡಕಾಯಿತಿ ಅಪಾಯದ ಬಗ್ಗೆ ವಿಮೆಯಿಂದ ರಕ್ಷಣೆ.
- ಉಗ್ರಾಣಗಳಲ್ಲಿ ರೈತರ ಉತ್ಪನ್ನ ದಾಸ್ತಾನು ಮಾಡಲು ವಿಶೇಷ ಆದ್ಯತೆ.
- ಸುಗ್ಗಿಯ ಕಾಲದಲ್ಲಿ ಮಾರುಕಟ್ಟೆ ಬೆಲೆ ಕಡಿಮೆಯಾಗುವುದರಿಂದ ರೈತರು ಭ್ರಮನಿರಸನರಾಗಿ ತಮ್ಮ ಕೃಷಿ ಉತ್ಪನ್ನ ಮಾರಾಟ ಮಾಡುವುದನ್ನು ತಡೆಯಲು ಉಗ್ರಾಣದಲ್ಲಿ ದಾಸ್ತಾನು ಮಾಡಿದ ಸರಕಿಗೆ ನೀಡುವ ಉಗ್ರಾಣ ರಶೀದಿ ಆಧಾರದ ಮೇಲೆ ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಇತರೆ ಪತ್ತಿನ ಬ್ಯಾಂಕುಗಳ ಮೂಲಕ ಸುಲಭ ಸಾಲ ಸೌಲಭ್ಯ.
- ವಾಸ್ತವಿಕ ಕೃಷಿಕರಿಂದ ಶೇಖರಣೆ ಮಾಡಿದ ದಾಸ್ತಾನಿಗೆ ಸಂಗ್ರಹಣಾ ಶುಲ್ಕದಲ್ಲಿ ಶೇ. 15% ರಿಯಾಯಿತಿ.

ಸೋಂಕು ನಿವಾರಣೆ ಸೇವೆ :

- ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ಕಳೆದ 46 ವರ್ಷಗಳಿಂದ ವಿಶೇಷತೆಯುಳ್ಳ ಸೋಂಕು ನಿವಾರಕ ಸೇವೆಗಳನ್ನು ಒದಗಿಸುತ್ತಿದೆ. ಈ ಯೋಜನೆ ಅಡಿಯಲ್ಲಿ ನಿಗಮವು ಕೆಳಕಂಡ ನಂಜು ನಿರೋಧಕ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ.
- ಕ್ರಿಮಿ, ಕೀಟಗಳ ನಿರ್ಮೂಲನೆ ಮತ್ತು ಇಲಿ, ಹೆಗ್ಗಣ, ಹುಳು ಹುಪ್ಪಟೆ, ಸೊಳ್ಳೆ, ನೊಣ, ಜಿರಳೆ ಮುಂತಾದ ಕೀಟಗಳ ನಿಯಂತ್ರಣ.
- ಸರಕುಗಳು, ಕಛೇರಿ ದಾಖಲೆಗಳು, ದಾಸ್ತಾನು ಪದಾರ್ಥಗಳಿಗೆ ಕೀಟಗಳು ಮತ್ತು ಗೆದ್ದಲುಗಳಿಂದ ಅಪಾಯ ಉಂಟಾಗದಂತೆ ತಡೆಯಲು ಕೀಟನಾಶಕದ ಉಪಚಾರ.
- ಹೊಸ ಕಟ್ಟಡಗಳ ನಿರ್ಮಾಣ ಪ್ರಾರಂಭಿಸುವ ಮುನ್ನ ಗೆದ್ದಲು, ಇರುವೆಗಳ ನಿರ್ಮೂಲನೆ ಮಾಡಲು ಗೆದ್ದಲು ನಿರೋಧಕ ಉಪಚಾರ.

ಮುಂದಿನ ಕಾರ್ಯ ಯೋಜನೆಗಳು :

- ಉಗ್ರಾಣ ಸೌಲಭ್ಯಗಳಿಲ್ಲದ 85 ತಾಲ್ಲೂಕುಗಳಲ್ಲಿ ಹಂತ ಹಂತವಾಗಿ ಉಗ್ರಾಣ ಕೇಂದ್ರಗಳ ನಿರ್ಮಾಣ.
- ಸರಕು ಸಂಗ್ರಹಣೆಯಲ್ಲಿ ಅತ್ಯಾಧುನಿಕ ವೈಜ್ಞಾನಿಕ ಸೌಲಭ್ಯವನ್ನು ಒದಗಿಸುತ್ತಿರುವ ರಾಜ್ಯದ ಏಕೈಕ ಸರಕಾರಿ ಸ್ವಾಮ್ಯದ ಸಂಸ್ಥೆ.



ಶ್ರೀ ಎಸ್. ಸಿದ್ದೇಗೌಡ
ಅಧ್ಯಕ್ಷರು, ಕ.ರಾ.ಉ.ನಿ.

ಕರ್ನಾಟಕ ರಾಜ್ಯ ಉಗ್ರಾಣ ನಿಗಮ

43, ಪ್ರಿಂ ರೋಸ್ ರಸ್ತೆ, ಬೆಂಗಳೂರು-560 025 ದೂರವಾಣಿ : 25571012, 25571013
ಫ್ಯಾಕ್ಸ್ : 080-25577324, ವೆಬ್‌ಸೈಟ್ : www.karnatakawarehousing.com



ಡಾ. ಪಿ. ಸೋಮಶೇಖರ
ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಉ.ನಿ.

SANKALANA : RNI No. KARKAN 14160 / 10 / 1 / 2002 - TC

ಸಂಕಲನ : ಮೇ + ಜೂನ್ ೨೦೦೫

ಸಂಪುಟ ೪, ಸಂಚಿಕೆ ೩

ಸಂಪಾದಕರು : ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ

•

ಎನ್ಕೆ ಕುಲಕರ್ಣಿ

ಜಿ. ಮಲ್ಲಿಕಾ ಬಸವರಾಜು — ಶ್ಯಾಮಲಾ ಮಾಧವ

ವಿಭಾ — ಮಾಧವಿ ಭಂಡಾರಿ

ಷ. ಶೆಟ್ಟರ್ — ವೈ. ಬಿ. ಹಾಲಬಾವಿ

ಆರ್. ಪವಿತ್ರ ಪ್ರಿಯಭಾಷಿಣಿ — ಸಿ. ಎನ್. ರಾಮಚಂದ್ರನ್

ಹೆಚ್. ಎ. ಪಾರ್ಶ್ವನಾಥ್ — ಟಿ. ಸಿ. ಪೂರ್ಣಿಮಾ

•

ಪ್ರಸನ್ನ

ಬಸವರಾಜ ವಕ್ಕುಂದ — ಸುಮಿತ್ರಾ ಹಲವಾಯಿ

ಪಿ. ಕೆ. ರಾಠೋಡ — ಶಶಿಧರ ತೋಡಕರ

ಮೋತಿಲಾಲ ಹಲವಾಯಿ — ಶಿವಶಂಕರ ಹಿರೇಮಠ

•

ಸ. ರಘುನಾಥ

ಮಂದಾಕಿನಿ ಪುರೋಹಿತ — ರಂ. ಶಾ. ಲೋಕಾಪುರ

ಅ. ರಾ. ಯಾರ್ದಿ — ಬಸವರಾಜ ಡೋಣೂರ

ಟಿ. ಆರ್. ರಾಧಾಕೃಷ್ಣ — ಎಲ್. ವಿ. ಶಾಂತಕುಮಾರಿ

ವೆಂಕಟೇಶ ಕುಲಕರಣಿ

•

ಸಿದ್ಧಲಿಂಗ ಪಟ್ಟಣಶೆಟ್ಟಿ

•

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪